ಸಂವಾದ

ಫೆಬ್ರವರಿ ೨೦೧೧ ರೂ. ೨೦

ಧರ್ಮ
ರಾಜಕಾರಣ ಮತ್ತು
ಕಾರ್ಪೋರೇಟ್‌ಗಳ

ಅಪವಿತ್ರ ಕೂಡಾವಳಿ

ಡಾ. ಬಿನಾಯಕ್ ಸೇನ್
ಮತ್ತು
ಮಾನವ ಹಕ್ಕುಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೪
ಸೆಪ್ಟೆಂಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೩೭
❑ ಸಂಪಾದಕರೊಂದಿಗೆ ಸಂವಾದ:
○ ಮಲ್ಲಿಕಾರ್ಜುನ ಗುಮ್ಮಗೋಳ ೦೪
○ ಸುರೇಶ್ ಭಟ್ ೦೫
○ ಮ. ಶ್ರೀ. ಮುರಳಿ ಕೃಷ್ಣ ೦೬
○ ದಾಸನೂರ ಕೂಸಣ್ಣ ೦೮
❑ ರಾಜ್ಯಪಾಲರ ಹುದ್ದೆಗೆ ರಾಜಕೀಯ ಲೇಪ?
○ ಮಲ್ಲಿಕಾರ್ಜುನ ಗುಮ್ಮಗೋಳ ೧೦
❑ ಪ್ರಕ್ಷುಬ್ಧ ಕಾಶ್ಮೀರ ಮತ್ತು ಭಾರತದ ರಾಜಕೀಯ ವ್ಯವಸ್ಥೆ ಎಸಗಿರುವ ಮಹಾಪರಾಧ
○ ರಾಜಿಂದರ್ ಪುರಿ ೧೨
❑ ಅಯ್ಯಪ್ಪ ದರ್ಶನದ ದುರಂತ: ಉದ್ಯಮವಾದ ಭಕ್ತಿ, ವ್ಯಾಪಾರಿಯಾದ ಸರ್ಕಾರ, ಬಲಿಪಶುವಾದ ಜನತೆ
○ ಶಿವಸುಂದರ್ ೧೪



❑ ನೀರಾ-ರಾಡಿಯಲ್ಲಿ ಮಿಂದ ಆಡಳಿತ ಯಂತ್ರ
○ ನಾ ದಿವಾಕರ್ ೧೮
❑ ಟಿಬೇಟಿಯನ್ನರ ಹೋರಾಟಕ್ಕೆ ಕೊನೆ ಎಂದು?
○ ಯು.ಎನ್ ಸಂಗನಾಳಮಠ ೨೨
❑ ಧರ್ಮ, ರಾಜಕಾರಣ ಮತ್ತು ಕಾರ್ಪೊರೇಟ್‌ಗಳ ಅಪವಿತ್ರ ಕೂಡಾವಳಿ
○ ಸುರೇಶ್ ಭಟ್ ೨೬
❑ ಭೂದೇವತೆಗಳ ಪ್ರಣಾಳಿಕೆ
○ ಡಾ. ಡೊಮಿನಿಕ್. ಡಿ ೩೨
❑ ಅವಳನ್ನ ಕ್ಷಮಿಸಿಬಿಡಿ
○ ಪ್ರಶಾಂತ್ ಹುಲ್ಕೋಡ್ ೩೪
❑ ಹೊಸ ಪಕ್ಷಿ ರಾಗ...೭
○ ಜ್ಯೋತಿ ಗುರುಪ್ರಸಾದ್ ೩೬

❑ ಕಾಲಮಾನ-೧೩
○ ಡಾ. ಮುಜಾಫ್ಫರ್ ಅಸ್ಸಾದಿ ೪೦
❑ ಹಾಗೆ ನೋಡಿದರೆ -೩
○ ಡಾ. ಬಂಜಗೆರೆ ಜಯಪ್ರಕಾಶ ೪೪
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಆ ಮುಖ ೦೯ . ❑ ಹರಿದಿದೆ ನೋಡಿ ಕನ್ನಡ ರಥವು ೧೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಹೊಸದಾಗಿ ಜನಾದೇಶ ಪಡೆಯುವುದೇ ಸೂಕ್ತ

ಪ್ರಿಯ ಸಂಪಾದಕರೇ,

ರಾಜ್ಯ ರಾಜಕಾರಣದ ಸಂಘರ್ಷ ಮತ್ತೊಂದು ಮಜಲನ್ನು ಮುಟ್ಟಿದೆ. 'ಜಸ್ಟೀಸ್ ಲಾಯರ್ಸ್ ಪೋರಮ್'ನ ವಕೀಲ ರಿಬ್ಬರ ಒತ್ತಾಯದಂತೆ ಮುಖ್ಯಮಂತ್ರಿಗಳು ಮತ್ತು ಅವರ ಸಂಬಂಧಿಗಳು ನಡೆಸಿರುವ ಹಗರಣಗಳ ವಿರುದ್ಧ ಕ್ರಿಮಿನಲ್ ದಾವೆ ಹೂಡಲು ಸ್ವಲ್ಪ ಅವಸರವಾಗಿಯೇ ಅನುಮತಿಸಿದ್ದಾರೆ. ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ವಿಶೇಷ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ದೂರು ದಾಖಲಾದರೂ ರಾಜೀನಾಮೆ ನೀಡದೆ ರಾಜ್ಯಪಾಲರ ವಿರುದ್ಧ ಗುಟುರು ಹಾಕಿ ಅವರನ್ನು ಎತ್ತಂಗಡಿ ಮಾಡಿಸಲು ಕಸರತ್ತು ನಡೆಸುತ್ತಿದ್ದಾರೆ. ಆಡಳಿತ ಪಕ್ಷವಾಗಿ ಕಾನೂನನ್ನು ಧಿಕ್ಕರಿಸಿ ಬಂದ್‌ಗೆ ಕರೆ ನೀಡಿ ಜನರ ನಷ್ಟಕ್ಕೆ ಸಂಕಷ್ಟಕ್ಕೆ ಕಾರಣರಾದದ್ದಕ್ಕೆ ಯಾರು ಹೊಣೆ.

ಪ್ರತಿಪಕ್ಷಗಳ ರಾಜೀನಾಮೆ ಪಟ್ಟಿಗೆ ಜಪ್ಪಯ್ಯ ಎಂದರೂ ಜಗ್ಗುತ್ತಿಲ್ಲ. ಇಂತವ ಕ್ಕೆಲ್ಲ ಬೆನ್ನು ತೋರಿಸಿ ಓಡಿಹೋಗುವುದಿಲ್ಲ ಎಲ್ಲವನ್ನು ಎದುರಿಸಿ ನಾನು ಪ್ರಮಾಣಿಕ ಎಂಬುದನ್ನು ಸಾಬೀತು ಮಾಡುತ್ತೇನೆ ಎನ್ನುತ್ತಿರುವ ಯಡಿಯೂರಪ್ಪನವರ ಧೋರಣೆ ಜನತೆಯಲ್ಲಿ ಭ್ರಮನಿರಶನ ಉಂಟುಮಾಡಿದೆ. ಕಾನೂನಿನ ಪ್ರಕಾರ ಹುದ್ದೆ ತ್ಯಜಿಸಬೇಕಿಲ್ಲದಿದ್ದರೂ ಇಂತಹ ಸನ್ನಿವೇಶದಲ್ಲಿ ನೈತಿಕ ಹೊಣೆಹೊತ್ತು ಅವರು ರಾಜೀನಾಮೆ ನೀಡಬೇಕಿತ್ತು. ಬಿಜೆಪಿ ಸರ್ಕಾರದಿಂದ ಅಂತಹ ಆದರ್ಶವನ್ನು ನಿರೀಕ್ಷಿಸುವುದು ನಮ್ಮ ಮೂರ್ಖತನವಾದೀತು.

ಸರಿಯಾದ ಅಜೆಂಡಾ ಹೊಂದದ ವಿರೋಧ ಪಕ್ಷಗಳು ಈ ಸನ್ನಿವೇಶವನ್ನು ಬಳಸಿಕೊಂಡು ಅಧಿಕಾರಕ್ಕೆ ಬರಲು ಹವಣಿಸುತ್ತಿವೆಯೇ ಹೊರತು, ಜನಪರ ಕಾಳಜಿ ಲೇವಲೇಶವೂ ಅವಕಿಲ್ಲ. ಅವುಗಳನ್ನು ಜನ ಎಂದೋ ತಿರಸ್ಕರಿಸಿಯಾಗಿದೆ. ಜನಪರವಲ್ಲದ ಅವುಗಳ ಹೋರಾಟಗಳು ಕೂಗು ಮಾರಿಯಂತಿವೆ. ಪರಿಣಾಮ ಮಾತ್ರ ಸೊನ್ನೆ. ಜನಾಂದೋಲನ ರೂಪಿಸುವಲ್ಲಿ ವಿಫಲವಾಗಿರುವ ವಿಪಕ್ಷಗಳಿಂದ ಬೇರೇನು ತಾನೇ ನಿರೀಕ್ಷಿಸಲು ಸಾಧ್ಯ.

ಪತ್ರಗಳು

ಇನ್ನು ರಾಜ್ಯಪಾಲರು ಸರಿಯಾ? ಎಂದು ನೋಡಿದರೆ. ಅವರೂ ಕಳಂಕ ಹೊತ್ತವರೇ. ಬೊಫೋರ್ಸ್ ಹಗರಣದ ರೂವಾರಿ ಕ್ವಟ್ರೋಚಿ ದೇಶದಿಂದ ಪರಾರಿಯಾಗಲು ಅನುವು ಮಾಡಿಕೊಟ್ಟ ಆಪಾದನೆ ಇವರ ಮೇಲಿದೆ. ವಿಶ್ವವಿದ್ಯಾಲಯಗಳ ಆಡಳಿತದ ಸಂಪೂರ್ಣ ಹಿಡಿತ ಹೊಂದಿರುವ ಇವರು ಅನರ್ಹರನ್ನು ಉಪಕುಲಪತಿಗಳನ್ನಾಗಿ ನೇಮಿಸಿದ ಆರೋಪ ಹಾಗೂ ಮೈಸೂರು ವಿವಿಯ ಉಪಕುಲಪತಿಯಾಗಿದ್ದ ಜೆ. ಶಶಿಧರ ಪ್ರಸಾದ್ ಬ್ಯಾಕ್‌ಲಾಗ್ ನಿಯಮವನ್ನು ಕಡೆಗಣಿಸಿ ಸ್ವಜಾತಿ ಯವರನ್ನೇ ವಿವಿಧ ಹುದ್ದೆಗಳಿಗೆ ತುಂಬಿಕೊಂಡ ಆರೋಪ ಸಾಬೀತಾಗಿದೆ. ತನಿಖೆ ನಡೆಸಿದ ಆಯೋಗ ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವರದಿ ನೀಡಿದ್ದರೂ ಸುಮ್ಮನಿರುವುದರ ಮರ್ಮ ಏನನ್ನು ಸೂಚಿಸುತ್ತದೆ? ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯುವುದೇ ನನ್ನ ಕರ್ತವ್ಯ ಎನ್ನುವ ರಾಜ್ಯಪಾಲರಿಗೆ, ಪರಿಶಿಷ್ಟರಿಗೆ ನ್ಯಾಯವಾಗಿ ದಕ್ಕಬೇಕಾಗಿದ್ದ ಹುದ್ದೆಗಳು ಮೇಲ್ವರ್ಗದವರ ಪಾಲಾಗಿರುವುದು ಕಾಣಲಿಲ್ಲವೇಕೆ. ಇವರ ಜಾಣ ಮೌನಕ್ಕೆ ಏನರ್ಥ?

ರಾಜಭವನ ವಿರೋಧ ಪಕ್ಷಗಳಿಗೆ ಮಾವನ ಮನೆಯಂತಾಗಿರುವುದು ಜನತೆ ಪ್ರಶ್ನಿಸುವಂತಾಗಿದೆ. ಮುಖ್ಯಮಂತ್ರಿ ಮತ್ತು ಗೃಹಸಚಿವ ಇವರಿಬ್ಬರ ವಿರುದ್ಧ ಮೊಕದ್ದಮ್ಮೆಗೆ ಅನುಮತಿ ಕೇಳಿದ್ದರೂ ಗೃಹ ಸಚಿವರನ್ನು ಪಾರುಮಾಡಿರುವುದು ಏಕೆ? ತಮ್ಮ ಹುದ್ದೆಯ ಘನತೆಯನ್ನು ಮರೆತು ಹುಚ್ಚುಚ್ಚಾಗಿ ಮಾತನಾಡಿ ನಗೆಪಾಟಲಿಗೆ ಈಡಾಗಿದ್ದಾರೆ. ಹಲ್ಲು ಬಿಗಿಯಾಗಿರಬೇಕು ನಿಜ. ಆದರೆ ನಾಲಿಗೆ ಉದ್ದವಾದರೆ....!

ಬೆಲೆಯೇರಿಕೆಯಿಂದ ಜನ ತತ್ತರಿಸುತ್ತಿದ್ದರೂ ಯಾರೊಬ್ಬರೂ ಆ ಬಗ್ಗೆ ಮಾತನಾಡುತ್ತಿಲ್ಲ. ಮುಖ್ಯಮಂತ್ರಿ–ರಾಜ್ಯಪಾಲರ ನಡುವಿನ ಕಾನೂನು ಮತ್ತು ರಾಜಕೀಯ ತಿಕ್ಕಾಟದಲ್ಲಿ ನಿಜವಾಗಿಯೂ ತೊಂದರೆ ಅನುಭವಿಸುತ್ತಿರುವವರು ಸಾಮಾನ್ಯ ಜನ. ಅಧಿಕಾರ ದಾಹದಿಂದ ಎಲ್ಲ ರಾಜಕೀಯ ಪಕ್ಷಗಳು ಸ್ವರ್ಧೆಗೆ ಬಿದ್ದಂತೆ ವರ್ತಿಸುತ್ತಿವೆ. ವ್ಯವಸ್ಥೆಯನ್ನು ಹದಗೆಡಿಸಿ ಜನತೆಯ ನೆಮ್ಮದಿಯನ್ನು ಹಾಳುಮಾಡಿವೆ. ಸಾರ್ವಜನಿಕರಿಗೆ ಬೇರೆ ಆಯ್ಕೆಗಳೆ ಇಲ್ಲದ ಪರಿಸ್ಥಿತಿ ತಂದೂಡ್ಡಿವೆ. ಆಡಳಿತ–ವಿರೋಧ ಪಕ್ಷಗಳು ಆರೋಪ ಪ್ರತ್ಯಾರೋಪಗಳಲ್ಲಿ ಕಾಲ ನೂಕುತ್ತಿರುವುದರಿಂದ ಅಭಿವೃದ್ಧಿ ಕುಂಠಿತಗೊಂಡಿದೆ. ನೀ ಕೊಡೆ–ನಾ ಬಿಡೆ ಎಂಬಂತ ಸನ್ನಿವೇಶ ಸೃಷ್ಟಿಯಾಗಿರುವಾಗ ಉಳಿದ ಅವಧಿಯಲ್ಲಿ ಸುಸೂತ್ರವಾಗಿ ಆಡಳಿತ ನಡೆಸಲು ವಿರೋಧ ಪಕ್ಷಗಳು ಬಿಡುವುದಿಲ್ಲ. ಬಿಜೆಪಿ ಸರ್ಕಾರ ಕುರ್ಚಿ ಉಳಿಸಿಕೊಳ್ಳುವುದರಲ್ಲಿಯೇ ಕಾಲ ಕಳೆಯಬೇಕಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಹಾಗೂ ನಾಡಿನ ಪ್ರಗತಿಗೆ ಮಾರಕ. ಎಲ್ಲ ಪಕ್ಷಗಳು ಜನರ ನಂಬಿಕೆಯನ್ನು ಕಳೆದುಕೊಂಡಿರುವುದರಿಂದ ಹೊಸದಾಗಿ ಜನದೇಶ ಪಡೆಯುವುದೇ ಸೂಕ್ತ.

ವಿ. ಸತ್ಯನಾರಾಯಣ ರಾವ್
ಬೆಂಗಳೂರು

ಇದೇನು ಸಂಸ್ಕೃತಿ... ಇದೇನು ಸಭ್ಯತೆ...?

ಪ್ರಿಯ ಸಂಪಾದಕರಿಗೆ,

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಮೊಕದ್ದಮೆ ಹೂಡಲು ಅನುಮತಿ ನೀಡಿದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ವಿರುದ್ಧ ರಾಜ್ಯ ಬಿಜೆಪಿ ಕರ್ನಾಟಕ ಬಂದ್ ಕರೆ ನೀಡಿದ್ದು ಹಾಗೂ ಆ ಮೂಲಕ ಸಾಮಾನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು ಅಕ್ಷಮ್ಯ.

'ಗಂಡ–ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು' ಎಂಬ ಗಾದೆಯಂತೆ ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ನಡುವಿನ ಸಮರಕ್ಕೆ ರಾಜ್ಯದ ಜನಸಾಮಾನ್ಯರು ಒಂದು ದಿನವಿಡೀ ನರಳುವಂತೆ ಮಾಡಿದ್ದು ಅಮಾನವೀಯ.

ಬಂದ್ ಸಂದರ್ಭದಲ್ಲಿ ಹೆದ್ದಾರಿ ತಡೆದು ದಿನವಿಡೀ ಸಂಚಾರವನ್ನು ತಡೆದದ್ದು, ಅಂಗಡಿ–ಮುಂಗಟ್ಟುಗಳನ್ನು ಬಲವಂತವಾಗಿ ಮುಚ್ಚಿಸಿದ್ದು, ಕಲ್ಲುತೂರಿದ್ದು, ಬಸ್‌ಗೆ ಬೆಂಕಿಯಿಟ್ಟಿದ್ದು ಅನಾಗರಿಕ.

ಬಿಜೆಪಿ ನಡೆ ತಾನೊಂದು ವಿಭಿನ್ನ ರಾಜಕೀಯ ಪಕ್ಷವೆಂಬ ನೈತಿಕ ಶಕ್ತಿ ಕಳೆದುಕೊಂಡು ದಿಕ್ಕೆಟ್ಟು ಹತಾಶವಾಗಿದೆ. ಬೌದ್ಧಿಕವಾಗಿ ದಿವಾಳಿಯಾಗಿದೆ. ಈಗ ಬಂದ್ ಮಾಡಿ ಜನಸಾಮಾನ್ಯರನ್ನು ಗೋಳುಹೊಯ್ದುಕೊಳ್ಳುವ ಮಟ್ಟಕ್ಕೆ ಇಳಿದುಬಿಟ್ಟಿದೆ. ರಾಜಕಾರಣಿಗಳ ಬೇನಾಮಿ ಆಸ್ತಿ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿ; ಕೋಟಿ ಕೋಟಿ ಬಹುಮಾನ ಗೆಲ್ಲಿ ಎಂಬ ಯಡಿಯೂರಪ್ಪನವರ ಘೋಷಣೆ ಎಷ್ಟೊಂದು ಹಾಸ್ಯಾಸ್ಪದ.

ಎಂ.ಪಿ. ಸುರೇಶ್ ಬಾಬು
ಬೆಂಗಳೂರು

ವೈಚಾರಿಕ ಪ್ರಜ್ಞೆಯ 'ಸಂವಾದ'

ಪ್ರಿಯ ಸಂಪಾದಕರೇ,

ಸಂಪಾದಕರೊಡನೆ ಸಂವಾದದಲ್ಲಿ ಅಪೂರ್ವ ಡಿ. ಸಿಲ್ವರವರ 'ದುಃಖ ನಿವಾರಣೆಯ ಜ್ಞಾನ ವಿಜ್ಞಾನವನ್ನು ಮೀರಿದ್ದು,' ಡಾ. ಎಸ್. ನರೇಂದ್ರ ಕುಮಾರ್‌ರವರ 'ಪರಂಪರೆಯೊಂದಿಗೆ ಮುಖಾಮುಖಿ ಆಗಬೇಕಾದ ಧರ್ಮ,' ಬಿ. ಮಹೇಶ್‌ರವರ ಮತಾಂತರ ಮಾಡುತ್ತಿರುವ ಪೇಜಾವರ ನೆನಪಿನಲ್ಲಿಡುವಂತಹದು. ಇನ್ನು ಎಂದಿನಂತೆ ಸಿ.ಎಚ್. ರಾಜಶೇಖರ್‌ರವರ 'ಬುದ್ಧಾಯಣ,' ಚಂದ್ರಭಾನುಪ್ರಸಾದ್‌ರವರ 'ದಲಿತ್ ಡೈರಿ' ಬಹಳ ಚನ್ನಾಗಿ ಬರುತ್ತಿವೆ. ನಿಮ್ಮ ಸಂಪಾದಕೀಯವನ್ನು ಓದದೆ ಬಹಳ ದಿನಗಾಳಾಯ್ತು. ಕಾರಣ ತಿಳಿಯಲಿಲ್ಲ. ಸದಾ ವೈಚಾರಿಕತೆಯನ್ನ ಬೆಳೆಸುವ ವೈಚಾರಿಕ ಪ್ರಜ್ಞೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿರುವ ನಿಮಗೆ ಮತ್ತು ನಿಮ್ಮ ಬಳಗಕ್ಕೆ ಶುಭಾಷಯಗಳು.

ಎಚ್. ಶಿವರಾಜು
ಮೈಸೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ಸೂಚನೆ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ಮಲ್ಲಿಕಾರ್ಜುನ ಗುಮ್ಮಗೋಳ

ಅಭಿವೃದ್ಧಿಗೆ ಆಸರೆಯಾಗದ ಪಂಚಾಯತಿಗಳು

ಮಾನ್ಯ ಸಂಪಾದಕರೇ,

ಒಂದೆಡೆ ದಿನಬಳಕೆ ವಸ್ತುಗಳು ಕೈಗೆಟುಗದಷ್ಟು ದುಬಾರಿ ಯಾಗುತ್ತಿವೆ. ಮತ್ತೊಂದೆಡೆ ರೈತ ತನ್ನ ಫಸಲಿಗೆ ಯೋಗ್ಯ ಬೆಲೆ ಸಿಗುತ್ತಿಲ್ಲ ಎಂದು ಪರಿತಪಿಸುತ್ತಿದ್ದಾನೆ. ಇಂಥಹ ಎರಡು ಸಂಕಟಗಳ ನಡುವೆ ಬಂದ ಪಂಚಾಯತ್ ಚುನಾವಣೆಗಳು ತೀರ್ವ ಆಕರ್ಷಣೆಯನ್ನು ಪಡೆದುಕೊಳ್ಳುತ್ತಿವೆ. ಪಟ್ಟಣದ ಪಂಚತಾರಾ ಸಂಸ್ಕೃತಿಯ ಡಾಕ್ಟರ್‌ಗಳು, ಟೆಕ್ಕಿಗಳು ಹಳ್ಳಿಗಳ ಅಭಿವೃದ್ಧಿಯ ಕನಸನ್ನು ಸಾಕಾರ ಮಾಡಲು ಹೊರಟಿದ್ದಾರೆ! ರಾಜಕಾರಣ ಎಂಬುದು ಲಾಭದಾಯಕ ದಂಧೆಯಾಗಿರುವ ಸಂದರ್ಭದಲ್ಲಿ ಲಾಭದಾಯಕ ವೃತ್ತಿಯನ್ನು ಬಿಟ್ಟು ರಾಜಕೀಯ ಅಖಾಡಕ್ಕೆ ಧುಮುಕುತ್ತಿರುವವರ ತಲೆಯಲ್ಲಿ ಯಾವ ಯಾವ ಆಸೆಗಳಿವೆಯೋ? ಹಣ ಚೆಲ್ಲಿ ಹಣ ಪಡೆದುಕೊಳ್ಳುವ ಲೆಕ್ಕಾ ಚಾರದ ನಡುವೆ ಸದುದ್ದೇಶದ ಅಭ್ಯರ್ಥಿಗಳೂ ಕಣದಲ್ಲಿದ್ದಾರೆ. ಆದರೆ ಅಂಥಹವರನ್ನು ಗೆಲ್ಲಿಸುವ ಉದ್ದೇಶ ಮತದಾರ ಪ್ರಭುಗಳಿಗೆ ಇರಬೇಕಲ್ಲ. ಅಧಿಕಾರ ಎಂಬ ಯಕ್ಷಿಯ ಮೋಹಕ್ಕೆ ಎಲ್ಲರೂ ಬಲಿಯಾಗುತ್ತಿದ್ದಾರೆ. ಯಾವ ಕೌಟುಂಬಿಕ ಸಂಬಂಧಗಳು ಅಧಿಕಾರದ ದಾಹ ವನ್ನು ನಿರ್ಬಂಧಿಸುತ್ತಿಲ್ಲ. ತಾಯಿ-ಮಗ, ಅಣ್ಣ-ತಮ್ಮ, ಅಕ್ಕ-ತಂಗಿ, ಗಂಡ-ಹೆಂಡತಿ, ಸವತಿ-ನಾದಿನಿ ಹೀಗೆ ಸಂಬಂಧಿಕರು ಚುನಾವಣಾ ಕಣದಲ್ಲಿ ಎದಿರು ಬದಿರಾಗಿ ಸೆಣೆಸಾಟಕ್ಕೆ ನಿಂತಿದ್ದಾರೆ. ಒಂದೇ ಮನೆಯ ಮೇಲೆ ಹಲವಾರು ಪಕ್ಷಗಳ ಬಾವುಟಗಳು ಹಾರಾಡುತ್ತಿವೆ.

ಆಡಳಿತದ ವಿಕೇಂದ್ರೀಕರಣವು ಪ್ರಜಾಪ್ರಭುತ್ವವನ್ನು ಹೀಗೆ ತಳ ಮಟ್ಟಕ್ಕೆ ತಂದು ನಿಲ್ಲಿಸಿದೆ. ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುವಲ್ಲಿ ಅವರಿಗೆ ನೇರವಾದ ರಾಜಕೀಯ ಅಧಿಕಾರ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಕಲ್ಪಸಿ ಕೊಡುವುದು ಅಧಿಕಾರ ವಿಕೇಂದ್ರೀಕರಣದ ಧ್ಯೇಯವಾಗಿದೆ.

ಒಂದು ಪ್ರದೇಶದ ಅಭಿವೃದ್ಧಿ ಅಥವಾ ಅನಾಭಿವೃದ್ಧಿಯು ಆ ಪ್ರದೇಶದ ಸ್ಥಳೀಯ ಸಂಸ್ಥೆಗಳನ್ನು ಅವಲಂಬಿಸಿದೆ. ಪ್ರಾಮಾಣಿಕತೆ ಮತ್ತು ಜನರ ಕ್ರಿಯಾತ್ಮಕ ಸಹಭಾಗಿತ್ವವು ವ್ಯವಸ್ಥೆಯನ್ನು ಯಶಸ್ವಿಗೊಳಿಸಬಲ್ಲದು. ಆದರೆ ಇಂದು ಸ್ಥಳೀಯ ಸಂಸ್ಥೆಗಳು ಪ್ರಭಾವಿ ರಾಜಕಾರಣಿಗಳ ಬಾಲಂಗೋಚಿಗಳಂತೆ ಕೆಲಸ ಮಾಡುತ್ತಿರುವುದು ಎಲ್ಲೆಡೆಯೂ ಕಂಡು ಬರುತ್ತಿದೆ. ವ್ಯಾಪಕ ಭ್ರಷ್ಟಾಚಾರ ಮತ್ತು ಹಣ ದುರ್ಬಳಕೆಗಳನ್ನು ಪ್ರಶ್ನಿಸುವಂತಹ ಧೈರ್ಯವನ್ನು ಜನರು ತೋರಿಸುತ್ತಿಲ್ಲ. ಹಾಗಾಗಿ ಪಂಚಾಯತಿಗಳು ತಮ್ಮ ಧ್ಯೇಯವನ್ನು ಈಡೇರಿಸುವಲ್ಲಿ ವಿಫಲವಾಗುತ್ತಿವೆ.

ಸಾಮಾಜಿಕ ಸಮಾನತೆಯ ದೃಷ್ಟಿಯಿಂದ ಪಂಚಾಯತಗಳಲ್ಲೂ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಜನರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಆದರೆ ಅವರ ಅಧಿಕಾರ ಹಾಗೂ ಅಭಿಪ್ರಾಯಗಳಿಗೆ ಯಾವುದೇ ಮನ್ನಣೆಯು ಸಿಗುತ್ತಿಲ್ಲ. ಹುದ್ದೆಯಲ್ಲಿ ಕುಳಿತಿದ್ದರೂ ಸಹ ತೀರ್ಮಾನ ತೆಗೆದುಕೊಳ್ಳುವಾಗ ಅವರನ್ನು ಲೆಕ್ಕಿಸದೇ ಅಧಿಕಾರೇತರ ರಾಜಕೀಯ ಒತ್ತಡಕ್ಕೆ ಅಥವಾ ಹಿತಾಸಕ್ತಿಗೆ ಮಣಿದು ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಹಿಳೆಯರು ನಾಮ ಮಾತ್ರ ಪ್ರತಿನಿಧಿಗಳು ಅವರ ಅಧಿಕಾರವನ್ನೆಲ್ಲ ಚಲಾಯಿಸುವವರು ಅವರ ಗಂಡಂದಿರು ಹಾಗೂ ಪ್ರಬಲ ವರ್ಗದ ಜನರು. ಹೀಗಾಗಿ ಅವರಿಗೆ ನೀಡಿದ ರಾಜಕೀಯ ಅಧಿಕಾರ ಉಳಿಗಮಾನ್ಯ [ಫ್ಯೂಡಲ್] ವ್ಯವಸ್ಥೆಯ ಕೈಯಲ್ಲಿ ಸಿಕ್ಕು ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗುತ್ತಿದೆ. ಮೀಸಲಾತಿಯಿಂದ ಅಧಿಕಾರದ ಗದ್ದುಗೆಗೆ ಏರಿದವರೂ ಸಹ ತಾವು ಯಾರಿಗೆ ಏನೂ ಕಮ್ಮಿಯಿಲ್ಲ, ಎನ್ನುವ ಹಾಗೆ ರಾಜಕೀಯದ ರಾಡಿಯಲ್ಲಿ ಮುಳುಗುತ್ತಿದ್ದಾರೆ.

ಸ್ವಾತಂತ್ರ್ಯ ಸಿಕ್ಕು 60 ವರ್ಷಗಳು ಗತಿಸಿಹೋಗಿವೆ. ಆದರೂ ರಸ್ತೆ, ನೀರು, ವಿದ್ಯುತ್, ಶೌಚಾಲಯ, ಆಸ್ಪತ್ರೆಯಂತಹ ಮೂಲಭೂತ ಸೌಲಭ್ಯಗಳನ್ನು ಹಳ್ಳಿಗಳಿಗೆ ಕಲ್ಪಿಸಲಾಗಿಲ್ಲ. ಬಿಡುಗಡೆಯಾದ ಕೋಟ್ಯಾಂತರ ರೂಪಾಯಿ ಯಾರ ಹೊಟ್ಟೆ ಸೇರಿತು ಎಂಬುದನ್ನು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ. ಅಂಥಹ ಗಂಟಿನ ಆಸೆಯಿಂದಲೇ ಅಲ್ಲವೆ ನೆಂಟರಿಷ್ಟರು ಚುನಾವಣೆಯ ಗುದ್ದಾಟಕ್ಕೆ ಇಳಿದಿರುವದು? ಇಂದು ದೇಶದಲ್ಲಿ ಸುಮಾರು 2.5ಲಕ್ಷ ಚುನಾಯಿತ ಪಂಚಾಯತ್ ರಾಜ್ ಸಂಸ್ಥೆಗಳಿವೆ. 28.18 ಲಕ್ಷ ಚುನಾಯಿತ ಪ್ರತಿನಿಧಿಗಳಿದ್ದಾರೆ. ಇದರಲ್ಲಿ ಶೇ 36.87% ರಷ್ಟು ಮಹಿಳೆಯರಿದ್ದಾರೆ. ಶೇ 16%ರಷ್ಟು ಜನ 35 ವರ್ಷದ ಒಳಗಿನವರಾಗಿದ್ದಾರೆ. ಇಷ್ಟೊಂದು ಪ್ರಮಾಣದ ಜನರಿಗೆ ರಾಜಕೀಯ ತರಬೇತಿ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಅರಿವು ಸಿಗುತ್ತಿರುವದು ಈ ಪಂಚಾಯತ್ ರಾಜ್ ವ್ಯವಸ್ಥೆಯ ಹೆಗ್ಗುರುತು. ಈ ಎಲ್ಲ ಪ್ರತಿನಿಧಿಗಳು ಸಂವಿಧಾನವನ್ನು ಓದಲೇಬೇಕು ಎನ್ನುವದಕ್ಕಿಂತ ಅದರ ಉದ್ದೇಶವನ್ನಾದರೂ ಅರ್ಥ ಮಾಡಿಕೊಳ್ಳಬೇಕು. ಅದಾಗದೆ ಹೋಗಿರುವದಕ್ಕೆ ಗಬ್ಬು ನಾರುವ ನಮ್ಮ ಹಳ್ಳಿಗಳೆ ಸಾಕ್ಷಿ.

ಪಂಚಾಯತಗಳು ಅಧಿಕಾರದ ಮತ್ತು ಸ್ವ ಸಂಪನ್ಮೂಲದ ಕೊರತೆಯಿಂದಾಗಿ ಸ್ಥಾಪಿತ ಉದ್ದೇಶಕ್ಕೆ ಅನುಗುಣವಾದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ. ಸರಕಾರದ ನಿರಾಶಕ್ತಿ ಮತ್ತು ಜನಪ್ರತಿನಿಧಿಗಳ ಅನಪೇಕ್ಷಿತ ಹಸ್ತಕ್ಷೇಪದಿಂದಾಗಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಮತ್ತು ಕಳಪೆತನ ಎಲ್ಲೆಡೆ ಕಂಡುಬರುತ್ತಿದೆ. 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' (ಎನ್.ಆರ್.ಇ.ಜಿ.), ಇಂದಿರಾ ಆವಾಸ ಯೋಜನೆ, ಆಶ್ರಯ ಯೋಜನೆ, ಸುವರ್ಣ ಗ್ರಾಮೋದಯ ಯೋಜನೆ, ಗ್ರಾಮೀಣ ಸಡಕ್ ಯೋಜನೆ ಹೀಗೆ ಹಲವಾರು ಯೋಜನೆಗಳ ಮುಖಾಂತರ ಕೋಟ್ಯಾಂತರ ಹಣವನ್ನು ಗ್ರಾಮೀಣ ಅಭಿವೃದ್ಧಿಗಾಗಿ ವ್ಯಯ ಮಾಡಲಾಗುತ್ತಿದೆ. ಆದರೆ, ಪಂಚಾಯತಗಳು ಅಸ್ತಿತ್ವಕ್ಕೆ ಬಂದು ಮೂರು ದಶಕಗಳೇ ಉರುಳಿದರೂ ಯಾವ ಬದಲಾವಣೆಯೂ ಹಳ್ಳಿಗಳಲ್ಲಿ ಕಾಣುತ್ತಿಲ್ಲ. ಸರಕಾರ ಫಲಾನುಭವಿಗಳನ್ನು ಆಯ್ಕೆಮಾಡುವ ಹಾಗೂ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕೆಲಸವನ್ನು ಪಂಚಾಯ್ತಿಗಳಿಂದ ಕಿತ್ತುಕೊಂಡು ಕೃಷಿ ಇಲಾಖೆ, ಅರಣ್ಯ ಇಲಾಖೆ, ಪಶು ಸಂಗೋಪನೆ ಇಲಾಖೆ ಹಾಗೂ ನೀರಾವರಿ ಇಲಾಖೆಯಂತವುಗಳಿಗೆ ಹಸ್ತಾಂತರ ಗೊಳಿಸಿರುವದು ಸಹ ಪಂಚಾಯ್ತಿಗಳ ಅಧಿಕಾರವನ್ನು ಮೊಟಕು ಗೊಳಿಸಿದೆ.

ಎನ್.ಆರ್.ಇ.ಜಿ. ಯೋಜನೆಯಲ್ಲಿ ಕಾಮಗಾರಿ ಕೈಗೊಳ್ಳದೆ ಕೊಟ್ಟ ಬಿಲ್ಲುಗಳನ್ನು ರಚಿಸಿ ಹಣವನ್ನು ದುರುಪಯೋಗ ಮಾಡಿರುವದು ಎಲ್ಲಡೆಗೂ ಕಂಡುಬರುತ್ತಿದೆ. ಯಾವುದೇ ಅಧಿಕಾರವಿಲ್ಲದೆ ಪಿಳ್ಳಂಗೋವಿಗಳಾಗಿರುವ ತಾಲೂಕ ಪಂಚಾಯತಿಗಳನ್ನಾದರೂ ಇದರ ಉಸ್ತುವಾರಿಗೆ ವಹಿಸಿದ್ದರೆ ಸೂಕ್ತವಾಗುತ್ತಿತ್ತೇನೋ. ಅಧಿಕಾರ ಕೊಡಿ ಇಲ್ಲವೆ ತಾಲೂಕ ಪಂಚಾಯತಿಗಳನ್ನು ರದ್ದುಪಡಿಸಿ ಎಂದು ಧರಣಿ ಮಾಡುವುದು ತಪ್ಪುತ್ತಿತ್ತು. ಗ್ರಾಮ ಸಭೆ ಮುಖಾಂತರ ತೆಗೆದುಕೊಂಡ ತೀರ್ಮಾನ ಹಾಗೂ ಕ್ರಿಯಾಯೋಜನೆಗಳನ್ನು ಪಂಚಾಯತ್ ಸದಸ್ಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುವದು ಕಂಡುಬರುತ್ತಿದೆ. ಇದರಿಂದ ಸಾಮಾಜಿಕ ನ್ಯಾಯ ಸಮಿತಿ, ವಸತಿ ಸಮಿತಿ, ಸೌಕರ್ಯ ಸಮಿತಿಯಂತಹ ಗ್ರಾಮ ಸಮಿತಿಗಳು ಶಾಸನಾತ್ಮಕ ಕಾರ್ಯವನ್ನು ಮಾಡುವಲ್ಲಿ ವಿಫಲವಾಗುತ್ತಿವೆ.

ಗ್ರಾಮ ಸಭೆಗಳಿಗೆ ಪ್ರತಿನಿಧಿಗಳೇ ಭಾಗವಹಿಸುತ್ತಿಲ್ಲ ಇನ್ನೂ ಜನರ ಸಹಭಾಗಿತ್ವವನ್ನು ನಿರೀಕ್ಷಿಸುವದಾದರು ಹೇಗೆ. ಆದರಿಂದ ಸ್ವ ಸಹಾಯ ಸಂಘಗಳು, ಯುವಕ ಸಂಘಗಳು, ಎನ್.ಜಿ.ಓ.ಗಳು, ಶಾಲಾ-ಕಾಲೇಜು ಶಿಕ್ಷಕ ಹಾಗೂ ವಿದ್ಯಾರ್ಥಿಗಳು ಈ ಗ್ರಾಮ ಸಭೆಗಳಲ್ಲಿ ಬಾಗವಹಿಸುವಂತೆ ಮಾಡಬೇಕು. ಇದರಿಂದ ಪ್ರತಿನಿಧಿಗಳೇ ಬೇರೆಯವರ ಹೆಸರಿನಲ್ಲಿ ಕಾಮಗಾರಿಗಳನ್ನು ಮಾಡಿ ಕಳಪೆ ಕೆಲಸಕ್ಕೆ ದಾರಿ ಮಾಡಿಕೊಡುವದು ತಪ್ಪುತ್ತದೆ. 'ಗ್ರಾಮ ಸಭೆ ತಿರ್ಮಾನಗಳನ್ನು ಪಂಚಾಯತ್ ಸದಸ್ಯರು ವ್ಯತಿರಿಕ್ತ ಗೊಳಿಸುವದು ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುವ ಲೋಪದೋಷಗಳನ್ನು ಸಹ ತಪ್ಪಿಸಬಹುದು. ಫಲಾನುಭವಿಗಳಾಗುವ ಸಲುವಾಗಿಯೇ ಮಾತ್ರ ಗ್ರಾಮ ಸಭೆಗೆ ಹಾಜರಾಗದೆ ಪ್ರತಿ ಗ್ರಾಮ ಸಭೆಗೂ ಎಲ್ಲ ಜನರು ಸಹಭಾಗಿತ್ವವನ್ನು ವಹಿಸಬೇಕಾಗುತ್ತದೆ. ಒಗ್ಗಟ್ಟು ಮತ್ತು ಸಾಮೂದಾಯಿಕ ಜವಾಬ್ದಾರಿ ಇದ್ದಾಗ ಮಾತ್ರ ಯಾವದೇ ರಾಜಕೀಯ ಹಸ್ತಕ್ಷೇಪವಿಲ್ಲದೆ ಯೋಜನೆಗಳನ್ನು ಯಶಸ್ವಿಗೊಳಿಸಲು ಹಾಗೂ ಅಭಿವೃದ್ಧಿಯನ್ನು ತರಲು ಸಾಧ್ಯ. ಈ ಚುನಾವಣೆಗಳಿಂದಲಾದರೂ ಜಿಲ್ಲಾ ಮತ್ತು ತಾಲೂಕ ಪಂಚಾಯತಿಗಳು ಆ ಉದ್ದೇಶವನ್ನು ಈಡೇರಿಸುವತ್ತ ಹೆಜ್ಜೆ ಹಾಕಲಿ. □

"ಅಭಿವೃದ್ಧಿ"ಯ ಹುಯಿಲು ಮತ್ತು ಅಸಲಿಯತ್ತು

ಸಂಪಾದಕರೊಡನೆ ಸಂವಾದ

ಸುರೇಶ್ ಭಟ್

> **ನಮ್ಮ ಅಧಿಕಾರಸ್ಥ ರಾಜಕಾರಣಿಗಳ ಬಾಯಲ್ಲಿ ಯಾವಾಗ ನೋಡಿದರೂ "ಅಭಿವೃದ್ಧಿ"ಯ ಓತಪ್ರೋತ ಜಪ. ಭಾರತ ಆರ್ಥಿಕ ಸೂಪರ್ ಪವರ್ ಆಗಲು ಇನ್ನು ಕೆಲವೇ ಸೋಪಾನಗಳು ಳಿದಿವೆಯೆಂಬ ಡಂಗುರ ಬೇರೆ.**

ಮಾನ್ಯ ಸಂಪಾದಕರೇ,

"ಭಾರತದ ಪ್ರಜೆಗಳಾದ ನಾವು ನಮ್ಮ ದೇಶವನ್ನೊಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾತಾಂತ್ರಿಕ ಗಣರಾಜ್ಯವಾಗಿಸಿ ದೇಶದ ಸಮಸ್ತ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನೂ; ಚಿಂತನೆ, ಅಭಿವ್ಯಕ್ತಿ, ಧರ್ಮ, ಆರಾಧನೆಯ ಸ್ವಾತಂತ್ರ್ಯವನ್ನೂ; ಸ್ಥಾನಮಾನ, ಅವಕಾಶಗಳಲ್ಲಿ ಸಮಾನತೆಯನ್ನೂ ಖಾತರಿಪಡಿಸುವೆವು ಮತ್ತು ವ್ಯಕ್ತಿಯ ಘನತೆ ಹಾಗೂ ರಾಷ್ಟ್ರದ ಐಕ್ಯತೆ, ಸಮಗ್ರತೆಗಳನ್ನು ಭದ್ರಪಡಿಸುವ ಭ್ರಾತೃತ್ವ ಪ್ರಜೆಗಳ ಮಧ್ಯೆ ಬೆಳೆಯಲು ಪ್ರೋತ್ಸಾಹಿಸುವೆವು ಎನ್ನುವ ಪ್ರತಿಜ್ಞೆಯೊಂದನ್ನು ವಿಧ್ಯುಕ್ತವಾಗಿ ಕೈಗೊಂಡಿದ್ದೇವೆ" ಸಂವಿಧಾನದ ಪೀಠಿಕೆ

ಇತ್ತೀಚಿನ ದಿನಗಳಲ್ಲಂತೂ ನಮ್ಮ ಅಧಿಕಾರಸ್ಥ ರಾಜಕಾರಣಿಗಳ ಬಾಯಲ್ಲಿ ಯಾವಾಗ ನೋಡಿದರೂ "ಅಭಿವೃದ್ಧಿ"ಯ ಓತಪ್ರೋತ ಜಪ. ಭಾರತ ಆರ್ಥಿಕ ಸೂಪರ್ ಪವರ್ ಆಗಲು ಇನ್ನು ಕೆಲವೇ ಸೋಪಾನಗಳು ಳಿದಿವೆಯೆಂಬ ಡಂಗುರ ಬೇರೆ. ಇದನ್ನೆಲ್ಲ ಪ್ರಶ್ನಿಸುವ ಗೊಡವೆಗೆ ಹೋಗದಿರುವುದರಿಂದ ಸಮಾಜದಲ್ಲಿ ಕೆಲವು ತಪ್ಪು ಕಲ್ಪನೆಗಳು ಉಂಟಾಗುತ್ತಿವೆ. ಹೋದಲ್ಲಿ ಬಂದಲ್ಲಿ ಜಿಡಿಪಿ ಅಂಕಿಸಂಖ್ಯೆಗಳನ್ನು ಉಲ್ಲೇಖಿಸುತ್ತಾ ದೇಶದ ಸಾಧನೆಗಳ ಬಗ್ಗೆ ಕೊಚ್ಚಿಕೊಳ್ಳುವ ಆಳುವ ವರ್ಗಗಳ ಈ ಹೇಳಿಕೆಗಳಲ್ಲಿ ಸತ್ಯಾಂಶವೆಷ್ಟು ನೋಡೋಣ.

ಕಹಿವಾಸ್ತವಗಳು

ಕೇವಲ ಜಿಡಿಪಿ (ನಿವ್ವಳ ದೇಶೀಯ ಉತ್ಪನ್ನ)ಯ ಬೆಳವಣಿಗೆಯನ್ನಷ್ಟೆ ಪರಿಗಣಿಸಿದರೆ ಭಾರತ ವಿಶ್ವದ ಹತ್ತು ಪ್ರಮುಖ ದೇಶಗಳ ಸಾಲಿನಲ್ಲಿ ನಿಲ್ಲುತ್ತದೆನ್ನುವುದು ನಿಜ. ಆದರೆ ಹೀಗೆ ಗಮನಾರ್ಹ ಆರ್ಥಿಕ ಪ್ರಗತಿ ಸಾಧಿಸಲಾಗುತ್ತಿದೆಯಾದರೂ ಅದರ ಲಾಭವನ್ನು ಎಲ್ಲರಿಗೂ ಸಮಾನವಾಗಿ ಹಂಚದಿರುವ ಪರಿಣಾಮವಾಗಿ ದೇಶದೆಲ್ಲೆಡೆ ದಾರಿದ್ರ್ಯ, ಅಸಮಾನತೆ, ನಿರಕ್ಷರತೆ ಹೆಚ್ಚುತ್ತಿವೆಯೆನ್ನುವ ಕಠೋರ ಸತ್ಯವನ್ನೂ ಇದೇ ವೇಳೆ ಮನಗಾಣಬೇಕಿದೆ. ಒಂದೆಡೆ ಆರ್ಥಿಕವಾಗಿ ಭಾರೀ "ಅಭಿವೃದ್ಧಿ" ಸಾಧಿಸಿರುವ ಅತ್ಯಂತ ಸಣ್ಣ ವರ್ಗದ ಒಂದು ಪ್ರತ್ಯೇಕ ಇಂಡಿಯಾ ನಿರ್ಮಾಣವಾಗಿದೆ. ಇನ್ನೊಂದೆಡೆ ಅಭಿವೃದ್ಧಿಯ ಲಾಭದಿಂದ ವಂಚಿತವಾಗಿರುವ ಅತಿದೊಡ್ಡ ಜನಸಂಖ್ಯೆಯ ಭಾರತವಿದೆ. ದೇಶ ಈ ರೀತಿ ಇಬ್ಭಾಗವಾಗುತ್ತಿರುವ ಸತ್ಯಾಂಶ ನಮ್ಮನ್ನಾಳುತ್ತಿರುವವರಿಗೆ ತಿಳಿಯದ ಸಂಗತಿಯೇನೂ ಅಲ್ಲ.

ಆದರೆ ಜನಸಾಮಾನ್ಯರಿಗಷ್ಟೆ ಅಲ್ಲ, ಸುಶಿಕ್ಷಿತರೆನಿಕೊಂಡ ಮಧ್ಯಮವರ್ಗದ ಬಹುತೇಕ ದಿಢೀರ್ ಶ್ರೀಮಂತ ಜನರಿಗೂ ಇದರ ಅರಿವಿಲ್ಲ. ಅವರೆಲ್ಲರೂ ಅಧಿಕಾರಸ್ಥರ ತೀರಾ ಉತ್ಪ್ರೇಕ್ಷೆಯಿಂದ ಕೂಡಿದ ಹೇಳಿಕೆಗಳನ್ನು ವೇದವಾಕ್ಯವೆಂಬಂತೆ ಸ್ವೀಕರಿಸುತ್ತಿದ್ದಾರೆ. ಅವರ ದೃಷ್ಟಿಯಲ್ಲಿ "ಅಭಿವೃದ್ಧಿ" ಅಂದರೆ ಕೇವಲ ಕಾಂಕ್ರೀಟು ರಸ್ತೆಗಳು, ಥಳಥಳಿಸುವ ಮಾಲ್‌ಗಳು, ರಾಶಿ ರಾಶಿ ಸರಕುಗಳು, ವಿದೇಶಿ ಮಾದರಿಯ ಕಾರುಗಳು, ವಿಮಾನಗಳು, ಬಹುಮಹಡಿ ಸಂಕೀರ್ಣಗಳು, ರಿಸಾರ್ಟ್‌ಗಳು ಎಂದಷ್ಟೆ ಆಗಿದೆ. ಇಂದು ನಮ್ಮನ್ನಾಳುವ ಮಂದಿ ಆಲಂಗಿಸಿಕೊಂಡಿರುವ ನವ ಉದಾರೀಕರಣದ ನೀತಿಗಳಿಂದ ಮೋಡಿಗೊಳಗಾಗಿರುವ ಮಧ್ಯಮವರ್ಗ ಭಾರತಕ್ಕೊಂದು ಸಂವಿಧಾನ ಎಂಬುದಿದೆ ಮತ್ತು ಆ ಸಂವಿಧಾನದ ಪೀಠಿಕೆಯಲ್ಲಿ ಕೆಲವು ಆಶಯಗಳನ್ನು ವ್ಯಕ್ತಪಡಿಸಲಾಗಿದೆ ಎಂಬುದನ್ನು ಮರೆತಿರುವಂತಿದೆ. ಆದುದರಿಂದ ಸಂವಿಧಾನದ ಆಶಯಗಳನ್ನು ಪದೇ ಪದೇ ನೆನಪಿಸಿಕೊಳ್ಳುವ ಜರೂರಿ ಇದೆ.

ಇಂದಿನ ನವ ಉದಾರೀಕರಣದ ಯುಗದಲ್ಲಿ ಕೆಲವೇ ಕೆಲವು ಮಂದಿ ಶ್ರೀಮಂತರು ಇನ್ನಷ್ಟು ಅಪಾರ ಸಂಪತ್ತಿಗೆ ಒಡೆಯರಾಗುವುದನ್ನು ದೇಶದ "ಅಭಿವೃದ್ಧಿ" ಯೆಂದು ಕರೆಯಬಹುದೇ? ಹರಹು, ಪ್ರಮಾಣ, ಸಂಖ್ಯೆ ಮತ್ತು ವೈವಿಧ್ಯತೆಗಳಲ್ಲಿ ಎಣಿಕೆಗೂ ಮೀರಿದಂಥಾ ಅಗಾಧ "ಅಭಿವೃದ್ಧಿ" ಕಂಡಿರುವ ಇನ್ನೊಂದು ಕ್ಷೇತ್ರವಿದೆ. ಅದೇ ಭ್ರಷ್ಟಾಚಾರ! ಇವೆಲ್ಲದರ ಭರಾಟೆಯಲ್ಲಿ ಈ ನವ ಉದಾರೀಕರಣದ ತತ್ವಗಳಾದ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳು ನಿಜಕ್ಕೂ ಸಂವಿಧಾನದ ಆಶಯಗಳಿಗೆ ತೀರಾ ವಿರುದ್ಧವಾಗಿವೆ ಎನ್ನುವ ಸತ್ಯ ಎಲ್ಲೋ ಕಣ್ಮರೆಯಾಗಿಬಿಟ್ಟಿದೆ. ಸತ್ಯವನ್ನು ಅರಿತುಕೊಳ್ಳುವ ಪ್ರಯತ್ನವನ್ನು ಇನ್ನಾದರೂ ಮಾಡದಿದ್ದರೆ ಎಚ್ಚರವಾಗುವಷ್ಟರಲ್ಲಿ ತುಂಬಾ ತಡವಾಗಿಬಿಡಬಹುದು.

ಅಭಿವೃದ್ಧಿಯ ನೈಜ ಮಾನದಂಡಗಳು

ಯಾವುದೇ ಒಂದು ದೇಶದ ಸಮಸ್ತ ಪ್ರಜೆಗಳು ಚೆನ್ನಾಗಿ ಬದುಕುತ್ತಿದ್ದಾರೆಯೆ ಎನ್ನುವುದನ್ನು ಅಳೆಯುವುದಕ್ಕೆ ಕೇವಲ ಜಿಡಿಪಿ ಸಂಖ್ಯೆ ಒಂದೇ ಸಾಲದು; ಪ್ರಜೆಗಳ ಆರೋಗ್ಯ ಮತ್ತು ಶಿಕ್ಷಣದ ಮಟ್ಟಗಳಲ್ಲಿ ಆಗಿರುವ ಪ್ರಗತಿಯನ್ನೂ ಪರಿಗಣಿಸಬೇಕಾಗುತ್ತದೆಂದು 1990ನೆ ಇಸವಿಯಷ್ಟು ಹಿಂದೆಯೆ ಸ್ಥಾಪಿಸಲ್ಪಟ್ಟಿರುವ ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ (ಯುಎನ್‌ಡಿಪಿ) ಸ್ಪಷ್ಟವಾಗಿ ಹೇಳುತ್ತದೆ. ಯುಎನ್‌ಡಿಪಿ ಕಳೆದ 20ವರ್ಷಗಳಿಂದಲೂ ನಿರಂತರವಾಗಿ ಜಾಗತಿಕ ಮಾನವಾಭಿವೃದ್ಧಿಯ ವಾರ್ಷಿಕ ವರದಿಗಳನ್ನು ಬಿಡುಗಡೆ ಮಾಡುತ್ತಿದೆ. ದೇಶವೊಂದರ ನೈಜ ಅಭಿವೃದ್ಧಿಯ ಮಟ್ಟವನ್ನು ತಿಳಿಯಬೇಕಿದ್ದರೆ ಯುಎನ್‌ಡಿಪಿ ವರದಿಯಲ್ಲಿರುವ ಮಾನವಾಭಿವೃದ್ಧಿ ಸೂಚ್ಯಾಂಕಗಳ ಪಟ್ಟಿಯನ್ನು ನೋಡಬೇಕು. ಇತ್ತೀಚಿನ 2010ರ ಪಟ್ಟಿಯನ್ನು ತಯಾರಿಸುವಾಗ ಇನ್ನಷ್ಟು ನಿಖರತೆಗಾಗಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಆದಾಯದ ವಿಷಯದಲ್ಲಿ ಜಿಡಿಪಿ(ನಿವ್ವಳ ದೇಶೀಯ ಉತ್ಪನ್ನ) ಬದಲಾಗಿ ಜಿಎನ್‌ಐ ಅಂದರೆ "ನಿವ್ವಳ ರಾಷ್ಟ್ರೀಯ ಆದಾಯ" ಎಂಬ ಸೂಚಕವನ್ನು ಅಳವಡಿಸಿಕೊಳ್ಳಲಾಗಿದೆ. ಸಾಕ್ಷರತೆಯ ವಿಷಯದಲ್ಲಿ ಇದುವರೆಗಿನ "ನಿವ್ವಳ ದಾಖಲಾತಿ" ಮತ್ತು "ವಯಸ್ಕರ ಸಾಕ್ಷರತೆಯ ದರ"ಗಳನ್ನು ಕೈಬಿಟ್ಟು ಹೊಸ ಸೂಚಕಗಳಾದ "ನಿರೀಕ್ಷಿತ ಕಲಿಕಾ ಅವಧಿ" ಮತ್ತು "ಸರಾಸರಿ ಕಲಿಕಾ ಅವಧಿ"ಗಳನ್ನು ಉಪಯೋಗಿಸಲಾಗಿದೆ. "ಬಹುಆಯಾಮಗಳ ಬಡತನ", "ಲೈಂಗಿಕ ಅಸಮಾನತೆ" ಮತ್ತು "ಆರ್ಥಿಕ ಅಸಮಾನತೆ"ಗಳೆಂಬ ಮೂರು ಹೆಚ್ಚುವರಿ ಮಾನದಂಡಗಳನ್ನು ಕೂಡ ಬಳಸಿಕೊಳ್ಳಲಾಗಿದೆ. ಯುಎನ್‌ಡಿಪಿಯ 2010ರ ಮಾನವಾಭಿವೃದ್ಧಿ ವರದಿಯಲ್ಲಿ ನಮಗೆ ಭಾರತದ ನೈಜ ಅಭಿವೃದ್ಧಿಯ ಪರಿಕಲ್ಪನೆ ದೊರೆಯುತ್ತದೆ.

ಭಾರತದ ಅಸಲಿ ಸಾಧನೆಗಳು

ಭಾರತ ಸಾಧಿಸಿರುವ "ಅದ್ಭುತ ಪ್ರಗತಿ"ಯ ಬಗ್ಗೆ ರಾಜಕಾರಣಿಗಳು ನೀಡುವ ಹೇಳಿಕೆಗಳು ನಿಜವೆಂದಾದರೆ ಯುಎನ್‌ಡಿಪಿಯ 2010ರ ಮಾನವಾಭಿವೃದ್ಧಿ ಸೂಚ್ಯಂಕಗಳ ಪಟ್ಟಿಯಲ್ಲಿ ಭಾರತದ ಸ್ಥಾನ ತುತ್ತತುದಿಗೆ ಸಮೀಪ ಇರಬೇಕಿತ್ತಲ್ಲವೇ? ಆದರೆ ವಾಸ್ತವದಲ್ಲಿ 169 ದೇಶಗಳ ಪೈಕಿ ಭಾರತ 119ನೆ ಸ್ಥಾನದಲ್ಲಿದೆ! 2009ರ 134ನೆ ಸ್ಥಾನದೊಂದಿಗೆ ಹೋಲಿಸಿದರೆ ಅತ್ಯಲ್ಪ ಮಟ್ಟಿನ ಪ್ರಗತಿಯಾಗಿದೆ ಎನ್ನಬಹುದಾದರೂ ಅದು ಎಲ್ಲೆಲ್ಲಿಗೂ ಸಾಲದು. ಹಿಂದುಳಿದ ಆಫ್ರಿಕಾಖಂಡದ ಕೆಲವು ದೇಶಗಳು ನಮಗಿಂತಲೂ ಮೇಲಿನ ಸ್ಥಾನಗಳಲ್ಲಿವೆ.

"ನಿರೀಕ್ಷಿತ ಕಲಿಕಾ ಅವಧಿ"ಯಲ್ಲಿ ಜಾಗತಿಕ ಸರಾಸರಿ 12.3 ವರ್ಷಗಳಿದ್ದರೆ ಭಾರತದ ಸರಾಸರಿ ಬರೀ 10.3. "ಸರಾಸರಿ ಕಲಿಕಾ ಅವಧಿ"ಯನ್ನು ತೆಗೆದುಕೊಂಡರೆ ವಿಶ್ವದ ಸೂಚ್ಯಂಕ 7.4ರೊಂದಿಗೆ ಭಾರತದ 4.4ನ್ನು ಹೋಲಿಸಿದಾಗ ಭಾರತದ ಅಸಲಿ ಬಣ್ಣ ಬಯಲಾಗುತ್ತದೆ.

ಇನ್ನು ಆಹಾರಧಾನ್ಯಗಳ ಲಭ್ಯತೆ ಮತ್ತು ಪೌಷ್ಟಿಕತೆಗಳ ವಿಷಯಕ್ಕೆ ಬಂದರೆ ದೇಶದ ಶೇಕಡಾ 77ರಷ್ಟು ಜನ ದಿನಕ್ಕೆ 20 ರೂಪಾಯಿಗಿಂತಲೂ ಕಮ್ಮಿ ಆದಾಯದಲ್ಲಿ ದಿನ ತಳ್ಳುತ್ತಿದ್ದಾರೆಂದು ಸರಕಾರದಿಂದಲೆ ನೇಮಿಸಲ್ಪಟ್ಟ ಅರ್ಜುನ್ ಸೇನ್‌ಗುಪ್ತಾ ಸಮಿತಿಯ ವರದಿ ಹೇಳುತ್ತದೆ. "ಅಂತಾರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆ" ತಯಾರಿಸಿರುವ "ಭೌಗೋಳಿಕ ಹಸಿವಿನ ಸೂಚ್ಯಾಂಕ" ಪಟ್ಟಿಯೂ ಇದಕ್ಕೆ ಪೂರಕವಾಗಿದೆ. ಅದರ ಪ್ರಕಾರ ಹಸಿವಿನ ಸೂಚ್ಯಾಂಕಗಳಲ್ಲಿ 88 ಅಭಿವೃದ್ಧಿಶೀಲ ದೇಶಗಳ ಸಾಲಿನಲ್ಲಿ ಭಾರತ 67ನೆ ಸ್ಥಾನದಲ್ಲಿ ನಿಲ್ಲುತ್ತದೆ! ಸಾರಾಂಶದಲ್ಲಿ ಇವೆಲ್ಲ ವರದಿಗಳು ಹೇಳುವುದೇನೆಂದರೆ ದೇಶದ

ಬಹುಪಾಲು ಪ್ರಜೆಗಳು ದಯನೀಯ ಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ. ಸರಕಾರ ಈಗಲಾದರೂ ಈ ಎಪಿಎಲ್, ಬಿಪಿಎಲ್ ಎಂಬ ವರ್ಗೀಕರಣದ ನಾಟಕವನ್ನು ನಿಲ್ಲಿಸಿ ಮುಂಚಿನ ಸಾರ್ವತ್ರಿಕ ಆಹಾರಧಾನ್ಯ ವಿತರಣೆಯ ವ್ಯವಸ್ಥೆಗೆ ಹಿಂದಿರುಗಬೇಕು.

ಹೆಣ್ಣು ಭ್ರೂಣ ಹತ್ಯೆಗಳು, ಮಹಿಳೆಯರಿಗೆ ಅಸಮಾನ ವೇತನ, ಮಹಿಳಾ ನೌಕರರಿಗೆ ಕಿರುಕುಳ, ದಲಿತ ಮಹಿಳೆಯರನ್ನು ಬೆತ್ತಲಾಗಿಸುವುದು ಮುಂತಾದ ಪ್ರಕರಣಗಳು ವ್ಯಾಪಕವಾಗಿ ನಡೆಯುತ್ತಿರುವ ವಿಷಯ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದು ಇದು ಭಾರತದ ಮಹಿಳೆಯರ ದುಃಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ.

ದೇಶದ ಜನಸಂಖ್ಯೆಯ ಶೇಕಡಾ 42ರಷ್ಟಿರುವ ಮಕ್ಕಳ ಬಗ್ಗೆ ಸರಕಾರ ನಿರ್ಲಕ್ಷ್ಯದ ಧೋರಣೆ ತಾಳಿದೆ. ಮಕ್ಕಳ ವಿಷಯದಲ್ಲಿ ಸರಕಾರಕ್ಕಿರುವ ಬದ್ಧತೆ ಮತ್ತು ಕಾಳಜಿಗಳು ಕ್ಷೀಣಿಸಿರುವುದನ್ನು ಸರಕಾರದ ಅಂಕಿಸಂಖ್ಯೆಗಳೆ ಎತ್ತಿತೋರಿಸುತ್ತವೆ. ಬಜೆಟ್ಟುಗಳಲ್ಲಿ ಮಕ್ಕಳಿಗಾಗಿ ತೆಗೆದಿರಿಸುವ ಮೊತ್ತ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದೆ (ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡು) ಇದಕ್ಕೆ ಸಾಕ್ಷಿ. ಕಳೆದ ಐದು ವಾರ್ಷಿಕ ಬಜೆಟ್ಟುಗಳನ್ನು ಗಮನಿಸಿದರೆ ಪ್ರತಿ 100 ರೂಪಾಯಿಗಳಲ್ಲಿ ಮಕ್ಕಳಿಗಾಗಿ ತೆಗೆದಿರಿಸಿರುವುದೆಷ್ಟು? ಸರಾಸರಿ 4.45 ಪೈಸೆ ಮಾತ್ರ! ಇದೂ ಸಾಲದೆಂಬಂತೆ ಮಕ್ಕಳ ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಭದ್ರತೆಗಾಗಿ ಮೀಸಲಾಗಿಡುವ ದುಡ್ಡಿನ ಬಹುತೇಕ ಅಂಶವನ್ನು ವೆಚ್ಚವೇ ಮಾಡಲಾಗುತ್ತಿಲ್ಲ. ಸರಕಾರ ಬಜೆಟ್ಟುಗಳಲ್ಲಿ ತೋರಿಸುವ ಅಂದಾಜು ವೆಚ್ಚಗಳಿಗೂ ಅದು ನಿಜವಾಗಿ ಖರ್ಚು ಮಾಡುತ್ತಿರುವ ಮೊತ್ತಗಳಿಗೂ ಬಹುದೊಡ್ಡ ವ್ಯತ್ಯಾಸವಿದೆ ಎನ್ನುತ್ತದೆ "ಮಕ್ಕಳ ಹಕ್ಕುಗಳ ಕೇಂದ್ರ" ಎಂಬ ಸರಕಾರೇತರ ಸಂಸ್ಥೆಯ ವರದಿ.

ಸಕಲ ರಂಗಗಳನ್ನು ಆವರಿಸುತ್ತಿರುವ ಖಾಸಗೀಕರಣದ ಪ್ರಕ್ರಿಯೆ ಈಗ ಶಿಕ್ಷಣ ಕ್ಷೇತ್ರಕ್ಕೂ ಕಾಲಿರಿಸಿದೆ. ಖಾಸಗಿ ವಿದ್ಯಾಸಂಸ್ಥೆಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಮತ್ತು ಸರಕಾರಿ ಶಾಲಾ, ಕಾಲೇಜುಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗುತ್ತಿದೆ. ಹಾಗಾದರೆ ಖಾಸಗಿ ವಿದ್ಯಾಸಂಸ್ಥೆಗಳ ದುಬಾರಿ ಫೀಸು ತೆರಲು ಸಾಧ್ಯವಾಗದೆ ಸರಕಾರಿ ಸಂಸ್ಥೆಗಳನ್ನೆ ಅವಲಂಬಿಸಿರುವ ಅಸಂಖ್ಯಾತ ಬಡವರು ಮತ್ತು ಅಲ್ಪಸಂಖ್ಯಾತರು ಎಲ್ಲಿಗೆ ಹೋಗಬೇಕು? ಉದಾಹರಣೆಗೆ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸಬೇಕೆಂದಿದ್ದರೂ ಅದಕ್ಕೆ ಸೂಕ್ತ ಮಾರ್ಗದರ್ಶಿ ನೀತಿಗಳಿಲ್ಲ. ಸಾಲದ್ದಕ್ಕೆ ಪಠ್ಯ ಪುಸ್ತಕಗಳ ಗುಣಮಟ್ಟವೂ ತೀರಾ ಕಳಪೆಯಾಗಿದೆ. ಇವೆಲ್ಲದರ ಪರಿಣಾಮವಾಗಿ ಇಂಗ್ಲಿಷ್ ಭಾಷೆಯ ಬೋಧನೆಯಲ್ಲಿ ಅನಾಸಕ್ತಿ ತೋರಿಸಲಾಗುತ್ತಿದೆ. ಇದರರ್ಥ ಇಂತಹ ಶಾಲೆಗಳಲ್ಲಿ ಕಲಿಯುವ ಬಡ ಮಕ್ಕಳಿಗೆ ಕೂಲಿ ಮತ್ತಿತರ ನಿಕೃಷ್ಟ ಉದ್ಯೋಗಗಳೆ ಕಾದಿವೆ ಎಂದಾಯಿತಲ್ಲವೇ? ಇದಕ್ಕೆಲ್ಲ ಒಂದು ಉತ್ತಮ ಪರಿಹಾರವೆಂದರೆ ಶಿಕ್ಷಣರಂಗದ ಖಾಸಗೀಕರಣವನ್ನು ನಿಲ್ಲಿಸಿಬಿಟ್ಟು ಎಲ್ಲರ ಕೈಗೆಟಕುವಂಥಾ "ನೆರೆಹೊರೆಯ ಶಾಲೆ" ಮತ್ತು "ಸರ್ವಸಮಾನ ಶಾಲೆ"ಗಳ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವುದು.

"ಅಭಿವೃದ್ಧಿ" ಕುರಿತಂತೆ ಅಧಿಕಾರಸ್ಥರು ಬಿತ್ತರಿಸುವ ವರ್ಣರಂಜಿತ ಬೊಗಳೆ ಮಾತುಗಳನ್ನು ಕಣ್ಮುಚ್ಚಿಕೊಂಡು ಸ್ವೀಕರಿಸುವ ಪ್ರವೃತ್ತಿಗೆ ಇನ್ನಾದರೂ ಕಡಿವಾಣ ಹಾಕದಿದ್ದರೆ ಸಂವಿಧಾನದ ಆಶಯಗಳನ್ನು ದುರ್ಬೀನು ಮೂಲಕ ಅರಸಬೇಕಾಗುವ ದಿನಗಳು ದೂರವಿಲ್ಲ. □

ಸಂಪಾದಕರೊಡನೆ ಸಂವಾದ

ಹಲವು ಪ್ರಶ್ನೆಗಳಿಗೆ ಕಾರಣವಾಗಿರುವ ತೀರ್ಪು

ಮ. ಶ್ರೀ. ಮುರಳಿ ಕೃಷ್ಣ

ಮಾನ್ಯ ಸಂಪಾದಕರೇ,

ನಾಗರಿಕತೆ ಬೆಳೆದಂತೆ ಪ್ರಭುತ್ವಗಳು ಸ್ಥಾಪನೆಗೊಂಡವು. ಅವು ತಮ್ಮ ಅಧಿಕಾರ ಚಲಾಯಿಸಲು ಅನೇಕ ಆಡಳಿತ ಯಂತ್ರಗಳನ್ನು ಹುಟ್ಟುಹಾಕಿದವು. ನಾಗರಿಕನೇ ಸಾರ್ವಭೌಮ ಎಂದು ಸಾರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಕ್ರಮೇಣ ಆಡಳಿತ ಯಂತ್ರಗಳು ಆತನ ಹಕ್ಕುಗಳನ್ನೇ ಮೊಟಕುಗೊಳಿಸಲು ಶುರುಮಾಡಿದವು. ಇವೆಲ್ಲಾ ಮಾಡುವುದು ಸಮಷ್ಟಿಯ ಹಿತದಲ್ಲಿ ಎಂದು ಸಮರ್ಥನೆಯನ್ನು ಅವು ನೀಡುತ್ತ ಬಂದಿವೆ. ಈ ನಿಟ್ಟಿನಲ್ಲಿ ಹಲವು ಮಾನವ ಹಕ್ಕುಗಳು ದಮನಕ್ಕೆ ಒಳಗಾದವು. ನಮ್ಮ ರಾಷ್ಟ್ರದಲ್ಲಿ ಯಾವುದೇ ಒಂದು ಬೃಹತ್ ಯಶಸ್ವೀ ಯೋಜನೆಯ (ಉದಾ: ನೀರಾವರಿಗಾಗಿ ಕಟ್ಟುವ ದೊಡ್ಡ ಅಣೆಕಟ್ಟುಗಳು ಇತ್ಯಾದಿ) ಹಿಂದೆ ಅನೇಕ ಕಣ್ಣೀರಿನ ಕಥೆಗಳು ಇವೆ. ಇರುತ್ತವೆ. ಈ ಯೋಜನೆಗಳಿಂದ ತಮ್ಮ ನೆಲೆಗಳನ್ನು ಕಳೆದುಕೊಂಡವರಲ್ಲಿ ಆದಿವಾಸಿಗಳು ದಲಿತರು ಮತ್ತು ಶ್ರೇಣಿಕೃತ ಸಮಾಜದ ತಳಹಂತದಲ್ಲಿರುವ ಮುಂದಿಯೇ ಜಾಸ್ತಿ. ಇವರ ಮಾನವಹಕ್ಕುಗಳ ಪ್ರಶ್ನೆಯನ್ನು ಎತ್ತಿಕೊಂಡು ಅನೇಕ ಮಾನವಹಕ್ಕು ಸಂಘಟನೆಗಳು ಭಾರತದಲ್ಲಲ್ಲದೆ ವಿಶ್ವದ ಇತರ ದೇಶಗಳಲ್ಲೂ ಸಹ ತಮ್ಮ ವಿರೋಧ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ.

ಇದರಿಂದ, ನಮ್ಮ ರಾಷ್ಟ್ರವೂ ಒಳಗೊಂಡಂತೆ ಅನೇಕ ರಾಷ್ಟ್ರಗಳಲ್ಲಿ ಮಾನವ ಹಕ್ಕು ಹೋರಾಟಗಾರರು ಪ್ರಭುತ್ವಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಅನೇಕ ಬಗೆಯ ಸಂಕಷ್ಟಗಳಿಗೆ ಈಡಾಗಿದ್ದಾರೆ. ಅಂತಹವರಲ್ಲಿ ಒಬ್ಬರಾಗಿರುವ ಶಿಶುತಜ್ಞ ಡಾ॥ ಬಿನಾಯಕ್ ಸೇನ್‌ರಿಗೆ ಭಾರತೀಯ ದಂಡ ಸಂಹಿತೆಯ ಪರಿಚ್ಛೇದ 120(ಬಿ), ಮತ್ತು 124(ಎ), ಛತ್ತೀಸ್‌ಗಡ ವಿಶೇಷ ಸಾರ್ವಜನಿಕ ಸುಭದ್ರತಾ ಕಾಯಿದೆಯ ಪರಿಚ್ಛೇದ 8(1), (2), (3) ಮತ್ತು (5) ಹಾಗೂ ಕಾನೂನು ವಿರೋಧಿ ಚಟುವಟಿಕೆಗಳ ಪ್ರತಿಬಂಧಕ ಕಾಯಿದೆಯ ಪರಿಚ್ಛೇದ 39(2)ದ ಅನ್ವಯ ಛತ್ತಿಸ್‌ಗಢದ ರಾಯ್‌ಪುರ್ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ. ರಾಯ್‌ಪುರದ ಜೈಲಿನಲ್ಲಿದ್ದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾವೋವಾದಿ)ಯ ನಾರಾಯಣ ಸನ್ಯಾಲ್‌ರ ಮೂರು ಪತ್ರಗಳನ್ನು ಡಾ॥ ಸೇನ್ ಪಿಜೊಷ್ ಗುಹಾ ಎಂಬ ವ್ಯಾಪಾರಿ ಮತ್ತು ಮಾವೋವಾದಿ ಪಕ್ಷದ ಅನುಯಾಯಿಗೆ ರವಾನಿಸಿದರು ಎಂಬ ಪ್ರಾಸಿಕ್ಯೂಷನ್‌ನ ಆರೋಪವನ್ನು ಎತ್ತಿಹಿಡಿಯುತ್ತ, ಇದು ಕಾನೂನಿನಡಿ ದೇಶದ್ರೋಹಕ್ಕೆ ನೀಡುತ್ತಿರುವ ಕನಿಷ್ಠ ಶಿಕ್ಷೆಯೆಂದು ನ್ಯಾಯಮೂರ್ತಿ ಬಿ.ಪಿ ವರ್ಮಾ ತಮ್ಮ ತೀರ್ಪಿನಲ್ಲಿ ತಿಳಿಸಿದ್ದಾರೆ.

ಈ ತೀರ್ಪಿನ ಬಗೆಗೆ ಭಿನ್ನ ದನಿಗಳು ಕೇಳಿ ಬರುತ್ತಿವೆ. ನ್ಯಾಯಾಲಯದ ಮುಂದಿಟ್ಟ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ತರುವಾಯ ಈ ತೀರ್ಪು ಹೊರಬಿದ್ದಿದೆ. ನ್ಯಾಯಾಲಯದ ಯಾವುದೇ ತೀರ್ಪನ್ನು ಗೌರವಿಸಬೇಕು. ನಮ್ಮದು ಬನಾನ ಗಣರಾಜ್ಯ (Banana Republic)ವಲ್ಲ ಇದು ನಕ್ಸಲೀಯರು ನಡೆಸುವ ಕಾಂಗರೂ ಕೋರ್ಟುಗಳ (Kangaro Court) [ಏಕಪಕ್ಷೀಯ ತೀರ್ಮಾನ ನೀಡುವ ವೇದಿಕೆ] ನಿರ್ಣಯವಲ್ಲ. ಡಾ॥ ಸೇನ್‌ರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಈ ವಿಷಯದಲ್ಲಿ ಮಾನವಹಕ್ಕು ಸಂಘಟನೆಗಳು ಕೆಲವು ಚಳವಳಿಗಳು ಗುಲ್ಲೆಬ್ಬಿಸುತ್ತಿವೆ. ಎಂದಿನಂತೆ ಮಾಧ್ಯಮಗಳು ತಮ್ಮ ಮೂಗಿನ ನೇರಕ್ಕೆ ವಿಚಾರಣೆ ನಡೆಸುತ್ತಿವೆ. ಛತ್ತೀಸ್‌ಗಢದಲ್ಲಿ ನಕ್ಸಲೀಯರು ಪ್ರಭುತ್ವವನ್ನೇ ಕಿತ್ತೊಗೆಯುವ ತಮ್ಮ ಧ್ಯೇಯೋದ್ದೇಶವನ್ನು ಈಡೇರಿಸುವ ನಿಟ್ಟಿನಲ್ಲಿ ಅನೇಕ ಹಿಂಸಾ ಕೃತ್ಯಗಳನ್ನು ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿ ತಿರ್ಪನ್ನು ವಿಶ್ಲೇಷಿಸಬೇಕೆಂದು ಕೆಲವು ನಿವೃತ್ತ ಸೈನ್ಯಾಧಿಕಾರಿಗಳು, ಪೊಲೀಸ್ ವರಿಷ್ಠರು, ಮತ್ತು ಛತ್ತೀಸ್‌ಗಡ ರಾಜ್ಯದ ಅಧಿಕಾರರೂಢ ಬಿಜೆಪಿ ಸರ್ಕಾರದ ಸಮರ್ಥಕರು ವಾದಿಸುತ್ತಿದ್ದಾರೆ.

ಡಾ॥ ಸೇನ್ ಛತ್ತೀಸ್‌ಗಢ ರಾಜ್ಯದ (ಹಿಂದೆ ಅದು ಮಧ್ಯ ಪ್ರದೇಶ ರಾಜ್ಯದಲ್ಲಿತ್ತು) ತೀರ ಹಿಂದುಳಿದ ಗ್ರಾಮದಲ್ಲಿ ನೆಲೆನಿಂತು ಗ್ರಾಮವಾಸಿಗಳಿಗೆ, ಆದಿವಾಸಿಗಳಿಗೆ ಮತ್ತು ಸಮಾಜದ ನಿಮ್ನ ವರ್ಗದ ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವ ಜೊತೆಗೆ ಅವರಿಗಿರುವ ಹಕ್ಕುಗಳ ಬಗೆಗೆ ಕೂಡ ಅರಿವಿನ ಬೆಳಕನ್ನು ಚೆಲ್ಲಿದ್ದಾರೆ. ನಕ್ಸಲೀಯರನ್ನು ಸದೆಬಡಿಯಲು ಹೆಚ್ಚಾಗಿ ಆದಿವಾಸಿಗಳನ್ನೇ ಆಯ್ಕೆ ಮಾಡುವ 'ಸಲ್ವಾ ಜುಡುಂ' ಅಂಥ ಮಿಲಿಟರಿ ಪಡೆಯ ಕಾರ್ಯ ವೈಖರಿಯನ್ನ ಮತ್ತು ಅದಕ್ಕೆ ಕುಮ್ಮಕ್ಕು ನೀಡುತ್ತಿರುವ ಛತ್ತಿಸ್‌ಗಢ ಸರ್ಕಾರದ ನೀತಿಯ ಬಗೆಗೆ ಡಾ॥ ಸೇನ್ ಪ್ರಬಲ ಪ್ರತಿರೋಧವನ್ನು ಒಡ್ಡಿದ್ದರು. ಅವರನ್ನು ಹತ್ತಿಕ್ಕಲು ರಾಜ್ಯ ಸರ್ಕಾರ ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿತ್ತು. ಡಾ॥ ಸೇನರು ಒಬ್ಬ ವೈದ್ಯರಾಗಿ ಮತ್ತು ಛತ್ತೀಸ್‌ಗಢ ರಾಜ್ಯದ Puclನ (Peopales union for Civil Libertees) ಅಧ್ಯಕ್ಷರಾಗಿ ರಾಯ್‌ಪುರದ ಜೈಲಿನಲ್ಲಿದ್ದ ಹಿರಿಯ ಮಾವೋವಾದಿ ನಾಯಕ ನಾರಾಯಣ ಸನ್ಯಾಲ್‌ಗೆ ಚಿಕಿತ್ಸೆ ನೀಡುವ ಸಲುವಾಗಿ ಅವರನ್ನು 33 ಬಾರಿ ಬೇಟಿ ಮಾಡಿದ್ದರು. ಆದರೆ ಇವು ಜರುಗಿದ್ದು ಜೈಲಿನ ಅಧಿಕಾರಿಗಳ ಸಮಕ್ಷಮದಲ್ಲಿ ಆದುದರಿಂದ ಸನ್ಯಾಲ್ ಡಾ॥ ಸೇನ್‌ರಿಗೆ ಮೂರು ಪತ್ರಗಳನ್ನು ನೀಡಿದ್ದರು ಎಂಬ ಆರೋಪ ನಿರಾಧಾರವಾದದ್ದು. ಈ ವಿಷಯ ಕುರಿತು ಜೈಲಿನ ಅಧಿಕಾರಿಗಳು ನಂತರ ಸ್ಪಷ್ಟನೆ ನೀಡಿದ್ದು ಡಾ॥

ಸೇನ್‌ರ ಪರವಾಗಿಯೇ ಇತ್ತು. ಇದು ಪೊಲೀಸರಿಗೆ ನುಂಗಲಾರದ ತುತ್ತಾಯಿತು. ನಂತರ ಪೀಜೊಫ್ ಗುಹಾರನ್ನು ವಿಚಾರಣೆಗೆ ಒಳಪಡಿಸುವ ಸಂದರ್ಭದಲ್ಲಿ ಅವರ ಬಳಿ ಸೇನ್‌ರನ್ನು ಉದ್ದೇಶಿಸಿ ಮಾವೋವಾದಿಗಳು ಬರೆದ ಸಹಿ ರಹಿತ ಪತ್ರವು ದೊರೆಯಿತೆಂದು ಟಾಂಟಾಂ ಮಾಡಲಾಯಿತು. ಪ್ರಾಸಿಕ್ಯೂಷನ್‌ನ ಸಾಕ್ಷ್ಯಾಧಾರಗಳಲ್ಲಿನ ಲೋಪದೋಷಗಳ ಬಗೆಗೆ ಕೋರ್ಟಿನ ಗಮನ ಸೆಳೆಯಲಾಯಿತು. ಆದರೂ ಈ ಆಘಾತಕಾರಿ ತೀರ್ಪನ್ನು ನೀಡಲಾಗಿದೆ ಎಂದು ಮಾನವ ಹಕ್ಕು ಸಂಘಟನೆಗಳು ಕೆಲವು ಎಡಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ದೇಶದ್ರೋಹದ (Seditin) ಆಪಾದನೆಯನ್ನು ಎದುರಿಸುತ್ತಿರುವವರಲ್ಲಿ ಡಾ॥ ಸೇನ್ ಮೊದಲಿಗರೇನೂ ಅಲ್ಲ. ಎರಡು ತಿಂಗಳ ಹಿಂದೆ ನವದೆಹಲಿಯಲ್ಲಿ ಜರುಗಿದ ಒಂದು ವಿಚಾರ ಸಂಕಿರಣದಲ್ಲಿ ಬರಹಗಾರ್ತಿ ಹಾಗೂ ಸಾಮಾಜಿಕ ಕಾರ್ಯಕರ್ತೆ ಅರುಂಧತಿರಾಯ್ ಜಮ್ಮು ಮತ್ತು ಕಾಶ್ಮೀರದ ಪ್ರತ್ಯೇಕತೆಯ ಕುರಿತು ಅಲ್ಲಿನ ಜನರ ಭಾವನೆಗಳನ್ನು ಪ್ರತಿಧ್ವನಿಸಿದ್ದರು. ಅದಕ್ಕಾಗಿ ಪ್ರಸ್ತುತ ಅವರು ದೇಶದ್ರೋಹದ ಆರೋಪಕ್ಕೆ ಗುರಿಯಾಗಿದ್ದಾರೆ.

ಸ್ವಾತಂತ್ರ್ಯ ಆಂದೋಳನದ ಸಮಯದಲ್ಲಿ ಮಹಾತ್ಮ ಗಾಂಧೀಜಿ ಬಾಲಗಂಗಾಧರ ತಿಲಕ್‌ರಂಥ ನೇತಾರರು ಈ ಅಪವಾದಕ್ಕೆ ಒಳಗಾಗಿದ್ದರು. ಭಾರತೀಯ ದಂಡ ಸಂಹಿತೆಯಲ್ಲಿ ಉಲ್ಲೇಖಿಸಿರುವ ದೇಶ ದ್ರೋಹದ ಆರೋಪವನ್ನು ಸಾಬೀತುಪಡಿಸುವ ನೀಟ್ಟಿನಲ್ಲಿ ನಿಷ್ಕಳಂಕ (Unimpeach-able) ಸಾಕ್ಷ್ಯಾಧಾರಗಳಿರಬೇಕು. ಆದರೆ ಪ್ರಾಸಿ ಕ್ಯೂಷನ್ ಮಂಡಿಸಿದ ಸಾಕ್ಷ್ಯಾಧಾರಗಳಲ್ಲಿ ಶಿಥಿಲತೆಯೇ ಢಾಳಾಗಿ ಕಂಡುಬರುವ ಅಂಶವೆಂದು ಡಾ॥ ಸೇನ್‌ರ ಮಡದಿ ಇಳಿನ ಸೇನ್ ಮತ್ತು ಇತರ ಸಾಮಾಜಿಕ ಕಾರ್ಯಕರ್ತರು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ರಾಷ್ಟ್ರದ ಸರ್ವೋಚ್ಛ ನ್ಯಾಯಾಲಯ ಹಿಂಸೆಗೆ ಚಿತಾವಣೆ ನೀಡುವಂಥ ಆಯಾಮ ದೇಶದ್ರೋಹದ ಆಪಾದನೆಯಲ್ಲಿರಬೇಕು ಎಂದು ಸ್ಪಷ್ಟಪಡಿಸಿರುವ ಹಿನ್ನಲೆಯಲ್ಲಿ ಡಾ॥ ಸೇನ್‌ರ ವಿರುದ್ಧ ಮಾಡಿರುವ ಈ ಆರೋಪ ಸಾಧ್ಯವೇ? ಅನೇಕ ಬಾರಿ ಡಾ॥ ಸೇನ್‌ರು ಪ್ರಭುತ್ವ ಮತ್ತು ನಕ್ಸಲಿಯರ ಹಿಂಸೆಯನ್ನು ಖಂಡಿಸಿದ್ದಾರೆ. ಅಲ್ಲದೆ ಈ ತೀರ್ಪು ಹೊರಬರುವ ಕೆಲವು ದಿನಗಳ ಹಿಂದೆ ಡಾ॥ ಸೇನ್ ಮಿನ್ನಿ ಎಂಬ ಸಾಕ್ಷ್ಯ ಚಿತ್ರಗಳ ನಿರ್ಮಾಪಕಿಯ ಜೊತೆ ಮಾತನಾಡುತ್ತ ನಮಗೆ ಶಾಂತಿ ಮತ್ತು ಸಮತೆ (Egality)ಬೇಕು ಎಂದು ತಿಳಿಸಿರುವುದು ಒಂದು ಆಂಗ್ಲ ಟಿವಿ ನ್ಯೂಸ್ ಚಾನೆಲ್‌ನಲ್ಲಿ ಬಿತ್ತರಿಸಲಾಗಿದೆ. ಅವರು ತಮ್ಮ ಲೇಖನಗಳಲ್ಲೂ ಭಾಷಣಗಳಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ನಮ್ಮಲ್ಲಿ ಭಯೋತ್ಪಾದನೆ ಮತ್ತು ಉಗ್ರಗಾಮಿತನದ ನಿಗ್ರಹಕ್ಕೆ ದೇಶವ್ಯಾಪಿಯಾಗಿ ಅನ್ವಯಿಸುವ ಕೆಲವು ಕಾನೂನುಗಳಿವೆ. ಅವುಗಳಲ್ಲಿ ಕಾನೂನು ವಿರೋಧಿ ಚಟುವಟಿಕೆಗಳ ಪ್ರತಿಬಂಧಕ ಕಾಯಿದೆ ಸಹ ಒಂದು. ಕೆಲವು ವರ್ಷಗಳ ಹಿಂದೆ ಛತ್ತೀಸ್‌ಗಢದ ಸರ್ಕಾರ ನಕ್ಸಲೀಯರ ಚಟುವಟಿಕೆಗಳನ್ನು ತಡೆಯಲು ಛತ್ತೀಸ್‌ಗಢ ವಿಶೇಷ ಸಾರ್ವಜನಿಕ ಸುಭದ್ರತಾ ಕಾಯಿದೆಯನ್ನು ಜಾರಿ ಮಾಡಿದೆ ಕೇಂದ್ರ ಸರ್ಕಾರ 1958ರಲ್ಲಿ ಬಂಡುಕೋರರನ್ನು ಹತ್ತಿಕ್ಕಲು ನಾಗಾಲ್ಯಾಂಡ್‌ನಲ್ಲಿ ಸಶಸ್ತ್ರ ಸೈನ್ಯದ (ವಿಶೇಷ ಅಧಿಕಾರಗಳುಳ್ಳ) ಕಾಯಿದೆ [Armed Forces (speacial Power) Act]ಯನ್ನು ಜಾರಿ ಮಾಡಿತು. ಮಣಿಪುರದಲ್ಲಿ

ನಮ್ಮಲ್ಲಿ ಭಯೋತ್ಪಾದನೆ ಮತ್ತು ಉಗ್ರಗಾಮಿತನದ ನಿಗ್ರಹಕ್ಕೆ ದೇಶವ್ಯಾಪಿಯಾಗಿ ಅನ್ವಯಿಸುವ ಕೆಲವು ಕಾನೂನುಗಳಿವೆ. ಅವುಗಳಲ್ಲಿ ಕಾನೂನು ವಿರೋಧಿ ಚಟುವಟಿಕೆಗಳ ಪ್ರತಿಬಂಧಕ ಕಾಯಿದೆ ಸಹ ಒಂದು. ಕೆಲವು ವರ್ಷಗಳ ಹಿಂದೆ ಛತ್ತೀಸ್‌ಗಢದ ಸರ್ಕಾರ ನಕ್ಸಲೀಯರ ಚಟುವಟಿಕೆಗಳನ್ನು ತಡೆಯಲು ಛತ್ತೀಸ್‌ಗಢ ವಿಶೇಷ ಸಾರ್ವಜನಿಕ ಸುಭದ್ರತಾ ಕಾಯಿದೆಯನ್ನು ಜಾರಿ ಮಾಡಿದೆ ಕೇಂದ್ರ ಸರ್ಕಾರ 1958ರಲ್ಲಿ ಬಂಡುಕೋರರನ್ನು ಹತ್ತಿಕ್ಕಲು ನಾಗಾಲ್ಯಾಂಡ್‌ನಲ್ಲಿ ಸಶಸ್ತ್ರ ಸೈನ್ಯದ (ವಿಶೇಷ ಅಧಿಕಾ ರಗಳುಳ್ಳ) ಕಾಯಿದೆ [Armed Forces (speacial Power) Act]ಯನ್ನು ಜಾರಿ ಮಾಡಿತು. ಮಣಿಪುರದಲ್ಲಿ ಅದನ್ನು 1980ರಲ್ಲಿ ಅನುಷ್ಠಾನಗೊಳಿಸಲಾಯಿತು.

ಈ ಕಾನೂನಿನಡಿ ಭದ್ರತಾ ಪಡೆಗಳು ವಾರೆಂಟಿಲ್ಲದೆ ಯಾರನ್ನು ಬೇಕಾದರೂ ದಸ್ತಗಿರಿ ಮಾಡಬಹುದು,

ಅದನ್ನು 1980ರಲ್ಲಿ ಅನುಷ್ಠಾನಗೊಳಿಸಲಾಯಿತು.

ಈ ಕಾನೂನಿನಡಿ ಭದ್ರತಾ ಪಡೆಗಳು ವಾರೆಂಟಿಲ್ಲದೆ ಯಾರನ್ನು ಬೇಕಾದರೂ ದಸ್ತಗಿರಿ ಮಾಡಬಹುದು, ಯಾವ ನಿವಾಸ/ಕಟ್ಟಡವನ್ನು ಪ್ರವೇಶಿಸಬಹುದು, ಹುಡುಕಾಟ ನಡೆಸಬಹುದು, ಸಂಶಯಾಸ್ಪದ ವ್ಯಕ್ತಿಗಳ ಮೇಲೆ ಗುಂಡು ಹಾರಿಸಬಹುದು. ಇದರ ವಿರುದ್ಧ ಮಣಿಪುರದ ದರೋಮ್ ಶರ್ಮಿಳ ಕಳೆದ ಹತ್ತು ವರ್ಷಗಳಿಂದ ಉಪವಾಸ ಸತ್ಯಾಗ್ರಹದಲ್ಲಿ ನಿರತರಾಗಿದ್ದಾರೆ. ಇಂತಹ ಕಾಯಿದೆಗಳಿಗೆ ಅನೇಕ ಅಮಾಯಕರು ಬಲಿಯಾಗಿದ್ದಾರೆ. ಅವುಗಳು ದುರ್ಬಳಕೆಗೊಂಡಿರುವುದಕ್ಕೆ ಅನೇಕ ನಿದರ್ಶನಗಳಿವೆ. ಇದು ಈ ಕಾನೂನುಗಳ ಕರಾಳ, ವಿಕೃತ ಮುಖ. ಇಂತಹ ಶಾಸನಗಳ ಬಗೆಗೆ ಪರಾಮರ್ಶೆ ನಡೆಸಬೇಕು. ಈ ಕಾಲಘಟ್ಟದಲ್ಲಿ ಎಲ್ಲೆಲ್ಲೂ ಸುಧಾರಣೆಗಳ ಗದ್ದಲ ಕೇಳಿ ಬರುತ್ತಿದೆ. ನ್ಯಾಯಾಂಗದಲ್ಲೂ ಅವು ಜರೂರಾಗಿ ಜನರ ಹಿತದೃಷ್ಟಿಯಲ್ಲಿ ಜರುಗಬೇಕಿರುವುದು ಇಂದಿನ ತುರ್ತು.

ಒಂದೆಡೆ ಡಾ॥ ಬಿನಾಯಕ್ ಸೇನ್‌ರಂಥವರಿಗೆ ಜೀವಾವಧಿ ಶಿಕ್ಷೆಯನ್ನು ನೀಡಲಾಗುತ್ತದೆ. ಮತ್ತೊಂದೆಡೆ ಕೋಟಿಗಟ್ಟಲೆ ಸಾರ್ವಜನಿಕರ ಹಣವನ್ನು ಲೂಟಿಮಾಡುವ ಮಂತ್ರಿಗಳು/ರಾಜಕಾರಣಿಗಳು, ಕೋಮುದಂಗೆಗಳಿಗೆ ಕಾರ್ಯಕರ್ತರಾಗುವ ವಿಚ್ಛಿದ್ರಕಾರಿ ಶಕ್ತಿಗಳು ಸಮಾಜದಲ್ಲಿ ರಾಜಾರೋಷದಿಂದ ಅಡ್ಡಾಡುತ್ತಿದ್ದಾರೆ. ನಮ್ಮ ಸಾರ್ವಜನಿಕ ಜೀವನದಲ್ಲಿ ಕಾಣುವ ಇಂಥಾ ವಿಪರ್ಯಾಸಗಳಿಗೆ ನಾವೆಷ್ಟು ಹೊಣೆಗಾರರು? □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ದಲಿತ-ಆದಿವಾಸಿಗಳ ಮೇಲಿನ ದೌರ್ಜನ್ಯಗಳು

ಸಂಪಾದಕರೊಡನೆ ಸಂವಾದ

ದಾಸನೂರು ಕೂಸಣ್ಣ

ಮಾನ್ಯ ಸಂಪಾದಕರೇ,

ಭಾರತದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಸಂಭವಿಸದ ದಿನವೊಂದನ್ನು ನೆನಪಿಸಿಕೊಳ್ಳಲು ಅಸಾಧ್ಯದ ಸಂಗತಿ. ಇವರ ಮೇಲೆ ಮಾರಣಾಂತಿಕ ಹಲ್ಲೆ, ಮಾನಭಂಗ ಪ್ರಯತ್ನ, ಅತ್ಯಾಚಾರ, ಆಸ್ತಿ ದೋಚುವಿಕೆ, ಅಪಹರಣ ಹಾಗು ಇತ್ಯಾದಿ ವಿಭಿನ್ನ ಸ್ವರೂಪದ ಪ್ರಕರಣಗಳೆಲ್ಲವೂ ಕ್ಷುಲ್ಲಕ ಸಾಮಾಜಿಕ ಕಾರಣಗಳಿಗಾಗಿ ನಡೆದಿರುವ ಸಾಕ್ಷಿಗಳೆ ಜಾಸ್ತಿಯಿವೆ. ಅದರಲ್ಲೂ ಮೇಲ್ವರ್ಗದವರು ದಲಿತರ ವಿರುದ್ಧ ಸಾಮಾಜಿಕ ಬಹಿಷ್ಕಾರ ಹೇರಲು ಹುಡುಕುವ ಕಾರಣಗಳೆಲ್ಲವೂ ಸಹ ನಗೆಪಾಟಲಿನಂತಹ ವಿಚಾರಗಳಾಗಿರುತ್ತವೆ. ಬಹುತೇಕ ಸಂದರ್ಭ-ಸನ್ನಿವೇಶಗಳಲ್ಲಿ ವ್ಯಕ್ತಿಗತ ಕಾರಣಗಳು ಜಾತಿ ಚೌಕಟ್ಟಿನೊಳಗೆ ಸ್ಥಾನೀಕರಿಸಿಕೊಂಡಾಗ ಅವುಗಳ ಕಬಂಧಬಾವುಗಳೆಲ್ಲವೂ ಜಾತಿಯ ಶ್ರೇಷ್ಠತೆಗಳನ್ನು ಬೀದಿಗೆಳೆದುಬಿಡುತ್ತವೆ.

ಅದೇ ಪ್ರಕಾರವಾಗಿ ಜಾತಿಯ ಮೂಲದಿಂದಲೆ ಸಾಮಾಜಿಕವಾಗಿ ಅಧಃಪತನಗೊಂಡವರಾದ ದಲಿತರು-ಆದಿವಾಸಿಗಳು ದೌರ್ಜನ್ಯಗಳಿಗೆ ತುತ್ತಾದಾಗ ಅವರೆಲ್ಲರೂ ಯಾವ ನೆಲ-ಜಲಗಳ ಮಕ್ಕಳೆಂದು ಸಹಜವಾಗಿ ಪ್ರಶ್ನಿಸುತ್ತಲೆ ಬಂದಿದ್ದಾರೆ. ದೇಶಾದ್ಯಂತ 2007ರಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡಗಳ ಮೇಲೆ 35,594 ವಿವಿಧ ಸ್ವರೂಪದ ದೌರ್ಜನ್ಯಗಳು ನಡೆದಿವೆ; 2008ರ ಅಂತ್ಯಕ್ಕೆ 40,000 ಸಾವಿರದಷ್ಟು ಪ್ರಕರಣಗಳು ದಾಖಲಾಗಿವೆ. ಅಂದರೆ, ಶೇಕಡ 12ರಷ್ಟು ಹೆಚ್ಚಳವಾಗಿದೆ.

ಉತ್ತರ ಪ್ರದೇಶ, ರಾಜಸ್ತಾನ, ಆಂಧ್ರ ಪ್ರದೇಶ, ಬಿಹಾರ ಹಾಗೂ ಮಧ್ಯಪ್ರದೇಶಗಳು ಅನುಕ್ರಮವಾಗಿ ಮೊದಲ ಐದು ಸ್ಥಾನಗಳಲ್ಲಿವೆ. ಆದರೆ, ಕರ್ನಾಟಕ ಮಾತ್ರ 2007ರಿಂಧ ಜಾತ್ಯಾಂಧತೆಯ ಹಠಕ್ಕೆ ಮತ್ತಷ್ಟು ಬಿದ್ದು ಆರನೆ ಸ್ಥಾನದಿಂದ ಕೆಳಗಿಳಿಯದೆ ಮೊದಲ ಐದು ಸ್ಥಾನಗಳಲ್ಲಿ ಒಂದಾಗಬೇಕೆಂಬ ಸಂಕಲ್ಪ ಮಾಡಿರುವುದರಿಂದ 2008ರ ತರುವಾಯ ಸಹೃದಯವಂತರ ಎದೆ ಜೆಲ್ ಎನ್ನಿಸುವಂತಹ ಅಂಕಿಅಂಶಗಳು ಹೊರಬರುತ್ತಿವೆ. ಕಳೆದ ತಿಂಗಳು ಸಂಗತ ಅಂಕಣದಲ್ಲಿ ಬಿ.ಎಲ್. ವೇಣು ಚಿತ್ರದುರ್ಗಾ ಜಿಲ್ಲೆಯಲ್ಲಿ ಸಂಭವಿಸಿರುವ ದೌರ್ಜನ್ಯ ಪ್ರಕರಣಗಳ ಮೇಲೆ ಒಂದಷ್ಟು ಬೆಳಕು ಚಲ್ಲುವಲ್ಲಿ ಸಫಲಾಗಿದ್ದಾರೆ. ಅವುಗಳ ಮೂಲಕ ರಾಜ್ಯದ ಚಿತ್ರಣವನ್ನು ಅವಲೋಕಿಸಿದಾಗ ಅನೇಕ ಗಂಭೀರ ಅಂಶಗಳು ಕಣ್ಣಿಗೆ ರಾಚಿದರೆ ಯಾರನ್ನೇ ಬೇಕಾದರೂ ಧರ್ಮ ಸಂಕಷ್ಟಕ್ಕೆ ದೂಡುತ್ತದೆ.

> **ಕರ್ನಾಟಕದಲ್ಲಿ ಧರ್ಮನಿಷ್ಠ ರಾಜಕಾರಣ ಪ್ರಭುತ್ವಕ್ಕೆ ಬಂದರೆ, ದಲಿತರ-ಅದಿವಾಸಿಗಳ ಮೇಲಿನ ದೌರ್ಜನ್ಯಗಳು ಹಿಮ್ಮೆಟ್ಟುತ್ತವೆಂದು ಅದರ ಅಭಿಮಾನಿಗಳ ಮನದಾಳದ ಮಾತಾಗಿದ್ದವು. ಅದರೆ ಅಗುತ್ತಿರುವುದೆ ಬೇರೆ. ರಾಜ್ಯಾದ್ಯಂತ 1997ರಿಂದ 2010ರ ಆಗಸ್ಟ್ ಅಂತ್ಯಕ್ಕೆ 472 ಕೊಲೆಗಳಾಗಿವೆ, ಕಳೆದ ಎರಡುವರೆ ವರ್ಷದಲ್ಲಿ 70 ಕೊಲೆಗಳಾಗಿವೆ. ಇದೇ ಸಾಲುಗಳಲ್ಲಿ 474 ಆತ್ಯಾಚಾರಗಳಾಗಿವೆ, ಇತ್ತೀಚಿನ ಎರಡುವರೆ ವರ್ಷದಲ್ಲಿ 136 ಅತ್ಯಾಚಾರಗಳು ಅನುಸೂಚಿತ ಜಾತಿ ಮತ್ತು ಪಂಗಡಗಳ ಮೇಲಾಗಿವೆ.**

ಕರ್ನಾಟಕದಲ್ಲಿ ಧರ್ಮನಿಷ್ಠ ರಾಜಕಾರಣ ಪ್ರಭುತ್ವಕ್ಕೆ ಬಂದರೆ, ದಲಿತರ-ಅದಿವಾಸಿಗಳ ಮೇಲಿನ ದೌರ್ಜನ್ಯಗಳು ಹಿಮ್ಮೆಟ್ಟುತ್ತವೆಂದು ಅದರ ಅಭಿಮಾನಿಗಳ ಮನದಾಳದ ಮಾತಾಗಿದ್ದವು. ಅದರೆ ಅಗುತ್ತಿರುವುದೆ ಬೇರೆ. ರಾಜ್ಯಾದ್ಯಂತ 1997ರಿಂದ 2010ರಆಗಸ್ಟ್ ಅಂತ್ಯಕ್ಕೆ 472 ಕೊಲೆಗಳಾಗಿವೆ, ಕಳೆದ ಎರಡುವರೆ ವರ್ಷದಲ್ಲಿ 70 ಕೊಲೆಗಳಾಗಿವೆ. ಇದೇ ಸಾಲುಗಳಲ್ಲಿ 474 ಆತ್ಯಾಚಾರಗಳಾಗಿವೆ, ಇತ್ತೀಚಿನ ಎರಡುವರೆ ವರ್ಷದಲ್ಲಿ 136 ಅತ್ಯಾಚಾರಗಳು ಅನುಸೂಚಿತ ಜಾತಿ ಮತ್ತು ಪಂಗಡಗಳ ಮೇಲಾಗಿವೆ. 2009ರಲ್ಲಿ ನಡೆದಿರುವ 57 ಅತ್ಯಾಚಾರಗಳು ಕಳೆದ ಹದಿಮೂರು ವರ್ಷಗಳಲ್ಲಿಯೇ ಅತಿ ಹೆಚ್ಚಿನವು. ಹಾಗೆಯೇ, ಪಂಗಡಗಳ ಮೇಲೆ 2008ರಲ್ಲಿ ಅತಿ ಹೆಚ್ಚಿನ ಅತ್ಯಾಚಾರಗಳಾಗಿವೆ. 1979ರಲ್ಲಿ ಇಂದಿರಾಗಾಂಧಿ ಸೋತ ಕೂಡಲೆಯೇ ದೇಶ್ಯಾದ್ಯಂತ, ಬಹುತೇಕ ಮೇಲ್ವರ್ಗಗಳ ಜನರು ದಲಿತರನ್ನು ಸುಟ್ಟರೂ ಕಾನೂನುಗಳು ಏನನ್ನೂ ಮಾಡಲಾರವೆಂದು ಮೂದಲಿಸುತ್ತಿದ್ದರು. ಪ್ರಸಕ್ತದಲ್ಲಿಯೂ ಸಹ ರಾಜ್ಯದೊಳಗೆ ಇಂತಹ ಪರಿಸರ ಸೃಷ್ಠಿಯಾಗತೊಡಗಿದೆ ಎಂಬ ಆಂತಕ ದಲಿತರೊಳಗೆ ಹೆಚ್ಚತೊಡಗಿದೆ. ಕೆಲವು ಜಿಲ್ಲೆಗಳಲ್ಲಿ ದೌರ್ಜನ್ಯ ಪ್ರಕಣಗಳು ದಾಖಲಾಗುತ್ತಿಲ್ಲವೆಂಬ ಕೂಗು ಸರ್ವೇಸಾಮಾನ್ಯವಾಗಿ ಕೇಳಿಬರುತ್ತಿವೆ. ಪ್ರಾದೇಶಿಕವಾಗಿ ಈ ಪ್ರಕರಣಗಳ ಹಂಚಿಕೆ ಸ್ವರೂಪ ಗಮನಿಸಿದಾಗ ಮುಂಬೈ ಕರ್ನಾಟಕ ಜಿಲ್ಲೆಗಳ ಪೈಕಿ ಬಿಜಾಪುರ ಮೊದಲನೆಯದು; ಬೆಳಗಾವಿ ನಂತರದಲ್ಲಿರುತ್ತದೆ. ಇನ್ನು ಹೈದರಾಬಾದ್ ಕರ್ನಾಟಕದಲ್ಲಿ ಗುಲ್ಬರ್ಗಾದಲ್ಲಿ ಅತಿ ಹೆಚ್ಚಿದ್ದರೆ, ಅದರ ಬೆನ್ನಹಿಂದೆ ಬಳ್ಳಾರಿ, ತದನಂತರ ರಾಯಚೂರು, ಕೊಪ್ಪಳ ಸೇರುತ್ತವೆ.

ಆಶ್ಚರ್ಯಕರವಾಗಿ ಕಳೆದ ಮೂರು ವರ್ಷಗಳಲ್ಲಿ ಬಳ್ಳಾರಿಯಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ದಿಢೀರನೆ ಮೇಲ್ವರ್ಗದವರಿಗೆ ದಲಿತರ ಮೇಲೆ ಇಷ್ಟೊಂದು ಮಾನವೀಯ ಸಹಾನುಭೂತಿ ಬಂದಿರುವ ಕಾರಣ ದಲಿತರು-ಆದಿವಾಸಿಗಳು ಸುರಕ್ಷಿತರಾಗಿದ್ದಾರೆಂದು ಯಾರಾದರೂ ನಂಬಿದರೆ ಅದು ಸಾಮಾಜಿಕವಾಗಿ ಮಹಾ ತಪ್ಪಾಗುತ್ತದೆ. ಈಗಾಗಲೆ ಕೆಲವು ಪ್ರಗತಿಪರ ಸಂಘಟನೆಗಳು ಶೋಧಿಸಿರುವಂತೆ, ಕೆಲವು ಪ್ರಕರಣಗಳು ಆಡಳಿತಗಾರರ ಖಾಜಿ ನ್ಯಾಯದಿಂದ ಮುಚ್ಚಿವೆಯಂತೆ. ಇನ್ನಷ್ಟು ಆಳುವ ಪಕ್ಷದ ರಾಜಕಾರಣಿಗಳ ಚಿತಾವಣೆಗಳಿಂದ ಬೆಳಕಿಗೆ ಬಂದಿಲ್ಲವೆಂಬ ಅಭಿಮತಗಳಿವೆ. ಈ ಬಗೆಯ ನಿದರ್ಶನಗಳು ರಾಜ್ಯಾದ್ಯಂತ ಏಕ ಸ್ವರೂಪಗಳಲ್ಲಿ ಕಾಣಲ್ಪಡುತ್ತಿವೆ.

ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಕಾಫಿನಾಡಾದ ಚಿಕ್ಕಮಗಳೂರು ಸದಾ ಮಂಚೂಣಿಯಲ್ಲಿರುತ್ತದೆ. ಇದರಿಂದೆ ಹಾಸನ ಮತ್ತು ಶಿವಮೊಗ್ಗ ನಿಲ್ಲುತ್ತವೆ. ಕರಾವಳಿ ಜಿಲ್ಲೆಗಳ ಪೈಕಿ ಉಡುಪಿ ಸದಾ ಮೊದಲಿನದು. ತದನಂತರ ಮಂಗಳೂರಿನ ಸರದಿ. ಹಳೆ ಮೈಸೂರು ಜಿಲ್ಲೆಗಳಲ್ಲಿ ಕೋಲಾರ, ತುಮಕೂರು, ಮೈಸೂರು ಹಾಗೂ ಚಿತ್ರದುರ್ಗಾ ಅನುಕ್ರಮವಾಗಿ ಸ್ಥಾನೀಕರಿಸಿಕೊಂಡಿವೆ. ಈ ಜಿಲ್ಲೆಗಳಿಂದ ಸರಾಸರಿ ಶೇ.27ಕ್ಕಿಂತ ಆಧಿಕ ಪ್ರಮಾಣದ ದೌರ್ಜನ್ಯಗಳು ರಾಜ್ಯದ ಒಟ್ಟು ಮೊತ್ತಕ್ಕೆ ಸೇರುತ್ತಲಿವೆ. ದಲಿತರ ನೋವಿನ ಕೂಗು ವಿಧಾನಸೌಧಕ್ಕೆ ಕೇಳಿಸುವಷ್ಟು ಸಮೀಪವಿರುವ ಬೆಂಗಳೂರು ಜಿಲ್ಲೆಗಳಿಂದ ರಾಜ್ಯದ ಒಟ್ಟು ಪ್ರಕರಣಗಳಲ್ಲಿ ಶೇ. 15ರಷ್ಟು ಪ್ರತಿ ವರ್ಷವೂ ಸೇರುತ್ತಿವೆ. ಒಟ್ಟಾರೆ, ದಲಿತರು-ಆದಿವಾಸಿಗಳು ನಗರ ಪ್ರದೇಶಗಳಲ್ಲಿದ್ದರೂ ಅಸ್ಪೃಶ್ಯತೆಯ ಕಾಟಗಳಿಂದ ಮತ್ತು ದೌರ್ಜನ್ಯಗಳಿಂದ ಮುಕ್ತರಾಗುವುದಿಲ್ಲವೆಂಬ ಮಾರ್ಮಿಕ ಸತ್ಯಾಂಶಗಳು ಈ ವಿಶ್ಲೇಷಣೆಗಳಿಂದ ದೃಢವಾಗಿವೆ.

ದಲಿತ-ಆದಿವಾಸಿಗಳ ಮೇಲೆ ಮತ್ತೊಂದು ಅಗೋಚರ ಸ್ವರೂಪದ ದೌರ್ಜನ್ಯಗಳಲ್ಲಿ ಸುಳ್ಳು ಜಾತಿ ಪತ್ರಗಳ ದುರುಪಯೋಗದಲ್ಲಿಯೂ ರಾಜ್ಯ ಆಗ್ರ ಸ್ಥಾನದಲ್ಲಿದೆ. ಇತ್ತೀಚೆಗೆ ರಾಷ್ಟ್ರೀಯ ಅನುಸೂಚಿತ ಜಾತಿಗಳ ಆಯೋಗವು ಸಾದರಪಡಿಸಿರುವಂತೆ ಕರ್ನಾಟಕದಲ್ಲಿ ಐದು ಸಾವಿರಕ್ಕೂ ಹೆಚ್ಚಿನ ಸುಳ್ಳು ಜಾತಿ ಪತ್ರಗಳು ಬೆಳಕಿಗೆ ಬಂದಿವೆಯಂತೆ? ಕಣ್ಣಿಗೆ ಕಾಣದವು ಇವುಗಳ ಹತ್ತರಷ್ಟಿರಬೇಕೆಂದು ಅಂದಾಜಿಸಬಹುದು. ವಿಚಾರಣಾ ನ್ಯಾಯಾಲಯಗಳಿಗೆ ಸಂವಿಧಾನದ ಮೇಲೆ ತೀರ್ಪು ನೀಡುವ ಅವಕಾಶಗಳು ಅಷ್ಟೊಂದಾಗಿ ಇಲ್ಲದಿದ್ದರೂ ಕೆಲವರು ಅವುಗಳಿಂದ ಸುಳ್ಳು ಜಾತಿ ಪತ್ರಗಳ ಖದೀಮರು ಆದೇಶ ಪಡೆದು ಸವಲತ್ತುಗಳನ್ನು ಮೇಯತೊಡಗಿದ್ದಾರೆ. ಉಚ್ಚ ನ್ಯಾಯಾಲಯಗಳ ವ್ಯತಿ ರಿಕ್ತ ತೀರ್ಪುಗಳಿಂದ ಕೆಲವರಿಗೆ ಕಾನೂನಿನ ಕಳ್ಳಗಿಂಡಿಗಳಲ್ಲಿ ನುಸುಳಿ ಬದುಕುಳಿಯಲು ಸಾಧ್ಯವಾಗಿದೆ. ಇಲ್ಲಿಯೂ ಸರ್ಕಾರದ ಉದಾಸೀನತೆ ಸ್ವಲ್ಪ ಜಾಸ್ತಿಯಿದೆ.

ದೇಶಾದ್ಯಂತ ಧರ್ಮನಿಷ್ಠೆ ರಾಜಕಾರಣವೇ ಪ್ರಭುತ್ವಕ್ಕೆ ಬಂದರೂ ದಲಿತರ ಮೇಲಿನ ದೌರ್ಜನ್ಯಗಳಿಗಂತು ಯಾವುದೇ ಕೊರತೆಗಳಿರುವುದಿಲ್ಲ. ಬಹುತೇಕ ಮೇಲ್ವ

ರ್ಗದ ರಾಜಕಾರಣ ಜಾತಿನಿಷ್ಠೆಯ ಮೂಲದಿಂದ ರೂಪುಗೊಂಡಿರುವುದರಿಂದ ಅವರು ಜಾತಿಯ ದರ್ಪಿಷ್ಟರನ್ನು ಮುಟ್ಟುವ ಸಾಹಸಕ್ಕಿಳಿಯಲು ಆಂತರ್ಯದಲ್ಲಿ ಅಂಜುತ್ತಾರೆ. ಅನೇಕ ಆಧುನಿಕ ಶೈಕ್ಷಣಿಕ ಪ್ರಾಜ್ಞರು ಜನರಲ್ಲಿ ಆಧುನಿಕ ಶಿಕ್ಷಣದ ಪ್ರಭಾವ ಹೆಚ್ಚಿದಂತೆಲ್ಲ ಅವರೊಳಗಿನ ಜಾತಿಯ ಭಾವ ಮತ್ತು ಅದರ ಶೋಷಣೆಯ ಗುಣಾವಗುಣಗಳು ಅಳಿಯುತ್ತವೆಂದು ಅಭಿಮತಿಸಿದರು. ಆದರೆ, ಇವರ ಅಭಿಮತಗಳಿಗೆ ತದ್ವಿರುದ್ಧವಾಗಿ ಆದಿವಾಸಿ-ದಲಿತರ ಮೇಲಿನ ದೌರ್ಜನ್ಯಗಳು ಸಂಭವಿಸುತ್ತಿವೆ. ಅಸ್ಪೃಶ್ಯತೆ ಹಾಗೂ ಜಾತಿ-ಉಪಜಾತಿಗಳ ಹುಟ್ಟಿಗೆ ಬ್ರಾಹ್ಮಣ್ಯ ಕಾರಣೀಭೂತವೆಂದು ಸಾಮಾಜಿಕವಾಗಿ ನಂಬಿದರೂ, ಅದರ ರೊಚ್ಚಿನ ಮೇಲೆ ನಿಂತು ದೌರ್ಜನ್ಯಗಳನ್ನು ಪ್ರಪಂಚೀಕರಣಗೊಳಿಸುತ್ತಿರುವವರು ಅತಿ ಹಿಂದುಳಿದ ಮತ್ತು ಹಿಂದುಳಿದ ವರ್ಗಗಳೆಂದರೆ ತಪ್ಪಾಗದು.

ಸಂವಿಧಾನದಲ್ಲಿ ಕೆಲವೊಂದು ಜೇಷ್ಠತೆಯ ಸವಲತ್ತುಗಳನ್ನು (Merit Good) ನೀಡುವಾಗ ಅನುಸೂಚಿತರಿಗೆ ಕೊಂಚ ಉದಾರತೆ ತೋರಲಾಗಿದೆ. ಇವರಿಗಿಂತ ಹಿಂದುಳಿದವರು ಸಾಮಾಜಿಕ ಮತ್ತು ಆರ್ಥಿಕವಾಗಿ ತುಸು ಮೇಲ್ಮಟ್ಟದಲ್ಲಿರುವ ಕಾರಣ ಸೀಮಿತ ಅವಕಾಶದ ಮೀಸಲಾತಿ ಪಡೆಯುತ್ತಿವೆ. ಇವೆರಡೂ ಸಮುದಾಯಗಳು ಸಂವಿಧಾನದ ಮನ್ನಣೆಗಳಿಗೆ ಪಾತ್ರರಾಗಿದ್ದರೂ ಹಿಂದುಳಿದವರು ತಮ್ಮ ಸಾಮಾಜಿಕ ನಡಾವಳಿಗಳಲ್ಲಿ ಜಾತಿ ಶ್ರೇಷ್ಠತೆಗಳನ್ನು ಮುಂದುಮಾಡಿ ದಲಿತ ಮತ್ತು ಆದಿವಾಸಿಗಳ ಮೇಲೆ ಸಾಮಾಜಿಕ ಬಹಿಷ್ಕಾರ ಹಾಗು ದೌರ್ಜನ್ಯಗಳನ್ನು ಇವರೆ ಅತಿಹೆಚ್ಚಿನ ಪ್ರಮಾಣಗಳಲ್ಲಿ ನಿರ್ವಹಿಸುತ್ತಿರವುದನ್ನು ಅವಲೋಕಿಸಿದಾಗ ಇವರಿಗೆ ಸಂವಿಧಾನದ ಆಶಯಗಳು ನಿಚ್ಚಳವಾಗಿ ಅರ್ಥವಾಗಿಲ್ಲದಿರುವುದನ್ನು ಗುರುತಿಸಬಹುದು.

ಅಲ್ಲೊಂದು-ಇಲ್ಲೊಂದು ಪ್ರಕರಣಗಳು ಕೆಲವರ ಸ್ವಹಿತಾಸಕ್ತಿಗಳಿಗೆ ದಾಖಲಾಗಿರಬಹುದು. ಆದರೆ, ಸವರ್ಣೀಯರು ಇವುಗಳನ್ನೇ ಉದಾಹರಿಸಿಕೊಂಡು ದಲಿತ ಚಳುವಳಿಯ ಅಸ್ಮಿತತೆಯನ್ನೇ ದಿಕ್ಕು ತಪ್ಪಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಆಡಳಿತ ವ್ಯವಸ್ಥೆ ಸಹ ಕುಂಭಕರ್ಣ ನಿದ್ರಾವಸ್ಥೆಯಿಂದ ಇನ್ನೂ ಮೇಲೇಳಲು ಹೊಸಗಾಡುತ್ತಿದೆ. ಅದರಲ್ಲೂ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ಹೊಸ ದೃಷ್ಟಿಕೋನ ಬೇಕಿದೆ. ಸಂವಿಧಾನದ ಕಾನೂನುಗಳು ಅದಕ್ಕೆ ನೀಡಿರುವ ಪರಮಾಧಿಕಾರದಲ್ಲಿ ಕಿಂಚಿತ್ತಾದರೂ ಪ್ರಯೋಗವಾದರೆ ದಲಿತ-ಆದಿವಾಸಿಗಳ ಮೇಲೆ ನಡೆಯುವ ದೌರ್ಜನ್ಯ ಮತ್ತು ಅವರ ಸಂಪತ್ತುಗಳ ದುರುಪಯೋಗಕ್ಕೆ ಕಡಿವಾಣ ಹಾಕಲು ಸಾಧ್ಯವಿದೆ.

ಸರ್ಕಾರದ ಅಂಕಿ-ಅಂಶಗಳ ಪ್ರಕಾರವೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಹಿಂದುಳಿದ ವರ್ಗಗಳ ಜನರು ಶೇ.72 ರಷ್ಟಿದ್ದಾರೆ. ಇವರೆಲ್ಲರೂ ಸಂವಿಧಾನದಡಿ ರಕ್ಷಿತರಾಗಿದ್ದಾರೆ. ಬಹುಶಃ ಇವರೆಲ್ಲರೂ ಸಾಮಾಜಿಕವಾಗಿ ಎಚ್ಚೆತ್ತು, ದಲಿತರು-ಆದಿವಾಸಿಗಳು ಸಹ ಸಂವಿಧಾನದ ರಕ್ಷಾಕವಚ ಧರಿಸಿರುವವರು; ಅದುದರಿಂದ ಅವರ ಮೇಲೆ ನಾವು ದೌರ್ಜನ್ಯ ಮಾಡಲು ಅರ್ಹರಲ್ಲವೆಂದು ತೀರ್ಮಾನಿಸಿದರೆ ನಿಜಕ್ಕೂ ಮೀಸಲಾತಿಗೊಂದು ಅರ್ಥ ಬರುತ್ತದೆ. ಇಲ್ಲದೆ ಹೋದರೆ ತಿಂದ ಅನ್ನದ ರುಚಿ ತಿಳಿಯದವರಾಗಿ, ಬಾಹ್ಯದಲ್ಲಿ ಜಾತ್ಯತೀತರಾಗಿ, ಆಂತರ್ಯದಲ್ಲಿ ಭ್ರಷ್ಟ ಜಾತ್ಯಾಂಧರಾಗಿರುತ್ತಾರೆ. □



ಕಾವ್ಯ

ಆ ಮುಖ

ಎಷ್ಟೋ ವರುಷಗಳಿಂದ
ಅಧಿಕಾರಸ್ಥರ ಕಾರಿಡಾರುಗಳಲ್ಲಿ
ಪ್ರಭುತ್ವದ ಪಡಸಾಲೆಯಲ್ಲಿ
ಅದನ್ನು ನೋಡುತ್ತಿದ್ದೇನೆ.

ಆ ಮುಖ
ಆಗಾಗ ಬದಲಾಗುತ್ತಿರುತ್ತದೆ.
ಒಮ್ಮೆ ಬೆಳ್ಳಗೆ ಮತ್ತೊಮ್ಮೆ ಕೆಂಪಗೆ
ಇನ್ನೊಮ್ಮೆ ಕಪ್ಪಗೆ ಮಗದೊಮ್ಮೆ ಕಂದು ಬಣ್ಣಕ್ಕೆ
ಬದಲಾಗುವ ಅದರ ಬಣ್ಣಗಳ
ಬಡಿವಾರವನ್ನು ಗಮನಿಸುತ್ತಲೇ ಇದ್ದೇನೆ.

ಆಶ್ಚರ್ಯವೆಂದರೆ ಅದರ
ಕಣ್ಣೊಳಗಿರುವ ಹಸಿವು
ಸಿಕ್ಕದ್ದನ್ನೆಲ್ಲವನ್ನೂ ಹುರಿದು ಮುಕ್ಕುವ
ಅದರ ಆತುರತೆ ಬದಲಾಗುತ್ತಿಲ್ಲ.
ನನಗಿಂದಿಗೂ ಆ ಕಣ್ಣೊಳಗಿನ ಕ್ರೂರತೆಯ
ಆಳ ಅರ್ಥವಾಗಿಲ್ಲ.
ಅರ್ಥವಾದ ದಿನ ಆ ಮುಖವನ್ನು
ನಾಶ ಮಾಡುತ್ತೇನೆ.

○ಕು. ಸು. ಮಧುಸೂದನ

ರಾಜ್ಯಪಾಲರ ಹುದ್ದೆಗೆ ರಾಜಕೀಯ ಲೇಪ?

ಮಲ್ಲಿಕಾರ್ಜುನ ಗುಮ್ಮಗೋಳ

ಸಂವಿಧಾನಾತ್ಮಕ ಘನತೆಯನ್ನು ಹೊಂದಿದ ರಾಜ್ಯಪಾಲರ ಹುದ್ದೆ ರಾಜಕೀಯ ಕಾರಣಗಳಿಗಾಗಿ ಸುದ್ದಿಯಾಗುತ್ತಿದೆ. 'ನಿಮ್ಮ ಸರಕಾರ ಉರುಳಿಸುವ ಉದ್ದೇಶದಿಂದ ನಾನು ರಾಜ್ಯ ಪಾಲನಾಗಿ ಇಲ್ಲಿಗೆ ಬಂದಿಲ್ಲ. ಐದು ವರ್ಷ ಒಳ್ಳೆಯ ಕೆಲಸ ಮಾಡಿ. ಇಲ್ಲದಿದ್ದರೆ, ಸಂಘರ್ಷಕ್ಕೆ ಸಿದ್ಧರಾಗಿ' ಎಂದು ಎಚ್ಚರಿಕೆ ಕೊಟ್ಟ ಕೆಲವೆ ದಿನಗಳಲ್ಲಿ ಬಿ.ಜೆ.ಪಿಯ ಅಧ್ಯಕ್ಷರು 'ಆರು ಸಾವಿರ ರಾಜ್ಯಪಾಲರು ಬಂದರೂ ಈ ಸರಕಾರವನ್ನು ಏನೂ ಮಾಡಲು ಆಗುವದಿಲ್ಲ' ಎಂದು ರಾಜಪಾಲರನ್ನು ಕೆಣಕಿದ್ದರು. ಆದರೆ ಈಗ ಸರಕಾರದ ಅಳಿವು ಉಳಿವು ರಾಜ್ಯಪಾಲರ ಅಣತಿಗೆ ಬಂದು ನಿಂತಿದೆ. 'ನಾನು ರಾಜ್ಯಪಾಲನಾದರೂ ಕಟ್ಟಾ ಕಾಂಗ್ರೇಸಿಗ' ಎಂಬುದನ್ನು ಪ್ರತಿ ನಡೆಯಲ್ಲು ಅವರು ತೋರಿಸಿಕೊಡುತ್ತಿದ್ದಾರೆ.

'ಎಲ್ಲದಕ್ಕೂ ನನ್ನ ತೀರ್ಮಾವೇ ಅಂತಿಮ' ಎಂದು ರಾಜ್ಯಪಾಲರು ಹೇಳುತ್ತಿದ್ದಾರೆ. ಹಾಗಾದರೆ ಬಹುಮತ ಪಡೆದ ಸರಕಾರಕ್ಕೆ ಯಾವುದೇ ಅಧಿಕಾರವಿಲ್ಲವೇ? ಸದನದ ಕಾರ್ಯ ಕಲಾಪಗಳ ಕುರಿತು ಸಭಾಧ್ಯಕ್ಷರ ನಿರ್ಣಯವೇ ಅಂತಿಮ. ಅದನ್ನು ನ್ಯಾಯಾಲಯದಲ್ಲಿ ಹೊರತು ಪಡಿಸಿ ಪ್ರಶ್ನಿಸುವ ಅಧಿಕಾರ ಬೇರೆ ಯಾರಿಗೂ ಇಲ್ಲ. ಹಾಗಂತ ಸಂವಿಧಾನ ಹೇಳುತ್ತದೆ. ಆದರೆ ರಾಜ್ಯಪಾಲರು ಸದನದ ನಡಾವಳಿಯ ಕುರಿತು ಸಭಾಧ್ಯಕ್ಷರಿಗೆ ನಿರ್ದೇಶನ ನೀಡುತ್ತಿದ್ದಾರೆ!

ಈ ಹಿಂದೆ ಸಚಿವರೊಬ್ಬರು ಲಾಭದಾಯಕ ಹುದ್ದೆ ಹೊಂದಿದ್ದಾರೆ. ಎಂಬ ಕಾರಣದಿಂದ ಸಚಿವರಿಗೆ ರಾಜಪಾಲರು ಸಂವಿಧಾನ ಅನುಚ್ಛೇದ 191(1)ರ ಪ್ರಕಾರ ಕಾರಣ ಕೇಳಿ ನೋಟಿಸ್ ಕೊಟ್ಟಿದ್ದರು. ಸರಕಾರದ ಭವಿಷ್ಯವನ್ನು ನಿರ್ಧರಿಸಬಲ್ಲ ಸಚಿವರಿಗೆ ನೋಟಿಸ್ ಕೊಟ್ಟು, ಸರಕಾರದ ಭವಿಷ್ಯಕ್ಕೆ ಗಂಡಾಂತರ ತರಬೇಕೆಂಬ ಲೆಕ್ಕಾಚಾರದಿಂದ ಈ ಕೆಲಸ ಮಾಡಲಾಗುತ್ತಿದೆ. ಎಂದು ಬಿ. ಜೆ.ಪಿ ಆರೋಪಿಸಿತ್ತು.

ರಾಜಕಾರಣವು ಸಮಾಜ ಸೇವೆ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ ಚುನಾವಣೆಯಲ್ಲಿ ಸೋತ ಹಾಗೂ ಪಕ್ಷಾಂತರ ಮಾಡಿದ ವ್ಯಕ್ತಿಗಳು ಸಮಾಜ ಸೇವೆಯ ಹೆಸರಿನಲ್ಲಿ ಅಧಿಕಾರವನ್ನು ಪಡೆಯಬಾರದು ಎಂಬ ಉದ್ದೇಶ ಸಂವಿಧಾನ ನಿರ್ಮಾಪಕರಿಗೆ ಇದ್ದಂತೆ ಕಾಣುತ್ತದೆ. ನಾಮ ನಿರ್ದೇಶನವಾಗುವ ವ್ಯಕ್ತಿಗಳು ನಿರ್ದಿಷ್ಟಪಡಿಸಿದ ಕ್ಷೇತ್ರದಿಂದಲೇ ಬಂದವರಾಗಿರಬೇಕೆಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಈ ಹಿನ್ನಲೆಯಲ್ಲಿಯೇ ಚುನಾವಣೆಯಲ್ಲಿ ಪರಾಭವಗೊಂಡ ಮಾಜಿ ಸಚಿವರನ್ನು ಆ ಹುದ್ದೆಗೆ ನೇಮಿಸುವದು ಸಂವಿಧಾನ ಬಾಹಿರವಾಗುತ್ತದೆ ಎಂದು ರಾಜ್ಯಪಾಲರು ಸರಕಾರದ ಪ್ರಸ್ತಾವವನ್ನು ಹಿಂದಕ್ಕೆ ಕಳುಹಿಸಿ ಆ ಹುದ್ದೆಗೆ ಬೇರೊಬ್ಬರನ್ನು ನಾಮ ನಿರ್ದೇಶನ ಮಾಡುವಂತೆ ತಿಳಿಸಿದರು.

ಸರಕಾರವನ್ನು ಆರಂಭದಿಂದಲೇ ಬಿಕ್ಕಟ್ಟಿಗೆ ಸಿಲುಕಿಸುತ್ತ ಬಂದ ರಾಜ್ಯಪಾಲರ ಈ ಕ್ರಮವನ್ನು ಖಂಡಿಸಿ ನ್ಯಾಯಾಲಯದ ಮೊರೆ ಹೊಗುವದಾಗಿ ಸರಕಾರ ತಿಳಿಸಿತ್ತು. ಆದರೆ ರಾಜ್ಯಪಾಲರು ಕೈಗೊಂಡ ತೀರ್ಮಾನಗಳನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ ಎಂದು ಸಂವಿಧಾನ ವಿಧಿ 163(2) ತಿಳಿಸುತ್ತದೆ.

ಸಂವಿಧಾನ ರಾಜ್ಯಪಾಲರಿಗೆ ಸಾಕಷ್ಟು ವಿವೇಚನಾ ಅಧಿಕಾರಗಳನ್ನು ನೀಡಿದೆ. ಸಂವಿಧಾನ ತಜ್ಞರಾದ ರಾಜ್ಯಪಾಲರು ಅವುಗಳನ್ನು ಅತ್ಯಂತ ವಿವೇಚನೆಯಿಂದ ಬಳಸಬೇಕಾಗುತ್ತದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರ ನಡೆಸುತ್ತಿರುವ ಸಂದರ್ಭಗಳಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳನ್ನು ಅಸ್ಥಿರಗೋಳಿಸುವ ಪ್ರಯತ್ನವನ್ನು ಮಾಡುತ್ತಲೇ ಬಂದಿವೆ. ರಾಜ್ಯದಲ್ಲಿ ರಾಜ್ಯಪಾಲರಾಗಿರುವವರು ಈ ಹಿಂದೆ ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದವರು. ತಮ್ಮ ಪೂರ್ವಾಶ್ರಮದ ಪ್ರಭಾವಕ್ಕೆ ಒಳಗಾಗಿ ಪಕ್ಷಪಾತವನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ಒಂದು ವೇಳೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರವನ್ನು ನಡೆಸುತ್ತಿದ್ದರೆ ರಾಜ್ಯಪಾಲರು ಸಂವಿಧಾನದ ಅನುಚ್ಛೇದಗಳನ್ನು ಈಗಿನಂತೆಯೇ ಆಗಲೂ ಬಳಸುತ್ತಿದ್ದರೇ? ಎಂಬುದು ಇಲ್ಲಿನ ಪ್ರಶ್ನೆ. ಹಾಗೆಂದ ಮಾತ್ರಕ್ಕೆ ರಾಜ್ಯಪಾಲರು ಅಸಂವಿಧಾನಿಕವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಅರ್ಥವಲ್ಲ. ಆದರೆ, ಇಂತಹ ಅದೆಷ್ಟೋ ಸಂದರ್ಭಗಳಿದ್ದರೂ ಒಂದು ಬಹುಮತದ ಸರಕಾರವನ್ನು ಮುಜುಗರಕ್ಕೆ ಒಳಪಡಿಸು ವಂತಹ ಸಂದರ್ಭಗಳು ನಡೆದಿರುವದು ಬಹಳ ಕಡಿಮೆ. ಈ ಕುರಿತು ಬೊಮ್ಮಾಯಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಬಹುಮತ ಪಡೆದ ಒಂದು ಸರಕಾರವನ್ನು ರಾಜ್ಯಪಾಲರು ರಾಜಕೀಯ ಕಾರಣಗಳಿಗಾಗಿ ವಜಾ ಮಾಡಬಾರದೆಂದು ಹೇಳಿತ್ತು. ಈ ಬಲವೇ ರಾಜ್ಯ ಸರಕಾರದ ಸಚಿವರು ರಾಜ್ಯಪಾಲರ ವಿರುದ್ಧವಾಗ್ಯುದ್ಧ ನಡೆಸಲು ಕಾರಣವಾಗಿರಬೇಕು. ಆದರೆ, ರಾಜ್ಯಪಾಲರನ್ನು ತಲೆಕೆಟ್ಟವರು, ಏಜಂಟರು ಎಂದೆಲ್ಲ ಜರೆಯುವದು ಅನಾಗರಿಕವಾಗುತ್ತದೆ. ಅದು ಆ ಹುದ್ದೆಗೆ ಮತ್ತು ಪರೋಕ್ಷವಾಗಿ ಸಂವಿ ಧಾನಕ್ಕೆ ಅವಮಾನ ಮಾಡಿದಂತೆ.

ರಾಜ್ಯಪಾಲರು ಶಿಷ್ಟಾಚಾರದ ನಿಯಮಗಳನ್ನು ಉಲ್ಲಂಘಿಸಿ ಬಹಿರಂಗವಾಗಿ ಟೀಕೆ ಮಾಡುತ್ತಿದ್ದಾರೆ ಎಂದು ಹಾಗೂ ವಿರೋಧ ಪಕ್ಷದ ನಾಯಕರಂತೆ ಮತ್ತು ಕೇಂದ್ರ ಸರಕಾರದ ಏಜೆಂಟರಂತೆ ಅವರು ವರ್ತಿಸುತ್ತಿದ್ದಾರೆ. ಎಂದು



ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರ ನಡೆಸುತ್ತಿರುವ ಸಂದರ್ಭಗಳಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳನ್ನು ಅಸ್ಥಿರಗೋಳಿಸುವ ಪ್ರಯತ್ನವನ್ನು ಮಾಡುತ್ತಲೇ ಬಂದಿವೆ. ರಾಜ್ಯದಲ್ಲಿ ರಾಜ್ಯಪಾಲರಾಗಿ ರುವವರು ಈ ಹಿಂದೆ ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದವರು. ತಮ್ಮ ಪೂರ್ವಾ ಶ್ರಮದ ಪ್ರಭಾವಕ್ಕೆ ಒಳಗಾಗಿ ಪಕ್ಷಪಾತವನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ಒಂದು ವೇಳೆ ರಾಜ್ಯದಲ್ಲಿ ಕಾಂಗ್ರೇಸ್ ಅಧಿಕಾರವನ್ನು ನಡೆಸುತ್ತಿದ್ದರೆ ರಾಜ್ಯಪಾಲರು ಸಂವಿಧಾನದ ಅನುಚ್ಛೇದಗಳನ್ನು ಈಗಿ ನಂತೇಯೇ ಆಗಲೂ ಬಳಸುತ್ತಿದ್ದರೇ? ಎಂಬುದು ಇಲ್ಲಿನ ಪ್ರಶ್ನೆ.

ಅಧಿಕಾರರೂಢ ಪಕ್ಷ ರಾಜ್ಯಪಾಲರ ಮೇಲೆ ಹರಿಹಾಯ್ದಿದೆ. ನಿಜ, ಈ ಹಿಂದೆ ಯಾವ ರಾಜ್ಯಪಾಲರು ಈ ರೀತಿ ಬಹಿರಂಗವಾಗಿ ವರ್ತಿಸಿಲ್ಲ. ಆದರೆ ಹಾಗೆ ಮಾಡಬಾರದೆಂಬ ಯಾವ ನಿರ್ಬಂಧವನ್ನು ಸಂವಿಧಾನ ಅವರ ಮೇಲೆ ಹಾಕಿಲ್ಲ.

ಮುಖ್ಯಮಂತ್ರಿಗಳು ಸರಕಾರದ ಮುಖ್ಯಸ್ಥರಾದರೆ, ರಾಜ್ಯಪಾಲರು ರಾಜ್ಯದ ಮುಖ್ಯಸ್ಥರು. ಸಂವಿಧಾನದ ವಿಧಿ 163(1)ರ ಪ್ರಕಾರ ಸರಕಾರದ ಎಲ್ಲ ಕಾರ್ಯಗಳು ರಾಜ್ಯಪಾಲರ ಮುಖಾಂತರ ನಡೆಯಬೇಕಾಗುತ್ತದೆ. ಹೀಗೆ ಆಡಳಿತ ನಡೆಸಲು ಅವರಿಗೆ ಸಲಹೆ ಮತ್ತು ಸಹಕಾರ ನೀಡಲು ಮುಖ್ಯಮಂತ್ರಿ ಹಾಗೂ ಮಂತ್ರಿಮಂಡಳ ಇರುತ್ತದೆ. ಈ ಹಿನ್ನಲೆಯಲ್ಲಿ ಸಂವಿಧಾನಾತ್ಮಕ ಹಾಗೂ ಜನಪರ ಆಡಳಿತ ನೀಡುವಲ್ಲಿ ಸರಕಾರಕ್ಕೆ ನಿರ್ದೇಶನ ನೀಡುವ ಅಧಿಕಾರ ಹಾಗೂ ತಪ್ಪಿದ್ದಲ್ಲಿ ಟೀಕಿಸುವ ಅಧಿಕಾರ ರಾಜ್ಯಪಾಲರಿಗಿದೆ.

ಈ ಸಂವಿಧಾನ ವಿಧಿಯನ್ನು ಗಮನಿಸಿದರೆ ಮಂತ್ರಿಮಂಡಳಕ್ಕಿಂತ ಆಡಳಿತ ನಡೆಸುವಲ್ಲಿ ರಾಜ್ಯಪಾಲರಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ. ಆದರೆ ವಾಸ್ತವಿಕವಾಗಿ ಮಂತ್ರಿಮಂಡಳ ತೆಗೆದುಕೊಂಡ ತೀರ್ಮಾನಗಳಿಗೆ ಬದ್ಧರಾಗಿ ರಾಜ್ಯಪಾಲರು ನಡೆದುಕೊಂಡು ಬಂದದ್ದನ್ನು ನಾವು ಕಾಣುತ್ತೇವೆ. 1967ರ ವರೆಗೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಸಾಮಾನ್ಯವಾಗಿ ಒಂದೆ ಪಕ್ಷದ ಪ್ರಾಬಲ್ಯವಿದ್ದು ಆ ಸಂದರ್ಭದಲ್ಲಿ ಕೇಂದ್ರದಿಂದ ನೇಮಕವಾಗುವ ರಾಜ್ಯಪಾಲರು ರಾಜ್ಯಸರಕಾರದ ಆಡಳಿತಕ್ಕೆ ಸಹಮತದಿಂದ ನಡೆದುಕೊಂಡು ಬಂದಿದ್ದಾರೆ. ತದನಂತರದಲ್ಲಿ ಕೇಂದ್ರದಲ್ಲಿ ಬೇರೆಯದೇ ಪಕ್ಷ ಹಾಗೂ ರಾಜ್ಯಗಳಲ್ಲಿ ಬೇರೆಯದೇ ಪಕ್ಷ ಅಧಿಕಾರ ನಡೆಸುವ ಸಂದರ್ಭದಲ್ಲಿ ರಾಜ್ಯಪಾಲರು ಕೇಂದ್ರ ಸರಕಾರದ ಏಜೆಂಟರಂತೆ ಕೆಲಸಮಾಡುತ್ತಿರುವದನ್ನು ನಾವು ಕಾಣುತ್ತೇವೆ.

ವಿಧಾನ ಪರಿಷತ್ತಿಗೆ ಮಾಜಿ ಸಚಿವರೊಬ್ಬರನ್ನು ನಾಮಕರಣ ಮಾಡುವಂತೆ ಸರಕಾರ ಕಳುಹಿಸಿದ್ದ ಪ್ರಸ್ತಾವಕ್ಕೆ ಅಂಕಿತ ಹಾಕಲು ರಾಜ್ಯಪಾಲರು ನಿರಾಕರಿಸಿದ್ದು, ಅಕ್ರಮ ಸಕ್ರಮ ಸುಗ್ರೀವಾಜ್ಞೆ, ಕಾಯ್ದೆಗೆ ಹಾಗೂ ಗೋಹತ್ಯೆ ನಿಷೇದ ಮಸೂದೆಗೆ ಅಂಕಿತ ಹಾಕದೆ ಇರುವದು ಸರಕಾರ ಮತ್ತು ರಾಜ್ಯಪಾಲರ ನಡುವೆ ಬಿಕ್ಕಟ್ಟನ್ನು ಸೃಷ್ಟಿಮಾಡಿತ್ತು. ಅಲ್ಲದೆ ಪ್ರವಾಹ ಸಂತ್ರಸ್ತರಿಗೆ ನೆರೆ ಪರಿಹಾರ ಒದಗಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು ಹಾಗೂ ಚರ್ಚ್‌ಗಳ ಮೇಲೆ ದಾಳಿಯಾದ ಸಂದರ್ಭದಲ್ಲಿ ಸರಕಾರ ಕೋಮುಗಲಭೆಯನ್ನು ಹತ್ತಿಕ್ಕವಲ್ಲಿ ವಿಫಲವಾಗಿದೆ ಎಂದು ಸರಕಾರದ ಮೇಲೆ ಬಹಿರಂಗವಾಗಿ ಆರೋಪ ಮಾಡಿದ್ದರು.

ಸರಕಾರದ ಪ್ರತಿ ನಡೆಯಲ್ಲು ತಪ್ಪನ್ನು ಹುಡುಕುವ ರಾಜ್ಯಪಾಲರು. ತಮ್ಮ ನೇರ ಮತ್ತು ಸ್ವತಂತ್ರ ವ್ಯಾಪ್ತಿಗೆ ಬರುವ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಹಗರಣಗಳ ಬಗ್ಗೆ ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ. ಒಬ್ಬ ಅನರ್ಹ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸುವಾಗ ಅವರ ನೈತಿಕತೆ ಹಾಗೂ ಕಾನೂನು ಜ್ಞಾನಗಳು ಎಲ್ಲಿ ಹೋಗಿದ್ದವು. ಒಬ್ಬ ಮಾಜಿ ಕುಲಪತಿ ಭ್ರಷ್ಟಾಚಾರ ಹಗರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅವರ ಮೇಲೆ ಯಾಕೆ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ?

ರಾಜ್ಯಪಾಲರು ಕೇಂದ್ರದ ಏಜಂಟರೆ? : ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ರಾಜ್ಯಪಾಲರನ್ನು ಸರಕಾರಿ ನೌಕರರಂತೆ ವರ್ಗಾವಣೆ ಮಾಡುವದು, ವಜಾ ಮಾಡುವದನ್ನು ತೀವ್ರವಾಗಿ ಖಂಡಿಸಿದೆ. ಕೇಂದ್ರ ಸರಕಾರ ಈ ರೀತಿ ಮಾಡುವದರಿಂದ ರಾಜ್ಯಪಾಲರು ಸಂವಿಧಾನಾತ್ಮಕವಾಗಿ ನಡೆದುಕೊಳ್ಳುವದಕ್ಕೆ ಆಗುವದಿಲ್ಲ. ಅಲ್ಲದೆ ಕೇಂದ್ರ ಸರಕಾರದ ಇಚ್ಚೆಗೆ ಅನುಗುಣವಾಗಿ ರಾಜ್ಯ ಸರಕಾರಗಳನ್ನು ಅವರು ತೊಂದರೆಗೆ ಸಿಕ್ಕಿಸಬಹುದು.

ರಾಜ್ಯಪಾಲರಾಗಿ ನೇಮಕವಾಗುವ ವ್ಯಕ್ತಿಗಳು ರಾಜಕೀಯೇತರ ವ್ಯಕ್ತಿಗಳಾಗಿರಬೇಕು, ಸಮಾಜದ ವಿವಿಧ ಕ್ಷೇತ್ರದಲ್ಲಿ ಪ್ರಖ್ಯಾತಿ ಪಡೆದಿರಬೇಕು ಹಾಗೂ ನಿಷ್ಪಕ್ಷಪಾತವಾಗಿ ಕೆಲಸಮಾಡುವ ಅರ್ಹತೆಯನ್ನು ಹೊಂದಿದವರಾಗಿರಬೇಕೆಂದು ಸರಕಾರಿಯಾ ಆಯೋಗ ಸಿಪಾರಸ್ಸು ಮಾಡಿದೆ. ಆದರೆ, ಚುನಾವಣೆಯಲ್ಲಿ ಸೋತ ವ್ಯಕ್ತಿಗಳಿಗೆ, ಕೇಂದ್ರ ಸರಕಾರದಲ್ಲಿ ಕಿರಿಕಿರಿಯನ್ನುಂಟುಮಾಡುವ ವ್ಯಕ್ತಿಗಳಿಗೆ ಹಾಗೂ ಪಕ್ಷಕ್ಕೆ ನಿಷ್ಠಾವಂತರಾಗಿ ದುಡಿದ ಅಧಿಕಾರಿಗಳಿಗೆ ಉಂಬಳಿಯಾಗಿ ರಾಜ್ಯಪಾಲರ ಹುದ್ದೆಯನ್ನು ನೀಡಲಾಗುತ್ತಿದೆ. ಇಂತಹ ವ್ಯಕ್ತಿಗಳಿಂದ ಸಂವಿಧಾನಾತ್ಮಕ ಆಡಳಿತವನ್ನು ನಿರೀಕ್ಷಿಸಲು ಸಾಧ್ಯವೇ? ತಮ್ಮನ್ನು ಈ ವೈಭವೋಪೇತ ಹುದ್ದೆಗೆ ತಂದು ಕೂಡ್ರಿಸಿದವರ ಋಣ ತೀರಿಸಲು ಕೇಂದ್ರ ಸರಕಾರದ ಇಚ್ಛೆಯಂತೆ ಬಹುಸಂಖ್ಯಾತ ರಾಜ್ಯಪಾಲರು ನಡೆದುಕೊಂಡಿದ್ದಾರೆ.

ಒಂದರ್ಥದಲ್ಲಿ ಸಂವಿಧಾನ ರಾಷ್ಟ್ರಪತಿಗಳಿಗಿಂತ ರಾಜ್ಯಪಾಲರಿಗೆ ಹೆಚ್ಚಿನ ವಿವೇಚನಾ ಅಧಿಕಾರವನ್ನು ನೀಡಿದೆ. ಸಂವಿಧಾನದ ವಿಧಿ 74(1)ರ ಪ್ರಕಾರ ರಾಷ್ಟ್ರಪತಿಗಳು ಕೇಂದ್ರ ಸಚಿವ ಸಂಪುಟದ ತೀರ್ಮಾನದಂತೆ ನಡೆದುಕೊಳ್ಳಬೇಕಾಗುತ್ತದೆ. ಆದರೆ, ಅಂತಹ ಯಾವುದೇ ನಿರ್ಬಂಧವನ್ನು ವಿಧಿ 163(1) ರಾಜ್ಯಪಾಲರಿಗೆ ವಿದಿಸಿರುವದಿಲ್ಲಾ. ಅಲ್ಲದೆ, ರಾಷ್ಟ್ರಪತಿಗಳು ಸಂಸತ್ತು ಮತ್ತು ರಾಜ್ಯಶಾಸನ ಸಭೆಯಿಂದ ಚುನಾಯಿತರಾಗುತ್ತಾರೆ. ಅಂತಹವರಿಗೆ ಸ್ವತಂತ್ರವಾದ ಯಾವುದೆ ಅಧಿಕಾರವನ್ನು ನೀಡಿಲ್ಲ. ಆದರೆ, ಕೇಂದ್ರದಿಂದ ನೇಮಕವಾಗುವ ರಾಜ್ಯಪಾಲರಿಗೆ ಹೆಚ್ಚಿನ ಅಧಿಕಾರವನ್ನು ನೀಡಿ ರಾಜ್ಯ ಸರಕಾರಗಳ ಮೇಲೆ ಕೇಂದ್ರದ ಹಿಡಿತವನ್ನು ಸಾಧಿಸಲಾಯಿತು. ಆ ಮೂಲಕ ಸಂಯುಕ್ತ ಪದ್ಧತಿಯನ್ನು ಬಲಿಷ್ಟಗೊಳಿಸಲಾಯಿತು. ಆದರೆ ಅಂತಹ ಸಂವಿಧಾನಾತ್ಮಕ ಅಧಿಕಾರವನ್ನು ಇಂದು ರಾಜಕೀಯ ಕಾರಣಗಳಿಗಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ಕೇಂದ್ರ ಮತ್ತು ರಾಜ್ಯದ ನಡುವೆ ಒಂದು ಆಪ್ತ ಸಂಬಂಧ ಹಾಗೂ ರಾಜ್ಯದಲ್ಲಿ ಸಂವಿಧಾನಾತ್ಮಕ ಆಡಳಿತ ನಡೆಸುವ ಸಲುವಾಗಿ ಮುಖ್ಯಮಂತ್ರಿಗಳಿಗೆ 'ಫ್ರೆಂಡ್ ಫಿಲಾಸಫರ್ ಗೈಡ್' ಆಗಿ ನೆರವು ನೀಡುವಂತಹ ಉನ್ನತ ವಿಚಾರದ ಹಾಗೂ ಅರ್ಹತೆಯ ವ್ಯಕ್ತಿಗಳನ್ನು ರಾಜ್ಯಪಾಲರನ್ನಾಗಿ ನೇಮಕಮಾಡಬೇಕು. ಹೀಗೆ ನೇಮಕ ಮಾಡುವ ಸಂದರ್ಭದಲ್ಲಿ ಪ್ರಧಾನ ಮಂತ್ರಿ, ರಾಷ್ಟ್ರಪತಿ, ಉಪರಾಷ್ಟ್ರಪತಿ, ಸ್ಪೀಕರ್, ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಹಾಗೂ ಆಯಾ ರಾಜ್ಯದ ಮುಖ್ಯಮಂತ್ರಿಗಳ ಸಲಹೆಯನ್ನು ಪಡೆದು ನೇಮಕ ಮಾಡಬೇಕು. ಅಂತಹ ಹುದ್ದೆಗಳಿಗೆ ನೇಮಕವಾಗುವ ವ್ಯಕ್ತಿಗಳು ನಿವೃತ್ತ ನ್ಯಾಯಾಧೀಶರು, ಸಂವಿಧಾನ ತಜ್ಞರು, ಶಿಕ್ಷಣ ತಜ್ಞರು ಹಾಗೂ ರಾಜಕೀಯವನ್ನು ಹೊರತು ಪಡಿಸಿ ಇನ್ನಿತರ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದವರಾಗಿರಬೇಕು. ಅಂದಾಗ ಮಾತ್ರ ರಾಜ್ಯಪಾಲರ ಹುದ್ದೆಗೆ ಮತ್ತು ಅದನ್ನು ಸೃಷ್ಟಿಸಿದ ಸಂವಿಧಾನಕ್ಕೆ ಒಂದು ಘನತೆಯನ್ನು ತಂದು ಕೊಟ್ಟಂತಾಗುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಪ್ರಕ್ಷುಬ್ಧ ಕಾಶ್ಮೀರ ಮತ್ತು ಭಾರತದ ರಾಜಕೀಯ ವ್ಯವಸ್ಥೆ ಎಸಗಿರುವ ಮಹಾಪರಾಧ

ರಾಜಿಂದರ್ ಪುರಿ

ಜಮ್ಮು, ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರ್ಪಡೆಗೊಳಿಸಬೇಕೆಂಬುದು ಹಿಜ್ಬುಲ್ ನ ಬೇಡಿಕೆಯಾಗಿತ್ತು. ಆದರೂ ಹೇಳಿ ಕೊಳ್ಳುವಂತಹ ಬೆಂಬಲವೇನೂ ಸಿಗದ ಕಾರಣ ಅನೇಕ ವರ್ಷಗಳ ಕಾಲ ಅದೊಂದು ಚಿಕ್ಕ ಸಂಘಟನೆಯಾಗಿಯೆ ಉಳಿದಿತ್ತು. ಜಮ್ಮು ಕಾಶ್ಮೀರ ವಿಮೋಚನಾ ರಂಗ(ಜೆಕೆಎಲ್ ಎಫ್)ವನ್ನು ವಿರೋಧಿಸುವ ಉದ್ದೇಶಕ್ಕಾಗಿ ಪಾಕಿಸ್ತಾನ ಹಿಜ್ಬುಲ್ ಅನ್ನು ಬೆಂಬ ಸಿತು. ೧೯೯೧ರಲ್ಲಿ ಒಂದು ಅನಿರೀಕ್ಷಿತ ಘಟನೆ ಸಂಭವಿಸಿತು. ಹಿಜ್ಬುಲ್‌ನ ಬೇಹುಗಾರಿಕಾ ವಿಭಾಗದ ಉಪ ಮುಖ್ಯಸ್ಥ ಅಶ್ಫಕ್ ಲೋನೆ ದೆಹಲಿಯಲ್ಲಿ ಭಾರೀ ಪ್ರಮಾಣದ ದುಡ್ಡಿನೊಂದಿಗೆ ಸಿಕ್ಕು ಬಿದ್ದ. ಆದರೆ ಆ ದುಡ್ಡು ಯಾತಕ್ಕಾಗಿತ್ತೆಂದು ವಿವರಣೆ ನೀಡಲು ಅಸಮರ್ಥನಾದಾಗ ಆತನನ್ನು ಬಂಧಿಸಲಾಯಿತು.

ನಮ್ಮ ದೇಶದ ರಾಜಕೀಯ ವ್ಯವಸ್ಥೆಯೆ ಅಪರಾಧಿ ಸ್ಥಾನದಲ್ಲಿ ನಿಂತಿರುವಾಗ ಕೇವಲ ಸಲಾಹುದ್ದೀನ್ ಮೇಲೆ ಆರೋಪ ಹೊರಿಸುವುದು ಸರಿಯೇ? ಪಾಕಿಸ್ತಾನದಲ್ಲಿರುವ ಉಗ್ರರಿಗೆ ಸದವಕಾಶ ಕಲ್ಪಿಸಿ ಕೊಟ್ಟದ್ದೆ ಕಾಶ್ಮೀರದ ಪೊಲೀಸರ ಮತ್ತು ಅಲ್ಲಿನ ಆಡಳಿತದ ಅವಿವೇಕಿ ಕೃತ್ಯಗಳು. ಜಮ್ಮು, ಕಾಶ್ಮೀರದ ಪ್ರತ್ಯೇಕತಾವಾದಿಗಳು ಮತ್ತು ಪಾಕಿಸ್ತಾನದಲ್ಲಿ ಬೀಡುಬಿಟ್ಟಿರುವ ಹಿಜ್ಬುಲ್ ಮುಜಾಹಿದೀನ್‌ನ ದಂಡನಾಯಕರು ನಡೆಸಿದ ಸಂಭಾಷಣೆಯ ಮುದ್ರಿತ ಪ್ರತಿಗಳನ್ನು ಕೇಂದ್ರ ಸರಕಾರದ ಆಂತರಿಕ ವ್ಯವಹಾರಗಳ ಸಚಿವಾಲಯವು ಮಾಧ್ಯಮಗಳಿಗೆ ಬಿಡುಗಡೆಗೊಳಿಸಿತು.

ಈ ಮೂಲಕ ಹಿಜ್ಬುಲ್ ಮುಜಾಹಿದೀನ್ ಕಾಶ್ಮೀರದ ಯುವ ಜನತೆಯ ಇತ್ತೀಚಿನ ಕಲ್ಲು ತೂರಾಟದ ಪ್ರತಿಭಟನೆಗಳನ್ನು ತನ್ನ ಸ್ವಪ್ರಯೋಜನಕ್ಕಾಗಿ ಬಳಸಿಕೊಂಡಿರುವುದು, ಪೊಲೀಸ್ ಗುಂಡಿಗೆ ಆಹುತಿಯಾದ ಹುತಾತ್ಮ ಯುವಕರನ್ನು ಸೃಷ್ಟಿಸುವುದಕ್ಕಾಗಿ ಸಿನಿಕತನದಿಂದ ಧನಸಹಾಯ ನೀಡಿರುವುದು ಬಯಲಾಯಿತು. ಆದುದರಿಂದ ಜಮ್ಮು, ಕಾಶ್ಮೀರದಲ್ಲಿನ ಪ್ರಸಕ್ತ ಬಿಕ್ಕಟ್ಟು ಉಲ್ಬಣಿಸುವುದಕ್ಕೆ ಹಿಜ್ಬುಲ್ ಮುಜಾಹಿದೀನ್‌ನ ನಾಯಕ ಸಯ್ಯದ್ ಸಲಾಹುದ್ದೀನ್ ಭಾಗಶಃ ಕಾರಣನೆಂಬ ತೀರ್ಮಾನಕ್ಕೆ ಬರುವುದು ಸರಿಯಾಗಿರಬಹುದು. ಆದರೆ........

ಯಾರೀತ ಸಯ್ಯದ್ ಸಲಾಹುದ್ದೀನ್?

ಸಲಾಹುದ್ದೀನ್‌ನ ಪೂರ್ವಾಶ್ರಮದ ನಾಮಧೇಯ ಮೊಹಮ್ಮದ್ ಯೂಸುಫ್ ಶಾ ಎಂದಾಗಿತ್ತು. ಕಾಶ್ಮೀರಿ ಮಧ್ಯಮ ವರ್ಗದ ಕುಟುಂಬವೊಂದರಿಂದ ಬಂದಿರುವ ಈತ ವಿದ್ಯಾರ್ಥಿ ದೆಸೆಯಲ್ಲಿ ಓರ್ವ ಸಕ್ರಿಯ ಕಾರ್ಯಕರ್ತನಾಗಿದ್ದ. ಮುಸ್ಲಿಂ ಯುನೈಟೆಡ್ ಫ್ರಂಟ್ ಎಂಬ ನೂತನ ರಾಜಕೀಯ ಪಕ್ಷವೊಂದು ಸ್ಥಾಪಿತವಾದಾಗ ಅದಕ್ಕೆ ಸೇರಿಕೊಂಡ. ವಾಸ್ತವದಲ್ಲಿ ಅದು ಉಗ್ರ ಪ್ರತ್ಯೇಕತಾವಾದಿ ಸಂಘಟನೆಗಳ ಒಂದು ಜಂಟಿ ವೇದಿಕೆಯಾಗಿತ್ತು. ಇದೇ ಪಕ್ಷದ ವತಿಯಿಂದ 1987ರ ಚುನಾವಣೆಗಳಲ್ಲಿ ಶ್ರೀನಗರದ ಅಮೀರಕಡಲ್ ಕ್ಷೇತ್ರದಿಂದ ಸ್ಪರ್ಧಿಸಿ ಫಾರೂಕ್ ಅಬ್ದುಲ್ಲಾರ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಭ್ಯರ್ಥಿ ಕೈಲಿ ಸೋಲನುಭವಿಸಿದ.

ಆ ಚುನಾವಣೆಗಳ ವೇಳೆ ಭಾರೀ ಅವ್ಯವಹಾರ ಮತ್ತು ಮೋಸ ನಡೆದಿತ್ತೆಂಬ ವ್ಯಾಪಕ ನಂಬಿಕೆ ಕಾಶ್ಮೀರೇತರ ಪತ್ರಕರ್ತರಲ್ಲೂ ಪ್ರಚಲಿತವಾಗಿತ್ತು. ಚುನಾವಣಾ ವಂಚನೆಯ ವಿರುದ್ಧ ಚಳುವಳಿ ಹೂಡಿದ ಮೊಹಮ್ಮದ್ ಯೂಸುಫ್ ಶಾನನ್ನು ರಾಜ್ಯ ಸರಕಾರ ಜೈಲಿಗೆ ತಳ್ಳಿತು. ಈ ಕೃತ್ಯವನ್ನು ಕೇಂದ್ರದ ರಾಜೀವ್ ಗಾಂಧಿ ಸರಕಾರವೂ ಬೆಂಬಲಿಸಿತು. ಭಾರತ ವಿರೋಧಿ ಮನೋಭಾವನೆಗಳ ಸರಪಳಿ ಕ್ರಿಯೆಯೊಂದು ಆರಂಭಗೊಳ್ಳುವುದಕ್ಕೆ ಇದು ಪ್ರಚೋದನೆ ಒದಗಿಸಿತು. ಪರಿಣಾಮವಾಗಿ ಉಗ್ರವಾದದ ಬೀಜಗಳು ಬಿತ್ತಲ್ಪಟ್ಟವು.

ಸಶಸ್ತ್ರ ಹೋರಾಟ

ಶಾನನ್ನು 1989ರಲ್ಲಿ ಬಿಡುಗಡೆಗೊಳಿಸಲಾಯಿತು. ಆದರೂ ಅಧಿಕಾರಿಗಳು ತನಗೆ ಬೆದರಿಕೆ ಒಡ್ಡುತ್ತಲೆ ಇದ್ದಾರೆಂದು ಹೇಳಿಕೊಂಡ ಮೊಹಮ್ಮದ್ ಯೂಸುಫ್ ಶಾ ಅದನ್ನು ಸಶಸ್ತ್ರ ಹೋರಾಟಗಳ ಸಮರ್ಥನೆಗಾಗಿ ಬಳಸಿಕೊಂಡ. ಮುಹಮ್ಮದ್ ಅಹಸಾನ್ ದಾರ್ ಎಂಬಾತ ಪಾಕಿಸ್ತಾನದ ಐಎಸ್ಐ ನೆರವಿನಿಂದ ಆಗಷ್ಟೆ ಸ್ಥಾಪಿಸಿದ್ದಂತಹ ಹಿಜ್ಬುಲ್ ಮುಜಾಹಿದೀನ್ ಎನ್ನುವ ಒಂದು ಹೊಸ, ಅನನುಭವಿ, ಸಶಸ್ತ್ರ ಉಗ್ರಗಾಮಿ ಸಂಘಟನೆಗೆ ಸೇರಿಕೊಂಡ. ಹಿಜ್ಬುಲ್‌ನ ಸದಸ್ಯನಾದ ಬಳಿಕ ಶಾ ತನ್ನ ಹೆಸರನ್ನು ಬದಲಾಯಿಸಿದ.

ರಾಜ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ 12ನೆ ಶತಮಾನದ ಅರಬ್ ಯೋಧನಾದ ಸಯ್ಯದ್ ಸಲಾಹುದ್ದೀನ್ ಹೆಸರನ್ನು ಅಳವಡಿಸಿಕೊಂಡ. ಜಮ್ಮು, ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರ್ಪಡೆಗೊಳಿಸಬೇಕೆಂಬುದು ಹಿಜ್ಬುಲ್‌ನ ಬೇಡಿಕೆಯಾಗಿತ್ತು. ಆದರೂ ಹೇಳಿಕೊಳ್ಳುವಂತಹ ಬೆಂಬಲವೇನೂ ಸಿಗದ ಕಾರಣ ಅನೇಕ ವರ್ಷಗಳ ಕಾಲ ಅದೊಂದು ಚಿಕ್ಕ ಸಂಘಟನೆಯಾಗಿಯೆ ಉಳಿದಿತ್ತು. ಜಮ್ಮು, ಕಾಶ್ಮೀರ ವಿಮೋಚನಾ ರಂಗ (ಜೆಕೆಎಲ್ಎಫ್)ವನ್ನು ವಿರೋಧಿಸುವ

ಉದ್ದೇಶಕ್ಕಾಗಿ ಪಾಕಿಸ್ತಾನ ಹಿಜ್ಬುಲ್‌ಅನ್ನು ಬೆಂಬಲಿಸಿತು.

1991ರಲ್ಲಿ ಒಂದು ಅನಿರೀಕ್ಷಿತ ಘಟನೆ ಸಂಭವಿಸಿತು. ಹಿಜ್ಬುಲ್‌ನ ಬೇಹುಗಾರಿಕಾ ವಿಭಾಗದ ಉಪ ಮುಖ್ಯಸ್ಥ ಅಶ್ಫಕ್ ಲೋನೆ ದೆಹಲಿಯಲ್ಲಿ ಭಾರೀ ಪ್ರಮಾಣದ ದುಡ್ಡಿನೊಂದಿಗೆ ಸಿಕ್ಕುಬಿದ್ದ. ಆದರೆ ಆ ದುಡ್ಡು ಯಾತಕ್ಕಾಗಿತ್ತೆಂದು ವಿವರಣೆ ನೀಡಲು ಅಸಮರ್ಥನಾದಾಗ ಆತನನ್ನು ಬಂಧಿಸಲಾಯಿತು. ಅಶ್ಫಕ್ ಲೋನೆಯನ್ನು ವಿಚಾರಣೆಗೊಳಪಡಿಸಿದ ಪೊಲೀಸರಿಗೆ ಕುಖ್ಯಾತ ಜೈನ್ ಹವಾಲಾ ಪ್ರಕರಣದ ಸುಳಿವುಗಳು ದೊರೆತವು. ಪೊಲೀಸರು ನಂತರ ಶಹಾಬುದ್ದೀನ್ ಗೋರಿ ಎಂಬಾತನನ್ನೂ ಸೆರೆಹಿಡಿದರು. ಈತ ಜವಹರ್‌ಲಾಲ್ ವಿವಿಯಲ್ಲಿ ಕಲಿಯುತ್ತಿದ್ದಾಗ ಐಎಸ್‌ಐ ಜೊತೆ ಸಂಪರ್ಕ ಇಟ್ಟು ಕೊಂಡಿದ್ದನೆಂಬ ಆರೋಪಗಳಿದ್ದವು. ಫೆಬ್ರವರಿ 1991ರಲ್ಲಿ ಪಾಕಿಸ್ತಾನಕ್ಕೆ ಹೋಗಿದ್ದ ಗೋರಿ ಅಲ್ಲಿ ಸಲಾಹುದ್ದೀನ್ ನನ್ನು ಭೇಟಿಯಾಗಿದ್ದ. ಗೋರಿ ಕೈಗೆ ಪತ್ರ ವೊಂದನ್ನಿತ್ತ ಸಲಾಹುದ್ದೀನ್ ಅದನ್ನು ಹಿಜ್ಬುಲ್ ಮುಜಾ ಹಿದೀನ್ ಮುಖ್ಯಸ್ಥ ಅಹಸಾನ್ ದಾರ್‌ಗೆ ತಲುಪಿಸುವಂತೆ ಹೇಳಿದ್ದ.

ಹವಾಲಾ ಮೂಲಕ ಬಂದ ಹಣವನ್ನು ಕಾಶ್ಮೀರಿ ದಂಗೆಕೋರರಿಗೆ ಪಾವತಿಸಲಾಗಿತ್ತೆಂದು ತಿಳಿದುಬಂದಾಕ್ಷಣ ಸಿಬಿಐ ಕಾರ್ಯಪ್ರವೃತ್ತವಾಗಿ ಟಾಡಾ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿತು. ಪ್ರಕರಣದ ಮೇಲ್ವಿಚಾರಣೆಗಾಗಿ ಒ.ಪಿ. ಶರ್ಮಾ ಎಂಬ ಅಧಿಕಾರಿಯನ್ನು ನೇಮಿಸಿತು. ಇಷ್ಟೆಲ್ಲ ಆಗುತ್ತಿದ್ದಂತೆ ಪೊಲೀಸರಿಗೆ ಅನಿರೀಕ್ಷಿತವಾಗಿ ಜೈನ್ ದಿನಚರಿಗಳು ದೊರೆತವು. ಕಾಶ್ಮೀರಿ ದಂಗೆಕೋರರಿಗೆ ಬಂಡವಾಳ ಒದಗಿಸುತ್ತಿದ್ದ ಮೂಲಗಳೆ 40ಕ್ಕೂ ಅಧಿಕ ಭಾರತೀಯ ರಾಜಕಾರಣಿಗಳಿಗೂ ಧನಸಹಾಯ ಮಾಡುತ್ತಿದ್ದವೆಂಬ ಸ್ಫೋಟಕ ಮಾಹಿತಿ ಅವುಗಳಲ್ಲಿತ್ತು. ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದವರಾಗಿದ್ದ ಈ ರಾಜಕಾರಣಿಗಳ ಪಟ್ಟಿಯಲ್ಲಿ ರಾಜೀವ್ ಗಾಂಧಿ, ಎಲ್.ಕೆ. ಅಡ್ವಾನಿ, ಮಾಧವ್‌ರಾವ್ ಸಿಂಧಿಯಾ, ರಾಜೇಶ್ ಪೈಲಟ್ ಮುಂತಾದ ದಿಗ್ಗಜರ ಹೆಸರುಗಳಿದ್ದವು.

ಕಾಶ್ಮೀರಿ ದಂಗೆಕೋರರಿಗೆ ಹಾಗೂ ರಾಜಕಾರಣಿಗಳಿಗೆ ಹವಾಲಾ ದುಡ್ಡು ಸರಬರಾಜು ಮಾಡುತ್ತಿದ್ದ ಪ್ರಧಾನ ವಾಹಕನೆಂಬ ಆರೋಪದಲ್ಲಿ ಮೂಲ್‌ಚಂದ್ ಜೈನ್ ಎಂಬಾತನನ್ನೂ ಬಂಧಿಸಲಾಯಿತು. ಇವರೆಲ್ಲರನ್ನೂ ಟಾಡಾ ಕಾಯ್ದೆಯ ಪ್ರಕಾರ ವಿಚಾರಣೆಗೊಳಪಡಿಸಬೇಕಾಗಿ ಬರುತ್ತಿತ್ತು. ಹೀಗಾಗಿ ಸಿಬಿಐ ತನಿಖೆ ಅಲ್ಲಿಗೇ ಸ್ಥಗಿತಗೊಂಡಿತು. ಆದರೂ ಒ.ಪಿ. ಶರ್ಮಾ ಪಟ್ಟುಬಿಡದೆ ತನಿಖೆ ಮುಂದುವರಿಸಿದಾಗ ಸಿಬಿಐ ಆತನನ್ನು ಸಿಲುಕಿಸಿ ಹಾಕಲು ಪ್ರಯತ್ನಿಸಿತು. ಇದರ ಸಲುವಾಗಿ ಒಂದು ಕುಟುಕು ಕಾರ್ಯಾಚರಣೆಗೂ ಮುಂದಾಯಿತು. ಆತನ ವಿರುದ್ಧ ಲಂಚ ಸ್ವೀಕಾರದ ಆರೋಪ ಹೊರಿಸಲಾಯಿತು. ಆದರೆ ಅದೇ ಸಿಬಿಐ ಮೂಲ್‌ಚಂದ್ ಜೈನ್ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಲು ನಿರಾಕರಿಸಿದ್ದು ದೇಶದೆಲ್ಲೆಡೆ ದಿಗ್ಭ್ರಮೆ ಮೂಡಿಸಿತು. ಮಾತ್ರವಲ್ಲ, ರಾಜಕಾರಣಿಗಳನ್ನು ಬಚಾಯಿಸುವುದಕ್ಕಾಗಿ ಅವರ ವಿರುದ್ಧದ ಟಾಡಾ ಪ್ರಕರಣವನ್ನು ಭ್ರಷ್ಟಾಚಾರದ ಪ್ರಕರಣವಾಗಿ ಪರಿವರ್ತಿಸಿತು.

ಸಿಬಿಐ ಕೈಗೊಂಡ ಈ ಕ್ರಮವೂ ಕಾನೂನು ಬಾಹಿರವಾಗಿದೆ. ಹವಾಲಾ ನಿಧಿಗಳನ್ನು ಸ್ವೀಕರಿಸಿದ್ದ ಕಾಶ್ಮೀರಿ ಪ್ರತ್ಯೇಕತಾವಾದಿಗಳನ್ನು ಬಂಧಿಸಿ ಅವರಿಗೆ ಅಲ್ಪಾವಧಿಯ ಜೈಲು ಶಿಕ್ಷೆ ವಿಧಿಸಿದ ಬಳಿಕ ಟಾಡಾ ಪ್ರಕರಣದ ತನಿಖೆಗೆ ವಿದಾಯ ಹೇಳಲಾಯಿತು. ಇವರಲ್ಲೊಬ್ಬನೆ ಆ ದಿನಗಳಲ್ಲಿ

ಹಿಜ್ಬುಲ್‌ನ ಬೇಹುಗಾರಿಕಾ ವಿಭಾಗದ ಉಪ ಮುಖ್ಯಸ್ಥ ಅಶ್ಫಕ್ ಲೋನೆ ದೆಹಲಿಯಲ್ಲಿ ಭಾರೀ ಪ್ರಮಾಣದ ದುಡ್ಡಿನೊಂದಿಗೆ ಸಿಕ್ಕುಬಿದ್ದ. ಆದರೆ ಆ ದುಡ್ಡು ಯಾತಕ್ಕಾಗಿತ್ತೆಂದು ವಿವರಣೆ ನೀಡಲು ಅಸಮರ್ಥನಾದಾಗ ಆತನನ್ನು ಬಂಧಿಸಲಾಯಿತು.

ಎರಡನೆ ದರ್ಜೆಯ ಪ್ರತ್ಯೇಕತಾವಾದಿಯಾಗಿದ್ದ ಸಲಾಹುದ್ದೀನ್. ಟಾಡಾ ಪ್ರಕರಣದ ತನಿಖೆ ನಿಂತುಹೋಗಿದ್ದು ಆತನಿಗೆ ತುಂಬಾ ಪ್ರಯೋಜನ ತಂದುಕೊಟ್ಟಿತು. ಈರೀತಿಯಾಗಿ ಹವಾಲಾ ಪ್ರಕರಣದಲ್ಲಿ ಭಾಗಿಯಾಗಿದ್ದ ರಾಜಕಾರಣಿಗಳನ್ನು ಉಳಿಸಲು ಹೊರಟ ಸಿಬಿಐ ಆಗಿನ್ನೂ ಹೊಚ್ಚ ಹೊಸದಾಗಿದ್ದ ಹಿಜ್ಬುಲ್ ಮುಜಾಹಿದೀನ್ ಮೇಲಿನ ತನಿಖೆಯನ್ನೂ ಅರ್ಧಕ್ಕೆ ಕೈಬಿಟ್ಟಿತು.

ಭಯೋತ್ಪಾದನೆಯ ಆಯಾಮ

ಜೈನ್ ಹವಾಲಾ ಪ್ರಕರಣಕ್ಕೆ ಭಯೋತ್ಪಾದನೆಯ ಆಯಾಮಗಳಿಲ್ಲವೆಂದು ಯಾರೆಷ್ಟೇ ಹೇಳಿದರೂ ಅದನ್ನು ಒಪ್ಪಲಾಗುವುದಿಲ್ಲ. ಸದರಿ ಪ್ರಕರಣದಲ್ಲಿ ಆರೋಪಿ ಮೂಲ್‌ಚಂದ್ ಜೈನ್ ವಿರುದ್ಧ ರಾಶಿರಾಶಿ ಪುರಾವೆ ಗಳಿದ್ದರೂ ಸಿಬಿಐ ಆತನನ್ನು ಬಂಧಮುಕ್ತಗೊಳಿಸಿತ್ತು. ಆದರೆ 10 ವರ್ಷಗಳ ನಂತರ ಮುಂಬಯಿ ಸ್ಫೋಟ ಪ್ರಕರಣದಲ್ಲಿಯೂ ದುಡ್ಡು ಸರಬರಾಜು ಮಾಡಿದಾತ ಇದೇ ಮೂಲ್‌ಚಂದ್ ಜೈನ್ ಎಂಬುದು ಸಾಬೀತಾಗಿ ಆತ ತಪ್ಪಿತಸ್ಥನೆಂದು ತೀರ್ಮಾನಿಸಲಾಯಿತು.

ಟಾಡಾ ಪ್ರಕರಣದಲ್ಲಿ ವಿಮೋಚನೆ ಪಡೆದುಕೊಂಡ ಸಲಾಹುದ್ದೀನ್ ನಂತರ ಎಂದೂ ಹಿಂದಿರುಗಿ ನೋಡಲಿಲ್ಲ. ಹಿಜ್ಬುಲ್ ಮುಜಾಹಿದೀನ್ ಬೆಳೆಯುತ್ತಲೆಹೋಯಿತು. ಕೊನೆಗೊಂದು ದಿನ ಸಲಾಹುದ್ದೀನ್ ಅದರ ಮುಖ್ಯಸ್ಥನಾದ. ನಿಷೇಧಿತ ಸಿಮಿ ಸಂಘಟನೆಗೂ ಹಿಜ್ಬುಲ್ ಮುಜಾಹಿದೀನ್‌ಗೂ ಕೊಂಡಿಗಳಿವೆಯೆಂದು ಅಧಿಕೃತ ಮೂಲಗಳು ಹೇಳುತ್ತವೆ.

ಸಲಾಹುದ್ದೀನ್ ಇಂದು ಪಾಕಿಸ್ತಾನವನ್ನು ನೆಲೆಯಾಗಿಸಿಕೊಂಡಿರುವ 14 ಭಯೋತ್ಪಾದಕ ಸಂಘಟನೆಗಳ ಒಕ್ಕೂಟ ಯುನೈಟೆಡ್ ಜಿಹಾದ್ ಕೌನ್ಸಿಲ್‌ನ ಮುಖ್ಯಸ್ಥನೂ ಆಗಿದ್ದಾನೆ. ಕಾಶ್ಮೀರ ಕಣಿವೆಯಲ್ಲಿನ ಪ್ರಸಕ್ತ ಪ್ರಕ್ಷುಬ್ಧತೆಯ ಜ್ವಾಲೆಗೆ ತುಪ್ಪ ಎರೆಯುತ್ತಿರುವ ವ್ಯಕ್ತಿಯೆ ಈತನೆಂದು ನಂಬಲಾಗಿದೆ. ಸಲಾಹುದ್ದೀನ್‌ನನ್ನು ಭಯೋತ್ಪಾದಕನಾಗುವಂತೆ ಪ್ರೇರೇಪಿಸಿರುವುದು 1987ರ ಚುನಾವಣೆಗಳಲ್ಲಿ ನಡೆದಿತ್ತೆನ್ನಲಾದ ವಂಚನೆ. ಎರಡನೆಯದಾಗಿ, ಕೆಲವು ರಾಜಕಾರಣಿಗಳನ್ನು ಪಾರುಮಾಡುವುದಕ್ಕಾಗಿ ಟಾಡಾ ಪ್ರಕರಣವನ್ನು ರದ್ದುಗೊಳಿಸಿದ್ದರಿಂದಲೆ ಆತ ಈ ಮಟ್ಟಕ್ಕೆ ಬೆಳೆದು ನಿಂತಿದ್ದಾನೆ. ಹಾಗೆಂದ ಮಾತ್ರಕ್ಕೆ ಇವೆರಡೂ ವಿಷಯಗಳು ಆತನನ್ನು ಭಯೋತ್ಪಾದಕನಾಗಿರುವ ಅಪರಾಧದಿಂದ ದೋಷಮುಕ್ತಗೊಳಿಸುತ್ತವೆ ಎಂದಲ್ಲ. ಆತ ಅಪರಾಧ ಎಸಗಿದ್ದಾನೆ. ಆದರೆ ಸಲಾಹುದ್ದೀನ್ ಹುಟ್ಟಿಕೊಳ್ಳಲು ಕಾರಣವಾದ ಭಾರತದ ರಾಜಕೀಯ ವ್ಯವಸ್ಥೆ ಕೂಡಾ ಅಷ್ಟೇ ದೋಷಿಯಲ್ಲವೇ?

(ರಾಜಿಂದರ್ ಪುರಿ ಓರ್ವ ಹಿರಿಯ ಪತ್ರಕರ್ತ ಹಾಗೂ ವ್ಯಂಗ್ಯಚಿತ್ರಕಾರ ಆಗಿದ್ದಾರೆ)

ಕೃಪೆ: **IHRO**, ಜುಲೈ 15, 2010 □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಅಯ್ಯಪ್ಪ ದರ್ಶನದ ದುರಂತ:
ಉದ್ಯಮವಾದ ಭಕ್ತಿ, ವ್ಯಾಪಾರಿಯಾದ ಸರ್ಕಾರ, ಬಲಿಪಶುವಾದ ಜನತೆ

ಶಿವಸುಂದರ್

ಕಳೆದ ಜನವರಿ 14ರಂದು ಮಕರ ಸಂಕ್ರಾಂತಿಯ ರಾತ್ರಿ ಶಬರಿಮಲೈ ಅರಣ್ಯದಲ್ಲಿ ನಡೆದ ದುರಂತದಲ್ಲಿ 102ಕ್ಕೂ ಹೆಚ್ಚು ಅಮಾಯಕ ಹಾಗೂ ನಿಸ್ಸಹಾಯಕ ಜನರು ಮೃತರಾಗಿದ್ದಾರೆ. ಈವರೆಗೆ ಶಬರಿಮಲೈನ ಆಧ್ಯಾತ್ಮವನ್ನು ಮತ್ತು ಜನರ ಭಕ್ತಿಯ ಪರವಶತೆಯನ್ನು ವೈಭವೀಕರಿಸುತ್ತಿದ್ದ ಮಾಧ್ಯಮಗಳು ಮತ್ತು ಸರ್ಕಾರಗಳು ಪ್ರಾರಂಭದಲ್ಲಿ ಈ ಸಾವಿನ ಹೊಣೆಯನ್ನು ಜನರ ತಲೆಗೇ ಕಟ್ಟಿ ಕೈ ತೊಳೆದುಕೊಳ್ಳುವ ಪ್ರಯತ್ನ ನಡೆಸಿದವು. ಮಕರಜ್ಯೋತಿಯನ್ನು ನೋಡಿದ ನಂತರ ವಾಪಸ್ ಮನೆಗೆ ತೆರಳುವ ತರಾತುರಿಯಲ್ಲಿ ಸಂಭವಿಸಿದ ನೂಕುನುಗ್ಗಲಿನಿಂದಾಗಿ ಈ ಸಾವುಗಳು ಸಂಭವಿಸಿತೆಂದು ಹೇಳುತ್ತಾ ಜನರ ಧಾವಂತ ಮತ್ತು ನೂಕುನುಗ್ಗಲಿನ ಮೇಲೆ ಸಾವಿನ ಹೊಣೆಗಾರಿಕೆಯನ್ನು ವರ್ಗಾಯಿಸಲು ಯತ್ನಿಸಿದರು. ಆದರೆ ಈ ದುರಂತದ ಆಳಕ್ಕೆ ಹೋದರೆ ಮಾಧ್ಯಮಗಳು, ಸುಶಿಕ್ಷಿತ ಜನತೆ, ವೈಜ್ಞಾನಿಕ ಮನೋಭಾವ ಬೆಳಸದ ನಮ್ಮ ಆಧುನಿಕತೆ, ಜನರ ಭಕ್ತಿಯನ್ನೂ ಸರಕನ್ನಾಗಿಸಿ ಅದರ ಅತಿಹೆಚ್ಚು ಮಾರಾಟವನ್ನೇ ಗುರಿಯಾಗಿಸಿಕೊಂಡಿರುವ ವ್ಯಾಪಾರಿ ಆರ್ಥಿಕತೆ, ಅದಕ್ಕೆ ಕುಮ್ಮಕ್ಕಾಗಿರುವ ಕಮ್ಯುನಿಸ್ಟ್ ಸರ್ಕಾರ ಇತ್ಯಾದಿಗಳೆಲ್ಲವೂ ಕಾರಣವೆಂಬುದು ಅರ್ಥವಾಗುತ್ತಾ ಹೋಗುತ್ತದೆ.

ಸುಮಾರು ಐವತ್ತು ವರ್ಷಗಳ ಹಿಂದೆ ಕೇವಲ ಕೇರಳದ ಭಾಗಕ್ಕೆ ಮಾತ್ರ ಸೀಮಿತವಾಗಿದ್ದ ಈ ಅಯ್ಯಪ್ಪ ಮಾಲಾವ್ರತ ಕಳೆದ ಎರಡು-ಮೂರು ದಶಕಗಳಲ್ಲಿ ವಿಪರೀತ ಪ್ರಚಾರ ಪಡೆದು ವೇಗವಾಗಿ ಇಡೀ ದಕ್ಷಿಣ ಭಾರತದಾದ್ಯಂತ ವ್ಯಾಪಿಸುತ್ತಿದೆ. ಅಮಿತಾಬ್ ಬಚ್ಚನ್, ವಿವೇಕ್ ಒಬೆರಾಯ್, ರಜನಿಕಾಂತ್‌ರಂತ ಬಾಲಿವುಡ್ ಹಾಗೂ ತೆಲುಗು, ತಮಿಳು, ಮಲಯಾಳಂ ಚಿತ್ರರಂಗದ ತಾರೆಗಳು, ಕ್ರಿಕೆಟ್ ತಾರೆಗಳು ಹಾಗೂ ಪ್ರಖ್ಯಾತ ರಾಜಕಾರಣಿಗಳು ಕಳೆದೊಂದು ದಶಕದಲ್ಲಿ ನಿಯಮಿತವಾಗಿ ಇಲ್ಲಿ ಭೇಟಿ ಕೊಡುತ್ತಾರೆ. ಹಾಗೂ ತಾವು ಪ್ರಚಾರ ಮಾಡುವ ಸೋಪು, ಬ್ಲೇಡುಗಳಂತೆ ಅಯ್ಯಪ್ಪ ಸ್ವಾಮಿಗೂ ಸಾಕಷ್ಟು ಪ್ರಚಾರ ಕೊಡುತ್ತಿದ್ದಾರೆ. ಮತ್ತು ಆ ಭೇಟಿಯನ್ನು ದೇವಸ್ಥಾನದ ಆಡಳಿತ ಮಂಡಳಿ ಎಲ್ಲಾ ಮಾಧ್ಯಮಗಳಲ್ಲೂ ಸಾಕಷ್ಟು ಪ್ರಚಾರವಾಗುವಂತೆ ನೋಡಿಕೊಂಡು ಬಂದಿರುವುದರಿಂದ ಅಯ್ಯಪ್ಪ ಪಂಥ ಈಗ ಇಡೀ ದಕ್ಷಿಣ ಭಾರತದ ಮೂಲೆಮೂಲೆಗೂ ವ್ಯಾಪಿಸಿರುವುದಲ್ಲದೆ ನಿಧಾನಕ್ಕೆ ಮಧ್ಯ ಹಾಗೂ ಉತ್ತರ ಭಾರತದವರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ.

ಹೀಗಾಗಿ ಈಗ ಭಾರತದಲ್ಲಿ ತಿರುಪತಿಯನ್ನು ಬಿಟ್ಟರೆ ಅತಿಹೆಚ್ಚು ಜನರನ್ನು ಆಕರ್ಷಿಸುವ ಯಾತ್ರಾ ಸ್ಥಳ ಶಬರಿ ಮಲೈ ಆಗಿದೆ. ಒಂದು ಅಂದಾಜಿನ ಪ್ರಕಾರ ಕಳೆದ ಕೆಲವು ವರ್ಷಗಳಿಂದ ಅಯ್ಯಪ್ಪ ಸೀಸನ್ನಿನಲ್ಲಿ ಅಂದರೆ ಪ್ರತಿವರ್ಷದ ನವಂಬರ್-ಜನವರಿಯ ನಡುವೆ ಈ ಸ್ಥಳಕ್ಕೆ ಏನಿಲ್ಲವೆಂದರೂ 2-2.5 ಕೋಟಿ ಭಕ್ತರು ಭೇಟಿ ನೀಡುತ್ತಾರೆ. ಈ ವರ್ಷ ಅದು ಇನ್ನೂ ಹೆಚ್ಚಾಗಿದೆ. ಇದರಿಂದ ಏನಿಲ್ಲವೆಂದರೂ ಕೇರಳ ಸರ್ಕಾರಕ್ಕೆ ಕೇವಲ ಈ ಮೂರು ತಿಂಗಳಲ್ಲಿ ನೂರು ಕೋಟಿಗೂ ಹೆಚ್ಚು ಆದಾಯ ಬರುತ್ತದೆ. ಏಕೆಂದರೆ ಅಯ್ಯಪ್ಪ ಸ್ವಾಮಿ ದೇವಸ್ಥಾನವಿರುವುದು ಕಗ್ಗಾಡಿನಲ್ಲಿ. ಅದು ಈಗ ಪೆರಿಯಾರ್ ಹುಲಿ ರಕ್ಷಿತಾರಣ್ಯವೂ ಆಗಿದೆ. ಹೀಗಾಗಿ ಅಲ್ಲಿ ಯಾವುದೇ ಶಾಶ್ವತ ಮನುಷ್ಯ ಸೌಲಭ್ಯಗಳನ್ನು ನಿರ್ಮಿಸುವಂತಿಲ್ಲ. ಅಲ್ಲದೆ ಅಯ್ಯಪ್ಪ ವ್ರತದ ಭಾಗವಾಗಿ ಭಕ್ತರು ತಮ್ಮ ವಾಹನಗಳನ್ನು ಕನಿಷ್ಠ 35-40 ಕಿಮೀ ದೂರದಲ್ಲೇ ನಿಲ್ಲಿಸಿ ಕನಿಷ್ಠ ಎರಡು ದಿನಗಳ ಕಾಲ ದೇವಸ್ಥಾನಕ್ಕೆ ನಡೆದುಕೊಂಡೇ ಹೋಗಬೇಕು.

ಹೀಗಾಗಿ ಸೀಸನ್ ಹತ್ತಿರ ಬರುತ್ತಿದ್ದಂತೆ ಇಲ್ಲಿ ಒಂದು ಬಾಟಲ್ ಕುಡಿಯುವ ನೀರು ರೂ.100ಕ್ಕೂ ಹೆಚ್ಚಾಗಿ ಮಾರಲ್ಪಡು



ಅಯ್ಯಪ್ಪ ದೇವಸ್ಥಾನ ಮಂಡಳಿಯವರು ಮಾನವ ಸೃಷ್ಟಿಯ 'ಜ್ಯೋತಿ'ಯನ್ನು ಬೆಳಗಲು ಪೊನ್ನಾಂಬುಮೇಡು ಬೆಟ್ಟದಲ್ಲಿ ನಿರ್ಮಿಸಿರುವ ವೇದಿಕೆ. ಗುರುತು ಹಾಕಿರುವ ಪ್ರದೇಶವೇ ದೇವಾಲಯದ ಸಮುಚ್ಛಯ. ಚಿತ್ರ ಸೌಜನ್ಯ: 'ದಿ ಹಿಂದೂ'

ಸುಮಾರು ಐವತ್ತು ವರ್ಷಗಳ ಹಿಂದೆ ಕೇವಲ ಕೇರಳದ ಭಾಗಕ್ಕೆ ಮಾತ್ರ ಸೀಮಿತವಾಗಿದ್ದ ಈ ಅಯ್ಯಪ್ಪ ಮಾಲಾವ್ರತ ಕಳೆದ ಎರಡು-ಮೂರು ದಶಕಗಳಲ್ಲಿ ವಿಪರೀತ ಪ್ರಚಾರ ಪಡೆದು ವೇಗವಾಗಿ ಇಡೀ ದಕ್ಷಿಣ ಭಾರತದಾದ್ಯಂತ ವ್ಯಾಪಿಸುತ್ತಿದೆ. ಅಮಿತಾಬ್ ಬಚ್ಚನ್, ವಿವೇಕ್ ಒಬೆರಾಯ್, ರಜನೀಕಾಂತ್‌ರಂತ ಬಾಲಿವುಡ್ ಹಾಗೂ ತೆಲುಗು, ತಮಿಳು, ಮಲಯಾಳಂ ಚಿತ್ರರಂಗದ ತಾರೆಗಳು, ಕ್ರಿಕೆಟ್ ತಾರೆಗಳು ಹಾಗೂ ಪ್ರಖ್ಯಾತ ರಾಜಕಾರಣಿಗಳು ಕಳೆದೊಂದು ದಶಕದಲ್ಲಿ ನಿಯಮಿತವಾಗಿ ಇಲ್ಲಿ ಭೇಟಿ ಕೊಡುತ್ತಾರೆ. ಹಾಗೂ ತಾವು ಪ್ರಚಾರ ಮಾಡುವ ಸೋಪು, ಬ್ಲೇಡುಗಳಂತೆ ಅಯ್ಯಪ್ಪ ಸ್ವಾಮಿಗೂ ಸಾಕಷ್ಟು ಪ್ರಚಾರ ಕೊಡುತ್ತಿದ್ದಾರೆ.

ತ್ತದೆ. ಕಳೆದ ವರ್ಷ ಯಾತ್ರಾರ್ಥಿಗಳ ಮೇಲೆ ಹಾಕಿದ ವಿವಿಧ ತೆರಿ ಗೆಗಳಿಂದ ಕೇರಳ ಸರ್ಕಾರಕ್ಕೆ 110 ಕೋಟಿ ಆದಾಯ ಬಂದಿದ್ದರೆ ಈ ವರ್ಷ ಈಗಾಗಲೇ 133 ಕೋಟಿ ರೂಪಾಯಿಯಷ್ಟು ನೇರ ಆದಾಯವನ್ನು ಮಾಡಿ ಕೊಂಡಿದೆ. ಇದಲ್ಲದೆ ಅಯ್ಯಪ್ಪ ದೇಗುಲದ ಮೇಲುಸ್ತುವಾರಿ ನೋಡಿಕೊಳ್ಳುವ ಟ್ರಾವಂಕೂರ್ ದೇವಸ್ವ ಮಂಡಳಿಗೂ ಹತ್ತಾರು ಕೋಟಿ ರೂಪಾಯಿ ಲಾಭವಾಗಿದ್ದರೆ ಇಡೀ ಶಬರಿಮಲೈ ಪ್ರಾಂತ್ಯದ ಸುತ್ತಮುತ್ತಲಿನ ಅಂಗಡಿ, ಹೋಟೆಲ್, ಇನ್ನಿತರ ವ್ಯಾಪಾರಿಗಳಿಗೂ ನೂರಾರುಕೋಟಿ ರೂಪಾಯಿ ವಹಿವಾಟಾಗುತ್ತದೆ. ಹೀಗಾಗಿ ಅಯ್ಯಪ್ಪ ವ್ರತ ಮತ್ತು ಅಯ್ಯಪ್ಪ ಭಕ್ತಿಯ ಸುತ್ತಾ ಶಬರಿ ಮಲೈ ಪ್ರಾಂತ್ಯದಲ್ಲಿ ಒಂದು ಆರ್ಥಿಕತೆಯೇ ಸೃಷ್ಟಿಯಾಗಿದೆ ಮತ್ತು ಅದನ್ನು ಯಥಾರೀತಿ ಕಾಪಾಡಿಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳೂ ಸೃಷ್ಟಿಯಾಗಿವೆ.

ಅಯ್ಯಪ್ಪವ್ರತದ ಭಾಗವಾಗಿ 15–45 ದಿನಗಳ ಕಾಲ ಕಪ್ಪು ಬಟ್ಟೆ ಧರಿಸಿ, ಬರಿಕಾಲಿನ ಓಡಾಟ ಮಾಡುತ್ತಾ ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುವ ಅಯ್ಯಪ್ಪ ಭಕ್ತರು ಬಹುಪಾಲು ದುಡಿಯುವ ಮತ್ತು ಕೆಳಮಧ್ಯಮ ವರ್ಗದ ಜನರೇ ಆಗಿರುತ್ತಾರೆ. ಬೆಣ್ಣೆಯಂಥ ಜನರಿಗೆ ಈ ಕಟ್ಟುನಿಟ್ಟಿನ ವ್ರತ ಪಾಲಿಸಲು ಕಷ್ಟ. ತಮ್ಮ ವ್ರತದ ಅಂತಿಮ ಭಾಗವಾಗಿ ಇರುಮುಡಿ ಹೊತ್ತು ಶಬರಿಮಲೈ ಪ್ರವಾಸಕ್ಕೆ ಹೊರಡುವ ಭಕ್ತರು ಸಂಕ್ರಾಂತಿಯ ದಿನ ಅಥವಾ ಅದಕ್ಕೆ ಸ್ವಲ್ಪ ಮೊದಲು ಹೇಗಾದರೂ ಮಾಡಿ ಶಬರಿಮಲೈನಲ್ಲಿ ಅಯ್ಯಪ್ಪ ದರ್ಶನ ಮಾಡಿ ತಮ್ಮ ವ್ರತವನ್ನು ಮುಗಿಸುತ್ತಾರೆ. ಹೀಗಾಗಿ ಸಂಕ್ರಾಂತಿ ಹತ್ತಿರ ಬರುತ್ತಿದ್ದಂತೆ ಇಲ್ಲಿ ರಷ್ ಕೂಡಾ ಹೆಚ್ಚಾಗುತ್ತಾ ಹೋಗುತ್ತದೆ. ಅದರಲ್ಲೂ ಕಳೆದೆರಡು–ಮೂರು ದಶಕಗಳಿಂದ ಸಂಕ್ರಾಂತಿಯ ದಿನ ಸಂಜೆ 6.30ರ ಸುಮಾರಿಗೆ ಶಬರಿಮಲೈ ದೇವಸ್ಥಾನದ ಹಿಂಭಾಗದಲ್ಲಿ ಮಕರವಿಳಕ್ಕು ಅಂದರೆ ಅಪಾರ ಪ್ರಭೆಯುಳ್ಳ ಮಕರ ಜ್ಯೋತಿ "ಕಾಣಿಸಿಕೊಳ್ಳುತ್ತದೆ". ಅದರ ಸಾಕ್ಷಾತ್ ದರ್ಶನ ಮಾಡಿದವರಿಗೆ ಸಕಲ ಸೌಭಾಗ್ಯ, ಮುಕ್ತಿ ಇತ್ಯಾದಿಗಳು ದೊರೆಯುತ್ತವೆ ಎಂಬ ಪುಕಾರು ವ್ಯವಸ್ಥಿತವಾಗಿ ಹಬ್ಬಿದೆ. ಹೀಗಾಗಿ ಸಂಕ್ರಾಂತಿಯ ದಿನಗಳಂದು ಇಡೀ ಶಬರಿಮಲೈ ಪ್ರಾಂತ್ಯದ ಅಕ್ಕಪಕ್ಕದ ಗುಡ್ಡಗಳನ್ನೇರುವ ಜನ ಮಕರಜ್ಯೋತಿಯ ದರ್ಶನಕ್ಕಾಗಿ ಮುಗಿಬಿದ್ದಿರುತ್ತಾರೆ. ಅಲ್ಲದೆ ಈ ಮಕರಜ್ಯೋತಿಯ ದರ್ಶನದ ಸನ್ನಿ ಹೆಚ್ಚುತ್ತಿದ್ದಂತೆ ಮಕರ ಸಂಕ್ರಾಂತಿಯ ಆಜುಬಾಜಿನಲ್ಲಿ ನಿಯಂತ್ರಣ ಮಾಡಲಾಗದಷ್ಟು ಜನತೆ ಸಿಕ್ಕಸಿಕ್ಕ ಕಡೆ ಸಾವಿರಾರು ಸಂಖ್ಯೆಯಲ್ಲಿ ನೆರೆಯುತ್ತಿದ್ದಾರೆ. ಇವರನ್ನು ತಡೆದು ಸೂಕ್ತ ಸೌಲಭ್ಯ ಒದಗಿಸುವ ಯಾವ ಪ್ರಯತ್ನವನ್ನೂ ಕೇರಳ ಸರ್ಕಾರ ಮಾಡಿಲ್ಲ.

ಉದಾಹರಣೆಗೆ 1999ರಲ್ಲೂ ಸಹ ಸಂಕ್ರಾಂತಿ ದಿನದಂದೇ ಪಂಪಾರಣ್ಯ ಎಂಬ ಕಡೆ ನೂಕುನುಗ್ಗಲಿಂದಾಗಿ ಅವಘಡ ಸಂಭವಿಸಿ 53 ಜನ ಸತ್ತಿದ್ದರು. ಆಗ ಅದರ ಬಗ್ಗೆ ತನಿಖೆ ನಡೆಸಲು ನೇಮಕವಾಗಿದ್ದ ಜಸ್ಟೀಸ್ ಟಿ. ಚಂದ್ರಶೇಖರ್ ಮೆನನ್ ಆಯೋಗ 57 ಸಲಹೆಗಳನ್ನು ಕೊಟ್ಟಿತ್ತು, ಆದೇ ರೀತಿ 2000ದ ನಂತರದಲ್ಲಿ ನೇಮಕವಾಗಿದ್ದ ಎ.ವಿ. ತಾನುರಕ್ಷನ್ ಸಮಿತಿ ಸಹ ಸಾಕಷ್ಟು ಸಲಹೆಗಳನ್ನು ಕೊಟ್ಟಿತ್ತು. ಅದರಲ್ಲಿ ಅಯ್ಯಪ್ಪ ದರ್ಶನಕ್ಕೆ ವರ್ಷವಿಡೀ ಅವಕಾಶ ಕೊಟ್ಟು ಸಂಕ್ರಾಂತಿಯ ರಷ್ ತಗ್ಗಿಸುವ, ಮೊದಲೇ ನೊಂದಾಯಿಸಿದ ನಿರ್ದಿಷ್ಟ ಸಂಖ್ಯೆಯ ಭಕ್ತರಿಗೆ ಮಾತ್ರ ದರ್ಶನಕ್ಕೆ ಅವಕಾಶ ಮಾಡಿಕೊಡುವ, ಸೌಲಭ್ಯ ಒದಗಿಸುವ ಯಾವ ಪ್ರಯತ್ನಕ್ಕೂ ಸರ್ಕಾರ ಮುಂದಾಗಲಿಲ್ಲ. ಕಾಂಗ್ರೆಸ್ ಸರ್ಕಾರವಿದ್ದಾಗಲೂ ಅಷ್ಟೆ, ಈಗ ಕಮ್ಯುನಿಸ್ಟ್ ಸರ್ಕಾರವಿದ್ದಾಗಲೂ ಅಷ್ಟೆ.

ಈ ಬಾರಿಯೂ ಶಬರಿ ಮಲೈ ಪ್ರಾಂತ್ಯದ ಉಪ್ಪುಪ್ಪರ–ಪುಲಿಮೇಡು ಅರಣ್ಯ ಪ್ರಾಂತ್ಯದಲ್ಲಿ ಗುಡ್ಡವೊಂದರ ಮೇಲಿಂದ ಜನವರಿ 14ರ ಸಂಜೆ 6.30ರ ಸುಮಾರಿಗೆ ಮಕರ ಜ್ಯೋತಿಯ ದರ್ಶನ ಮಾಡಿ ಕೃತಾರ್ಥರಾದ ಸುಮಾರು 2.5 ಲಕ್ಷ ಅಯ್ಯಪ್ಪ ಭಕ್ತರು ತರಾತುರಿಯಲ್ಲಿ ಬೆಟ್ಟದ ಕೆಳಗೆ ಇಳಿದು ತಮ್ಮ ವಾಹನಗಳ ಕಡೆಗೆ ಧಾವಿಸುತ್ತಿರುವಾಗ ಈ ನೂಕುನುಗ್ಗಲು ಸಂಭವಿಸಿದೆ. ಇಂಥಾ ಸಂಭವನೀಯ ನೂಕುನುಗ್ಗಲನ್ನು ತಡೆಯಲು ಅಲ್ಲಿದ್ದವರು ಕೇವಲ ನಾಲ್ಕು ಪೊಲೀಸರಂತೆ! ಅದರಲ್ಲೂ ಒಬ್ಬ ಪೊಲೀಸ್ ಮಕರವಿಳಕ್ಕುವನ್ನು ನೋಡಲು ಬೆಟ್ಟದ ಮೇಲೆ ಹೋಗಿದ್ದನಂತೆ. ಇದು ನಿಜವೇ ಇದ್ದರೂ ಅಲ್ಲಿ ನಾಲ್ವರು ಪೋಲಿಸಲ್ಲ, 4000 ಪೊಲೀಸರಿದ್ದರೂ ಈ ಜನಪ್ರವಾಹವನ್ನು ತಡೆಯಲು ಸಾಧ್ಯವಿರುತ್ತಿರಲಿಲ್ಲ. ಏಕೆಂದರೆ ಈ ಘಟನೆ ಸಂಭವಿಸುವ ಕೆಲವು ದಿನಗಳ ಮುಂಚೆ ಆ ಪ್ರಾಂತ್ಯದ ಜಿಲ್ಲಾ ಕಲೆಕ್ಟರ್ ಸಹ ಮಕರಜ್ಯೋತಿಯನ್ನು ನೋಡಲು ಜನ ಅನುಮತಿ ನೀಡಿರುವ ದಾರಿಯನ್ನು ಹೊರತುಪಡಿಸಿ ಎಲ್ಲಾ ಮಾರ್ಗಗಳಿಂದಲೂ ನುಗ್ಗಬಹುದೆಂಬ ಎಚ್ಚರಿಕೆಯನ್ನು ನೀಡಿದ್ದರಂತೆ.

ಜನವರಿ 14ಕ್ಕೆ ಎರಡು ದಿನಗಳ ಮುಂಚೆಯೂ ಇದೇ ರೀತಿಯ ಸಂದರ್ಭ ಎದುರಾಗಿತ್ತಂತೆ! ಆದರೂ ನಿರೀಕ್ಷೆಯಂತೆ ಅವಘಡ ಸಂಭವಿಸಿ 102 ಪ್ರಾಣಗಳ ಬಲಿ ತೆಗೆದುಕೊಂಡಿದೆ. ಈಗ ಮತ್ತೆ ಈ ದುರಂತಕ್ಕೆ ಕಾರಣಗಳೇನು ಎಂಬ ತನಿಖೆ ಶುರುವಾಗಿದೆ. ಈಗಾಗಲೇ ಅಲ್ಲಿ ಸರಿಯಾಗಿ ಬೆಳಕಿನ ವ್ಯವಸ್ಥೆ ಇರಲಿಲ್ಲ, ಪಲ್ಟಿ ಹೊಡೆದ ಆಟೋಗೆ ಲೈಸೆನ್ಸ್ ಇರಲಿಲ್ಲ, ಸಾಕಷ್ಟು ಪೊಲೀಸ್ ಸಿಬ್ಬಂದಿ ಇರಲಿಲ್ಲವೆಂಬ ಕ್ಷುಲ್ಲಕ ಸಂಗತಿಗಳತ್ತ ತನಿಖೆ ಮುಂದುವರೆಯುವ ಎಲ್ಲಾ ಲಕ್ಷಣಗಳೂ ಕಂಡುಬರುತ್ತಿವೆ.

ಆದರೆ ಮಕರ ಸಂಕ್ರಾಂತಿಯಂದು ನೆರೆಯುವ 10–15 ಲಕ್ಷಕ್ಕೂ ಹೆಚ್ಚು ಜನರನ್ನು ಅಲ್ಲಿ ನಿಯಂತ್ರಿಸಿ ಸೌಲಭ್ಯಗಳನ್ನು ಒದಗಿಸುವುದು ಕಷ್ಟ ಸಾಧ್ಯ ಮಾತ್ರವಲ್ಲ. ಅಸಾಧ್ಯ. ಇಡೀ ಮಕರವಿಳಕ್ಕು ಸೀಸನ್ನಿನಲ್ಲಿ ಜಾಸ್ತಿ ಜನ ಹರಿದುಬಂದರೂ ಮಕರ ಸಂಕ್ರಾಂತಿಯ ದಿನದಂದೇ ಲಕ್ಷಾಂತರ ಜನ ನೆರೆಯಲು ಕಾರಣ ಅಂದು ಸಂಜೆ ಅಲ್ಲಿ "ಕಾಣಿಸಿಕೊಳ್ಳುವ" ಮಕರ ಜ್ಯೋತಿ!! ಹಲವು ದಶಕಗಳ ಹಿಂದೆ ಈ ಮಕರಜ್ಯೋತಿಯ ಪವಾಡವೇನೂ ಸಂಭವಿಸುತ್ತಿರಲಿಲ್ಲ. ಆದರೆ 70ರ ದಶಕದ ನಂತರ ಇದ್ದಕ್ಕಿದ್ದಂತೆ ಈ ಮಕರಜ್ಯೋತಿ "ಕಾಣಿಸಿಕೊಳ್ಳಲು" ಪ್ರಾರಂಭಿಸಿದೆ. ಈ ಮಕರಜ್ಯೋತಿಯ ಪವಾಡವೇನು ಎಂದು ಅರಿಯಲು 1973ರಲ್ಲೇ ವಿಚಾರವಾದಿಗಳ ಒಂದು ತಂಡ "ಜ್ಯೋತಿ" ಕಾಣಿಸಿಕೊಳ್ಳುವ ಪೊನ್ನಾಂಬು ಮೇಡು ಬೆಟ್ಟಕ್ಕೆ ಗುಟ್ಟಾಗಿ ಸೇರಿಕೊಂಡು ಸತ್ಯ ಶೋಧನೆ ನಡೆಸಿದ್ದರು.

ಸಂಜೆಯಾಗುತ್ತಿದ್ದಂತೆ ಅಲ್ಲಿಗೆ ಬಂದ ಕೇರಳ ವಿದ್ಯುತ್ ನಿಗಮದ ನೌಕರರು ಮತ್ತು ಅಯ್ಯಪ್ಪ ದೇವಸ್ಥಾನದ ಮಂಡಳಿಯವರು ದೊಡ್ಡ ಬಾಂಡ್ಲೆಯಲ್ಲಿ ಕರ್ಪೂರದ ರಾಶಿಯನ್ನು ಸುರಿದು ಅದಕ್ಕೆ ಬೆಂಕಿ ಹಚ್ಚಿದರು. ಅದು ದೊಡ್ಡ ಜ್ವಾಲೆಯಾಗಿ ಬೆಳಗುತ್ತಾ 20–30 ಕಿಮೀ ದೂರದಿಂದ ನೋಡುವವರಿಗೆ ಒಂದು ನಕ್ಷತ್ರವಾಗಿ ಕಾಣಲು ಪ್ರಾರಂಭಿಸಿತು. ಕೆಲವು ನಿಮಿಷಗಳ ನಂತರ ಬೆಂಕಿಯೂ ಮರೆಯಾಗಿ "ನಕ್ಷತ್ರ ಕಣ್ಮರೆಯಾಯಿತು". ಇದೇ ಮಕರ ಜ್ಯೋತಿಯ ಪವಾಡದ ರಹಸ್ಯ. ಇದನ್ನು ಜನರು ಅರಿಯಬಾರದೆಂದೇ ಮಕರಜ್ಯೋತಿ ಕಾಣಿಸಿಕೊಳ್ಳುವ ಬೆಟ್ಟದ 10 ಕಿಮೀ ಆಸುಪಾಸು ಯಾರೂ ಬರದಂತೆ ನೋಡಿಕೊಳ್ಳಲಾಗುತ್ತದೆ.

ಇದನ್ನು ಪತ್ತೆಹಚ್ಚಿದ ಕೇರಳದ ವಿಚಾರವಾದಿಗಳು 1983ರಲ್ಲಿ ಈ ಇಡೀ ಪ್ರಕ್ರಿಯೆಯನ್ನು ಚಿತ್ರೀಕರಿಸಿ ಕೇರಳದಾದ್ಯಂತ ಪ್ರಚಾರ ಮಾಡಿದರು. ದೇವಸ್ಥಾನದ ಆಡಲಿತ ಮಂಡಳಿ ಈ ಚರ್ಚೆಗೆ ಬರಲೂ ನಿರಾಕರಿಸಿತು. ನಂತರದಲ್ಲಿ ಪೊಲೀಸರು ಇನ್ನೂ ಹೆಚ್ಚು ಎಚ್ಚರಿಕೆಯನ್ನು ತೆಗೆದುಕೊಂಡು ವಿಚಾರವಾದಿಗಳನ್ನು ತಡೆಗಟ್ಟಲು ಯಶಸ್ವಿಯಾದರೂ ಹೆಚ್ಚೆಚ್ಚು ಜನ ಬರತೊಡಗಿದಂತೆ ಈ "ಪವಾಡ" ಕಾರ್ಯದಲ್ಲಿ ಭಾಗವಹಿಸಿದ ನೌಕರರೇ ನಿಜಾಂಶವನ್ನು ಬಯಲಿಗೆಳೆಯಲಾರಂಭಿಸಿದರು.

ಈ ಎಲ್ಲಾ ಕಾರಣದಿಂದ 2008ರ ಮೇ 28 ರಂದು ಅಯ್ಯಪ್ಪ ದೇವಸ್ಥಾನದ ಮಹಾ ಪ್ರಧಾನ ಅರ್ಚಕರಾದ ಕಂಟಾರು ಮಹೇಶ್ವರ ತಂತ್ರಿಗಳೇ ಖುದ್ದು ಪತ್ರಿಕಾ ಹೇಳಿಕೆ ನೀಡಿ ಮಕರಜ್ಯೋತಿ ದೈವ ಸೃಷ್ಟಿಯಲ್ಲವೆಂದೂ ಅದು ದೇವಸ್ಥಾನದವರೇ ನಡೆಸುವ ಕೃತಕ ದೀಪಾರಾಧನೆಯೆಂದೂ, ವಿನಾಕಾರಣ ಜನರು ಅದನ್ನು

(25ನೇ ಪುಟಕ್ಕೆ)

ನಿಮ್ಮ ಅದ್ಭುತ ಕಲ್ಪನಾ ಲೋಕಕ್ಕೆ ಕಾಯಕಲ್ಪ ನೀಡುವ
ಹಂಪಿ ಉತ್ಸವ
2011
ಜನವರಿ 27 ರಿಂದ 29, 2011
ಶ್ರೀ ಬಿ. ಎಸ್. ಯಡಿಯೂರಪ್ಪ
ನಮ್ಮ ಮುಖ್ಯ ಮಂತ್ರಿಗಳು
ಶ್ರೀ ಜಿ. ಜನಾರ್ದನ ರೆಡ್ಡಿ
ಶ್ರೀ ಗೋವಿಂದ ಎಂ. ಕಾರಜೋಳ
ಶ್ರೀ ಬಿ. ಶ್ರೀರಾಮುಲು
ನಮ್ಮ ಕಲೆ, ಸಂಸ್ಕೃತಿಯ ಪುನರುತ್ಥಾನವೇ ಹಂಪಿ ಉತ್ಸವ.
ಅದು ನಮ್ಮ ನಾಡ ಉತ್ಸವ. 14ನೇ ಶತಮಾನದ ವಿಜಯನಗರ ಸಾಮ್ರಾಜ್ಯ ಸೃಷ್ಟಿಸಿದ ಸುವರ್ಣ ಯುಗದ ಪ್ರತೀಕ. ಶಿಲ್ಪಕಾಶಿ ಹಂಪಿಯಲ್ಲಿ ದೇಶದ ಖ್ಯಾತನಾಮ ಕಲಾವಿದರು ಸಾಂಸ್ಕೃತಿಕ ಲೋಕದ ರಸದೌತಣವನ್ನು ಉಣಬಡಿಸುತ್ತಾರೆ.
ನೃತ್ಯ, ಸಂಗೀತ, ನಾಟಕ, ಗೊಂಬೆಯಾಟ, ವರ್ಣರಂಜಿತ ಸಿಡಿಮದ್ದು ಪ್ರದರ್ಶನ... ಅಂದಿನ ಭವ್ಯ ಕಲಾ ಶ್ರೀಮಂತಿಕೆಗೆ ಕನ್ನಡಿ ಹಿಡಿಯುತ್ತವೆ.
ಹಂಪಿ – ದೇಶದ ಅಗ್ರಗಣ್ಯ ಪ್ರವಾಸಿ ತಾಣ. ತನ್ನ ಶಿಲ್ಪಕಲೆಯ ಸೊಬಗಿನಿಂದ ವಿಶ್ವದೆಲ್ಲೆಡೆಯ ಪ್ರವಾಸಿಗರನ್ನು ಚುಂಬಕದಂತೆ ಸೆಳೆಯುವ ಹಂಪಿ ಮತ್ತು ಹಂಪಿ ಉತ್ಸವವನ್ನು ತಪ್ಪಿಸಿಕೊಂಡರೆ ಬದುಕಿನಲ್ಲಿ ಮಹತ್ತರವಾದುದನ್ನೇ ಕಳೆದುಕೊಂಡಂತೆ.
ಶಿಲ್ಪ ಕಾಶಿಯ ಸಾಂಸ್ಕೃತಿಕ ಸೊಬಗು
ಸವಿಯುವ ಸುವರ್ಣಾವಕಾಶ
ಹಂಪಿ ಉತ್ಸವ
ಕರ್ನಾಟಕ ವಾರ್ತೆ

ಹರಿದಿದೆ ನೋಡಿ ಕನ್ನಡ ರಥವು.



ಹರಿದಿದೆ ನೋಡಿ ಕನ್ನಡ ರಥವು
ಅಮೇರಿಕಾ ಕಡೆಗೆ
ಕಾಣದಾಗಿವೆ ಕಪ್ಪು ದೇಶಗಳು
ಪೊರೆ ಬಂದಿದೆ ಕಣ್ಗೆ! ॥ ಪ ॥

ನಮ್ಮಲ್ಲಿ ಏಳು ಜ್ಞಾನಪೀಠಗಳು
ಕನ್ನಡಕೇನು ಬರ?
ಕವಿತೆಯೆ ಸಾಕು ಇನ್ನೇನು ಬೇಕು
ಕನ್ನಡವು ಅಮರ!

ಹೃದಯವು ಕನ್ನಡ ಮನಸು ಸಂಸ್ಕೃತ
ನಾವು ಕಲಿತ ಪಾಠ
ಇಂತಹ ರಕ್ತಕೆ ತರುವುದೆ ಮುಜುಗರ
ಇಂಗ್ಲೀಷಿನ ಕೂಟ!

ಝಣಝಣಝಣ ಡಾಲರ್ರಿನ ತಾಳಕೆ
ಕುಣಿದಿದೆ ಕನ್ನಡವು
ಸಂಸ್ಕೃತಿ ಚರಿತೆ ಎಲ್ಲವು ಬಿಕರಿಗೆ
ಮುನ್ನಡೆದಿದೆ ಜಗವು!

ಕನ್ನಡ ಕಾಯುವ ಭಟರಿಗೆ ಕೊರತೆಯೆ
ಬೀದಿ ಬದಿಯ ಫ್ಲೆಕ್ಸುಗಳಲ್ಲಿ
ಆದರೂ ಕನ್ನಡ ಉಳಿದೇ ಉಳಿವುದು
ಮುಂದಿನ ಸಂಶೋಧನೆಗಳಲಿ!

○ ಡಾ॥ ಕಾ.ವೆಂ. ಶ್ರೀನಿವಾಸ ಮೂರ್ತಿ

ನೀರಾ ರಾಡಿಯಲ್ಲಿ ಮಿಂದ ಆಡಳಿತ ಯಂತ್ರ

ನಾ ದಿವಾಕರ

ಸ್ವತಂತ್ರ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯ ದಿನಗಳು ಅನೇಕ. ಕೆಲವು ಹರ್ಷದಾಯಕ, ಕೆಲವು ಭಯಾನಕ ಮತ್ತು ಕೆಲವು ಚಿಂತನಾರ್ಹ ದಿನಗಳು. ಇಂತಹ ವಿಶೇಷ ಸಂದರ್ಭಗಳಿಗೆ ಸೇರ್ಪಡೆಯಾಗುವುದು 2010ರ ನವಂಬರ್ ತಿಂಗಳು. 26–11ರ ನೆನಪುಗಳನ್ನೂ ಮರೆಮಾಚುವಂತಹ ದೇಶದ್ರೋಹಿ ಚಟುವಟಿಕೆಗಳು, ಜನವಿರೋಧಿ ವರ್ತನೆಗಳು ಬಯಲಾದದ್ದು ಈ ತಿಂಗಳು. ಭಯೋತ್ಪಾದನೆಗಿಂತಲೂ ಹೆಚ್ಚು ಅಪಾಯಕಾರಿಯಾದ ಭ್ರಷ್ಟಾಚಾರದ ವಿಶ್ವರೂಪ ದರ್ಶನವಾದದ್ದೂ ಈ ತಿಂಗಳಿನಲ್ಲೇ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಮೂರೂ ಕ್ಷೇತ್ರಗಳಲ್ಲೂ ಭ್ರಷ್ಟತೆಯ ಹೊಗೆಯಾಡುತ್ತಿದ್ದಂತೆಯೇ, ಇವೆಲ್ಲವನ್ನೂ ಜನತೆಯ ಮುಂದಿರಿಸುವ ಮಾಧ್ಯಮ ರಂಗವೂ ಇದೇ ಪಾಪದ ಕೂಪದಲ್ಲಿ ಸಿಲುಕಿದ್ದು ಭಾರತದ ಜನತೆಗೆ ಮರ್ಮಾಘಾತವನ್ನೇ ನೀಡಿರಬೇಕು. ಬಯಲಾದ ಹಗರಣಗಳು ಕೇವಲ ಒಂದು ರಾಜ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಸೀಮಿತವಾಗಿಲ್ಲ. ಅಥವಾ ಒಂದು ಪಕ್ಷಕ್ಕೂ ಸೀಮಿತವಾಗಿಲ್ಲ. ದೇಶವ್ಯಾಪಿಯಾಗಿ, ಸರ್ವಾಂತರ್ಯಾಮಿಯಾಗಿ, ಪಕ್ಷಾತೀತವಾಗಿ ಹೊರಹೊಮ್ಮಿದೆ.

ಹಗರಣಗಳಲ್ಲಿ ಸಿಲುಕಿದ ಸತ್ಯ ಹರಿಶ್ಚಂದ್ರರು ತಮ್ಮ ಸತ್ಯಸಂಧತೆಯನ್ನು ನಿರೂಪಿಸಿಕೊಳ್ಳಲು ಮತ್ತೊಬ್ಬರ ಭ್ರಷ್ಟತೆಯನ್ನು ಬಯಲಿಗೆಳೆಯುತ್ತಿದ್ದಾರೆ. "ನಾವೇನು ಮಾಡಿದ್ದೇವೆ ಮಹಾ, ನಿಮ್ಮ ಆಳ್ವಿಕೆಯಲ್ಲಿ ಇವೆಲ್ಲಾ ನಡೆದಿಲ್ಲವೇ" ಎಂಬ ಮಾತುಗಳು ಕರ್ನಾಟಕದ ರಾಜಕಾರಣದ ವೇದಘೋಷವಾಗಿಬಿಟ್ಟಿದೆ. ಕೇಂದ್ರದಲ್ಲಿ ಅಪರಾಧಿ ಸ್ಥಾನದಲ್ಲಿರುವ ಎ. ರಾಜ ತಮ್ಮ ಮೇಲಿನ ಆರೋಪಗಳಿಂದ ತಪ್ಪಿಸಿಕೊಳ್ಳಲು ತಮ್ಮ ದಲಿತ ಅಸ್ಮಿತೆಯನ್ನೂ ಬಳಸಿಕೊಂಡಿದ್ದಾಗಿದೆ. ತಾನು ದಲಿತ ರಾಜಕಾರಣಿಯಾಗಿದ್ದರಿಂದಲೇ ಆರೋಪ ಹೊರಿಸಲಾಗುತ್ತಿದೆ ಎಂದು ಹೇಳುವ ಮೂಲಕ ಭ್ರಷ್ಟಾಚಾರಕ್ಕೂ ಜಾತಿಯ ಲೇಪನ ಮಾಡುತ್ತಿರುವುದು ನೈತಿಕ ಅಧಃಪತನದ ಪರಾಕಾಷ್ಠೆ ಎಂದೇ ಹೇಳಬಹುದು. ಇತ್ತ ಕರ್ನಾಟಕದಲ್ಲಿ ಸನ್ನಿವೇಶವೇ ಬೇರೆ. ಎಲ್ಲ ರಾಜಕೀಯ ಪಕ್ಷಗಳೂ ನುಂಗಣ್ಣಗಳ ತಂಡಗಳೇ. ಇಲ್ಲಿ ರಾಜಕಾರಣಕ್ಕೆ ಭೂ ಹಗರಣ ಪರ್ಯಾಯ ಪದವೇ ಆಗಿಹೋಗಿದೆ. ಮೌಲ್ಯಾಧಾರಿತ ರಾಜಕಾರಣದ ತವರೂರಾದ ಕರ್ನಾಟಕದಲ್ಲಿ ಈಗ ನಡೆಯುತ್ತಿರುವುದು ಮೌಲ್ಯ ರಹಿತ ರಾಜಕಾರಣ, ಹಗರಣಗಳ ರಾಜಕಾರಣ. ಭ್ರಷ್ಟಾತಿಭ್ರಷ್ಟ ರಾಜಕಾರಣ.

ಮೌನಂ ಸಮ್ಮತಿ ಲಕ್ಷಣಂ

ನೆಹರೂ, ಕೃಷ್ಣ ಮೆನನ್ ಕಾಲದಿಂದಲೂ ಭಾರತದಲ್ಲಿ ರಾಜಕೀಯ ಭ್ರಷ್ಟಾಚಾರಕ್ಕೇನೂ ಕೊರತೆ ಇಲ್ಲ. ಅಧಿಕಾರರೂಢ ರಾಜಕಾರಣಿಗಳು ಅವ್ಯವಹಾರಗಳಲ್ಲಿ ತೊಡಗುವುದು, ಬೊಕ್ಕಸದ ಹಣಕಾಸನ್ನು ನುಂಗಿ ನೀರು ಕುಡಿಯುವುದು, ವಿರೋಧ ಪಕ್ಷಗಳ ಟೀಕೆಗೊಳಗಾಗುವುದು, ರಾಜಿನಾಮೆ ನೀಡುವುದು, ತನಿಖೆಗಾಗಿ ಸಮಿತಿ ನೇಮಿಸುವುದು, ಕಾಲಕ್ರಮದಲ್ಲಿ ಇಡೀ ಪ್ರಕರಣವನ್ನು ಸಂಸತ್ ಭವನದ ಕೆಂಪುಹಾಸಿನ ಅಡಿಗೆ ಸೇರಿಸಿ, ಆರೋಪ ಹೊತ್ತ ಅಪರಾಧಿಗಳನ್ನು ಮತ್ತೊಂದು ರೀತಿಯಲ್ಲಿ ಅಧಿಕಾರಕ್ಕೆ ತಂದು ಕೂಡಿಸುವುದು. ನ್ಯಾಯಾಂಗ ತನಿಖೆ, ಸಿಬಿಐ ತನಿಖೆ ಎಲ್ಲವೂ ನಿರರ್ಥಕ. ಯಾರಿಗೂ ಶಿಕ್ಷೆಯಾಗುವುದಿಲ್ಲ. ಆಗಿಯೂ ಇಲ್ಲ. ಆರು ದಶಕಗಳ ಇತಿಹಾಸದಲ್ಲಿ ಭ್ರಷ್ಟಾತಿಭ್ರಷ್ಟ ರಾಜಕಾರಣಿಗಳು ಬಂದು ಹೋಗಿದ್ದಾರೆ, ಇಂದಿಗೂ ಮೆರೆಯುತ್ತಿದ್ದಾರೆ. ಆದರೆ ಯಾರಿಗೂ ಶಿಕ್ಷೆಯಾಗಿಲ್ಲ. ತನಿಖಾ ವರದಿಗಳು ಮಾತ್ರ ಧೂಳು ತಿನ್ನುತ್ತಾ ಬಿದ್ದಿವೆ. ಇದು ಸತ್ಯಾಂಶ.

ನೆಹರೂ, ಕೃಷ್ಣ ಮೆನನ್ ಕಾಲದಿಂದಲೂ ಭಾರತದಲ್ಲಿ ರಾಜಕೀಯ ಭ್ರಷ್ಟಾಚಾರಕ್ಕೇನೂ ಕೊರತೆ ಇಲ್ಲ. ಅಧಿಕಾರರೂಢ ರಾಜಕಾರಣಿಗಳು ಅವ್ಯವಹಾರಗಳಲ್ಲಿ ತೊಡಗುವುದು, ಬೊಕ್ಕಸದ ಹಣಕಾಸನ್ನು ನುಂಗಿ ನೀರು ಕುಡಿಯುವುದು, ವಿರೋಧ ಪಕ್ಷಗಳ ಟೀಕೆಗೊಳಗಾಗುವುದು, ರಾಜಿನಾಮೆ ನೀಡುವುದು, ತನಿಖೆಗಾಗಿ ಸಮಿತಿ ನೇಮಿಸುವುದು, ಕಾಲಕ್ರಮದಲ್ಲಿ ಇಡೀ ಪ್ರಕರಣವನ್ನು ಸಂಸತ್ ಭವನದ ಕೆಂಪುಹಾಸಿನ ಅಡಿಗೆ ಸೇರಿಸಿ, ಆರೋಪ ಹೊತ್ತ ಅಪರಾಧಿಗಳನ್ನು ಮತ್ತೊಂದು ರೀತಿಯಲ್ಲಿ ಅಧಿಕಾರಕ್ಕೆ ತಂದು ಕೂಡಿಸುವುದು. ನ್ಯಾಯಾಂಗ ತನಿಖೆ, ಸಿಬಿಐ ತನಿಖೆ ಎಲ್ಲವೂ ನಿರರ್ಥಕ. ಯಾರಿಗೂ ಶಿಕ್ಷೆಯಾಗುವುದಿಲ್ಲ. ಆಗಿಯೂ ಇಲ್ಲ.

ಆದರೂ ಜನತೆಯ ಮುಂದೆ ಹಗರಣಗಳ ವಿರಾಟ್ ದರ್ಶನ ಮಾತ್ರ ಆಗುತ್ತಲೇ ಇದೆ. ಇಂದಿರಾ ಗಾಂಧಿ ಕಾಲದ ಅಗರ್‌ವಾಲ ಪ್ರಕರಣದಿಂದ ಹಿಡಿದು ಎ. ರಾಜ ಅವರ 2ಜಿ ತರಂಗಾಂತರ ಪ್ರಕರಣದವರೆಗೂ ಕೊಟ್ಯಾಂತರ ರೂಗಳು ಗಂಗೆಯಲ್ಲಿ ಮಿಂದು ಹರಿದು ಹೋಗಿವೆ. ಹಾಗೆಯೇ ರಾಜಕೀಯ ಮೌಲ್ಯಗಳೂ, ನೈತಿಕ ಮೌಲ್ಯಗಳೂ ಕೊಚ್ಚಿ ಹೋಗಿವೆ. ಭಾರತದ ಶೇರು ಮಾರುಕಟ್ಟೆಯನ್ನೇ ಅಲ್ಲೋಲಕಲ್ಲೋಲ ಮಾಡಿದ ಹರ್ಷದ್ ಮೆಹ್ತಾಗೆ ಬದುಕಿರುವಾಗ ಶಿಕ್ಷೆಯಾಗಲೇ ಇಲ್ಲ. ಜವರಾಯನ ಶಿಕ್ಷೆಯೇ ಗಟ್ಟಿಯಾಯಿತು. ಆತನ ಸಂಗಾತಿ ಕೇತನ್ ಪರೇಖ್ ಈಗ ಉಪನ್ಯಾಸಗಳನ್ನು ನೀಡುವ ಪ್ರತಿಷ್ಠಿತ ಬುದ್ಧಿಜೀವಿ(?)ಯಾಗಿದ್ದಾರೆ. ಸೆಂಟ್ ಕಿಟ್ಸ್, ಕಾರ್ಗಿಲ್, ಮೇವು ಹಗರಣ, ತೆಹಲ್ಕಾ ಪ್ರಕರಣ ಹೀಗೆ ಹತ್ತು ಹಲವಾರು. ಎಲ್ಲ ಅಪರಾಧಿಗಳಿಗೂ ಶಿಕ್ಷೆ ಒಂದೇ. ಸ್ವಾಭಾವಿಕ ಸಾವು ಮಾತ್ರ.

ಇಂತಹ ಸನ್ನಿವೇಶದಲ್ಲಿ ಕಳೆದ ವರ್ಷ ನಾವು ಹಲವು ಅಭೂತಪೂರ್ವ ಹಗರಣಗಳನ್ನು ನೋಡಿದ್ದೇವೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಅಶೋಕ್ ಚವಾಣ್, ಕೇಂದ್ರ ಸಂಪರ್ಕಖಾತೆ ಮಂತ್ರಿ ಎ. ರಾಜ, ಒಲಂಪಿಕ್ಸ್ ಸಮಿತಿ ಮುಖ್ಯಸ್ಥ ಸುರೇಶ್ ಕಲ್ಮಾಡಿ, ಭೂಹಗರಣಗಳ ಸರದಾರರಾಗಿರುವ ಕರ್ನಾಟಕದ ಮುಖ್ಯಮಂತ್ರಿಗಳು ಹೀಗೆ ರಾಜಕೀಯ ದಿಗ್ಗಜಗಳು ಭ್ರಷ್ಟತೆಯ ಖೆಡ್ಡಾದಲ್ಲಿ ಸಿಲುಕಿದ್ದಾರೆ. 2ಜಿ ತರಂಗಾಂತರ ಹಂಚಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಪ್ರಮಾಣ ಊಹಿಸಲೂ ಅಸಾಧ್ಯ. 1ಲಕ್ಷ 76ಸಾವಿರ ಕೋಟಿರೂಗಳು. ಕಾಮನ್‌ವೆಲ್ತ್

ಕ್ರೀಡೆಗಳ ಹಗರಣದ ಮೊತ್ತ 30ಸಾವಿರ ಕೋಟಿ. ಆದರ್ಶವಸತಿ ಸಮುಚ್ಚಯದ ಹಗರಣ 20ಸಾವಿರ ಕೋಟಿ. ಕರ್ನಾಟಕದ ಭೂ ಹಗರಣಗಳ ಮೊತ್ತ ಇನ್ನೂ ಲೆಕ್ಕಕ್ಕೇ ಸಿಕ್ಕಿಲ್ಲ. ಲೆಕ್ಕ ಹಾಕಲು ಆಗುವುದೂ ಇಲ್ಲ. ಏಕೆಂದರೆ ಭೂ ನುಂಗಣ್ಣಗಳು ಹುಟ್ಟಿ ಕೊಳ್ಳುತ್ತಲೇ ಇದ್ದಾರೆ, ವಿಭಿನ್ನ ಸ್ವರೂಪಗಳಲ್ಲಿ.

ಕೇಂದ್ರದಲ್ಲಿ ಎರಡನೆಯ ಪಾಳಿಯ ಅಧಿಕಾರ ನಡೆಸುತ್ತಿರುವ ಯುಪಿಎ ಸರ್ಕಾರ ಚುನಾಯಿತವಾದದ್ದು ಆಮ್ ಆದ್ಮಿಯ ಹೆಸರಿನಲ್ಲಿ. ಭಾಜಪದ ಕೋಮುವಾದಿ ರಾಜಕಾರಣಕ್ಕೆ ಪರ್ಯಾಯವಾಗಿ ಭಾರತದ ಜನತೆ ಸಾಕಷ್ಟು ಆಶೋತ್ತರಗಳನ್ನು ಹೊತ್ತು ಈ ಸರ್ಕಾರವನ್ನು ಆಯ್ಕೆ ಮಾಡಿದ್ದರು. ರಾಜಕಾರಣಿಯಲ್ಲದ ಆರ್ಥಿಕ ತಜ್ಞ ಮನಮೋಹನ್ ಸಿಂಗ್ ಪ್ರಧಾನಿಯಾದಾಗ ದೇಶದ ಜನಸಾಮಾನ್ಯರಲ್ಲಿ ಒಂದು ಭರವಸೆಯ ಆಶಾಕಿರಣ ಮೂಡಿತ್ತು. ಬಹುಶಃ ಈ ವ್ಯಕ್ತಿ ರಾಜಕೀಯ ಭ್ರಷ್ಟಾಚಾರವನ್ನು ತಡೆಗಟ್ಟದಿದ್ದರೂ ನಿಯಂತ್ರಿಸಲಾದರೂ ಯತ್ನಿಸುತ್ತಾರೆ ಎಂಬ ಭರವಸೆ ಅದು. ಆದರೆ 2ಜಿ ಹಗರಣದ ಕಾರ್ಮೋಡಗಳು ಇಡೀ ದೇಶವನ್ನೇ ಕವಿದು ಕತ್ತಲಾಗಿದ್ದರೂ ನಮ್ಮ ಪ್ರಧಾನಿಗಳು ಮಂದ ಬೆಳಕಿನಲ್ಲೇ ನಡೆಯುದ್ದರೇ ಹೊರತು ಆವರಿಸಿದ್ದ ಕತ್ತಲೆಯನ್ನು ಗಮನಿಸಲೇ ಇಲ್ಲ. ಸರ್ವೋಚ್ಚ ನ್ಯಾಯಾಲಯ ಪ್ರಧಾನಿಗಳ ಮೌನವನ್ನು ಪ್ರಶ್ನಿಸಿದ ನಂತರವೇ ಪ್ರಧಾನಿಗಳ ಮೌನವ್ರತ ಕೊನೆಗೊಂಡಿತ್ತು. ಇದು ಉದ್ದೇಶಪೂರ್ವಕ ಮೌನವೋ ಅಥವಾ ಸರ್ಕಾರವನ್ನು ಮುನ್ನಡೆಸುವ ಅನಿವಾರ್ಯತೆಯೋ! ಲಾಭ ಪಡೆದದ್ದುಮಾತ್ರ ಲಾಬಿ ಮಾಡುವವರೇ.

ರಾಡಿಯ ರಾಡಿ

ಮನಮೋಹನ್ ಸಿಂಗ್ ಮತ್ತು ಕೇಂದ್ರ ಸರ್ಕಾರದ ಮೌನವ್ರತದ ನಡುವೆಯೇ ಕಳೆದ ವರ್ಷ ಭಾರತದ ಕಾರ್ಯಾಂಗ ರಾಡಿಯೆದ್ದು ಹೋದದ್ದು ಮಾತ್ರ ಗುಟ್ಟಾಗಿ ಉಳಿಯಲಿಲ್ಲ. ನೀರ ರಾಡಿಯ ಎಂಬ ಲಾಬಿ ಮಾಡುವ ವೃತ್ತಿಪರ ಸಂಪರ್ಕಾಧಿಕಾರಿಣಿಯ ವೃತ್ತಾಂತ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವಂತೆಯೇ ಕೋಟ್ಯಾಂತರ ರೂಗಳ ಭ್ರಷ್ಟಾಚಾರದ ಹಗರಣಗಳು ಬಿಲದಿಂದ ಹೊರಬರುವ ಹೆಗ್ಗಣಗಳಂತೆ ಹೊರಬರಲಾರಂಭಿಸಿದ್ದವು. 2ಜಿ ತರಂಗಾಂತರ ವಿತರಣೆಯಲ್ಲಿ ಬೊಕ್ಕಸಕ್ಕೆ 1ಲಕ್ಷ 76 ಸಾವಿರ ಕೋಟಿ ರೂಗಳ ನಷ್ಟವಾಗಿರುವುದು ಸಿ.ಎ.ಜಿ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿತ್ತು. ಇತ್ತ ಕಾಮನ್ ವೆಲ್ತ್ ಕ್ರೀಡಾಕೂಟಗಳಲ್ಲಿ ಕ್ರೀಡಾಗ್ರಾಮ ನಿರ್ಮಾಣದಲ್ಲಿ ಕೊಟ್ಯಾಂತರ ರೂಗಳು ಪೋಲಾಗಿತ್ತು.

ಮುಂಬೈನಲ್ಲಿ ಕಾರ್ಗಿಲ್ ಯೋಧರ ಪತ್ನಿಯರಿಗೆಂದು ನಿರ್ಮಿಸಲಾಗಿದ್ದ ವಸತಿ ಸಮುಚ್ಚಯದ ನಿರ್ಮಾಣದಲ್ಲೂ ಅವ್ಯವಹಾರಗಳು ನಡೆದಿತ್ತು. ಈ ಮೂರು ಪ್ರಕರಣಗ ವೈಶಿಷ್ಟ್ಯವೆಂದರೆ ಇದು ಕೇವಲ ಅಧಿಕಾರಿಗಳಿಗೆ ಸೀಮಿತವಾಗಿಲ್ಲ. 2ಜಿ ತರಂಗಾಂತರ ಹಗರಣದಲ್ಲಿ ಉದ್ಯಮಿಗಳ ಪಾತ್ರವೇ ಹೆಚ್ಚು. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದ ಔದ್ಯಮಿಕ ರಂಗದಲ್ಲಿ ಪ್ರತಿಷ್ಠಿತ ಸ್ಥಾನ ಪಡೆದಿರುವ ಟಾಟಾ ಸಮೂಹವೂ ಈಗ ಅಪರಾಧಿ ಸ್ಥಾನದಲ್ಲಿ ನಿಂತಿದೆ. ರಾಡಿಯ ಟೇಪುಗಳಿಂದ ತಿಳಿದಿರುವ ಸತ್ಯಾಂಶಗಳನ್ನು ನೋಡಿದರೆ ಎದೆ ಝಲ್ಲೆನ್ನುತ್ತದೆ. ಭಯೋತ್ಪಾದನೆಗಿಂತಲೂ ಭಯಾನಕವಾದ ರೀತಿಯಲ್ಲಿ ಪಕ್ಷಾತೀತ ಭ್ರಷ್ಟಾಚಾರ ಅನಾವರಣಗೊಳ್ಳುವುದನ್ನು ರಾಡಿಯ ಟೇಪುಗಳಲ್ಲಿ ಕಾಣಬಹುದು. ಈ ಟೇಪುಗಳು

ಮನಮೋಹನ್ ಸಿಂಗ್ ಮತ್ತು ಕೇಂದ್ರ ಸರ್ಕಾರದ ಮೌನವ್ರತದ ನಡುವೆಯೇ ಕಳೆದ ವರ್ಷ ಭಾರತದ ಕಾರ್ಯಾಂಗ ರಾಡಿಯೆದ್ದು ಹೋದದ್ದು ಮಾತ್ರ ಗುಟ್ಟಾಗಿ ಉಳಿಯಲಿಲ್ಲ. ನೀರ ರಾಡಿಯ ಎಂಬ ಲಾಬಿ ಮಾಡುವ ವೃತ್ತಿಪರ ಸಂಪರ್ಕಾಧಿಕಾರಿಣಿಯ ವೃತ್ತಾಂತ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವಂತೆಯೇ ಕೋಟ್ಯಾಂತ ರೂ ಭ್ರಷ್ಟಾಚಾರದ ಹಗ ರಣಗಳು ಬಿಲದಿಂದ ಹೊರಬರುವ ಹೆಗ್ಗಣಗಳಂತೆ ಹೊರಬರಲಾರಂಭಿಸಿದ್ದವು. 2ಜಿ ತರಂಗಾಂತರ ವಿತರಣೆಯಲ್ಲಿ ಬೊಕ್ಕಸಕ್ಕೆ 1ಲಕ್ಷ 76ಸಾವಿರ ಕೋಟಿ ರೂ. ನಷ್ಟವಾಗಿರುವುದು ಸಿ.ಎ.ಜಿ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿತ್ತು. ಇತ್ತ ಕಾಮನ್ ವೆಲ್ತ್ ಕ್ರೀಡಾಕೂಟಗಳಲ್ಲಿ ಕ್ರೀಡಾಗ್ರಾಮ ನಿರ್ಮಾಣದಲ್ಲಿ ಕೊಟ್ಯಾಂತರ ರೂ ಪೋಲಾಗಿತ್ತು.

ಆದಾಯ ತೆರಿಗೆ ಇಲಾಖೆ ಮತ್ತು ಸಿಎಜಿ ಕಛೇರಿಯಿಂದ ಮಾಧ್ಯಮಗಳಿಗೆ ಬಹಿರಂಗವಾದದ್ದಾದರೂ ಹೇಗೆ? ಇದರಲ್ಲೂ ಭ್ರಷ್ಟಾಚಾರದ ವಾಸನೆ ಕಾಣುತ್ತದೆ. ಇಷ್ಟಕ್ಕೂ ರಾಡಿಯ ಯಾರು, ಆಕೆಯ ಪ್ರಭಾವ ಎಷ್ಟು, ಆಕೆಯ ವೃತ್ತಿಯಾದರೂ ಏನು ಇವೆಲ್ಲವೂ ಒಂದು ಸಂಶೋಧನೆ ಮಾಡಬಹುದಾದ ಗಂಭೀರ ವಿಚಾರವಾಗಿದೆ. ನಿರಾ ರಾಡಿಯ ಅವರನ್ನು ಆಲ್ ಇಂಡಿಯಾ ರಾಡಿಯ ಎಂದೇ ಕರೆಯಲಾಗುತ್ತದೆ. ಭ್ರಷ್ಟಾಚಾರದ ಬಗ್ಗೆ ಪಿಹೆಚ್‌ಡಿ ಮಾಡುವ ಇಚ್ಛೆ ಇದ್ದವರು ರಾಡಿಯ ಪ್ರಕರಣವನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರೆ ಡಾಕ್ಟರೇಟ್ ಶತಃಸಿದ್ಧ.

ಕೆನ್ಯಾದಿಂದ ಹದಿನೈದು ವರ್ಷಗಳ ಹಿಂದೆ ಭಾರತಕ್ಕೆ ಬಂದು ವೈಮಾನಿಕ ಉದ್ಯಮ ಸಂಸ್ಥೆಯನ್ನು ಸ್ಥಾಪಿಸಿದ ರಾಡಿಯಾ ರಾಜಕೀಯ ವಲಯದಲ್ಲಿ ಮೊದಲು ಗುರುತಿಸಿಕೊಂಡಿದ್ದು ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ. ಟಾಟಾ ಮತ್ತು ಅಂಬಾನಿಗಳ ಔದ್ಯಮಿಕ ಸಾಮ್ರಾಜ್ಯದ ಸಂಪರ್ಕಾಧಿಕಾರಿಣಿಯಾಗಿ ಮಿಂಚಿದ ರಾಡಿಯಾಗೆ ಆಧ್ಯಾತ್ಮಿಕ ಗುರುಗಳು ನಮ್ಮ ಡಾ. ಶ್ರೀ. ಪೇಜಾವರರು ಎಂದು ಸುದ್ದಿ. ಡಾ. ಶ್ರೀಗಳು ಇದನ್ನು ನಿರಾಕರಿಸಿದರೂ ಶ್ರೀಗಳಿಗೆ ದೆಹಲಿಯ ಪ್ರತಿಷ್ಠಿತ ವಸಂತ್ ಕುಂಜ್‌ನಲ್ಲಿ ನಿವೇಶನ ಕೊಡಿಸುವುದರಲ್ಲೂ ನೆರವಾಗಿರುವುದು ಮಾತ್ರ ಸತ್ಯ. ಈ ಸಂಪರ್ಕದ ಕೊಂಡಿ ಭಾಜ ಪದ ಸಂಘಮುಖಿ ಸಂಸದ ಅನಂತಕುಮಾರ್. ಈ ಮೂಲಕವೇ ತನ್ನ ಲಾಬಿ ಸಾಮ್ರಾಜ್ಯವನ್ನು ವಿಸ್ತರಿಸಿದ ರಾಡಿಯ ಮುಂದೆ ಪ್ರವರ್ಧಮಾನಕ್ಕೆ ಬಂದದ್ದು ಯುಪಿಎ ಸರ್ಕಾರದಲ್ಲಿ. ಆದರೂ ಎತ್ತಣ ರಾಡಿಯ ಎತ್ತಣ ಪೇಜಾವರ ಎತ್ತಣ ಟಾಟಾ-ಅಂಬಾನಿ?

ರಾಜಕಾರಣಿ-ಅಧಿಕಾರಶಾಹಿ ಮತ್ತು ಉದ್ಯಮಪತಿಗಳ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸಿದ ರಾಡಿಯಾಗೆ ಪ್ರಮುಖ ತಿರುವು ದೊರೆತಿದ್ದು 2001ರಲ್ಲಿ, ರತನ್ ಟಾಟಾ ಅವರ ಏರ್‌ಲೈನ್ಸ್ ಸಂಸ್ಥೆಯ ಸ್ಥಾಪನೆಯ ಸಂದರ್ಭದಲ್ಲಿ. ರಾಡಿಯ ಸ್ಥಾಪಿಸಿದ್ದ ವೈಷ್ಣವಿ ಕಾರ್ಪೋರೇಟ್ ಟೆಲಿಕಮ್ಯುನಿಕೇಷನ್ಸ್‌ಗೆ ಟಾಟಾ ಸಮೂಹದ 14 ಕಂಪನಿಗಳ ಸಂಪರ್ಕಾಧಿಕಾರಿಯ ಸ್ಥಾನ ನೀಡಲಾಗಿತ್ತು. 2009ರ ವೇಳೆಗೆ ರಾಡಿಯ ಟಾಟಾ ಸಮೂಹದ 90 ಕಂಪನಿಗಳನ್ನು ನಿರ್ವಹಿಸುತ್ತಿದ್ದರು. ಕ್ರಮೇಣ ತನ್ನ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿದ ರಾಡಿಯ 2008ರಲ್ಲಿ ಮುಖೇಶ್ ಅಂಬಾನಿ ಸಾಮ್ರಾಜ್ಯಕ್ಕೂ ಲಗ್ಗೆ ಇಟ್ಟಿದ್ದರು. ಈ ಸಂದರ್ಭದಲ್ಲಿ ಜನ್ಮತಾಳಿದ್ದೇ ನ್ಯೂಕಾಂ ಎಂಬ ಸಂಸ್ಥೆ. ಹೀಗೆ ದೇಶದ ಎರಡು ಪ್ರತಿಷ್ಠಿತ ಉದ್ಯಮಿಗಳ ಪರವಾಗಿ ಲಾಬಿ ಮಾಡುವ ದಂಧೆ ಆರಂಭಿಸಿದ ರಾಡಿಯ ಅಲ್ಪಾವಧಿಯಲ್ಲೇ ಅಧಿಕಾರಶಾಹಿಯ ನಾಡಿಮಿಡಿತವನ್ನು ಹಿಡಿದು ತನ್ನ ವಶೀಲಿಬಾಜಿಯನ್ನು (ಇದನ್ನೇ ಇಂಗ್ಲಿಷ್‌ನಲ್ಲಿ ಹೆಮ್ಮೆಯಿಂದ ಲಾಬಿ ಎನ್ನುತ್ತಾರೆ) ಪ್ರಬಲವಾಗಿ ಬೆಳೆಸಿದ್ದು ವಿಶೇಷವೇ ಹೌದು.

1995-2002ರ ಅವಧಿಯಲ್ಲಿ ರಾಡಿಯಾಳ ಸಹವರ್ತಿಯಾಗಿದ್ದ ಧೀರಜ್‌ಸಿಂಗ್ ಹೇಳುವ ಪ್ರಕಾರ ರಾಡಿಯ ತನ್ನ ಪ್ರಭಾವಳಿಯನ್ನು ನಿರ್ಮಿಸಿಕೊಂಡಿದ್ದು ಭಾಜಪ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ. ಅನಂತ್‌ಕುಮಾರ್ ನಾಗರಿಕ ವಿಮಾನ ಮಂತ್ರಿಯಾಗಿದ್ದಾಗ ರಾಡಿಯ ಕುದುರಿಸಿದ ಅಂತಾರಾಷ್ಟ್ರೀಯ ವ್ಯವಹಾರಗಳೇ ಆಕೆಯ ಸಾಮ್ರಾಜ್ಯ ವಿಸ್ತರಣೆಗೆ ಮೂಲಾಧಾರ. ಮಹಾರಾಷ್ಟ್ರದೊಡನೆ ಯೂರೋಕಾಪ್ಟರ್ ಖರೀದಿಯ ಒಡಂಬಡಿಕೆಗೆ ಸಹಿ ಹಾಕುವಾಗ ರಾಡಿಯ ನಾಗಪುರದ ಪ್ರಮುಖ ಭಾಜಪ ನಾಯಕರೊಡನೆ ಭೇಟಿಯಾಗಿದ್ದನ್ನು ಧೀರಜ್ ಪ್ರಸ್ತಾಪಿಸುತ್ತಾರೆ. ರಾಡಿಯಾಗೆ ಎಲ್ಲ ಮಾಹಿತಿಗಳೂ ಲಭ್ಯವಾಗುತ್ತಿದ್ದುದೇ ಅಲ್ಲದೆ ಒಂದು ಹಂತದಲ್ಲಿ ರಕ್ಷಣಾ ಕ್ಷೇತ್ರದ ಖರೀದಿಯಲ್ಲೂ ಯೋಚಿಸಿದ್ದನ್ನು ಧೀರಜ್ ಬಹಿರಂಗಪಡಿಸಿದ್ದಾರೆ. ಈ ಸಂದರ್ಭದಲ್ಲೇ ದೆಹಲಿಯ ವಸಂತ್‌ಕುಂಜ್‌ನಲ್ಲಿ ಪೇಜಾವರರ ಟ್ರಸ್ಟ್ ಒಂದಕ್ಕೆ ನಿವೇಶನ ನೀಡಿದ ಪ್ರಕರಣವೂ ನಡೆದಿರುವುದನ್ನು ಧೀರಜ್ ಪ್ರಸ್ತಾಪಿಸುತ್ತಾರೆ.

2008-09ರ ಅವಧಿಯಲ್ಲಿ ಭಾರತೀಯ ಆದಾಯ ತೆರಿಗೆ ಇಲಾಖೆಯ ಆಜ್ಞೆಯ ಮೇರೆಗೆ ರಾಡಿಯ ಅವರ ದೂರವಾಣಿ ಕದ್ದಾಲಿಕೆ ನಡೆಸಲಾಯಿತು. ಈ ಕದ್ದಾಲಿಕೆಯ ಗುರಿ ನೀರ ರಾಡಿಯ ಮತ್ತು ಉದ್ಯಮಿಗಳೊಡನೆ, ಕಾರ್ಪೋರೇಟ್ ಬಾಸುಗಳೊಡನೆ, ಅಧಿಕಾರಿಗಳೊಡನೆ, ಪತ್ರಕರ್ತರೊಡನೆ ಆಕೆ ನಡೆಸಿದ ಸಂಭಾಷಣೆಗಳನ್ನು ದಾಖಲಿಸುವುದು. 2ಜಿ ತರಂಗಾಂತರದ ಹಗರಣದ ರೂಪುರೇಷೆಗಳೆಲ್ಲವೂ ಈ ಸಂಭಾಷಣೆಗಳಲ್ಲೇ ಅಡಗಿರುವುದು ಇಡೀ ಪ್ರಕರಣಕ್ಕೆ ಕುತೂಹಲಕಾರಿ ತಿರುವು ನೀಡಿದೆ. 300ದಿನಗಳ ಈ ಕಾರ್ಯಾಚರಣೆಯ ಮೂಲಕ ನೀರ ರಾಡಿಯ ನಡೆಸಿದ ಎಲ್ಲ ಅವ್ಯವಹಾರಗಳನ್ನು ದಾಖಲಿಸಲಾಗಿದ್ದು ಭ್ರಷ್ಟಾಚಾರದ ವಿಶ್ವರೂಪ ದರ್ಶನಕ್ಕೆ ರಾಡಿಯ ಟೇಪುಗಳು ಆಕರ ಗ್ರಂಥದಂತಾಗಿವೆ. 2ಜಿ ತರಂಗಾತರದ ವ್ಯವಹಾರಗಳಲ್ಲಿ ಸಂಪರ್ಕಖಾತೆಯ ಮಾಜಿ ಮಂತ್ರಿ ಎ. ರಾಜ ಮತ್ತು ರಾಡಿಯ ನಡುವೆ ನಡೆದ ಎಲ್ಲ ಸಂಭಾಷಣೆಗಳನ್ನು ಬಹಿರಂಗಪಡಿಸಿದ ಪಯನೀರ್ ಪತ್ರಿಕೆಯ ಜೆ. ಗೋಪಾಲಕೃಷ್ಣನ್, ಈ ವಿಶ್ವರೂಪ ದರ್ಶನಕ್ಕೆ ನಾಂದಿ ಹಾಡಿದವರು.

2ಜಿ ಹಗರಣದ ಹಿನ್ನೆಲೆಯಲ್ಲಿ ಕೇಂದ್ರೀಯ ಆದಾಯ ತೆರಿಗೆ ಇಲಾಖೆ ಕದ್ದಾಲಿಕೆಯ ಮೂಲಕ ಸಂಗ್ರಹಿಸಿರುವ ರಾಡಿಯಾ ಅವರ ಸಂಭಾಷಣೆಗಳ ಸತ್ಯಾಸತ್ಯತೆಗಳು ನಿರೂಪಿತವಾಗದಿದ್ದರೂ ಮೇಲ್ನೋಟಕ್ಕೆ ಭ್ರಷ್ಟಾಚಾರದ ವ್ಯಾಪಕತೆ ಗೋಚರಿಸುವುದಂತೂ ಸತ್ಯ. ಸಿಬಿಐ ಸಂಗ್ರಹಿಸಿರುವ ಒಟ್ಟು ದಾಖಲೆಗಳು 800ಕ್ಕೂ ಹೆಚ್ಚು. 80 ಸಾವಿರ ಪುಟಗಳನ್ನು ಮೀರುತ್ತದೆ. 5851 ಫೋನ್ ಕರೆಗಳನ್ನು ಕದ್ದಾಲಿಸಲಾಗಿದ್ದು 3500ಕರೆಗಳನ್ನು ಪರಾಮರ್ಶಿಸಲಾಗಿದೆ. ಈಗ ಬೆಳಕಿಗೆ ಬಂದಿರುವುದು 104 ಸಂಭಾಷಣೆಗಳು ಮಾತ್ರ. ಸಮುದ್ರದಲ್ಲಿ ಈಜಾಡಿ ಒಂದು ಸಿಗಡಿ ಮೀನು ಹಿಡಿದಂತೆ. ಈ ಸಂಭಾಷಣೆಗಳಲ್ಲಿ ಕಾರ್ಪೋರೇಟ್ ದೊರೆಗಳಾದ ಟಾಟಾ, ಅಂಬಾನಿಗಳು ಮಾತ್ರವಲ್ಲ ಮಾಧ್ಯಮ ದೊರೆಗಳಾದ ಬರ್ಖಾದತ್, ವೀರ್‌ಸಾಂಘ್ವಿ ಮುಂತಾದವರೂ ಕಾಣಿಸಿಕೊಳ್ಳುತ್ತಾರೆ. ಪ್ರಭುಗಳ ದುಷ್ಕರ್ಮಗಳನ್ನು ಪ್ರಜೆಗಳಿಗೆ ಅರುಹಬೇಕಾದ ಮಾಧ್ಯಮ ವೀರರೇ ಮಧ್ಯವರ್ತಿಗಳಾದರೆ ದೇಶದ ಗತಿ ಏನು?

ಈ ಟೇಪುಗಳು ಬಹಿರಂಗ ಪಡಿಸಿರುವ ಆರೋಪಗಳು ದೇಶದ ಆಡಳಿತ ವ್ಯವಸ್ಥೆಯನ್ನು ಎಷ್ಟು ಕಲುಷಿತಗೊಳಿಸಿವೆ ಎಂದರೆ ಸರ್ವೋಚ್ಚ ನ್ಯಾಯಾಲಯವು "ನಾವು ಪವಿತ್ರ ನದಿ ಗಂಗೆ ಕಲುಷಿತವಾಗುತ್ತಿರುವುದರ ಬಗ್ಗೆ ಚಿಂತಿತರಾಗಿದ್ದೇವೆ, ಆದರೆ ಈ ಭ್ರಷ್ಟಾಚಾರದ ಹಗರಣ ಹರಡಿರುವ ಕಲ್ಮಷ ಇನ್ನೂ ಗಾಢವಾದದ್ದು" ಎಂದು ಪ್ರತಿಕ್ರಿಯಿಸಿದೆ. ಸರ್ಕಾರದ ನಿರ್ಣಯಗಳು, ನೀತಿಗಳು, ಸಂಸತ್ತಿನ ಚರ್ಚೆಗಳು, ಮಂತ್ರಿಮಂಡಲ ರಚನೆ ಎಲ್ಲ ವಿಷಯಗಳಲ್ಲೂ ರಾಡಿಯ ತನ್ನ ಬಾಹುಗಳನ್ನು ಚಾಚಿರುವುದನ್ನು ಖ್ಯಾತ ನ್ಯಾಯವಾದಿ ಪ್ರಶಾಂತ್ ಭೂಷಣ್ ಉಲ್ಲೇಖಿಸುತ್ತಾರೆ. ಮುಖೇಶ್ ಅಂಬಾನಿ, ರತನ್ ಟಾಟಾ ಅವರ ಪರವಾಗಿ ಸರ್ಕಾರಿ ವಲಯಗಳಲ್ಲಿ ಲಾಬಿ ಮಾಡುವ ಮೂಲಕ ಕೆಲವು ಯೋಜನೆಗಳನ್ನು ದಕ್ಕಿಸಿಕೊಡಲು ನೆರವಾಗುವ ನೀರ ರಾಡಿಯ ಮಾಧ್ಯಮಗಳ ಸಂಪಾದಕರು, ವರದಿಗಾರರು, ಕೈಗಾರಿಕೋದ್ಯಮಿಗಳು, ರಾಜಕಾರಣಿಗಳು ಹೀಗೆ ಎಲ್ಲ ಅಧಿಕಾರಸ್ಥರನ್ನೂ ಸಂಪರ್ಕಿಸುತ್ತಾರೆ. ಈ ಸಂಭಾಷಣೆಗಳಲ್ಲಿ ವ್ಯಕ್ತವಾಗುವ ವಿಷಯಗಳನ್ನು ನೋಡಿದರೆ ಎದೆ ಝಲ್ಲೆನ್ನುತ್ತದೆ.

ಮಂತ್ರಿಮಂಡಲದಲ್ಲಿ ಸ್ಥಾನಗಳಿಸುವುದು, ಅಂಬಾನಿ ಸೋದರರ ನಡುವಿನ ಅನಿಲ ಹಂಚಿಕೆ ವಿವಾದ, 2ಜಿ ತರಂಗಾತರದ ವಿತರಣೆ, ವಿಶೇಷ ಆರ್ಥಿಕ ವಲಯಗಳ ಪರವಾನಗಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ತಮ್ಮ ಕಾರ್ಯ ಸಾಧಿಸಲು ರಾಡಿಯ ಅವರಂತಹ ಮಧ್ಯವರ್ತಿಗಳು ಕತೆಗಳನ್ನು ಸೃಷ್ಟಿಸಿದರೆ, ಮಾಧ್ಯಮಗಳು ಅದನ್ನೇ ಬಿತ್ತರಿಸುವ ಮೂಲಕ ನೆರವಾಗುತ್ತವೆ. ಯುಪಿಎ ಸರ್ಕಾರದ ಮಂತ್ರಿಮಂಡಲ ರಚನೆಯಾದ ಸಂದರ್ಭದಲ್ಲಿ ಡಿಎಂಕೆ ಸದಸ್ಯರಿಗೆ ಯಾವ ಖಾತೆ ನೀಡಬೇಕೆಂದು ಕಾಂಗ್ರೆಸ್‌ನೊಡನೆ ಮಾತನಾಡಲು ಕೆಲವು ಪತ್ರಕರ್ತರು ಒಪ್ಪಿಕೊಳ್ಳುತ್ತಾರೆ. ಇನ್ನು ಕೆಲವರು ಅಂಬಾನಿ ಸೋದರರ ಅನಿಲ ಹಂಚಿಕೆಯ ವಿಚಾರದಲ್ಲಿ ಮುಖೇಶ್ ಅಂಬಾನಿಯ ಪರವಾಗಿ ಸರ್ಕಾರದ ಮೇಲೆ ಒತ್ತಡ ತರಲು ಒಪ್ಪಿಕೊಳ್ಳುತ್ತಾರೆ. ಎನ್‌ಡಿಟಿವಿಯ ಬರ್ಖಾ ದತ್ ಕಾಂಗ್ರೆಸ್ ಪಕ್ಷಕ್ಕೆ ಏನು ಹೇಳಬೇಕು ಎಂದು ಕೇಳಿದರೆ, ವೀರ್ ಸಾಂಘ್ವಿ ಅಂಬಾನಿ ಸೋದರರ ಬಗ್ಗೆ ಯಾವ ರೀತಿಯ ಸುದ್ದಿ ಸೃಷ್ಟಿಸಬೇಕು ಎಂದು ಕೇಳುತ್ತಾರೆ. ಹೇಗಿದೆ ನೋಡಿ ಮೀಡಿಯ-ರಾಡಿಯ ಜೋಡಿಯ ಕಮಾಲ್.

ಎನ್. ಕೆ. ಸಿಂಗ್ ಒಬ್ಬ ಸಂಭಾವಿತ(?) ಸಂಸದ. ಆತನ ಕೆಲಸವೇನು? ಪ್ರಜೆಗಳ ಹಿತವನ್ನು ರಕ್ಷಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು. ಆದರೆ ಆತ ಮಾಡುವುದೇನು? 2009ರ ಬಜೆಟ್‌ನಲ್ಲಿ ವಿತ್ತ ಮಂತ್ರಿಗಳು ಅನಿಲ ಉತ್ಪನ್ನಕ್ಕೆ ತೆರಿಗೆ ವಿನಾಯಿತಿಯನ್ನು ಘೋಷಿಸುತ್ತಾರೆ. ಈ ಸವಲತ್ತನ್ನು ತಮ್ಮ ಮಿತ್ರ ಅಂಬಾನಿಯವರಿಗೆ ಒದಗಿಸಲು ಸಿಂಗ್ ಎಲ್ಲ ರೀತಿಯ ಕಸರತ್ತುಗಳನ್ನೂ ಮಾಡುತ್ತಾರೆ. ಈ ತೆರಿಗೆ ವಿನಾಯಿತಿ ಪೂರ್ವಾನ್ವಯವಾಗುವಂತೆ ಸರ್ಕಾರದೊಡನೆ ಲಾಬಿ ನಡೆಸುತ್ತಾರೆ. ಇದರಲ್ಲಿ ಸಿಂಗ್ ರಾಡಿಯಾ ಅವರನ್ನು ಬಳಸಿಕೊಳ್ಳುತ್ತಾರೆ. ಏತನ್ಮಧ್ಯೆ ರಾಡಿಯ ಮಾಧ್ಯಮಗಳ ಮೂಲಕ ಅಂಬಾನಿ ಕಂಪನಿ 81 ಸಾವಿರ ಕೋಟಿ ಲಾಭಗಳಿಸುವ ಸುದ್ದಿಯನ್ನು ಸೃಷ್ಟಿಸಿರುತ್ತಾರೆ. ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬಜೆಟ್ ಕುರಿತು ಚರ್ಚೆ ನಡೆಯುವಾಗ ಅಂಬಾನಿಯವರಿಗಾಗುವ ಲಾಭವನ್ನು ಬಹಿರಂಗ ಪಡಿಸಲು ಸಿದ್ಧರಾಗಿದ್ದ ಅರುಣ್ ಶೌರಿಯವರ ಬದಲು, ವೆಂಕಯ್ಯ ನಾಯ್ಡು ಮೊದಲು ಮಾತನಾಡುವಂತೆ ಪಕ್ಷದ ಮೇಲೆ ಒತ್ತಡ ತರಲಾಗುತ್ತದೆ.

ಒಂದು ವೇಳೆ ಶೌರಿ ಮಾತನಾಡಿದ್ದರೆ ವಿರೋಧ ವ್ಯಕ್ತಪಡಿಸುತ್ತಿದ್ದರು. ಆಗ ಅಂಬಾನಿಗೆ ಲಾಭವಾಗುತ್ತಿರಲಿಲ್ಲ. ಹಾಗಾಗಿ ಭಾಜಪದ ಆಂತರಿಕ ರಾಜಕಾರಣ ವಿಪ್ಲವಕಾರಿ ಬದಲಾವಣೆ ಮಾಡುತ್ತದೆ. ಕಾಂಗ್ರೆಸ್ ಸಂಸದರು ಈ ಇಡೀ ಪ್ರಹಸನಕ್ಕೆ ಸಹಾಯಕರಾಗುತ್ತಾರೆ. ಪಕ್ಷಾತೀತವಾಗಿ ಎಲ್ಲರೂ ಒಂದಾಗಿ ಅಂಬಾನಿಯವರಿಗೆ ಲಾಭ ಗಳಿಸಿಕೊಡುತ್ತಾರೆ. ಹೀಗೆ ವಿತ್ತ ಮಂತ್ರಿಗಳ ತೆರಿಗೆ ವಿನಾಯಿತಿಯ ಶಿಫಾರಸು ಅಂಗೀಕೃತವಾಗುತ್ತದೆ. ಇಷ್ಟೆಲ್ಲಾ ಪ್ರಹಸನಗಳ ರೂವಾರಿ ರಾಡಿಯ ಆಗಿರುತ್ತಾರೆ. ಹೇಗಿದೆ? ನಮ್ಮ ಉಪ್ಪಿ ಒಂದು ಸಿನಿಮಾ ಮಾಡಬಹುದೇನೋ?

ಮಾಧ್ಯಮಪತಿಗಳ ಆಟಾಟೋಪ

ಮತ್ತೆ ಕೆಲವು ರೆಕಾರ್ಡಿಂಗ್‌ಗಳಲ್ಲಿ ಪತ್ರಕರ್ತರು ಮತ್ತು ಮಾಧ್ಯಮ ಸಂಪಾದಕರುಗಳು ಸರ್ಕಾರದೊಡನೆ ಲಾಬಿ ನಡೆಸುವ ಕಾಲಾಳುಗಳಾಗಿ, ಏಜೆಂಟರುಗಳಾಗಿ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು. ರಕ್ಷಕರೇ ಭಕ್ಷಕರಾದಾಗ ಎಂದು ಆದರ್ಶ್ ಹಗರಣದ ಸಂದರ್ಭದಲ್ಲಿ ಬೊಬ್ಬೆ ಹೊಡೆಯುತ್ತಿದ್ದ ಮಾಧ್ಯಮದ ಹೀರೋ-ಹೀರೋಯಿನ್‌ಗಳು ರಾಡಿಯ ಗರಡಿಯಲ್ಲಿ ಪಳಗಿದ್ದು ಏಕೋ? ಅಚ್ಚರಿಯೂ ಆಗುತ್ತದೆ, ಖೇದವೂ ಆಗುತ್ತದೆ. ಈ ಮಾಧ್ಯಮ ಮಿತ್ರರು ನೆರವಾಗುವುದಾದರೂ ಯಾರಿಗೆ. ನವ ಉದಾರವಾದದ ಗರಡಿಯಲ್ಲಿ ಪಳಗಿ ಭಾರತದ ಸಂಪನ್ಮೂಲಗಳನ್ನು ಲೂಟಿ ಮಾಡುತ್ತಿರುವ ಕಾರ್ಪೋರೇಟ್ ಉದ್ಯಮಿಗಳಿಗೆ. ಟಾಟಾ, ಅಂಬಾನಿ, ಮಿಟ್ಟಲ್ ಇತ್ಯಾದಿಗಳಿಗೆ. ದೇಶದ ಭ್ರಷ್ಟಾತಿಭ್ರಷ್ಟ ಹಗರಣಗಳನ್ನು ದಿನವಿಡೀ ತೋರಿಸುತ್ತಾ ಗಾಂಧೀಜಿಯ ಅಪರಾವತಾರ ಎನ್ನುವಂತೆ ವರ್ತಿಸುವ ಮಾಧ್ಯಮಗಳು ರಾಡಿಯ ಟೇಪುಗಳನ್ನು ಬಿತ್ತರಿಸಲೂ ಹಿಂಜರಿಯುತ್ತಿರುವುದು ಇಡೀ ಪ್ರಕರಣದ ಸತ್ಯಾಸತ್ಯತೆಗಳನ್ನು ಬಿಂಬಿಸುತ್ತದೆ.

ಭ್ರಷ್ಟಾಚಾರದ ಸಾಮ್ರಾಟ ರಾಜನನ್ನು ವಾರಗಟ್ಟಲೆ ಪರದೆಯ ಮೇಲೆ ಬಿತ್ತರಿಸಿ ಪುಂಖಾನುಪುಂಖವಾಗಿ ಮಾತುಗಳ ಹೊಳೆಹರಿಸಿ, ಭ್ರಷ್ಟಾಚಾರ ನಿರ್ಮೂಲನ ಮಂಡಲಿಯ ಹಕ್ಕುದಾರರಂತೆ ನಡೆದುಕೊಂಡ ಮಾಧ್ಯಮ ಮಿತ್ರರು, ರಾಡಿಯ ಕಾರ್ಯಾಚರಣೆಯಲ್ಲಿ ಕಾಲಾಳುಗಳಾಗಿದ್ದೇಕೆ? ಇದು ಏನನ್ನು ಸೂಚಿಸುತ್ತದೆ. ಭಾರತದ ಮಾಧ್ಯಮಗಳೂ ಭ್ರಷ್ಟವಾಗಿವೆ ಎಂದಲ್ಲವೇ? ಆದರೆ ಒಂದು ಸತ್ಯ ಅರಿವಿರಲೇ ಬೇಕು. ನವ ಉದಾರವಾದದಲ್ಲಿ ಹಣಕಾಸು ಬಂಡವಾಳ ಮತ್ತು ಅದರಿಂ ೭ರುವ ಲಾಭಾಂಶದ ಲಾಲಸೆ ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ. ಧಾರ್ಮಿಕ ಮಠಗಳಿಂದ ಹಿಡಿದು ಕಾರ್ಪೋರೇಟ್ ಉದ್ಯಮಿಯವರೆಗೆ. ಮಾಧ್ಯಮಗಳೂ ಕಾರ್ಪೋರೇಟ್ ಹಿತಾಸಕ್ತಿಗಳನ್ನೇ ರಕ್ಷಿಸುವ ಸಾರ್ವಜನಿಕ ಮುಖವಾಡವಷ್ಟೇ. ಕಾರ್ಪೋರೇಟ್ ಹಿಡಿತದಲ್ಲಿಲ್ಲದ ಒಂದಾದರೂ ಟಿವಿ ಚಾನಲ್ ಇದೆಯೇ? ದೂರದರ್ಶನ ಹೊರತುಪಡಿಸಿ!

ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡ ರಾಡಿಯ ತನ್ನ ಚಾಕಚಕ್ಯತೆಯನ್ನು ಮೆರೆದಿದ್ದು ಮಾಧ್ಯಮ ಪ್ರತಿನಿಧಿಗಳ ವಿಚಾರದಲ್ಲಿಯೇ. ದಿನಬೆಳಗಾದರೆ ಗಾಂಧೀಜಿಯ ಅಪರಾವತಾರದಂತೆ ವರ್ತಿಸುವ ಬರ್ಖಾದತ್, ವೀರ್ ಸಾಂಘ್ವಿ ಮುಂತಾದ ಮಾಧ್ಯಮ ಪತಿಗಳನ್ನು ತನ್ನ ವಶೀಲಿಬಾಜಿಯ ದಂಧೆಗೆ ಬಳಸಿಕೊಂಡ ಪರಿ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಅಸಡ್ಡೆಯನ್ನೂ ಮೂಡಿಸುತ್ತದೆ. ದಯಾನಿಧಿ ಮಾರನ್ ಅವರನ್ನು ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳುವಂತೆ ಪ್ರಧಾನಿಗಳ ಮನ ಒಲಿಸಲು ರಾಡಿಯ ಮೀಡಿಯೇಟರ್ ಆಗಿ ಬಳಸಿದ್ದು ಬರ್ಖಾದತ್ ಅವರನ್ನೇ. ರಾಡಿಯ ಬರ್ಖಾ ಅವರನ್ನು ಸಂಪರ್ಕಿಸುತ್ತಾರೆ, ದತ್ ಗುಲಾಂ ನಬಿ ಅಜಾದ್ ಅವರೊಡನೆ ಮಾತನಾಡಿ ವ್ಯವಹಾರ ಕುದುರಿಸುತ್ತಾರೆ. ಕಾಂಗ್ರೆಸ್ ಏಜೆಂಟರಂತೆ ಕಾರ್ಯ ನಿರ್ವಹಿಸುತ್ತಿದ್ದ ರಾಜನ್ ಭಟ್ಟಾಚಾರ್ಯ ಅವರೊಡಗಿನ ಸಂಭಾಷಣೆಯೊಂದರಲ್ಲಿ ರಾಡಿಯ ಬರ್ಖಾ ದತ್ ಅವರ ಪಾತ್ರವನ್ನು ಕುರಿತು ಪ್ರಸ್ತಾಪಿಸುತ್ತಾರೆ. ಇದೇ ರೀತಿಯಲ್ಲಿ ಎ. ರಾಜಾ ಅವರನ್ನು ಮಂತ್ರಿ ಮಾಡುವಲ್ಲೂ ಬರ್ಖಾ ದತ್ ಪ್ರಮುಖ ಪಾತ್ರ ವಹಿಸುತ್ತಾರೆ.

ವೀರ್ ಸಾಂಘ್ವಿಯವರ ಸ್ಟೈಲೇ ಬೇರೆ, ರಜನಿಯ ಥರ. ಅವರು ನೀರಾ ರಾಡಿಯ ಪರವಾಗಿ ಯಾವುದೇ ಮಂತ್ರಿಗಿರಿಯ ಶಿಫಾರಸ್ಸು ಮಾಡುವುದಿಲ್ಲ. ಬದಲಾಗಿ ತಮ್ಮ ದೈನಂದಿನ ಕಾಲಂ ಕೌಂಟರ್‌ಪಾಯಿಂಟ್‌ನಲ್ಲಿ

ಭ್ರಷ್ಟಾಚಾರದ ಸಾಮ್ರಾಟ ರಾಜನನ್ನು ವಾರಗಟ್ಟಲೆ ಪರದೆಯ ಮೇಲೆ ಬಿತ್ತರಿಸಿ ಪುಂಖಾನುಪುಂಖವಾಗಿ ಮಾತುಗಳ ಹೊಳೆಹರಿಸಿ, ಭ್ರಷ್ಟಾಚಾರ ನಿರ್ಮೂಲನ ಮಂಡಲಿಯ ಹಕ್ಕುದಾರರಂತೆ ನಡೆದುಕೊಂಡ ಮಾಧ್ಯಮ ಮಿತ್ರರು, ರಾಡಿಯ ಕಾರ್ಯಾಚರಣೆಯಲ್ಲಿ ಕಾಲಾಳುಗಳಾಗಿದ್ದೇಕೆ? ಇದು ಏನನ್ನು ಸೂಚಿಸುತ್ತದೆ. ಭಾರತದ ಮಾಧ್ಯಮಗಳೂ ಭ್ರಷ್ಟವಾಗಿವೆ ಎಂದಲ್ಲವೇ? ಆದರೆ ಒಂದು ಸತ್ಯ ಅರಿವಿರಲೇಬೇಕು. ನವ ಉದಾರವಾದದಲ್ಲಿ ಹಣಕಾಸು ಬಂಡವಾಳ ಮತ್ತು ಅದರಿಂದ ಬರುವ ಲಾಭಾಂಶದ ಲಾಲಸೆ ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ.

ನೀರಾ ರಾಡಿಯ ಅವರ ಪ್ರತಿಪಾದನೆಗಳನ್ನು ಪ್ರಮುಖವಾಗಿ ಬಿಂಬಿಸಿ ಬರೆಯಲು ಒಪ್ಪಿಕೊಳ್ಳುತ್ತಾರೆ. ಓರ್ವ ಲಾಬಿ ಮಾಡುವ ಮಧ್ಯವರ್ತಿಯ ಮೂಗಿನ ನೇರಕ್ಕೆ ತಮ್ಮ ಬರವಣಿಗೆಯನ್ನು ರೂಪಿಸುವ ಸಾಂಘ್ವಿಯವರ ನಿಲುವು ಪ್ರಶ್ನಾರ್ಹವೂ ಹೌದು, ಖಂಡನಾರ್ಹವೂ ಹೌದು. ಉದಾಹರಣೆಗೆ ತನ್ನ ಒಂದು ಲೇಖನದಲ್ಲಿ ಮುಖೇಶ್ ಅಂಬಾನಿಗೆ ರಾಷ್ಟ್ರೀಯ ಸಂಪತ್ತನ್ನು ವಿತರಿಸಲು ಪೂರಕವಾಗುವ ಹಾಗೆ ಬರೆದಿರುವುದನ್ನು ಸಾಂಘ್ವಿ ರಾಡಿಯಾಗೆ ತಿಳಿಸುತ್ತಾರೆ. ಓರ್ವ ವಶೀಲಿ ಬಾಜಿ ನಡೆಸುವ ವ್ಯಕ್ತಿಯ ನಿರ್ದೇಶನದ ಮೇಲೆ ಲೇಖನ ಬರೆಯುವ ಇಂತಹ ಮಾಧ್ಯಮ ಮಿತ್ರರು ಪ್ರಜಾತಂತ್ರದ ನಾಲ್ಕನೆ ಸ್ತಂಭವನ್ನು ಪ್ರತಿನಿಧಿಸಲು ಸಾಧ್ಯವೇ? ಆದರೂ ಸಾಂಘ್ವಿ ಮತ್ತು ದತ್ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ. ತಮ್ಮ ಪತ್ರಿಕೋದ್ಯಮ ಮೌಲ್ಯಗಳು ಇನ್ನೂ ದೃಢವಾಗಿವೆ ಎಂದೇ ವಾದಿಸುತ್ತಾರೆ. ಈ ಮಾಧ್ಯಮ ಮಿತ್ರರು ಏನೇ ಹೇಳಿದರೂ ಇವರ ಕಾಂಗ್ರೆಸ್ ಪಕ್ಷದೊಡಗಿನ ಒಡನಾಟವನ್ನು ಅಲ್ಲಗಳೆಯಲಾಗುವುದಿಲ್ಲ. ಈ ವಿತಂಡವಾದವನ್ನು ನಂಬಲು ಜನತೆ ಏನು ಅಬ್ಬೇಪಾರಿಗಳೇ?

ಪತ್ರಕರ್ತರು ತಮ್ಮ ರಾಜಕೀಯ ಸಿದ್ಧಾಂತಗಳಿಗೆ ಅನುಸಾರವಾಗಿ ರಾಜಕೀಯ ಪಕ್ಷಗಳ ಪರ ವಹಿಸುವುದು ಸಾಮಾನ್ಯವಾದ ಸಂಗತಿ. ಆದರೆ ಒಂದು ಪಕ್ಷದಲ್ಲಿ ಕೆಲವು ವ್ಯಕ್ತಿಗಳಿಗೆ, ನಾಯಕರಿಗೆ ನಿಷ್ಠೆ ತೋರುವುದು, ಅಂತಹ ನಾಯಕರನ್ನು ತಮ್ಮ ಬರಹಗಳ ಮೂಲಕ ವೈಭವೀಕರಿಸುವುದು ಪತ್ರಿಕಾ ಧರ್ಮಕ್ಕೆ ದ್ರೋಹ ಬಗೆದಂತಾಗುತ್ತದೆ. ವೀರ್ ಸಾಂಘ್ವಿ– ಮಾಧವರಾವ್ ಸಿಂಧಿಯ ಮತ್ತು ಬರ್ಖಾದತ್–ಚಿದಂಬರಂ ನಡುವೆ ಇರುವ ನಿಕಟ ಸಂಪರ್ಕಗಳನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಹಾಗಾಗಿಯೇ ಸಾಂಘ್ವಿ ಮತ್ತು ಬರ್ಖಾಗಳು ನೀರ ರಾಡಿಯ ಅವರ ಜಾಲಕ್ಕೆ ಸಿಲುಕಿದ ಬಕರಾಗಳಾಗಿದ್ದಾರೆ.

ಮತ್ತೊಂದೆಡೆ ಯಾವುದೇ ರೋಮಾಂಚಕಾರಿ ಸುದ್ದಿಯಾದರೂ ದಿನವಿಡೀ ಪ್ರಸಾರ ಮಾಡುವ ವಿದ್ಯುನ್ಮಾನ ಮಾಧ್ಯಮಗಳಿಗೆ ಭ್ರಷ್ಟಾಚಾರ ಹಗರಣ ಗಳೆಂದರೆ ಕಡಲೆಪುರಿ ಸಿಕ್ಕಿದಂತೆಯೇ ಸೈ. ಆದರೆ ನೀರ ರಾಡಿಯ ಪ್ರಕರಣದಲ್ಲಿ ಮಾತ್ರ ಮಾಧ್ಯಮಗಳ ಮಡಿವಂತಿಕೆ ಅತಿಯಾಗಿತ್ತು. ಸುದ್ದಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾದ ನಂತರವೇ ಭಾರತದ ಮುದ್ರಣ–ವಿದ್ಯುನ್ಮಾನ ಮಾಧ್ಯಮಗಳು ಈ ಸುದ್ದಿಯನ್ನು ಪ್ರಕಟಿಸಲು ತೊಡಗಿದ್ದು ನಿಜಕ್ಕೂ ಖೇದಕರ ವಿಚಾರ. ಉದ್ಯಮಿಗಳು, ಲಾಬಿಕೋರರು ಮತ್ತು ಪತ್ರಕರ್ತರ ನಡುವಿನ ಅನೈತಿಕ ಸಂಬಂಧಗಳನ್ನು ರಾಡಿಯ ಟೇಪುಗಳು ಬಹಿರಂಗಪಡಿಸಿರುವುದು ಜನಸಾಮಾನ್ಯರ ಕಣ್ಣು ತೆರೆಸುವುದಷ್ಟೇ ಅಲ್ಲದೆ, ಅಂತರ್ಜಾಲದ ಪ್ರಭಾವವನ್ನೂ ತೋರಿದೆ !

ಪ್ರಜ್ಞೆಯನ್ನೇ ಅಲ್ಲಾಡಿಸಿದ ಹಗರಣ

ಇಲ್ಲಿ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಕೆಲವು ದಿನಗಳ ಹಿಂದೆ ತಮ್ಮ ಭಾಷಣವೊಂದರಲ್ಲಿ ತಾವು 1990ರ ಅವಧಿಯಲ್ಲಿ ಏರ್‌ಲೈನ್ಸ್ ಪ್ರಾರಂಭಿಸಲು ಯೋಚಿಸಿದಾಗ ಕೇಂದ್ರ ಮಂತ್ರಿಗಳು ಲಂಚ ಕೇಳಿದ್ದರು, ಹಾಗಾಗಿ ತಾವು ಮುಂದುವರೆಯಲಿಲ್ಲ ಎಂದು ಮಾತನಾಡಿದ ಸಾಧ್ವಿ ಟಾಟಾ, ಈಗ ರಾಡಿಯ ಟೇಪುಗಳು ಬಹಿರಂಗವಾದ ಕೂಡಲೇ ವಿಚಲಿತರಾಗಿ ತಮ್ಮ ಖಾಸಗಿ ವಿಷಯ ಸಾರ್ವಜನಿಕವಾಗಿದ್ದನ್ನು ಪ್ರತಿಭಟಿಸಿ ನ್ಯಾಯಾಲಯದ

ರಾಡಿಯಾ ನಿರ್ಮಿಸಿದ ಅಖಾಡಾದಲ್ಲಿ ಹಾದು ಹೋಗಿರುವ ಸಾರ್ವಜನಿಕ ವ್ಯಕ್ತಿಗಳ ಪಟ್ಟಿ ಹನುಮನ ಬಾಲಕ್ಕಿಂತಲೂ ಉದ್ದ. ರಾಜಕಾರಣಿಗಳಲ್ಲಿ ಎ. ರಾಜ. ಕನ್ನಿಮೋಳಿ, ಎನ್.ಕೆ. ಸಿಂಗ್, ಅಲ್ಲಾಡಿ ಅರುಣ, ಅಹ್ಮದ್ ಪಟೇಲ್, ಗುಲಾಂ ನಬಿ ಅಜಾದ್, ಕರುಣಾನಿಧಿ, ಅನಂತಕುಮಾರ್ ಮುಂತಾದವರಿದ್ದಾರೆ. ಉದ್ಯಮಪತಿಗಳ ಪೈಕಿ ರತನ್ ಟಾಟ, ಮುಖೇಶ್ ಅಂಬಾನಿ, ಅನಿಲ್ ಅಂಬಾನಿ, ಸುನಿಲ್ ಮಿತ್ತಲ್, ಯೂನಿಟೆಕ್ ಸಮೂಹ ಇತ್ಯಾದಿ.

ಮೆಟ್ಟಿಲೇರಿದ್ದಾರೆ. ಇಲ್ಲಿ ಟಾಟಾ ಅವರ ಪ್ರಾಮಾಣಿಕತೆ ಪ್ರಶ್ನಾರ್ಹವಾಗುತ್ತದೆ. ಮತ್ತೊಂದೆಡೆ 2008–09ರಲ್ಲಿ ಹರಾಜು ಮಾಡಲಾದ 2ಜಿ ತರಂಗಾಂತರದ ಲಾಭ ಪಡೆಯಲು ಮಂತ್ರಿಯ ಆಯ್ಕೆಯಲ್ಲೇ ಲಾಬಿ ನಡೆಸಿದ ಟಾಟಾ, ಮಿಟ್ಟಲ್ ಮತ್ತು ಮುಖೇಶ್ ಅಂಬಾನಿ ತಮ್ಮ ಪ್ರಯತ್ನದಲ್ಲಿ ಮಾಧ್ಯಮಗಳನ್ನೂ ಉಪಯೋಗಿಸಿ ಕೊಂಡಿರುವುದು ಇಡೀ ಕಾರ್ಪೋರೇಟ್ ವಲಯ ಮತ್ತು ಮಾಧ್ಯಮಗಳ ಪ್ರಾಮಾಣಿಕತೆಯನ್ನು ಪ್ರಶ್ನಾರ್ಹವಾಗಿಸುತ್ತದೆ. ಯಾರನ್ನು ನಂಬುವುದು ?

ರಾಡಿಯಾ ನಿರ್ಮಿಸಿದ ಅಖಾಡಾದಲ್ಲಿ ಹಾದು ಹೋಗಿರುವ ಸಾರ್ವಜನಿಕ ವ್ಯಕ್ತಿಗಳ ಪಟ್ಟಿ ಹನುಮನ ಬಾಲಕ್ಕಿಂತಲೂ ಉದ್ದ. ರಾಜಕಾರಣಿಗಳಲ್ಲಿ ಎ. ರಾಜ. ಕನ್ನಿಮೋಳಿ, ಎನ್.ಕೆ. ಸಿಂಗ್, ಅಲ್ಲಾಡಿ ಅರುಣ, ಅಹ್ಮದ್ ಪಟೇಲ್, ಗುಲಾಂ ನಬಿ ಅಜಾದ್, ಕರುಣಾನಿಧಿ, ಅನಂತ ಕುಮಾರ್ ಮುಂತಾದವರಿದ್ದಾರೆ. ಉದ್ಯಮಪತಿ ಗಳ ಪೈಕಿ ರತನ್ ಟಾಟ, ಮುಖೇಶ್ ಅಂಬಾನಿ, ಅನಿಲ್ ಅಂಬಾನಿ, ಸುನಿಲ್ ಮಿತ್ತಲ್, ಯೂನಿಟೆಕ್ ಸಮೂಹ ಇತ್ಯಾದಿ. ಪತ್ರಕರ್ತರ ಪೈಕಿ ಹಿಂದುಸ್ತಾನ್ ಟೈಮ್ಸ್‌ನ ವೀರ್ ಸಾಂಘ್ವಿ, ಬರ್ಖಾ ದತ್, ಪ್ರಭು ಚಾವ್ಲ, ರಾಜ್‌ದೀಪ್ ಸರ್ದೇಸಾಯಿ, ಪ್ರಣಯ್ ರಾಯ್ ಮುಂತಾದವರಿದ್ದಾರೆ. ಇದೊಂದು ರೀತಿ ನಿಜವಾದ ಜಾತ್ಯಾತೀತ, ಪಕ್ಷಾತೀತ, ತತ್ವಾತೀತ ಗುಂಪು. ಎಲ್ಲರೂ ಸಲ್ಲುವ ಅಖಾಡವನ್ನೇ ನಿರ್ಮಿಸಿದ್ದಾರಲ್ಲವೆ ನೀರಾ ಮೇಡಂ !

ನೀರಾ ರಾಡಿಯ ಟೇಪುಗಳು ಟಾಟಾ ಮತ್ತು ಅಂಬಾನಿಯವರನ್ನೂ ಸೇರಿದಂತೆ ದೇಶದ ಪ್ರಮುಖ ಉದ್ಯಮಪತಿಗಳ, ಮಾಧ್ಯಮಪತಿಗಳ ಮತ್ತು ಮುಖ್ಯವಾಗಿ ಮಠಾಧಿಪತಿಗಳ (ಪೇಜಾವರ) ಪ್ರಜ್ಞೆಯನ್ನೂ ಅಲ್ಲಾಡಿಸಿಬಿಟ್ಟಿದೆ. ಶತಮಾನದ ಇತಿಹಾಸ ಇರುವ ಟಾಟಾ ಸಮೂಹ ಪ್ರಪ್ರಥಮ ಬಾರಿಗೆ ತನ್ನ ಹೆಸರಿಗೆ ಕಳಂಕ ಮೆತ್ತಿರುವುದನ್ನು ಕಂಡು ಪ್ರಕ್ಷುಬ್ಧವಾಗಿದೆ. ರತನ್‌ಟಾಟಾ ತಮ್ಮ ಖಾಸಗಿ ವಿಷಯಗಳು ಸಾರ್ವಜನಿಕವಾಗಿ ಬಹಿರಂಗವಾಗಿರುವುದರ ವಿರುದ್ಧ ಈಗಾಗಲೇ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ರಾಡಿಯ ಟೇಪುಗಳು ಮೊಳಗುತ್ತಿರುವಂತೆ ಎಲ್ಲೆಡೆ ನಿರಾಕರಣ ದನಿಗಳು ಮೊಳಗುತ್ತಿವೆ. ಅಪರಾಧಿ ನಾನಲ್ಲ ಎನ್ನುವುದು ಸಾಮಾನ್ಯ ಮಂತ್ರವಾಗಿಬಿಟ್ಟಿದೆ. ತಾವು ಮಾಡಿದ ಅಪರಾಧವನ್ನು ಒಪ್ಪಿಕೊಳ್ಳುವ ಉನ್ನತ ಮನೋಭಾವವನ್ನು ನಾವು ಗಾಂಧೀಜಿಯವರೊಡನೆಯೇ ರಾಜಘಾಟದಲ್ಲಿ ಸಮಾಧಿ ಮಾಡಿಬಿಟ್ಟಿರುವುದನ್ನು ಜನ ಮರೆತಿಲ್ಲ. ಹಾಗಾಗಿ ಈ ಎಲ್ಲಾ ನಿರಾಕರಣಗಳೂ ಕೇವಲ ಢೋಂಗಿ ಎಂದು ಜನತೆಗೆ ಅರಿವಾಗಿದೆ.

ಮತ್ತೊಂದೆಡೆ ಆಳುವ ವರ್ಗಗಳು 2ಜಿ ಹಗರಣವನ್ನು ಹೇಗೆ ತನಿಖೆ ಮಾಡಬೇಕೆಂಬುದನ್ನು ಕುರಿತೇ ವಾಗ್ವಾದ ನಡೆಸುತ್ತಿವೆಯೇ ಹೊರತು ನಿಜವಾದ ಅಪರಾಧಿಗಳನ್ನು ಶಿಕ್ಷಿಸುವತ್ತ ಗಮನ ಹರಿಸುತ್ತಿಲ್ಲ. ಪ್ರಧಾನ ವಿರೋಧ ಪಕ್ಷವಾದ ಭಾಜಪ ಇಡೀ ಸಂಸತ್ ಅಧಿವೇಶನವನ್ನೇ ನುಂಗಿಹಾಕಿದೆ. 23 ದಿನಗಳ ಅಧಿವೇಶನವನ್ನು ನಡೆಸಲು ಬಿಡದೆ ಬೊಕ್ಕಸಕ್ಕೆ ಕೋಟ್ಯಾಂತರ ರೂಗಳ ನಷ್ಟ ಉಂಟುಮಾಡಿರುವ ವಿರೋಧ ಪಕ್ಷಗಳು ಸಾಧಿಸಿರುವುದಾದರೂ ಏನನ್ನು? ತನಿಖೆಗಳು ಯಾರು ನಡೆಸುತ್ತಾರೆ, ಹೇಗೆ ನಡೆಯುತ್ತವೆ ಎನ್ನುವುದಕ್ಕಿಂತಲೂ ಎಷ್ಟು ವಸ್ತು ನಿಷ್ಠವಾಗಿರುತ್ತವೆ, ಪಾರದರ್ಶಕವಾಗಿರುತ್ತವೆ ಎನ್ನುವುದು ಮುಖ್ಯವಾಗುವುದಲ್ಲವೇ? ಈ ನಿಟ್ಟಿನಲ್ಲಿ ಮಾಧ್ಯಮಗಳಾಗಲಿ, ರಾಜಕೀಯ ಪಕ್ಷಗಳಾಗಲಿ ಯೋಚಿಸುತ್ತಲೇ ಇಲ್ಲ. ಪರಿಣಾಮ ಅಪರಾಧಿಗಳು ಹೆಮ್ಮೆಯಿಂದ ತಲೆ ಎತ್ತಿ ತಿರುಗಾಡುತ್ತಿದ್ದಾರೆ. ಈಗ ಸರ್ವೋಚ್ಚ ನ್ಯಾಯಾಲಯವು 2001ರಿಂದಲೂ ತನಿಖೆ ನಡೆಸಲು ಆದೇಶಿಸಿರುವುದು ಎಲ್ಲ ರಾಜಕೀಯ ಪಕ್ಷಗಳಲ್ಲೂ ಸಂಚಲನ ಮೂಡಿಸಿದೆ.

ಇಷ್ಟೆಲ್ಲಾ ಆದ ನಂತರ ತಮ್ಮ ದಿವ್ಯ ಮೌನ ಮುರಿದಿರುವ ಮನಮೋಹನಸಿಂಗ್ ತಮ್ಮ ಮನಮೋಹಕ ಶೈಲಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಸಿಬಿಐಗೆ ಹೆಚ್ಚಿನ ಅಧಿಕಾರ ವಹಿಸಿ ಸರ್ಕಾರದ ಎಲ್ಲಾ ವ್ಯವಹಾರಗಳಲ್ಲೂ ಪಾರದರ್ಶಕತೆ ಕಾಪಾಡಿಕೊಳ್ಳಲು ಹೊಸದಾದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ನೇ ಜಾರಿಗೊಳಿಸಲು ನಿರ್ಧರಿಸಿದ್ದಾರೆ. ಪ್ರಶ್ನೆ ಇರುವುದು ತನಿಖೆ, ನ್ಯಾಯಾಂಗ ಸಮಿತಿಗಳಲ್ಲಿ ಅಲ್ಲ. ರಾಜಕೀಯ ಭ್ರಷ್ಟತೆಯನ್ನು ನಿವಾರಿಸದ ಹೊರತು ದೇಶದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸಲಾಗುವುದಿಲ್ಲ ಎಂಬ ಸತ್ಯವನ್ನು ಭಾರತೀಯ ಸಮಾಜ ಗ್ರಹಿಸುವವರೆಗೂ ರಾಡಿಯ–ರಾಜ–ಕಲ್ಮಾಡಿಗಳ ಸಂತತಿ ಹೆಚ್ಚುತ್ತಲೇ ಇರುತ್ತದೆ.

ಈ ಎಲ್ಲಾ ಪ್ರಕರಣಗಳಲ್ಲಿ ನಿರಾ ರಾಡಿಯ ಸೂತ್ರದ ಗೊಂಬೆ. ಆಕೆಯ ಕೆಲಸ ಲಾಬಿ ಮಾಡುವುದು. ಲಾಬಿ ಮಾಡುವ ನಿಟ್ಟಿನಲ್ಲಿ ಎಲ್ಲ ರೀತಿಯ ಪ್ರಭಾವಶಾಲಿಗಳನ್ನೂ ಬಳಸಿಕೊಳ್ಳುವುದು. ಪಾಪ, ರಾಡಿಯ ತನ್ನ ಕೆಲಸವನ್ನು ಶ್ರದ್ಧೆಯಿಂದಲೇ ಮಾಡಿದ್ದಾರೆ. ತನ್ನ ಮಾಲಿಕನ ಋಣ ತೀರಿಸಲು ಪ್ರಾಮಾಣಿಕವಾಗಿ ದುಡಿದಿದ್ದಾರೆ. ಇನ್ನು ಕಾರ್ಪೋರೇಟ್ ಉದ್ಯಮಿಗಳು, ಬದುಕುವುದೇ ಲಾಭಕ್ಕಾಗಿ. ದೇಶದ ಸಂಪತ್ತು ಇರುವುದೇ ಈ ಉದ್ಯಮಿಗಳ ಆಲಿಷಾನ್ ಬಂಗಲೆಗಳ ನಿರ್ಮಾಣಕ್ಕಾಗಿ. ಮುಖೇಶ್ ಅಂಬಾನಿಯವರ ಹೊಸ ಮನೆಯನ್ನು ನೋಡಿದರೆ ತಿಳಿಯುವುದಿಲ್ಲವೇ. ಲಾಭಕ್ಕಾಗಿ ದೇಶವನ್ನೇ ಮಾರಿಕೊಳ್ಳಲು ಸಿದ್ಧವಾಗಿರುವ ಉದ್ಯಮಿಗಳಿಂದ ನಿಷ್ಠೆ ಬಯಸಿದರೆ ಅವರ ನಿಷ್ಠೆ ಇರುವುದು ಬಂಡವಾಳಕ್ಕೆ ಮಾತ್ರ, ಅದರಿಂದ ಉದ್ಭವಿಸುವ ಲಾಭಕ್ಕೆ ಮಾತ್ರ. ಆದರೆ ನಿಜಕ್ಕೂ ಆಘಾತಕಾರಿಯಾದ ಸಂಗತಿ ಮಾಧ್ಯ ಮಪತಿಗಳ ಭ್ರಷ್ಟ ಮುಖವಾಡದ ಅನಾವರಣ. ಭಾರತದ ಪ್ರಜಾತಂತ್ರ ವ್ಯವಸ್ಥೆಯ ನಾಲ್ಕೂ ಸ್ತಂಭಗಳು ಶಿಥಿಲವಾಗುತ್ತಿರುವ ಈ ಸಂದರ್ಭದಲ್ಲಿ ಮೂಡಬಹುದಾದ ಒಂದೇ ಪ್ರಶ್ನೆ ದಾರಿ ಯಾವುದಯ್ಯಾ ಮುಂದಕೆ? □

ಟಿಬೇಟನ್ನರ ಹೋರಾಟಕ್ಕೆ ಕೊನೆ ಎಂದು?

ಯು.. ಎನ್ ಸಂಗನಾಳಮಠ

"ನನ್ನ ಅನುಭವದ ಪ್ರಕಾರ ಹೇಳುವದಾದರೆ, ಪ್ರತಿ ಸಂದರ್ಭದಲ್ಲಿ ನಾವು ಧನಾತ್ಮಕವಾ2ಗಿ ಆಲೋಚಿಸಬೇಕು. ಒಂದು ಕಷ್ಟ ಎದುರಾದಾಗ ಬದುಕು ಮುಗಿದೇ ಹೋಯಿತು ಎನ್ನುವ ನೇತ್ಯಾತ್ಮಕ ಭಾವನೆ ಬದಲು ಎದುರಿಸಬೇಕು. ಆಗ ನಮ್ಮ ಭಯ ಕಡಿಮೆ ಆಗುತ್ತದೆ. ನಾನು ಈ ಮಾರ್ಗವನ್ನು ಅನುಸರಿಸುತ್ತಿರುವೆ. ಪ್ರತಿಕ್ಷಣ ಶಾಂತಿ ಇಂದ ಇದ್ದು ಎದುರಿಸುತ್ತಿರುವೆ. 'ಸದಾ ನಗುತ್ತಿರು, ಎಂಥ ಸಂದರ್ಭದಲ್ಲಿಯೂ ಎದೆಗುಂದದಿರು ಒಳ್ಳೆಯತನಕ್ಕೆ ಜಯ ಎಂಬ ಮಾತಿನಲ್ಲಿ ನಂಬಿಕೆ ಇಡು' ಎಂಬ ಬೌದ್ಧಧರ್ಮದ ತತ್ವ ನನ್ನ ದಾರಿದೀಪ.

ಐವತ್ತು ವರ್ಷಕ್ಕೂ ಹೆಚ್ಚು ಕಾಲ ನನಗೆ ವಾಸಕ್ಕೆ ನನ್ನ ಮನೆಯಿಲ್ಲ, ನನ್ನ ದೇಶದೊಳಗೆ ಪ್ರವೇಶವಿಲ್ಲ, ಈ ಕೊರತೆ ಇದೆ ಎಂದು ನನಗೆ ಅನಿಸಿರುವದಿಲ್ಲ. ಜಗತ್ತಿನ ಎಲ್ಲ ಪ್ರಮುಖ ದೇಶಗಳ ಜನರ ಮನ ಮನೆಗಳಲ್ಲಿ ನನಗೆ ಮುಕ್ತ ಪ್ರವೇಶವಿದೆ. ಅಮೇರಿಕ, ಯುರೋಪ್, ಏಷ್ಯಾ ದೇಶಗಳಲ್ಲಿರುವ ಪ್ರಮುಖ ಧಾರ್ಮಿಕ ಮುಖಂಡರು, ನಾಯಕರು, ಉದ್ಯಮಿಗಳು ನನ್ನನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ. ವೇದಿಕೆಯನ್ನು ಹಂಚಿಕೊಳ್ಳಲು ಬಯಸುವವರು ನನ್ನ ಹೋರಾಟದ ಬದುಕಿನ ಬಗ್ಗೆ ಮೆಚ್ಚುಗೆ ಸೂಚಿಸುತ್ತಾರೆ, ಇಂಥ ಸಂದರ್ಭಗಳಲ್ಲಿ ನನ್ನನ್ನು ನಾನೇ ಸಮಾಧಾನ ಪಡಿಸಿಕೊಳ್ಳುತ್ತೇನೆ. ನನಗೆ ಹೀಗೆ ಬದುಕಬೇಕು, ಹೀಗೆ ಶಿಷ್ಟಾಚಾರ ಇರಬೇಕು ಇಂಥ ಕಡೆಗೆ ಅಡ್ಡಾಡಬೇಕು ಎಂಬ ನಿರ್ಬಂಧವಿಲ್ಲ. ಹೀಗಾಗಿ ಇಂಥ ಬದುಕಿನಲ್ಲಿ ನನಗೆ ಸ್ವಾರಸ್ಯ-ಸಂಭ್ರಮ ಇದೆ. ಈ ಭಾವನೆಗಳೊಂದಿಗೆ ಮನಸ್ಸು ಹಗುರ, ಶಾಂತ ಇರುತ್ತದೆ." ಈ ಮಾತುಗಳನ್ನು ಹೇಳಿದವರು ಜಗತ್ತಿನ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾದ ದಲಾಯಿಲಾಮ. ಚೀನಿ ಬಂಧನದಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದ 14ನೇ ದಲಾಯಿ ಲಾಮ ಭಾರತಕ್ಕೆ ಬಂದು 50 ವರ್ಷಗಳಾದವು.



ಟಿಬೇಟ್ ಮತ್ತು ಚೀನಾ

ಟಿಬೇಟ್ ಚಾರಿತ್ರಿಕವಾಗಿ ತನ್ನ ನೆಲ ಎಂದು ಹೇಳುವದು ಚೀನಾದ ವಾದ. ಆದರೆ ಶುದ್ಧ ಸುಳ್ಳು. 6ನೇ ಶತಮಾನದ ಸೊಂಗ ತ್ಸಾನ್ ಗ್ಯಾಂಪೋ ಟಿಬೇಟ್ ಸಾಮ್ರಾಜ್ಯ ಸ್ಥಾಪಿಸಿದ. ಬೌದ್ಧ ಧರ್ಮವನ್ನು ಸ್ಥಾಪಿಸಿದ. ಚೀನಾದ ಚಕ್ರವರ್ತಿ ಮಗಳನ್ನು ಮದುವೆ ಆಗಿದ್ದ. ಆದರೆ ಅವಳು ಜೋವೋ ಸಾಖ್ಯಮುನಿಯ ಪ್ರತಿಮೆ ತಂದದ್ದಕ್ಕಾಗಿ ಚೀನಾ ಟಿಬೇಟ್ ಯುದ್ಧ ಪ್ರಾರಂಭವಾಯಿತು. ಪದೇ ಪದೇ ಹಲವು ಕಾರಣಗಳಿಂದ ಯುದ್ಧಗಳು ನಡೆದವು. 9ನೇ ಶತಮಾನದಲ್ಲಿ ಟಿಬೇಟ್ ಬಲಿಷ್ಠವಾಗಿತ್ತು. ಆಗ ಚೀನಾ ಹಲವು ಭಾಗಗಳಾಗಿತ್ತು. 12ನೇ ಶತಮಾನದಲ್ಲಿ ಮಂಗೋಲಿಯನ್ ಸರದಾರರು ಟಿಬೇಟ್‌ನ್ನು ಆಕ್ರಮಿಸಿದರು. 1724ರಲ್ಲಿ ಚೀನಾದ ಕ್ವಿಂಗ್ ಸಾಮ್ರಾಜ್ಯ ಬಲಿಷ್ಠವಾಗಿ ಟಿಬೇಟ್‌ನ್ನು ವಶಪಡಿಸಿಕೊಂಡಿತು. 1788ರಲ್ಲಿ ನೇಪಾಳದ ದೊರೆ ಬಹಾದೂರ್ ಶಾ ಟಿಬೇಟಿನ ಕೆಲ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. 1791ರಲ್ಲಿ ಚೀನಾ ಚಕ್ರವರ್ತಿ ಮತ್ತೆ ಸೈನ್ಯ ಕಳಿಸಿ ಗೂರ್ಖಾರನ್ನು ಓಡಿಸಿದ.

ಇಲ್ಲಿಂದ ಚೀನಾ ಚಕ್ರವರ್ತಿ ದಲಾಯಿಲಾಮರ ನೇಮಕ ಆರಂಭಿಸಿದ. 1904ರಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿ ಫ್ರಾನ್ಸಿಸ್ ಟಿಬೇಟಿಗೆ ಹೋಗಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿಸಿದಾಗ ಚೀನಾ ವಿರೋಧಿಸಿ ಟಿಬೇಟಿನ ಮೇಲೆ ಆಕ್ರಮಣಕ್ಕೆ ಸಿದ್ಧವಾಯಿತು. ಆಗ 13ನೇ ದಲಾಯಿಲಾಮ ಮಂಗೋಲಿಯಾಕ್ಕೆ ಪಲಾಯನಗೈದ ಕೂಡಲೇ ಚೀನಾ ಟಿಬೇಟ್ ತನ್ನದೆಂದು ಸಾರಿತು. ಬ್ರಿಟಿಷ್ ಸೈನ್ಯದ ಮುಂದೆ ಚೀನಾದ ಆಟ ನಡೆಯದೇ ಸಂಧಾನವಾಗಿ ದಲಾಯಿಲಾಮ ಮರಳಿದರು. 1909ರಲ್ಲಿ ಚೀನಾ ಮತ್ತೆ ಸೈನ್ಯ ಕಳಿಸಿತು. ಪುನಃ ದಲಾಯಿಲಾಮ ಸಿಕ್ಕಿಂಗೆ ಪಲಾಯನ ಮಾಡಿದರು. 1911ರಲ್ಲಿ ಕ್ವಿಂಗ್ ಸಾಮ್ರಾಜ್ಯ ಕುಸಿದಾಗ ಲಾಮ ಪುನಃ ಮರಳಿದರು. ಚೀನಾದ ಮಂಚು ಸಾಮ್ರಾಜ್ಯ ಲಾಮಾರನ್ನು ಗೌರವಿಸಿತು. 1914ರಲ್ಲಿ ಸಿಮ್ಲಾದಲ್ಲಿ ಟಿಬೇಟ್, ಚೀನಾ, ಬ್ರಿಟನ್ ನಡುವೆ ತ್ರಿಕೂಟ ಒಪ್ಪಂದದ ಪ್ರಕಾರ ಎಳೆದ ಹೊಸ ಗಡಿ ರೇಖೆ ಮೆಕ್ ಮೋಹನ್ ಗೆರೆ. ಚೀನಾ ಈಗ ಒಪ್ಪಂದವನ್ನು ಅಲ್ಲಗಳೆಯುತ್ತದೆ. 1962ರಲ್ಲಿ ಈ ಗಡಿ ರೇಖೆಯ ಅಸಮಾಧಾನದಿಂದ ಚೀನಾ ಭಾರತದ ಮೇಲೆ ದಾಳಿ ಮಾಡಿತು.

ಚೀನಾ ಸರಕಾರ, ಮತ್ತು ದಲಾಯಿಲಾಮ ನಡುವೆ ಮಾತುಕತೆಗಳು ನಡೆಯುತ್ತಲೇ ಇವೆ. ನಮಗೆ ಸ್ವಾತಂತ್ರ್ಯ ಬೇಡ, ಸ್ವಾಧಿಕಾರ ಕೊಡಿ ಎನ್ನುತ್ತಾರೆ ದಲಾಯಿಲಾಮ. ಚೀನಾ ದಲಾಯಿಲಾಮರನ್ನು ಟಿಬೇಟಿನಲ್ಲಿ ದಂಗೆ ಎಬ್ಬಿಸಿ ಅಶಾಂತಿ ಮೂಡಿಸುತ್ತಿರುವ ವಿದೇಶಿ ಬೇಹುಗಾರ ಎಂದು ಆರೋಪಿಸುತ್ತದೆ. ಚೀನಾ ಟಿಬೇಟ್‌ಗೆ ಕೊಟ್ಟ ಹೆಸರು Tibet Autonomous Region, ಆದರೆ ಇಲ್ಲಿನ ಸರಕಾರದ ಉಚ್ಚ ಅಧಿಕಾರ ಚೀನಾದ್ದು. ಲಾಮಾಗಳು ಇದ್ದರೂ (ಟಿಬೇಟ್‌ನ ಧರ್ಮ[illegible]ರು) ನಿರ್ಧಾರ ತೆಗೆದುಕೊಳ್ಳುವವರು ಚೀನಿ ಅಧಿಕಾರಿಗಳು. ಟಿಬೇಟ್‌ನಲ್ಲಿ ಸ್ವದೇಶಿಯರನ್ನು ಹೊಡೆದೋಡಿಸಿ ಹಾನ್ ಬುಡಕಟ್ಟಿನ ಚೀನಿ ಜನರನ್ನು ನೆಲೆಯೂರಿಸಲಾಗುತ್ತಿದೆ. ಚೀನಾ ಸರಕಾರ ನಿಯಂತ್ರಣ ಕಾಯಿದೆ ಹೇರಲಾಗುತ್ತದೆ. 1959ರಲ್ಲಿದ್ದ 60ಲಕ್ಷ

ಟಿಬೇಟ್ ಚಾರಿತ್ರಿಕವಾಗಿ ತನ್ನ ನೆಲ ಎಂದು ಹೇಳುವದು ಚೀನಾದ ವಾದ. ಆದರೆ ಶುದ್ಧ ಸುಳ್ಳು. ೬ನೇ ಶತಮಾನದ ಸೊಂಗ ತ್ಸಾನ್ ಗ್ಯಾಂಪೋ ಟಿಬೇಟ್ ಸಾಮ್ರಾಜ್ಯ ಸ್ಥಾಪಿಸಿದ. ಬೌದ್ಧ ಧರ್ಮವನ್ನು ನೆಲೆಯ್ಯುಇಸಿದ. ಚೀನಾದ ಚಕ್ರವರ್ತಿ ಮಗಳನ್ನು ಮದುವೆ ಆಗಿದ್ದ. ಆದರೆ ಅವಳು ಜೋವೋ ಸಾಖ್ಯಮುನಿಯ ಪ್ರತಿಮೆ ತಂದದ್ದಕ್ಕಾಗಿ ಚೀನಾ ಟಿಬೇಟ್ ಯುದ್ಧ ಪ್ರಾರಂಭವಾಯಿತು. ಪದೇ ಪದೇ ಹಲವು ಕಾರಣಗಳಿಂದ ಯುದ್ಧಗಳು ನಡೆದವು. ೯ನೇ ಶತಮಾನದಲ್ಲಿ ಟಿಬೇಟ್ ಬಲಿಷ್ಠವಾಗಿತ್ತು. ಆಗ ಚೀನಾ ಹಲವು ಭಾಗಗಳಾಗಿತ್ತು. ೧೨ನೇ ಶತಮಾನದಲ್ಲಿ ಮಂಗೋಲಿಯನ್ ಸರದಾರರು ಟಿಬೇಟ್‌ನ್ನು ಆಕ್ರಮಿಸಿದರು. ೧೭೨೪ರಲ್ಲಿ ಚೀನಾದ ಕ್ವಿಂಗ್ ಸಾಮ್ರಾಜ್ಯ ಬಲಿಷ್ಠವಾಗಿ ಟಿಬೇಟ್‌ನ್ನು ವಶಪಡಿಸಿಕೊಂಡಿತು.

ಜನ ಸಂಖ್ಯೆ ಈಗ 40 ಲಕ್ಷಕ್ಕೆ ಇಳಿದಿದೆ. ಇದರಲ್ಲಿ ಅರ್ಧದಷ್ಟು ಮಾತ್ರ ಟಿಬೇಟಿಯನ್ನರು. ಇವರನ್ನೂ ಗುಲಾಮರಂತೆ ನಡೆಸಲಾಗುತ್ತದೆ. ಪೂರ್ವ ಟಿಬೇಟಿನ ಒಂದು ಸೀಸದ ಗಣಿಯಲ್ಲಿ 12,000 ಟಿಬೇಟಿಯನ್ ಕಾರ್ಮಿಕರು ಸೆರೆ ಯಾಳುಗಳಾಗಿ ಹತ್ಯೆಯಾದರು.

ಚೀನಿಯರ ಪೈಶಾಚಿಕ ಕೃತ್ಯವನ್ನು ತಡೆಗಟ್ಟಲು ದಲಾಯಿಲಾಮ ಹಲವಾರು ಪ್ರಯತ್ನಗಳನ್ನು ನಡೆಸಿದ್ದಾರೆ. 1959, 1961, 1965ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ಟಿಬೇಟಿನ ಜನರ ಮಾನವಹಕ್ಕು ಪ್ರತಿಪಾದನೆಗೆ ಒತ್ತಾಯಿಸಲಾಯಿತು. ಟಿಬೇಟಿಗೆ ಸ್ವಾಧಿಕಾರ, ಟಿಬೇಟಿನ ಜನರ ಚಿತ್ರಹಿಂಸೆ ಮತ್ತು ಎತ್ತಂಗಡಿಯ ಪ್ರಯತ್ನಗಳಿಗೆ ತಡೆ ಅವರ ಆಗ್ರಹವಾಗಿತ್ತು. ಆದರೆ ಚೀನಾ ಯಾರ ಒತ್ತಡಕ್ಕೂ ಸೊಪ್ಪು ಹಾಕಿಲ್ಲ.

ಟಿಬೇಟ್ ಮತ್ತು ಭಾರತ

ಭಾರತ ಟಿಬೇಟ್ ದೇಶಗಳ ನಡುವಿನ ಮಧುರ ಸಂಬಂಧ ಕ್ರಿಸ್ತಪೂರ್ವದಿಂದ ಇದೆ. ಈ ದೇಶ ಬುದ್ಧ, ಶಾಖ್ಯ ಮುನಿಯಿಂದ ಆಶೀರ್ವಾದ ಹೊಂದಿದೆ, ಮಾನಸ ಸರೋವರ ಅಲ್ಲಿದೆ. ಕೈಲಾಸ ಪರ್ವತ ಸಹ ಅಲ್ಲಿದೆ. ಸಿಂಧು, ಬ್ರಹ್ಮಪುತ್ರ, ಮುಂತಾದ ನಾಲ್ಕುನದಿಗಳ ಉಗಮಸ್ಥಾನ ಸಹ ಟಿಬೇಟ್. ಮಗಧ ರಾಜಕುಮಾರ ಕ್ರಿ.ಪೂ 150ರಲ್ಲಿ ನ್ಯಾ-ಟ್ರಿ-ಟ್ಸೆನೋ ಎಂಬ ಹೆಸರಿನಲ್ಲಿ ರಾಜ್ಯಭಾರ ಮಾಡಿ ರಾಜವಂಶ ಸ್ಥಾಪಿಸಿದ. ದೇವನಾಗರಿ ಲಿಪಿ ಸ್ಫೋರ್ತಿಯಿಂದ ಟಿಬೇಟಿಯನ್ ಲಿಪಿ ಸೃಷ್ಟಿಯಾಯಿತು. ಬ್ರಿಟಿಷರು ಈ ದೇಶ ಆಳುತ್ತಿದ್ದಾಗ ವ್ಯಾಪಾರ, ವಾಣಿಜ್ಯ, ಸೈನ್ಯ ಭದ್ರತೆ ಗಡಿ ಕಾವಲು ವಿಷಯಗಳ ಬಗ್ಗೆ 1913-14ರಲ್ಲಿ ಸಿಮ್ಲಾ ಒಪ್ಪಂದವಾಯಿತು. ಅಂಚೆ-ತಂತಿ ಸೇವೆ ಆರಂಭವಾಯಿತು. ಟಿಬೇಟ್ ರಾಜಧಾನಿ ಲ್ಹಾಸಾದಲ್ಲಿ ಭಾರತದ ದೂತವಾಸ ಆರಂಭವಾಯಿತು.

1956ರಲ್ಲಿ ಭಾರತದಲ್ಲಿ ನಡೆದ 2500 ವರ್ಷದ ಬುದ್ಧನ ಆಚರಣೆಗೆ ದಲೈಲಾಮ ಮತ್ತು ಅಸಂಖ್ಯಾತ ಭಿಕ್ಷುಗಳು ಬಂದಿದ್ದರು. ಚೀನಾ ಟಿಬೇಟ್‌ನ ಮೇಲೆ ಆಕ್ರಮಣ ಮಾಡಿದಾಗ 20,000ಕ್ಕಿಂತ ಹೆಚ್ಚು ಟಿಬೇಟಿಯನ್ನರು ಅಸುನಿಗಿದರು. ಸಾವಿರಾರು ಜನರು ಗಾಯ ಗೊಂಡು ನಿರಾಶ್ರಿತರಾದರು. ಆಗ ಅನಿವಾರ್ಯವಾಗಿ ದಲೈಲಾಮ ಮತ್ತು ಅನೇಕ ಅನುಯಾಯಿಗಳು 1959 ಮಾರ್ಚ್ 13ರಂದು ಭಾರತಕ್ಕೆ ಬಂದರು. ಆಗ ಪ್ರಧಾನಿ ಪಂಡಿತ ನೆಹರು ಅವರನ್ನು ಗೌರವದಿಂದ ಸ್ವಾಗತಿಸಿ, ನಿರಾಶ್ರಿತ ಶಿಬಿರಗಳನ್ನು ಏರ್ಪಾಡುಮಾಡಿ ಆಹಾರ, ಆರೋಗ್ಯ, ಶಿಕ್ಷಣ, ಆಶ್ರಯ, ಉದ್ಯೋಗ ಅದಕ್ಕಿಂತ ಮಿಗಿಲಾಗಿ ಟಿಬೇಟಿಯನ್ ಸಂಸ್ಕೃತಿ, ವಿಶಿಷ್ಟ ಜೀವನ ವಿಧಾನಗಳನ್ನು ಹಾಗೆ ಉಳಿಸಿಕೊಳ್ಳಲು ಎಲ್ಲ ಅನುಕೂಲತೆಗಳನ್ನ ಕಲ್ಪಿಸಿದರು. ಹಿಮಾಚಲ ಪ್ರದೇಶದ 'ಧರ್ಮಶಾಲ'ದಲ್ಲಿ Tibeti an Government in Exile ರಚಿಸಿ ಅವರ ಹಿತಾಸಕ್ತಿ ಕಾಪಾಡಲು ಹಾಗೂ ಟಿಬೇಟ್ ಶಾಂತಿಯುತವಾಗಿ ಹೋರಾಟ ಮಾಡಲು ಅವಕಾಶ ಕಲ್ಪಿಸಿದರು.

ಕರ್ನಾಟಕದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪನವರು ಕೊಳ್ಳೆಗಾಲ, ಹುಣಸೂರು ಬಯಲುಕುಪ್ಪೆ, ಮುಂಡಗೋಡಿನಲ್ಲಿ ಅವರಿಗೆ ಉಳುಮೆ ಮಾಡಲು, ತಮ್ಮ ಧರ್ಮ, ಜೀವನವಿಧಾನ, ಸಂಸ್ಕೃತಿ ಉಳಿಸಿಕೊಳ್ಳಲು ನಡೆಸಿಕೊಂಡು ಹೋಗಲು ಭೂಮಿಯನ್ನು ಕೊಟ್ಟರು. ಎಲ್ಲ ನಾಗರಿಕ ಸೌಲಭ್ಯ (Civil Settlement) ಕಲ್ಪಿಸಿದರು. ನಮ್ಮ ದೇಶದಲ್ಲಿ ಸುಮಾರು 1 ಲಕ್ಷ 'ಟಿಬೇಟಿಯನ್ನರು ಇದ್ದರೆ ನಮ್ಮ ರಾಜ್ಯದಲ್ಲಿ 25,000 ಜನರು ಇದ್ದಾರೆ. ಇದಲ್ಲದೆ ನೆಹರೂ ಅವರು 'Sikkim Research Institute oF Technology' ಮತ್ತು 'Central Institute oF Tibetian Studies' ಸ್ಥಾಪಿಸಿ ನಿರಂತರ ಸಹಾಯ ಧನವನ್ನು ಕೊಡಲು ಏರ್ಪಾಡು ಮಾಡಿದರು.

ಭಾರತ ಟಿಬೇಟ್ ದೇಶಗಳ ನಡುವಿನ ಮಧುರ ಸಂಬಂಧ ಕ್ರಿಸ್ತಪೂರ್ವದಿಂದ ಇದೆ. ಈ ದೇಶ ಬುದ್ಧ, ಶಾಖ್ಯ ಮುನಿಯಿಂದ ಆಶೀರ್ವಾದ ಹೊಂದಿದೆ, ಮಾನಸ ಸರೋವರ ಅಲ್ಲಿದೆ. ಕೈಲಾಸ ಪರ್ವತ ಸಹ ಅಲ್ಲಿದೆ. ಸಿಂಧು, ಬ್ರಹ್ಮಪುತ್ರ, ಮುಂತಾದ ನಾಲ್ಕು ನದಿಗಳ ಉಗಮಸ್ಥಾನ ಸಹ ಟಿಬೇಟ್. ಮಗಧ ರಾಜಕುಮಾರ ಕ್ರಿಪೂ 150 ರಲ್ಲಿ ನ್ಯಾ-ಟ್ರಿ-ಟ್ಸೆನೋ ಎಂಬ ಹೆಸರಿನಲ್ಲಿ ರಾಜ್ಯ ಭಾರಮಾಡಿ ರಾಜವಂಶ ಸ್ಥಾಪಿಸಿದ. ದೇವನಾಗರಿ ಲಿಪಿ ಸ್ಫೋರ್ತಿಯಿಂದ ಟಿಬೇಟಿಯನ್ ಲಿಪಿ ಸೃಷ್ಟಿಯಾಯಿತು. ಬ್ರಿಟಿಷರು ಈ ದೇಶ ಆಳುತ್ತಿದ್ದಾಗ ವ್ಯಾಪಾರ, ವಾಣಿಜ್ಯ, ಸೈನ್ಯ ಭದ್ರತೆ ಗಡಿ ಕಾವಲು ವಿಷಯಗಳ ಬಗ್ಗೆ 1913-14ರಲ್ಲಿ ಸಿಮ್ಲಾ ಒಪ್ಪಂದವಾಯಿತು. ಅಂಚೆ-ತಂತಿ ಸೇವೆ ಆರಂಭವಾಯಿತು. ಟಿಬೇಟ್ ರಾಜಧಾನಿ ಲ್ಹಾಸಾದಲ್ಲಿ ಭಾರತದ ದೂತವಾಸ ಆರಂಭವಾಯಿತು. 1956ರಲ್ಲಿ ಭಾರತದಲ್ಲಿ ನಡೆದ 2500 ವರ್ಷದ ಬುದ್ಧನ ಆಚರಣೆಗೆ ದಲೈಲಾಮ ಮತ್ತು ಅಸಂಖ್ಯಾತ ಭಿಕ್ಷುಗಳು ಬಂದಿದ್ದರು.

ಯಾರು ಈ ದಲಾಯಿಲಾಮಾ

ಟಿಬೇಟಿಯನ್ ಬೌದ್ಧರ ಗೆಲುಗ್ವಾ (ಗೆಲುಗ್) ಪಂಥದ ಧರ್ಮಗುರು ದಲಾಯಿಲಾಮಾ ದಲಾಯಿಲಾಮಾ ಟುಲ್ಕು ಎಂಬ ವಿಶೇಷ ಲಾಮಾ (ಧರ್ಮಗುರು)ಗಳ ಸರಣಿಗೆ ಸೇರಿದವರು. 17ನೇ ಶತಮಾನದಿಂದ ಟಿಬೇಟಿನ ರಾಜಧಾನಿ 'ಲ್ಹಾಸಾ'ದ ಆಡಳಿತ ಸೂತ್ರಗಳು ಗೆಲುಗ್ ಪಂಥದ ಕೈಯಲ್ಲಿತ್ತು. ಹೀಗಾಗಿ ದಲಾಯಿಲಾಮ ರಾಜಕೀಯ ನಾಯಕರೂ ಆಗಿದ್ದರು. ದಲಾಯಿಲಾಮರನ್ನು ಟಿಬೇಟಿಯನ್ನರು His Holiness Dalai Lama, ಗ್ಯಾಲ್ವರಿಪೊಂಚೆ (ಅಮೂಲ್ಯ ಸ್ವಾಮಿ), ಯಿಶಿನ್‌ನೋರ್ಬು (ಕಾಮಧೇನು ವಜ್ರ) ಎಂದು ಸಂಭೋಧಿಸುವರು. 'ದಲಾಯಿ' ಎಂದರೆ ಮಂಗೋಲಿಯನ್ ಭಾಷೆಯಲ್ಲಿ ಸಮುದ್ರ'ಲಾಮಾ' ಎಂದರೆ ಗುರು. ಅಂದರೆ ಜ್ಞಾನಸಾಗರ.

ಗೆಲುಗ್ ಪಂಥದ ಈ ಲಾಮ ಪರಂಪರೆ ಆರಂಭವಾದದ್ದು ಚೆಂಡುನ್ ದ್ರುಪ್ (1391-1474)ನಿಂದ. ಬಳಿಕ ಚೆಂಡುನ್ ಗ್ಯಾತ್ಸೋ (1475-1541) ಅವರ ಬಳಿಕ ಸೋನಮ್ ಗ್ಯಾತ್ಸೋ (1543-1588); 1578ರಲ್ಲಿ ಮಂಗೋಲ ದೊರೆ ಅಲ್ತಾನ್ ಖಾನ್ ಸೋನಮ್ ಗ್ಯಾತ್ಸೋರನ್ನು ಹಿಂದಿನ ಧರ್ಮಗುರುಗಳ ಪುನರ್ಜನ್ಮ ಎಂದು ಮನ್ನಿಸಿ ಅವರನ್ನು 'ದಲಾಯಿಲಾಮ' ಎಂದು ಕರೆದನು. ದಲಾಯಿ ಎಂಬುದು ಟಿಬೇಟಿಯನ್ ರೂಪ ಗ್ಯಾತ್ಸೋ. ಸೋನಮ್‌ಗ್ಯಾತ್ಸೋ ಮೂರನೇ ದಲಾಯಿ ಲಾಮಾ ಎಂದು ಕರೆಯಲ್ಪಟ್ಟರು. ಅಲ್ತಾನ್ ಖಾನ್‌ನ ಮೊಮ್ಮಗ ಯೋಂಟೆನ್ ಗ್ಯಾತ್ಸೋ 4ನೇ ದಲೈಲಾಮ (1589-1616),

5ನೇ ದಲೈಲಾಮ ಲೋಬ್‌ಸಾಂಗ್ ಗ್ಯಾತ್ಸೋ (1617-1682) ಟಿಬೇಟಿನ ಏಕೀಕರಣ ಮಾಡಿದರು. 6ನೇ ಮತ್ತು 7ನೇ ದಲೈಲಾಮ ಸಾಂಗ್‌ಯಾಂಗ್ ಮತ್ತು ಕೇಲ್ಸಾಂಗ್ ಗ್ಯಾತ್ಸೋ ಇವರು ಕ್ರಮವಾಗಿ 1683-1706, 1708-1757ರವರೆಗೆ ಇದ್ದರು. ಈ ಅವಧಿಯಲ್ಲಿ ಟಿಬೇಟ್ ಮಂಗೋಲಿಯಾದ ಕೈತಪ್ಪಿ ಚೀನಿಯರ ವಶವಾಯಿತು.

8ನೇ ದಲೈಲಾಮ ಚಂಫಲ್ ಗ್ಯಾತ್ಸೋ (1758-1804)

9ನೇ ದಲೈಲಾಮ ಉಂಗಟೋಕ್ ಗ್ಯಾತ್ಸೋ(1806-1815)

10ನೇ ದಲೈಲಾಮ ತ್ಸುಲ್ತ್ರಿಮ್ ಗ್ಯಾತ್ಸೋ (1816-1837)

11ನೇ ದಲೈಲಾಮ ಖೆಂಡ್ರುಪ್ ಗ್ಯಾತ್ಸೋ (1838-1856)

12ನೇ ದಲೈಲಾಮ ತ್ರಿನ್‌ಲೇ ಗ್ಯಾತ್ಸೋ (1857-1875) ಇವರೆಲ್ಲರ ಸಾಧನೆ ಏನೂ ಇಲ್ಲ. ಅಕಾರಣ ಮೃತ್ಯುಗಳಿಗೂ ಒಳಗಾಗಿದ್ದುಂಟು.

13ನೇ ದಲೈಲಾಮ ಥುಬ್ರೆನ್ ಗ್ಯಾತ್ಸೋ (1876-1933) ಎರಡು ಸಲ ದೇಶಬಿಟ್ಟು ಪಲಾಯನ ಮಾಡಿದ್ದರು. ಆದರೂ ಆಡಳಿತದಲ್ಲಿ ಅನೇಕ ಬದಲಾವಣೆ ಮಾಡಿದರು. ಕಾನೂನು ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿ ಭ್ರಷ್ಟಾಚಾರ ಅಡಗಿಸಿದರು. ವಿದ್ಯುತ್, ಫೋನು, ಕಾರುಗಳ ಸೌಲಭ್ಯಗಳನ್ನು ಆರಂಭಿಸಿದರು. ಟಿಬೇಟಿನ ಆಧುನಿಕರಣಕ್ಕೆ ಕ್ರಮ ತೆಗೆದು ಕೊಂಡರು. ತನ್ನ ಜನರು ತಮ್ಮ ನೆಲದಲ್ಲಿ ಗುಲಾಮರಾಗುವ ಸ್ಥಿತಿ ಬರಲಿದೆ ಎಂಬ ಭವಿಷ್ಯವಾಣಿ ಹೇಳಿ ತಿರಿ ಕೊಂಡರು.

ಟಿಬೇಟಿಯನ್ ಧರ್ಮ ಪರಂಪರೆಯ ಪ್ರಕಾರ ದಲಾಯಿಲಾಮ ತೀರಿಕೊಂಡ ಬಳಿಕ ಅವರ ಪುನರ್ಜನ್ಮ ಹುಡುಕುವ ಕಾರ್ಯ (ಯಾಂಗಸೀ) ಆರಂಭವಾಗುವದು. ಈ ಕಾರ್ಯ ಟಿಬೇಟಿನಲ್ಲಿ ಆಗಬೇಕು. ಇವರು 'ಸೆಂಚುಂಗ್' ಎಂಬ ಆಶ್ರಮದ ಗುರುವಿನ ಬಳಿ 'ಕಣಿ' ಕೇಳುತ್ತಾರೆ. ಹೀಗಾಗಿ 14ನೇ ಈಗಿನ ದಲೈಲಾಮರನ್ನು ಗುರುತಿಸಲು ನಾಲ್ಕು ವರ್ಷ ಬೇಕಾಯಿತು. ಆಯ್ಕೆಯೂ ಆಕಸ್ಮಿಕ. ಆತ 2ವರ್ಷದ ಪೋರ. ಹೆಸರು ಲ್ಹಾವೋ ಥೋಂಡ್ರುಬ್. ಎಳವೆಯಿಂದ ಮೌನಿ. ಕಣ್ಣುಗಳಲ್ಲಿ ಏನೋ ಆಕರ್ಷಣೆ. ವಿಶಾಲ ಹಣೆ ಒಂದು ದಿನ ಮನೆ ಅಂಗಳದಲ್ಲಿ ಕುಳಿತು ಆಟವಾಡುತ್ತಿದ್ದರೂ ಗಮನ ಬೇರೆಡೆ ಇದ್ದಿತು. ತನ್ನನ್ನ ಯಾರೋ ಭೇಟಿ ಮಾಡುತ್ತಾರೆ ಎಂಬ ತವಕ ಅವನ ಕಣ್ಣುಗಳಲ್ಲಿತ್ತು. ಮನೆಯ ಹತ್ತಿರವಿದ್ದ ಗುಡ್ಡದ ದಾರಿಯನ್ನೇ ನೋಡುತ್ತಿದ್ದ.

ಕಿತ್ತಳೆ ಬಣ್ಣದ ಉಡುಪು ಧರಿಸಿದವರು ಬಂದೇ ಬಿಟ್ಟರು. ಮನೆ ಪತ್ತೆ ಹಚ್ಚಿ ಅರಸುತ್ತ ಇದ್ದ ಹುಡುಗ ಇವನೇ ಎಂದು ಖಾತ್ರಿ ಮಾಡಿಕೊಂಡು ಈ ಹುಡುಗನ ಬಳಿ ಬಂದು ಮೊಣಕಾಲೂರಿ ಕುಳಿತು 'ನಮ್ಮ ದಲಾಯಿ ಲಾಮಾ ಇವನೇ' ಎಂದು ನಿರ್ಧರಿಸಿದರು. ಇವರೇ

ಉನ್ನತ ಲಾಮಾಗಳು ಮಧ್ಯ ಟಿಬೇಟ್‌ನಲ್ಲಿರುವ ಲ್ಹಾಮೋ ಲಾತ್ಸೋ ಎಂಬ ಕೆರೆಯ ದಡದಲ್ಲಿ ಧ್ಯಾನದಲ್ಲಿ ಕುಳಿತು ಕೆರೆಯ ದೇವತೆ ಪಾಲ್ಡೆನ್ ಲ್ಹಾಮೋ ಮಾರ್ಗದರ್ಶನ ಕೇಳುತ್ತಾರೆ. ಅವರಿಗೆ ನಿರ್ದೇಶನ ಬಂದ ಜಾಗಕ್ಕೆ ಅಥವಾ ಸ್ವಪ್ನದಲ್ಲಿ ಸಿಕ್ಕ ವಿವರದೊಂದಿಗೆ 'ದಲಾಯಿಲಾಮಾ' ನನ್ನು ಹುಡುಕುತ್ತಾರೆ. ಹಾಗೆ ಸಿಕ್ಕ ಈ ಬಾಲಕ ಲ್ಹಾವೋ ದೋಂಡ್ರುಬ್. ಮುಂದೆ ಬಾಲಕನಿಗೆ ಪರೀಕ್ಷೆಗಳನ್ನು ಒಡ್ಡುತ್ತಾರೆ. ಮುಖ್ಯ ಪರೀಕ್ಷೆ; ಬಾಲಕನಿಗೆ ಹಲವಾರು ವಸ್ತುಗಳನ್ನು ಕೊಡುತ್ತಾರೆ. ಅದರಲ್ಲಿ ಹಿಂದಿನ ದಲಾಯಿಲಾಮಾರ ವಸ್ತು ಆಯ್ಕೆ ಮಾಡಿದರೆ ಪುನರ್ಜನ್ಮ ಖಾತ್ರಿಯಾದಂತೆ. ಮುಂದೆ ಡ್ರೆಪುಂಗ್ ಆಶ್ರಮಕ್ಕೆ ಒಯ್ದು ಬೌದ್ಧ ಸೂತ್ರಗಳ ದೀಕ್ಷೆ ಕೊಡುತ್ತಾರೆ.

ಲ್ಹಾವೋ ದೋಂಡ್ರುಬ್ ಜನಿಸಿದ್ದು ಜುಲೈ 6-1935. ಆಮ್ಡೋ ಪ್ರಾಂತ್ಯದ ತಾಕ್‌ಸ್ತರ ಗ್ರಾಮದಲ್ಲಿ ದಿವಂಗತ 13ನೇ ದಲಾಯಿಲಾಮರ ಶವದ ಮುಖ ಅಗ್ನೇಯ ದಿಕ್ಕಿಗೆ ತಿರುಗಿತ್ತು. ಲಾಮಾ ರೆತಿಂಗ ರಿಂಪೊಂಚೆ ಪವಿತ್ರ ಕೆರೆ ಮುಂದೆ ಧ್ಯಾನ ಮಾಡುವಾಗ ಮುಂದಿನ ಲಾಮಾ ಆಮ್ಡೋದಲ್ಲಿ ಜನಿಸಿದ್ದಾರೆ ಎಂಬ ಸಂಕೇತದೊಂದಿಗೆ ವಿಶಿಷ್ಟ ಹಸಿರು ಬಣ್ಣದ ಹೆಂಚುಗಳ ಮಾಳಿಗೆ ಮನೆ ಕಾಣಿಸಿತು. ಈ ಸಂಕೇತವನ್ನು ಹಿಡಿದು ಹೋದಾಗ ಸಿಕ್ಕಿದ್ದು ದೋಂಡ್ರುಬ್ ಮನೆ. ಅವರು ಹುಡುಗನ ಮುಂದೆ ಹಲವು ಅಟಿಕೆಗಳನ್ನು ಧಾರ್ಮಿಕ ವಸ್ತುಗಳನ್ನು ಹಾಕಿದಾಗ ಎರಡು ವರ್ಷದ ಹುಡುಗ 'ಇದು ನನ್ನದು' ಎನ್ನುತ್ತ ಕೆಲ ವಸ್ತುಗಳನ್ನು ಆಯ್ದು ತೆಗೆದ ಅವೆಲ್ಲ ದಲಾಯಿಲಾಮರ ವಸ್ತುಗಳು ಆಗಿದ್ದವು. ನಾಲ್ಕು ವರ್ಷಗಳ ನಂತರ 14ನೇ ದಲಾಯಿಲಾಮಾ ಸಿಕ್ಕು ಸ್ವೀಕರಿಸಿದರು.

ಹುಡುಗನಿಗೆ ಜೆತ್ಸುನ್ ಜಾಂಫೆಲ್ ಗಾವಾಂಗ್ ಪೋಬ್ ಸಾಂಗ್ ಯೆಶೆ ತೆನಜಿನ್ ಗ್ಯಾತ್ಸೋ (ಪವಿತ್ರ ಒಡೆಯ, ಕೋಮಲ, ಕೀರ್ತಿ, ದಯಾವಂತ, ಧರ್ಮ ರಕ್ಷಕ, ಜ್ಞಾನಸಾಗರ) ಎಂಬ ಹೆಸರಿನಿಂದ ಕರೆದರು. ಲ್ಹಾಸಾಗೆ ಕರೆದೊಯ್ದು 4 ವರ್ಷದ ಎಳೆಯ ಬಾಲಕನನ್ನು 22.02. 1940 ರಂದು ಗದ್ದುಗೆಗೆ ಏರಿಸಿದರು.

1949ರಲ್ಲಿ ಮಾವೋ ಕಮ್ಯುನಿಸ್ಟರು ಚೀನಾದಲ್ಲಿ ಅಧಿಕಾರ ವಹಿಸಿದಾಗ ಟಿಬೇಟ್ ಚೀನಾದ ಭಾಗವಾಗಬೇಕು ಮತ್ತು ಟಿಬೇಟ್ ತನ್ನ ಸೈನ್ಯದ ಬದಲು ಚೀನಾದ ಸೈನ್ಯ ಇಟ್ಟುಕೊಳ್ಳಬೇಕು ಎಂಬ ಕಡ್ಡಾಯ ವಿಧಿಸಿದಾಗ, ಟಿಬೇಟ್ ಪಾರ್ಲಿಮೆಂಟ್ ಚೀನಾದ ಪ್ರಜೆಗಳನ್ನು ಟಿಬೇಟ್‌ನಿಂದ ಹೊರಹಾಕಿತು. 15 ವರ್ಷದ ತೆನಜಿನ್ ಗ್ಯಾತ್ಸೋರನ್ನು ಟಿಬೇಟಿನ ನಾಯಕ ಎಂದು ಘೋಷಿಸಲಾಯಿತು. ಚೀನಾ ದಾಳಿ ಮಾಡಿತು. 16 ವರ್ಷದ ದಲಾಯಿಲಾಮ ತಮ್ಮನ್ನು ಕಾಪಾಡುವಂತೆ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು. ವ್ಯರ್ಥವಾಯಿತು. 1951ರಲ್ಲಿ ಟಿಬೇಟ್ ಸರಕಾರ ಬೀಜಿಂಗ್‌ಗೆ ಸಮಿತಿ ಕಳಿಹಿಸಿದಾಗ, ಸಮಿತಿ ಸದಸ್ಯರನ್ನು ಸೆರೆಹಾಕಿ, ಬಲವಂತದಿಂದ ಟಿಬೇಟ್ ಚೀನಾಕ್ಕೆ ಸೇರಿದೆ ಎಂದು ಸಹಿ ಹಾಕಿಸಿದರು. ನಂತರ ಲ್ಹಾಸಾವನ್ನು ವಶಮಾಡಿ ಪೂರ್ಣ ಟಿಬೇಟ್‌ನ್ನು ಕಬಳಿಸಿತು. ಇದೇ ವಾದ ಇನ್ನೂ ನಡೆದಿದೆ. 1954ರಲ್ಲಿ ದಲಾಯಿಲಾಮ ಬೀಜಿಂಗ್ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಾಗ ಉಪಾಧ್ಯಕ್ಷರನ್ನಾಗಿ ಆರಿಸಿದರು.

1959ರಲ್ಲಿ ದಲಾಯಿಲಾಮ ತತ್ವಜ್ಞಾನ ಪದವಿ ಹೊಂದಿದರು. ಮಾರ್ಚ್ 1959ರಲ್ಲಿ ಟಿಬೇಟ್‌ನಲ್ಲಿ ಸ್ವಾತಂತ್ರ್ಯ ಹೋರಾಟ ಆರಂಭವಾಯಿತು. ಚೀನಾ ಉಗ್ರವಾಗಿ ಹತ್ತಿಕ್ಕಿತು. ಈ ಸಂದರ್ಭದಲ್ಲಿ ದಲಾಯಿಲಾಮರನ್ನು ಕೊಲ್ಲಿಸುವ ಸಂಚು ಬಯಲಾಯಿತು. ಆಗ ದಲಾಯಿಲಾಮ ತಮ್ಮ ಸಂಗಡಿಗರೊಂದಿಗೆ ಲ್ಹಾಸಾದಿಂದ ಪಾರಾಗಿ 1959 ಮಾರ್ಚ್17ರಂದು ಭಾರತ ತಲುಪಿ ಆಶ್ರಯ ಪಡೆದರು. ಆಗ ಅವರಿಗೆ 24 ವರ್ಷ, ಹಿಮಾಚಲ ಪ್ರದೇಶದ ಕಾಂಗ್ರಾ ಜಿಲ್ಲೆಯಲ್ಲಿರುವ ಹಿಮಾಚ್ಛಾದಿತ ಪರ್ವತ ಧಾಮ 'ಧರ್ಮಶಾಲಾ'ದಲ್ಲಿ ಪುಟ್ಟ ಟಿಬೇಟ್ ಸ್ಥಾಪಿಸಲು ನೆಹರೂ ಅನುಮತಿಸಿದರು. ಇದು (Central Tibetian Administration) CTA ಎಂದು ಕರೆಯಲ್ಪಟ್ಟಿದೆ. ದಲಾಯಿಲಾಮರ ಹಿಂದೆ ಬಂದ ಲಕ್ಷಾಂತರ ಅನುಯಾಯಿಗಳಲ್ಲಿ ದುರ್ಗಮ ಪರ್ವತಗಳ ದಾರಿಯಾಗಿ ನೇಪಾಳ ದಾಟಿ ಜೀವಂತವಾಗಿ ಬಂದವರು 80 ಸಾವಿರ ಮಾತ್ರ, ದಲಾಯಿಲಾಮ ಅಮೇರಿಕದ ಬೇಹುಗಾರಿಕೆ ಇಲಾಖೆಯ ಸೈನಿಕ ದಳದ ಸಹಾಯದಿಂದ ಭಾರತಕ್ಕೆ ಬಂದರು.

14ನೇ ದಲಾಯಿಲಾಮಾ ಸರಕಾರದ ಮುಖ್ಯ ಕಛೇರಿಯನ್ನು ಪುಟ್ಟ ಲ್ಹಾಸಾ ಎನ್ನುತ್ತಾರೆ. 1970ರಲ್ಲಿ ದಲಾಯಿಲಾಮ 'Library of Tibetian Works and Archieves 'ಎಂಬ ಗ್ರಂಥಾಲಯ ಆರಂಭಿಸಿದರು. ಇಲ್ಲಿ 8000ಕ್ಕೂ ಹೆಚ್ಚು ಹಸ್ತಪ್ರತಿ, ಕಲಾಕೃತಿ, ಟಿಬೇಟಿಯನ್ ಚರಿತ್ರೆಯ ಅಪೂರ್ವ ದಾಖಲೆಗಳಿವೆ. ಈಗ ಪುಟ್ಟ ಲ್ಹಾಸಾ ಪುಟ್ಟ ಟಿಬೇಟ್ ಆಗಿದೆ. ದಲಾಯಿಲಾಮರ ನಿವಾಸವೂ ಇಲ್ಲಿದೆ. ಇಲ್ಲಿನ ಬೌದ್ಧ ಆಶ್ರಮಗಲ್ಲಿ ಸನ್ಯಾಸಿಗಳು ಧರ್ಮಭ್ಯಾಸ ಮಾಡುತ್ತಾರೆ. ಬೌದ್ಧ ವ್ಯಾಸಂಗದ ಡಾಕ್ಟರೇಟ್ ಹೊಂದಿ ಕೆಲವರು 'ರಿಂಪೋಚೆ'(ಮಹಾಗುರು)ಆಗುತ್ತಾರೆ.

ಭಾರತದಲ್ಲಿ ನೆಲಸಿರುವ ಸುಮಾರು ಒಂದೂವರೆ ಲಕ್ಷ ಟಿಬೇಟಿಯನ್ನರಲ್ಲಿ ಶೇ 80ರಷ್ಟು ಭಾರತೀಯ ಪ್ರಜೆಗಳಾಗಿಲ್ಲ. ಇನ್ನು ತಮ್ಮ ತಾಯ್ನಾಡಿಗೆ ಹೋಗುವ ಆಶೆ ಇಟ್ಟುಕೊಂಡಿದ್ದಾರೆ. ಇಲ್ಲಿಯ ಟಿಬೇಟಿಯನ್ನರು ಬೌದ್ಧ ಧರ್ಮದ ನಿಷ್ಠಾವಂತ ಅನುಯಾಯಿಗಳಾಗಿ ಕುಶಲಕರ್ಮಿಗಳಾಗಿ ಬದುಕುತ್ತಿದ್ದಾರೆ. ಉಣ್ಣೆಯ ಸ್ವೆಟರುಗಳನ್ನು ಶಾಲುಗಳನ್ನು ಹೆಣೆದು ಬೀದಿ ಬೀದಿಗಳಲ್ಲಿ ಮಾರುತ್ತಾರೆ. ರಗ್ಗುಗಳನ್ನು ಕರಕುಶಲ ವಸ್ತುಗಳನ್ನೂ ಮಾರಾಟ ಮಾಡುತ್ತಾರೆ ಈ ನಿರಾಶ್ರಿತ ಜನರು ತಮ್ಮದೇ ಆದ ಬ್ಯಾಂಕ್, ಶಾಲೆ, ಸಹಕಾರ ಸಂಘಗಳನ್ನು ಸ್ಥಾಪಿಸಿದ್ದಾರೆ. ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಉಳಿಸಿಕೊಳ್ಳಲು ಪಗೋಡಗಳನ್ನು, ಚಿಂತನ ನಡೆಸಲು ಧಾರ್ಮಿಕ ಶಾಲೆ, ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ, ತಮ್ಮ ಮಾತೃ ಭಾಷೆ ಜೊತೆಗೆ ಇಂಗ್ಲಿಷ್, ಹಿಂದಿ ಕಲಿತಿದ್ದಾರೆ. ತ್ರಿಪಿಟಕವನ್ನು, ಧರ್ಮಶಾಸ್ತ್ರ ಗ್ರಂಥಗಳನ್ನು ಇಂಗ್ಲಿಷ್ ಹಿಂದಿ ಭಾಷೆಗಳಿಗೆ ಅನುವಾದಿಸಿದ್ದಾರೆ. 2009 ಮಾರ್ಚ್ 31ರಂದು ಟಿಬೇಟಿಯನ್ನರು ಭಾರತಕ್ಕೆ ಬಂದು 50 ವರ್ಷಗಳಾದ ಪ್ರಯುಕ್ತ ನವದೆಹಲಿಯಲ್ಲಿ, ಬೆಂಗಳೂರಿನಲ್ಲಿ ನಿರಾಶ್ರಿತರ ಕ್ಯಾಂಪುಗಳಲ್ಲಿ 'Thanks India Day' ಎಂದು ಕೃತಜ್ಞತಾ ದಿನಾಚರಣೆ ಆಚರಿಸಿದರು.

ದಲೈಲಾಮ 'ಟಿಬೇಟಿಗೆ ಸ್ವಾತಂತ್ರ್ಯ ಕೊಡಿ' ಎಂದು ಕೇಳುತ್ತಿಲ್ಲ. ತಮ್ಮ ರೀತಿ-ನೀತಿ ಆಹಾರ, ವಿಹಾರ, ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಸಾಧನೆ, ಆರ್ಥಿಕ ಉನ್ನತಿ ಸಾಧಿಸಲು ಚೈನಾ ದೇಶದ ಸಾರ್ವಭೌಮತ್ವದಲ್ಲಿ 'ಸ್ವಾಯತ್ತತೆ' ಬೇಡುತ್ತಿದ್ದಾರೆ. ಸೈನ್ಯ, ವಿದೇಶಾಂಗ ನೀತಿ, ಕರೆನ್ಸಿ ನಿಮ್ಮದೇ ಇರಲಿ ಎನ್ನುತ್ತಿದ್ದಾರೆ. ಭಿನ್ನಾಭಿಪ್ರಾಯಗಳನ್ನು ಮಾತುಕತೆ ಮೂಲಕ ಪರಿಹರಿಸೋಣ ಎನ್ನುತ್ತಾರೆ.

ದಲಾಯಿಲಾಮ ಭಾರತಕ್ಕೆ ಬಂದು 51 ವರ್ಷಗಳಾದವು. ಟಿಬೇಟಿಗೆ ಸ್ವಾತಂತ್ರ್ಯ ದೂರದ ವಿಷಯ. ಸ್ವಾಯತ್ತತೆ ಸಹ ವಿಫಲ. ಚೀನಿ ಸರಕಾರದ ಕಪಿಮುಷ್ಟಿ ಇನ್ನೂ ಭದ್ರವಾಗಿದೆ. ಈಗ ಮುಂದಿನ ದಲಾಯಿಲಾಮ ಯಾರು ಎನ್ನುವ ಪ್ರಶ್ನೆ ಎದುರಾಗಿದೆ. 14ನೇ ದಲಾಯಿಲಾಮಾರಿಗೆ ಹೋರಾಟವೇ ಬದುಕು ಆಗಿದೆ. ಗೆಲುಗ್ವಾ ಸಂಪ್ರದಾಯದಲ್ಲಿ ದಲಾಯಿಲಾಮಾ ಬಳಿಕ ಇನ್ನೊಬ್ಬ ಗುರು ಪಾಂಚೇನ್‌ಲಾಮ ಇವರೂ ಪುನರ್ಜನ್ಮ ಸ್ಮರಣೆಗೆ ಸೇರಿದವರು. ಪಾರಿಚೆನ್ ಎಂದರೆ ಪಂಡಿತ 10ನೇಯ ಪಾಂಚೇನ್ ಲಾಮಾ ಚೋಕಿ ಗ್ಯಾಲ್‌ಸೇನ್ ಚೀನಿ ಸರಕಾರವನ್ನು

ಪರಿಸ್ಥಿತಿ ಆಧರಿಸಿ ಪ್ರತಿಕ್ರಿಯಿಸಬೇಕು...

ಒಬ್ಬ ಪತ್ರಕರ್ತ ದಲಾಯಿಲಾಮರನ್ನು ಹೀಗೆ ಪ್ರಶ್ನಿಸಿದರು. "ಒಬ್ಬ ವ್ಯಕ್ತಿಯನ್ನು ಯಾರಾದರೂ ಶೋಷಣೆ ಮಾಡುತ್ತಿದ್ದರೆ ಅಥವಾ ಬಲಿಪಶು ಮಾಡಿದರೆ ಅದಕ್ಕೆ ಅಹಿಂಸೆಯಿಂದ ಉತ್ತರಿಸಬೇಕೋ ಅಥವಾ ಅದರ ವಿರುದ್ಧ ಹೋರಾಡಬೇಕೆ?" ದಲಾಯಿಲಾಮ ಉತ್ತರಿಸಿದರು "ಅದು ಆ ನಿರ್ದಿಷ್ಟ ಪರಿಸ್ಥಿತಿಯನ್ನು ಅಧರಿಸುತ್ತದೆ. ಒಮ್ಮೆ ಒಂದು ಹಡಗಿನಲ್ಲಿ 500 ವ್ಯಾಪಾರಿಗಳು ಇದ್ದರು. ಅವರ ನಾಯಕ ಬುದ್ಧನ ಅವತಾರವಾಗಿದ್ದ. ಅವರಲ್ಲೊಬ್ಬ ವ್ಯಾಪಾರಿ ಉಳಿದ 499 ವ್ಯಾಪಾರಿಗಳನ್ನು ಕೊಂದು ಅವರೆಲ್ಲರ ಸಂಪತ್ತನ್ನು ಮತ್ತು ಹಡಗನ್ನು ತನ್ನ ವಶ ಮಾಡಿಕೊಳ್ಳಬೇಕೆಂದು ಇಚ್ಛಿಸಿದ. ಆ ವ್ಯಾಪಾರಿಯಲ್ಲಿದ್ದ ದುಷ್ಟತನ ಅತನ ದುಷ್ಟ ಯೋಚನೆಗಳಿಗಾಗಿ ಪ್ರಚೋದಿಸಿದಾಗ ಬುದ್ಧನೇ ಅವನನ್ನು ಕೊಂದು ಹಾಕಿದ. ಬುದ್ಧ ಈ ಕೊಲೆ ಮಾಡಿದ್ದು, ವ್ಯಾಪಾರಿಯಲ್ಲಿದ್ದ ದುಷ್ಟತನ ಆತನಿಂದ ಕೆಟ್ಟ ಕರ್ಮ ಮಾಡಿಸುವದನ್ನು ತಡೆಯುವದಕ್ಕಾಗಿ ಇಲ್ಲಿ ಉದ್ದೇಶ ಅಹಿಂಸಾತ್ಮಕವಾಗಿತ್ತು. ಆಂದರೆ ಈ ಕೃತ್ಯ ಸಮರ್ಥನೀಯವಾದದ್ದು ತಂದೆ-ತಾಯಿಗಳು ಮಕ್ಕಳ ಒಳಿತಿಗಾಗಿ ಅವರಿಗೆ ಬಯ್ಯುವದು, ಹೊಡೆಯುವುದು ಮಾಡುತ್ತಾರಲ್ಲವೇ ಹಾಗೆ ಇನ್ನೊಂದೆಡೆ ಬಹಳ ಚೆನ್ನಾಗಿ ಮಾತಾಡುತ್ತಲೇ ಒಳಗೊಳಗೆ ಘೋರ ಮೋಸ ಮಾಡಿಬಿಡುವ ಜನರೂ ಇದ್ದಾರೆ. ಅವರ ಕ್ರಿಯೆ ಅಹಿಂಸಾತ್ಮಕವಾಗಿರುತ್ತೆ ಉದ್ದೇಶ ಹಿಂಸಾತ್ಮಕವಾಗಿರುತ್ತದೆ. ಹಾಗಾಗಿ ಕರ್ಮವೂ ಹಿಂಸಾತ್ಮಕವಾಗಿರುತ್ತೇ. ಇದು ಬೌದ್ಧ ದೃಷ್ಟಿಕೋನ.

ಪಶ್ಚಿಮದಲ್ಲಿ ದಲೈಲಾಮಾ ಜನಪ್ರಿಯತೆ ಹೆಚ್ಚಲು ಕಾರಣ ಅವರು ನೇರವಾಗಿ ತಮ್ಮ ಹೃದಯದಿಂದ ಸಂಭಾಷಿಸಬಲ್ಲರು. ಹೃದಯಪೂರ್ವಕವಾದ ಅವರ ಶಬ್ದಗಳು ಪಶ್ಚಿಮ ದೇಶದಲ್ಲಿ ಅದ್ಯಾತ್ಮಿಕ ದಾರಿದ್ರದಲ್ಲಿರುವ ಜನರನ್ನು ಸಾಂತ್ವನಗೊಳಿಸುತ್ತವೆ. ಅವರು ಜನಸಾಮಾನ್ಯರ ಭಾಷೆಯಲ್ಲಿ ಮಾತನಾಡುತ್ತಾರೆ. ಅವರ ಬೋಧನೆಗಳು ಕರ್ಮಠ ಧಾರ್ಮಿಕ ಅದೇಶಗಳಾಗಿರುವದಿಲ್ಲ, ಆ ದಿಶೆಯಲ್ಲಿ ಅವರು ಎಲ್ಲರನ್ನೂ ಒಳಗಾಗುತ್ತಾರೆ. ಆದರೆ ಅವರು ಉನ್ನತ ಮಟ್ಟದ ಧಾರ್ಮಿಕ ಪಂಡಿತರನ್ನು ಉದ್ದೇಶಿಸಿ ಮಾತನಾಡುವಾಗ ಬೌದ್ಧ ಧರ್ಮದ ಬೋಧನೆಗಳ ಬಗ್ಗೆ ಆಳವಾದ ಜ್ಞಾನದ ಪ್ರಬುದ್ಧತೆ ಪ್ರದರ್ಶಿಸುತ್ತಾರೆ.

ಬೆಂಬಲಿಸಿದವರು. ಆದರೂ ಚೀನಿ ಸರಕಾರ ಇವರನ್ನೂ ಸಂಶಯದಿಂದ ನೋಡಿತು.

ಮಾವೋ ನಿಧನಾನಂತರ 1977ರಲ್ಲಿ ಚೀನಿ ಸರಕಾರ ಸೆರೆಯಿಂದ ಬಿಡುಗಡೆ ಮಾಡಿ ಇವರನ್ನು ಗೃಹ ಬಂಧನದಲ್ಲಿರಿಸಿತು. 1979ರಲ್ಲಿ ಚೀನಿ ಹಾಂಗ್ ಪಂಗಡದ ಮಹಿಳೆಯನ್ನು ಮದುವೆಯಾದರು. ಟಿಬೇಟಿಯನ್ನರು ಅಕ್ರೋಶರಾದರು. 1989ರಲ್ಲಿ ಟಿಬೇಟ್ ಸಂಸ್ಕೃತಿಯನ್ನು ಚೀನಿ ಸಂಸ್ಕೃತಿ ಹಾಳು ಮಾಡುತ್ತದೆ ಎಂಬ ಹೇಳಿಕೆ ನೀಡಿದ ಮರುದಿನ ಸಂಶಯಾಸ್ಪದ ಸಾವಿಗೆ ಈಡಾದರು. ಮೇ 14. 1995ರಲ್ಲಿ ದಲೈಲಾಮಾ ಜಿದುನ್ ಚೋಕ್ಕಿ ನೀಮ್ಮಾ ಎಂಬ ಹುಡುಗನನ್ನು ಪಾಂಚೇನ್ ಲಾಮಾರ 11ನೇ ಅವತಾರ ಎಂದು ಘೋಷಿಸಿದರು. ಚೀನಿ ಸರಕಾರ ಗ್ಯಾನಶಾನ್ ನೋರ್ಬು ಎಂಬ ಹುಡುಗನನ್ನು 11ನೇ ಪಾಂಚೇನ್ ಲಾಮಾ ಎಂದು ಘೋಷಿಸಿತು. ಮತ್ತು ಚೋಕ್ಕಿ ನೀಮ್ಮಾನನ್ನು ಮತ್ತು ಅವನ ಕುಟುಂಬವನ್ನು ಅಪಹರಿಸಿ ರಕ್ಷಣೆಯ ಬಂಧನದಲ್ಲಿರಿಸಿದೆ. ಟಿಬೇಟಿಯನ್ನರು ಚೋಕಿ ನೀಮ್ಸ್‌ನ ಬಿಡುಗಡೆಗೆ ಒತ್ತಾಯಿಸುತ್ತಿದ್ದಾರೆ. ಅಮೇರಿಕ ಸಹ ಒತ್ತಡ ತರುತ್ತಿದೆ. ಚೀನಾ ಬಗ್ಗುತ್ತಿಲ್ಲ. ದಲಾಯಿಲಾಮ ತೀರಿದರೆ ಪುನರ್ಜನ್ಮದಲ್ಲಿ ಯಾರೆಂದು ನಿರ್ಧರಿಸುವ ಹಕ್ಕು ಪಾಂಚೇನ್ ಲಾಮಾರದ್ದು. ತಮ್ಮ ವ್ಯಕ್ತಿಯೇ ದಲಾಯಿಲಾಮ ಆಗಬೇಕೆಂದು ಚೀನಿಯರು ಮಾಡಿದ ತಂತ್ರ ಇದು. ಚೀನಿ ಪಾಂಚೇನ್ ಲಾಮಾ ಚೀನಾದಲ್ಲಿ, ಟಿಬೇಟಿಯನ್ ಪಾಂಚೇನ್ ಲಾಮ ಸಹ ಚೀನಾದ ಗೃಹಬಂಧನದಲ್ಲಿ.

ಈಗಿನ 14ನೇ ದಲಾಯಿಲಾಮ ತುಂಬಾ ಹತಾಶರಾಗಿದ್ದಾರೆ. ನಿರಾಶಾವಾದಿಗಳಾಗಿದ್ದಾರೆ. 'ನಾನೇ ಕೊನೆಯ ದಲಾಯಿಲಾಮಾ ಅಗಲಿದ್ದೇನೆ ಎಂದು ಅನಿಸುತ್ತಿದೆ.' ಎಂದಿದ್ದಾರೆ. ಚೀನಿಯರ ಕುತಂತ್ರ ತಡೆಯಲು ತನ್ನ ಮುಂದಿನ ಪುನರ್ಜನ್ಮ ಟಿಬೇಟ್ ಹೊರಗೆ ನಡೆಯಲಿದೆ ಎಂದು 2008ರಲ್ಲಿ ಸಾರಿದ್ದರು. ಮುಂದಿನ ದಲಾಯಿಲಾಮ ಒಬ್ಬ ಮಹಿಳೆ ಅಗಬಹುದು ಎಂದಿದ್ದರು.

ಕೆಲವು ಟಿಬೇಟಿಯನ್ನರಿಗೆ ಶಾಂತಿಮಾರ್ಗ ಬೇಕಾಗಿಲ್ಲ. ಹೀಗಾಗಿ ಟಿಬೇಟಿಯನ್ ತರುಣ ಕಾಂಗ್ರೆಸ್ ಉಪಾಧ್ಯಕ್ಷರಾದ ಧೋಂಡುಪ್ ದೋರ್ಜಿಯ ಮೇಲೆ ಅತಿ ವಿಶ್ವಾಸ. ಲಾಮಾರ ಶಾಂತಿ ಮಾರ್ಗಕ್ಕಿಂತ ಈಗ ಉಗ್ರ ಮಾರ್ಗ ಅವಶ್ಯ ಎನ್ನುತ್ತಾರೆ. ಚೀನಿ ಸರಕಾರದ ಮನಃ ಪರಿವರ್ತನೆ ಆಗಬೇಕು. ಇದು ಸಾಧ್ಯವಾಗದ ಮಾತು. ಬಲಿಷ್ಠ ಪಾಶ್ಚಾತ್ಯ ದೇಶಗಳು ಚೀನಾದ ಮೇಲೆ ಆಕ್ರಮಣ ಮಾಡಬೇಕು. ಆದರೆ ಅಮೇರಿಕಾವನ್ನು ಮಿರಿಸುತ್ತಿರುವ ಚೀನಾ ದೇಶವನ್ನು ಎದುರು ಹಾಕಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುವದು. ತೃತಿಯ ಜಗತ್ತು ಮೌನ ವಾಗಿರಬಾರದು. ಒತ್ತಡ ತರಬೇಕು. ಶಾಂತಿ ಪ್ರಿಯರಿಗೆ ಅನ್ಯಾಯ ದಬ್ಬಾಳಿಕೆ ಶೋಷಣೆ ಆಗಬಾರದು.

ಪ್ರಸಿದ್ಧ ಲೇಖಕ ಮಂಗಳೂರ ವಿಜಯ ಅವರು ಅರ್ಧ ಶತಮಾನದ ಆರ್ತ ಮೊರೆ 'ಟಿಬೇಟ್' ಪುಸ್ತಕದಲ್ಲಿ (540 ಪುಟಗಳು) "ಸಾಮ್ರಾಜ್ಯಶಾಹಿಯನ್ನು ಬಂಡವಾಳಶಾಹಿ-ಕಮ್ಯುನಿಸ್ಟ್ ಎಂದು ವ್ಯತ್ಯಾಸ ಮಾಡಿ ನೋಡಲಾಗದು ಬಂಡವಾಳಶಾಹಿ ಅಮೇರಿಕದ ಹುನ್ನಾರಗಳನ್ನು ಹಿಮ್ಮೆಟ್ಟಿಸಿದಷ್ಟು ತೀವ್ರವಾಗಿ ಕಮ್ಯುನಿಸ್ಟ್ ರಷ್ಯಾ, ಚೀನಾ ಸಾಮ್ರಾಜ್ಯಶಾಹಿಯ ಹುನ್ನಾರಗಳನ್ನೂ ಹಿಮ್ಮೆಟ್ಟಿಸಬೇಕು" ಎಂದಿದ್ದಾರೆ ಲೇಖಕರು.

ದಶಕಗಳಿಂದ ಸ್ವಾತಂತ್ರ್ಯಕ್ಕಾಗಿ ದನಿ ಎತ್ತಿರುವ

ಟಿಬೇಟಿಯನ್ನರಿಗೆ ಶಾಂತಿಮಾರ್ಗ ಬೇಕಾಗಿಲ್ಲ. ಹೀಗಾಗಿ ಟಿಬೇಟಿಯನ್ ತರುಣ ಕಾಂಗ್ರೆಸ್ ಉಪಾಧ್ಯಕ್ಷರಾದ ಧೋಂಡುಪ್ ದೋರ್ಜಿಯ ಮೇಲೆ ಅತಿ ವಿಶ್ವಾಸ. ಲಾಮಾರ ಶಾಂತಿ ಮಾರ್ಗಕ್ಕಿಂತ ಈಗ ಉಗ್ರ ಮಾರ್ಗ ಅವಶ್ಯ ಎನ್ನುತ್ತಾರೆ. ಚೀನಿ ಸರಕಾರದ ಮನಃ ಪರಿವರ್ತನೆ ಆಗ ಬೇಕು. ಇದು ಸಾಧ್ಯವಾಗದ ಮಾತು. ಬಲಿಷ್ಠ ಪಾಶ್ಚಾತ್ಯ ದೇಶಗಳು ಚೀನಾದ ಮೇಲೆ ಆಕ್ರಮಣ ಮಾಡಬೇಕು. ಆದರೆ ಅಮೇರಿಕಾವನ್ನು ಮಿರಿಸುತ್ತಿರುವ ಚೀನಾ ದೇಶವನ್ನು ಎದುರು ಹಾಕಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುವದು. ತೃತಿಯ ಜಗತ್ತು ಮೌನ ವಾಗಿರಬಾರದು.

ಟಿಬೇಟಿಯನ್ನರು ನಿರಾಶೆ ಹತಾಶೆಗಳಿಂದಾಗಿ ಹಿಂಸೆಯ ಹಾದಿ ಹಿಡಿಯಲು ಮುಂದಾದರೆ? ಎನ್ನುವ ಪ್ರಶ್ನೆಗೆ ದಲಾಯಿಲಾಮಾರ ಉತ್ತರ 'ಹಿಂಸೆಯ ಹಾದಿ ಹಿಡಿಯುವದು ಸಹಜವಾಗಿರಬಹುದು ಅದರೆ ಲೇಶ ಮಾತ್ರವೂ ಸಮರ್ಥನೀಯವಲ್ಲವಲ್ಲ ಎಂದು ಮರು ಪ್ರಶ್ನೆ ಹಾಕಿದರು.'

ನ್ಯೂಸ್‌ವೀಕ್ ಪತ್ರಕರ್ತರೊಬ್ಬರು ಮೂವರು ಯುವ ಟಿಬೇಟಿಯನ್ನರನ್ನು ಸಂದರ್ಶಿಸಿ, ನಿಮ್ಮ ಮುಂದಿನ ಸಮಸ್ಸೆ ಯಾವದು? ಎಂದಾಗ 'ದಲಾಯಿಲಾಮ ಟಿಬೇಟಿನಲ್ಲಿರದಿರುವದು; ಅವರು ಹಿಂದಿರುಗುವ ಬಗ್ಗೆ ಖಾತ್ರಿ ಇಲ್ಲದಿರುವದು; ಅವರಿಲ್ಲದೇ ನಮಗೆ ಬಿಡುಗಡೆ ಇಲ್ಲ ಎಂಬ ನಂಬಿಕೆ ಟಿಬೇಟನ್ನರಲ್ಲಿರುವದು ಎಂದುತ್ತರಿಸಿದರು.

23 ಅಧ್ಯಾಯಗಳಿರುವ ಈ ಪುಸ್ತಕದಲ್ಲಿ ಮತ್ತೆ ಮೂರು ಅನುಬಂಧಗಳಿವೆ ಮೊದಲ ಅನುಬಂಧದಲ್ಲಿ ಲೋಹಿಯಾ, ಜೆ.ಪಿ, ದಲಾಯಿಲಾಮಾರ 22 ಬರೆಹಗಳಿವೆ. ಎರಡನೇ ಅನುಬಂಧದಲ್ಲಿ. ಚೀನಾದ ದೌರ್ಜನ್ಯದ 8 ಅನುಭವ ಕಥನ, ಮೂರನೇ ಅನುಬಂಧದಲ್ಲಿ ಟಿಬೆಟ್ ಸ್ಥಿತಿ–ಗತಿ ಬಗ್ಗೆ ಗಣ್ಯರ, ಪತ್ರಿಕೆಗಳ ರಾಷ್ಟ್ರಪ್ರಮುಖರ ನಿಲುವುಗಳಿವೆ. ಜೊತೆಗೆ ಯು.ಆರ್ ಅನಂತಮೂರ್ತಿ ಯವರ ಮುನ್ನುಡಿ, ನಿರಂಜನರ 'ಹಿಮಾಲಯದ ದಳ್ಳುರಿ' 1962 ರಲ್ಲಿ ಬರೆದ ಪುಸ್ತಕದ ಆಯ್ದಭಾಗ ಸಹ ಒಳ ಗೊಂಡಿರುತ್ತದೆ. ಮಂಗಳೂರ ವಿಜಯರವರ ಈ ಪುಸ್ತಕ ಟಿಬೇಟಿನ ರಾಜಕೀಯ ಆಯಾಮವನ್ನು ಸುತ್ತುವರಿದಿದೆ.

ಇತ್ತೀಚೆಗೆ ದಲಾಯಿಲಾಮಾರ ಆತ್ಮಕತೆ 'My Sipiritual Autobiography' ಪ್ರಕಟವಾಗಿದೆ. ದಲಾಯಿಲಾಮ ಉಳಿದ ನಾಯಕರಿಗಿಂತ ಧಾರ್ಮಿಕ ಮುಖಂಡರಿಗಿಂತ ಭಿನ್ನ. ಇವರು ಆಡದೇ ಮಾಡಿ ತೋರಿಸುತ್ತಾರೆ. ಅವರದು ಯಾವಾಗಲೂ ನಗುಮುಖ. ನೋವನ್ನು ನುಂಗಿ ನಗುನಗುತ್ತ ಬದುಕುವ ಜೀವಿ. ಬಾಲ್ಯದಿಂದಲೂ ಕಷ್ಟಗಳನ್ನು ಎದುರಿಸಿ ಧೈರ್ಯಗುಂದದೇ ನಕಾರಾತ್ಮಕ ಯೋಚನೆಗಳಿಗೆ ಅವಕಾಶ ಕೊಡದೇ ನಿರಂತರ ನಗೆಗಾರನಾಗಿರು ವುದೇ ಅವರ ವೈಶಿಷ್ಟ್ಯ. ಅವರಿಗೆ ಒಳ್ಳೆಯ ಹಾಸ್ಯ ಪ್ರವೃತ್ತಿ ಇದೆ. ಟಿಬೇಟಿಯನ್‌ರ ಹೋರಾಟಕ್ಕೆ ಕೊನೆ ಎಂದು ಎಂಬ ಪ್ರಶ್ನೆ ಮತ್ತೆ ಮತ್ತೆ ಕಾಡುತ್ತದೆ.

(ಆಧಾರಗಳಿಂದ) □

ಅಯ್ಯಪ್ಪ ದರ್ಶನದ ದುರಂತ:

(15ನೇ ಪುಟದಿಂದ)

ಮಕರಜ್ಯೋತಿಯೆಂದು ತಪ್ಪು ತಿಳಿದಿದ್ದಾರೆಂದೂ ಹೇಳಿಕೆ ಇತ್ತರು. ಇದರಲ್ಲಿರುವ ಕುತಂತ್ರ ನೋಡಿ. 2008ರ ತನಕ ಸರ್ಕಾರಕ್ಕೂ, ಈ ಮುಖ್ಯ ತಂತ್ರಿಗೂ ಜನ ತಪ್ಪುತಿಳವಳಿಕೆಯಿಂದ ತಮ್ಮ ಜೀವನವನ್ನೇ ಪಣಕ್ಕೊಡ್ಡುತ್ತಿದ್ದಾರೆಂದು ಗೊತ್ತಿತ್ತು. ಆದರೂ ಅವರು ಅದರ ಬಗ್ಗೆ ಜನರಿಗೆ ನಿಜವೇನೆಂಬುದರ ಬಗ್ಗೆ ತಿಳವಳಿಕೆ ನೀಡಲು ಮುಂದಾಗಲಿಲ್ಲ. ಏಕೆ? ಕಾರಣ ಸ್ಪಷ್ಟ. ನಿಜಾಂಶ ಗೊತ್ತಾದರೆ ಭಕ್ತರಸಂಖ್ಯೆ ಕಡಿಮೆಯಾಗುತ್ತದೆ. ಅದು ದೇವಸ್ಥಾನದ ಮತ್ತು ಸರ್ಕಾರದ ಆದಾಯ ಕಡಿಮೆ ಮಾಡುತ್ತದೆ.

ಇದು ವಾಸ್ತವವಾಗಿ ಅಯ್ಯಪ್ಪ ಭಕ್ತರ ಸಾವಿಗೆ ನಿಜವಾದ ಕಾರಣ. ಎಲ್ಲಿಯತನಕ ಸರ್ಕಾರ ಜನರಲ್ಲಿ ಹುಚ್ಚೆಬ್ಬಿಸುವ ಈ ಮಕರಜ್ಯೋತಿಯ ಪವಾಡದ ನಿಜಾಂಶವನ್ನು ಬಿಚ್ಚಿಡುವುದಿಲ್ಲವೋ ಈ ಸಮೂಹ ಸನ್ನಿಯೂ ಕಡಿಮೆಯಾಗುವುದಿಲ್ಲ. ಈ ಸನ್ನಿಯನ್ನು ಜ್ಯೋತಿ, ವ್ರತ ಇತ್ಯಾದಿಗಳ ಹೆಸರಿನಲ್ಲಿ ಸರ್ಕಾರ ಹಾಗೂ ದೇವಸ್ಥಾನ ಮತ್ತು ಇಲ್ಲಿನ ಆರ್ಥಿಕತೆಯ ಫಲಾನುಭವಿಗಳೆಲ್ಲರೂ ಹೆಚ್ಚಿಸುತ್ತಿದ್ದಾರೆ. ಈ ಪಟ್ಟಭದ್ರರ ಕೂಟವೇ ಅಮಾಯಕ ಅಯ್ಯಪ್ಪ ಭಕ್ತರ ಸಾವಿಗೆ ನೇರ ಕಾರಣರು. ದುರಂತವೆಂದರೆ ವೈಜ್ಞಾನಿಕ ಸಮಾಜ ವಾದವನ್ನು ಎಂದೋ ಕೈಬಿಟ್ಟಿರುವ ಕೇರಳದ ಕಮ್ಯುನಿಸ್ಟ್ ಸರ್ಕಾರ ವೈಜ್ಞಾನಿಕ ಮಾಹಿತಿಯನ್ನೂ ಜನರಿಗೆ ನೀಡಲು ನಿರಾಕರಿಸುತ್ತಿದೆ.

ಜ್ಯೋತಿ ದರ್ಶನದ ಸುಳ್ಳೇ ಜನರ ಸಾವಿಗೆ ಪ್ರಧಾನ ಕಾರಣ. ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಸಲಹೆ ಮಾಡಿರುವ ಮೆನನ್ ಸಮಿತಿಯ ಸಲಹೆಗಳೊಂದಿಗೆ ಸರ್ಕಾರ ಈ ಪವಾಡದ ನಿಜಾಂಶವನ್ನು ಜನರಿಗೆ ಹೇಳದಿದ್ದರೆ ಮುಂದಾಗಲಿರುವ ಅವಘಡವನ್ನು ತಡೆಯಲು ಸಾಧ್ಯವೇ ಇಲ್ಲ. ಈ ನಿಜಾಂಶವನ್ನು ಜನರ ಧಾರ್ಮಿಕ ಶ್ರದ್ಧೆಗೆ ಅಡ್ಡಿ ಮಾಡದೆ ಅವಹೇಳನ ಮಾಡದೇ ಜನರಿಗೆ ತಿಳಿಹೇಳಲು ಸಾಧ್ಯ. ಕಳೆದ ಒಂದು ದಶಕದಿಂದ ಕೇರಳದ ಪ್ರಗತಿಪರ ಸಂಘಟನೆಗಳು ಈ ಜ್ಯೋತಿ ಪವಾಡದ ಸುಳ್ಳನ್ನು ಬಯಲುಗೊಳಿಸಿ ಮಕರವಿಳಕ್ಕು ಸಂದರ್ಭದಲ್ಲಿ ಲಕ್ಷಾಂತರ ಕರಪತ್ರ ಮುದ್ರಿಸಿ ಅಯ್ಯಪ್ಪ ಭಕ್ತರಿಗೆ ಹಂಚುತ್ತಿದ್ದಾರೆ.

ಈ ಅವಘಡ ಸಂಭವಿಸಿದ ಮೇಲೆ ಮಕರವಿಳಕ್ಕುವಿನ ಪವಾಡವನ್ನು ಸರ್ಕಾರ ಸುಳ್ಳೆಂದು ಅಧಿಕೃತವಾಗಿ ಘೋಷಿಸಿ ಪ್ರಚಾರ ಮಾಡಬೇಕೆಂದು ಆಗ್ರಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೆಲವರು ನ್ಯಾಯಾಲಯದ ಮೆಟ್ಟಿಲನ್ನು ಹತ್ತುತ್ತಿದ್ದಾರೆ. ಅವರ ಈ ಎಲ್ಲಾ ಪ್ರಯತ್ನಗಳಿಂದಾಗಿ ಏನಿಲ್ಲವೆಂದರೂ ಮಕರಜ್ಯೋತಿಯ ದರ್ಶನದ ಹುಚ್ಚು ಸನ್ನಿಯಲ್ಲಿ ಕೇರಳಿಗರ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದಲೇ ಈ ಬಾರಿ ಸತ್ತ 102 ಅಯ್ಯಪ್ಪ ಭಕ್ತರಲ್ಲಿ ಕೇರಳಿಗರು ಕಡಿಮೆಯಿರುವುದು ಕಾಕತಾಳಿಯ ವೇನಲ್ಲ.

ಇಂದು ಕರ್ನಾಟಕದ ವಿಚಾರವಾದಿಗಳು ಮತ್ತು ಮನುಷ್ಯಪ್ರೇಮಿ ದೈವಭಕ್ತರ ಮೇಲೂ ಇದೇ ಜವಾಬ್ದಾರಿ ಇದೆ. ಆರ್ಥಿಕ ಲಾಭಕ್ಕಾಗಿ ಕೆಲವು ಹಿತಾಸಕ್ತಿಗಳು ಜನರ ಭಕ್ತಿಯನ್ನು ದುರುಪಯೋಗ ಪಡಿಸಿಕೊಂಡು ಪ್ರಾಣಕ್ಕೆ ಎರವಾಗುವುದನ್ನು ತಡೆಯುವುದು ಮನುಷ್ಯರನ್ನು ಪ್ರೀತಿಸುವ ಮತ್ತು ದೇವರಲ್ಲಿ ನಂಬಿಕೆ ಇರುವ ಎಲ್ಲರ ಐಹಿಕ ಮತ್ತು ಪಾರಮಾರ್ಥಿಕ ಕರ್ತವ್ಯವಾಗಿದೆ. □

ಧರ್ಮ, ರಾಜಕಾರಣ ಮತ್ತು ಕಾರ್ಪೋರೇಟ್‌ಗಳ ಅಪವಿತ್ರ ಕೂಡಾವಳಿ

ಸುರೇಶ್ ಭಟ್

ಮಹಾಚತುರ ಹಾಗೂ ಕುಶಾಗ್ರಮತಿ ರಾಜಕಾರಣಿ ಯೆಡ್ಯೂರಪ್ಪ ರಾಜ್ಯದ ಪ್ರಪ್ರಥಮ ಬಿಜೆಪಿ ಸರಕಾರದಲ್ಲಿ ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮರುಕ್ಷಣದಲ್ಲಿ ಮಾಡಿದ ಕೆಲಸವೆಂದರೆ ಬೊಕ್ಕಸದಿಂದ ಕೋಟಿಗಟ್ಟಲೆ ದುಡ್ಡನ್ನು ಕೆಲವು ನಿರ್ದಿಷ್ಟ ಮಠಗಳಿಗೆ ಧಾರೆಯೆರೆದು ಕೊಟ್ಟದ್ದು. ಇದು ಅಕ್ಷರಶಃ "ನಮ್ಮನೆ ಅಕ್ಕಿ ಕೊಟ್ಟು ತಿಮ್ಮಪ್ಪನ ಪ್ರಸಾದ ಪಡೆದುಕೊಂಡರು" ಎಂಬ ಗಾದೆಯಂತಾಗಿದೆ. ಹೀಗಾಗಿ ಭ್ರಷ್ಟಾಚಾರದ ಆರೋಪಗಳು ಪುಂಖಾನುಪುಂಖವಾಗಿ ಮಾಧ್ಯಮಗಳ ಮೂಲಕ ಬಯಲಾಗುತ್ತಿದ್ದಂತೆ ಯೆಡ್ಯೂರಪ್ಪರ ಬೆಂಬಲಕ್ಕೆ ಧಾವಿಸಿದ ಅದೇ ಮಠಾಧಿಪತಿಗಳು ಇಂದು ಬೀದಿಗಿಳಿದು ಪ್ರತಿಭಟಿಸಿರುವುದು ಮಾತ್ರವಲ್ಲ ಅವರ ಗುಣಗಾನದಲ್ಲೂ ತೊಡಗಿರುವುದು ಸಹಜವೆ ಆಗಿದೆ.

ಸಂಘ ಪರಿವಾರದ ಓರ್ವ ನಿಷ್ಠಾವಂತ ಕಾರ್ಯಕರ್ತನಾಗಿ ವೀರಶೈವ ಧರ್ಮಕ್ಕೆ ಎಂದೋ ತಿಲಾಂಜಲಿ ಇತ್ತಿರುವ ಯೆಡ್ಯೂರಪ್ಪ ಮಠ, ಮಂದಿರ, ಹೋಮ, ಯಾಗಾದಿಗಳನ್ನು ಬಳಸಿಕೊಳ್ಳುತ್ತಿರುವುದು ಕೇವಲ ಮತಗಟ್ಟೆಯ ರಾಜಕಾರಣಕ್ಕಾಗಿ. ರಾಜಕಾರಣ ಮತ್ತು ಧರ್ಮಗಳ ಈ ಮೈತ್ರಿಯ ಹಿಂದೆ ಕೇವಲ ಪರಸ್ಪರರ ಹಿತ ಕಾಯುವ ಅನೈತಿಕ ಉದ್ದೇಶ ಅಡಗಿದೆಯೆಂಬ ಸತ್ಯವನ್ನು ಇಡೀ ಪ್ರಕರಣ ಮತ್ತೊಮ್ಮೆ ಸಾಬೀತುಪಡಿಸುತ್ತಿದೆ ಅಷ್ಟೆ. ಧರ್ಮ, ರಾಜಕಾರಣಗಳ ಮೇಳ ಸಾರ್ವಜನಿಕ ವಲಯಗಳಲ್ಲಿ, ಮಾಧ್ಯಮಗಳಲ್ಲಿ ಬಿಸಿಬಿಸಿ ಚರ್ಚೆಗಳಿಗೆ ಗ್ರಾಸವಾಗಿದೆ.

ಹಾಗೆ ನೋಡಿದರೆ ಭಾರತದಲ್ಲಿ ಧರ್ಮ ಹಾಗೂ ರಾಜಕಾರಣಗಳ ನಡುವಿನ ಅವಿನಾಭಾವ ಸಂಬಂಧ ಇಂದು ನಿನ್ನೆಯದಲ್ಲ. ಅನಾದಿ ಕಾಲದಿಂದ ಅನೂಚಾನವಾಗಿ ನಡೆದುಕೊಂಡು ಬಂದು ಮುಸಲ್ಮಾನ ಬಾದಷಾಹರ ಆಳ್ವಿಕೆಯಲ್ಲಿಯೂ ಮುಂದುವರೆದಿದ್ದ ಈ ಮೈತ್ರಿ ಮುರಿದು ಬಿದ್ದದು ಬ್ರಿಟಿಷ್ ಆಡಳಿತದ ಕಾಲದಲ್ಲಿ. ಬಳಿಕ ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅಡಿಯಲ್ಲಿ ರಾಜ್ಯಾಡಳಿತವನ್ನು ಧರ್ಮಾತೀತವಾಗಿರಿಸಲು ನಿರ್ಧರಿಸಲಾಯಿತು. ಆದರೆ ಪ್ರಭುತ್ವದ ಜಾತ್ಯತೀತತೆಯ ಕಥೆ ಕೆಲವೇ ವರ್ಷಗಳೊಳಗಾಗಿ ಬರಬರುತ್ತಾ ರಾಯನ ಕುದುರೆ ಕತ್ತೆಯಂತಾಯಿತು. ಮತ್ತೊಮ್ಮೆ ಗರಿಗೆದರಿದ ಧರ್ಮ, ರಾಜಕಾರಣಗಳ ಮೈತ್ರಿಕೂಟಕ್ಕೆ ಕಾರ್ಪೋರೇಟ್ ವಲಯದ ಪ್ರವೇಶ ದೊಡ್ಡಮಟ್ಟದಲ್ಲಿ ನಡೆದಿದೆ.

ಹೀಗೆ ರಚಿತವಾಗಿರುವ ತ್ರಿಮೂರ್ತಿಗಳ ಒಕ್ಕೂಟವೆ ಪ್ರಸಕ್ತವಾಗಿ ರಾಜ್ಯಾಡಳಿತದ ಚುಕ್ಕಾಣಿಯನ್ನು ಹಿಡಿದು ದೇಶದ ಆಗುಹೋಗುಗಳನ್ನು ಹೆಚ್ಚುಕಮ್ಮಿ ಸಂಪೂರ್ಣವಾಗಿ ನಿಯಂತ್ರಿಸುತ್ತಿದೆ. ಭಾರತೀಯ ಪ್ರಜಾಸತ್ತೆಯ ನಾಲ್ಕೂ ಸ್ಥಂಭಗಳ ಆಯಕಟ್ಟಿನ ಜಾಗಗಳನ್ನು ವೈದಿಕಶಾಹಿ ಮತ್ತು ಉದ್ಯಮಪತಿ ಪರ ಶಕ್ತಿಗಳು ಆಕ್ರಮಿಸಿಕೊಂಡಿವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೂ ಬಿರ್ಲಾನಂತಹ ಉದ್ಯಮಪತಿಗಳ ಹಿತಾಸಕ್ತಿಗಳು ಪರೋಕ್ಷವಾಗಿ ಕಾರ್ಯಾಚರಿಸಿರುವುದನ್ನು ಇಲ್ಲಿ ನೆನೆಯಬೇಕು.

ಸನಾತನ ಭಾರತ

ಋಗ್ವೇದ ಕಾಲದಲ್ಲಿ ಭಾರತಕ್ಕೆ ಆಗಮಿಸಿದ ಆರ್ಯಭಾಷಿಕರದು ಹಲವು ಪಂಗಡಗಳ ಒಂದು ಅಲೆಮಾರಿ ಗೋಪಾಲಕ ಜನಾಂಗವಾಗಿತ್ತು. ಅವರು ಪ್ರಾಣಿಗಳನ್ನು ಬೇಟೆಯಾಡಿ, ಯಜ್ಞದ ಬೆಂಕಿಯಲ್ಲಿ ಬೇಯಿಸಿ, ಹಾಗೆ ಬೇಯಿಸಿದ ಒಂದು ಭಾಗವನ್ನು ಅಗ್ನಿ, ವರುಣ, ವಾಯು, ಇಂದ್ರ ಮುಂತಾದ ನಿಸರ್ಗ ದೇವತೆಗಳಿಗೆ ಹವಿಸ್ಸಾಗಿ ಸಮರ್ಪಿಸಿ ಮಿಕ್ಕುಳಿದುದನ್ನು ಭಕ್ಷಿಸುತ್ತಿದ್ದರು. ನಂತರದ ಕಾಲಘಟ್ಟದಲ್ಲಿ ಬೇಸಾಯಗಾರರಾಗಿ ಅಲ್ಲಲ್ಲಿ ನೆಲೆಯೂರಿದಾಗ ಕ್ರಮೇಣ ಜಾತಿಪದ್ಧತಿ ಆರಂಭವಾಯಿತು. ಮಂತ್ರೋಚ್ಚಾರಗೈಯುತ್ತ ಯಜ್ಞ ಮಾಡುವವರು ವೈದಿಕರೆಂದು ಕರೆಯಲ್ಪಟ್ಟು ಬ್ರಾಹ್ಮಣ ಜಾತಿಯೊಂದಿಗೆ ಗುರುತಿಸಿಕೊಂಡರು. ಪಂಗಡದ ನಾಯಕನ ಮತ್ತು ಗೃಹಪತಿ(ಕುಟುಂಬದ ಯಜಮಾನ)ಗಳ ಖಾಸಗಿ ಯಜ್ಞ ಮತ್ತಿತರ ಧಾರ್ಮಿಕ ಕ್ರಿಯೆಗಳನ್ನು ಕೂಡಾ ಇದೇ ವೈದಿಕ ವರ್ಗ ಮಾಡತೊಡಗಿತು. ಹುಟ್ಟು, ಸಾವು, ವಿವಾಹ, ಇತ್ಯಾದಿ ಸಮಾರಂಭಗಳಲ್ಲಿ, ಬೀಜ ಬಿತ್ತನೆಯ ಕಾಲದಲ್ಲಿ, ದುಷ್ಟ ನಕ್ಷತ್ರಗಳನ್ನು ಪ್ರಸನ್ನಪಡಿಸು ವುದಕ್ಕಾಗಿ ಮತ್ತು ಮುನಿದ ದೇವತೆಗಳನ್ನು ಸಂಪ್ರೀತಗೊಳಿಸು ವುದಕ್ಕಾಗಿ ಯಜ್ಞಯಾಗಾದಿ ಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿತ್ತು. ಪೌರೋಹಿತ್ಯ ಅತ್ಯಂತ ಲಾಭದಾಯಕ ವೃತ್ತಿಯಾಗಿ ಪರಿಣಮಿಸಿತು.

ಭಾರತದಲ್ಲಿ ಧರ್ಮ ಹಾಗೂ ರಾಜಕಾರಣಗಳ ನಡುವಿನ ಅವಿನಾಭಾವ ಸಂಬಂಧ ಇಂದು ನಿನ್ನೆಯದಲ್ಲ. ಅನಾದಿ ಕಾಲದಿಂದ ಅನೂಚಾನವಾಗಿ ನಡೆದುಕೊಂಡು ಬಂದು ಮುಸಲ್ಮಾನ ಬಾದಷಾಹರ ಆಳ್ವಿಕೆಯಲ್ಲಿಯೂ ಮುಂದುವರೆದಿದ್ದ ಈ ಮೈತ್ರಿ ಮುರಿದು ಬಿದ್ದದು ಬ್ರಿಟಿಷ್ ಆಡಳಿತದ ಕಾಲದಲ್ಲಿ. ಬಳಿಕ ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅಡಿಯಲ್ಲಿ ರಾಜ್ಯಾಡಳಿತವನ್ನು ಧರ್ಮಾತೀತವಾಗಿರಿಸಲು ನಿರ್ಧರಿಸಲಾಯಿತು. ಆದರೆ ಪ್ರಭುತ್ವದ ಜಾತ್ಯತೀತತೆಯ ಕಥೆ ಕೆಲವೇ ವರ್ಷಗಳೊಳಗಾಗಿ ಬರಬರುತ್ತಾ ರಾಯನ ಕುದುರೆ ಕತ್ತೆಯಂತಾಯಿತು. ಮತ್ತೊಮ್ಮೆ ಗರಿಗೆದರಿದ ಧರ್ಮ, ರಾಜಕಾರಣಗಳ ಮೈತ್ರಿ ಕೂಟಕ್ಕೆ ಕಾರ್ಪೋರೇಟ್ ವಲಯದ ಪ್ರವೇಶ ದೊಡ್ಡಮಟ್ಟಿನಲ್ಲಿ ನಡೆದಿದೆ.

ಕ್ರಿಪೂ. 6ನೇ ಶತಮಾನದ ನಂತರದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳ ಪ್ರಭಾವದಿಂದಾಗಿ ವೈದಿಕರ ಯಜ್ಞ ಮತ್ತು ಪ್ರಾಣಿಬಲಿಗಳ ಜನಪ್ರಿಯತೆ ಕುಸಿಯಿತು. ಆದರೂ ನಾಯಕರು ಮತ್ತು ಕೆಲವು ಗೃಹಪತಿಗಳು ಧಾರ್ಮಿಕ ಕ್ರಿಯೆಗಳನ್ನು ಮುಂದುವರಿಸಿದರು. ಇಂತಹ ಆಚರಣೆಗಳನ್ನು ಬೌದ್ಧ, ಜೈನ ಸನ್ಯಾಸಿಗಳು ಮಾಡುವಂತಿರಲಿಲ್ಲ. ಅದಕ್ಕೆ 12 ವರ್ಷಗಳ ಕಾಲ ಗುರುಕುಲದಲ್ಲಿ ವೇದಾಧ್ಯಯನಮಾಡಿದಂತಹ ಬ್ರಾಹ್ಮಣ ಪುರೋಹಿತರೇ ಬೇಕಾಗಿತ್ತು. ಹೀಗಾಗಿ ಅಂತಹ ಸನ್ನಿವೇಶದಲ್ಲಿ ಮೇಲುಗೈ ಸಾಧಿ ಸಿದ ವೈದಿಕಶಾಹಿ ಪ್ರಬಲವಾಗಿ ಬೆಳೆದು ಶ್ರೇಣೀಕೃತ ಸಮಾ ಜದ ಮುಂದುವರಿಕೆಗೆ ಕಾರಣವಾಯಿತು.

ಕಾಲಾಂತರದಲ್ಲಿ ನಾಯಕ ವ್ಯವಸ್ಥೆ ರಾಜಪ್ರಭುತ್ವವಾಗಿ ಮಾರ್ಪಾಟು ಹೊಂದಿದಾಗ ವೈದಿಕ ಬ್ರಾಹ್ಮಣರು ಆಸ್ಥಾನ ಪುರೋಹಿತ, ಮಂತ್ರಿಗಳ ಸ್ಥಾನಗಳನ್ನು ಪಡೆದುಕೊಂಡರಲ್ಲದೆ ಚಿತಾವಣೆಗಾರ, ಗೂಢಚಾರರಾಗಿಯೂ ಕಾರ್ಯನಿರ್ವಹಿಸಿದರು. ಶಿಶುನಾಗ, ನಂದ, ಮೌರ್ಯ, ಶಾತವಾಹನ, ಕುಶಾನ, ಗುಪ್ತ ಮುಂತಾದ ಅರ ಸೊತ್ತಿಗೆಗಳ ಚರಿತ್ರೆಯಲ್ಲಿ ಇದನ್ನು ಕಾಣಬಹುದು. ಜನಕ ರಾಜನಿಗೆ ಯಾಜ್ಞವಲ್ಕ್ಯ ಎಂಬಾತ ಪುರೋಹಿತನಾಗಿದ್ದ. ಅದೇ ರೀತಿ ಕೌರವರಿಗೆ ದ್ರೋಣಾಚಾರ್ಯ, ಚಂದ್ರಗುಪ್ತ ಮೌರ್ಯನಿಗೆ ಚಾಣಕ್ಯ, ಅಜಾತಶತ್ರುವಿಗೆ ವಸ್ಸಕಾರ, ಕನೌಜದ ಅರಸ ಗೋವಿಂದಚಂದ್ರನಿಗೆ ಭಟ್ಟ ಲಕ್ಷ್ಮೀಧರ, ದಕ್ಷಿಣದ ದೇವಗಿರಿಯ ಯಾದವರ ರಾಜ ರಾಮ ಚಂದ್ರನಿಗೆ ಹೇಮಾದ್ರಿ, ವಿಜಯನಗರ ಸಾಮ್ರಾಜ್ಯಕ್ಕೆ ವಿದ್ಯಾರಣ್ಯ ಮತ್ತು ಸಾಯಣಾಚಾರ್ಯ, ಶಿವಾಜಿಗೆ ಪಂಡಿತರಾವ್ ಇತ್ಯಾದಿ, ಇತ್ಯಾದಿ.

ವೈದಿಕ ಬ್ರಾಹ್ಮಣರು ಬುಡಕಟ್ಟು ನಾಯಕರನ್ನು ಕೂಡಾ ರಾಜ ವಂಶಕ್ಕೆ ಸೇರಿಸುತ್ತಿದ್ದರಲ್ಲದೆ ಅವರ ವಂಶಾವಳಿಯನ್ನು ಪುರಾಣಗಳಲ್ಲಿ ಹುಡುಕಿ ಕೊಡುತ್ತಿದ್ದರು. ಇದಕ್ಕಾಗಿ ನಡೆಸುತ್ತಿದ್ದ "ಹಿರಣ್ಯಗರ್ಭ ಸಂಸ್ಕಾರ"ದಲ್ಲಿ ಅಂತಹ ನಾಯಕನನ್ನು ಚಿನ್ನದ ಪಾತ್ರೆಯೊಳಗೆ ಗರ್ಭಸ್ಥ ಶಿಶುವಿನ ಮಾದರಿಯಲ್ಲಿ ಕೂರಿಸಲಾಗುತ್ತಿತ್ತು. ಮಂತ್ರ ಘೋಷಗಳ ನಂತರ ಆತ ಹೊರಬಂದಾಗ ಆತನನ್ನು ರಾಜನೆಂದು ಘೋಷಿಸಿ ಕ್ಷತ್ರಿಯಜಾತಿಯನ್ನೂ ಪುರೋಹಿತರ ಬ್ರಾಹ್ಮಣ ಗೋತ್ರವನ್ನೂ ನೀಡಲಾಗುತ್ತಿತ್ತು. ಪುರೋಹಿತರು ಚಿನ್ನದ ಪಾತ್ರೆಯೊಂದಿಗೆ ಹೇರಳ ದಾನವನ್ನೂ ತಮ್ಮದಾಗಿಸಿಕೊಳ್ಳುತ್ತಿದ್ದರು. ಗುಪ್ತರು ಮೂಲತಃ ಜಾಟ್ ಜಾತಿಯ ಶೂದ್ರರಾಗಿದ್ದರು. ಶಿವಾಜಿಯನ್ನು ರಾಜತ್ವಕ್ಕೇರಿಸಿದ ವೈದಿಕಶಾಹಿ ಶಿವಾಜಿಯ ನಂತರದಲ್ಲಿ ತಾನೇ ರಾಜ್ಯದ ಅಧಿಕಾರವನ್ನು ಕೈವಶಮಾಡಿಕೊಂಡಂಥಾ ಘಟನೆಗಳೂ ಭಾರತದ ಇತಿಹಾಸದಲ್ಲಿ ಆಗಿಹೋಗಿವೆ.

ಆಧುನಿಕಪೂರ್ವ ಯುಗ

ರಾಜಪ್ರಭುತ್ವದ ಕಾಲಾವಧಿಯಲ್ಲಿ ರಾಜ, ದೇವತೆ, ಮಂದಿರ ಹಾಗೂ ಭೂಮಿಗಳ ನಡುವೆ ಒಂದು ಪವಿತ್ರ ಸಂಬಂಧವಿದೆಯೆಂದು ನಂಬಲಾಗುತ್ತಿತ್ತು. ಕ್ರಿಶ. ಆರನೇ ಶತಮಾನದ ಗ್ರಂಥವಾದ 'ಬೃಹತ್‌ಸಂಹಿತಾ'ದಲ್ಲಿ ಇದರ ವಿವರಗಳನ್ನು ನೀಡಲಾಗಿದೆ. ಕ್ರಿಶ. 8ನೇ ಶತಮಾನದಿಂದ 13ನೇ ಶತಮಾನದವರೆಗಿನ ಅವಧಿಯಲ್ಲಿ ರಾಜ್ಯಭಾರ ಮಾಡಿದ ವಿವಿಧ ಅರಸರು ತಮ್ಮ ರಾಜವಂಶದ ಮೂಲಗಳನ್ನು ಧಾರ್ಮಿಕ ಹಾಗೂ ದೈವಿಕ ಶಕ್ತಿಗಳೊಂದಿಗೆ ಜೋಡಿಸಿಕೊಳ್ಳುವ ಉದ್ದೇಶದಿಂದ ಅಸಂಖ್ಯಾತ ದೇಗುಲಗಳನ್ನು ಕಟ್ಟಿಸಿದರು. ಒಂದೊಂದು ರಾಜವಂಶಕ್ಕೆ ಒಂದು ಪ್ರತ್ಯೇಕ ರಾಷ್ಟ್ರದೇವತೆ(ಹೆಚ್ಚಾಗಿ ಶಿವ ಅಥವಾ ವಿಷ್ಣು) ಇರುತ್ತಿತ್ತು. ಆಳುವ ರಾಜವಂಶದ ರಾಷ್ಟ್ರದೇವತೆಯ ಮೂರ್ತಿ ಇದ್ದಂತಹ ದೇವಸ್ಥಾನವನ್ನು ರಾಜದೇಗುಲವೆಂದು ಪರಿಗಣಿಸಲಾಗುತ್ತಿತ್ತು.

'ಗರ್ಭಗುಡಿ'ಯಲ್ಲಿದ್ದ ರಾಷ್ಟ್ರದೇವತೆಯ ವಿಗ್ರಹವು ಅರಸ ಮತ್ತು ದೇವತೆಯ ಜಂಟಿ ಸಾರ್ವಭೌಮತ್ವದ ಸೂಚಕವಾಗಿತ್ತು. ರಥೋತ್ಸವದ ಕಾಲದಲ್ಲಿ ರಾಷ್ಟ್ರದೇವತೆಯ ಮೂರ್ತಿಯನ್ನು ರಾಜಧಾನಿಯ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಗುತ್ತಿತ್ತು. ಹೀಗೆ ಅಂದಿನ ರಾಜದೇಗುಲ ಸಂಕೀರ್ಣಗಳು ರಾಜಕೀಯವಾಗಿ ಸಕ್ರಿಯವಾಗಿದ್ದವು. ಆದುದರಿಂದಲೆ ವಿವಿಧ ಅರಸೊತ್ತಿಗೆಗಳ ನಡುವಿನ ಯುದ್ಧಗಳಲ್ಲಿ ಸೋತ ಅರಸರ ದೇವಸ್ಥಾನಗಳನ್ನು ಅಪವಿತ್ರಗೊಳಿಸುವ ಅಥವಾ ನಾಶಪಡಿಸುವ ಸಂಪ್ರದಾಯ ಸರ್ವೆಸಾಮಾನ್ಯವಾಗಿತ್ತು. ಭಾರತೀಯ ಇತಿಹಾಸದ ಪುಟಗಳು ಇಂತಹ ದೃಷ್ಟಾಂತಗಳಿಂದ ತುಂಬಿಹೋಗಿವೆ ಎನ್ನುತ್ತಾರೆ ಖ್ಯಾತ ಇತಿಹಾಸಜ್ಞ ರಿಚರ್ಡ್ ಈಟನ್. ಪ್ರಧಾನವಾಗಿ ಸಾಮ್ರಾಜ್ಯ ವಿಸ್ತರಣೆಯ ಉದ್ದೇಶದಿಂದ ನಡೆಯುತ್ತಿದ್ದ ಕದನಗಳಲ್ಲಿ ವಿರೋಧಿ ಅರಸನ ಸೈನಿಕರನ್ನು ಕೊಲ್ಲುವುದರೊಂದಿಗೆ ಧಾರ್ಮಿಕ ಸ್ಥಳ, ಕಟ್ಟಡ, ಗ್ರಂಥಾಲಯ ಇತ್ಯಾದಿಗಳನ್ನು ನಾಶಪಡಿಸುವುದೂ ಯುದ್ಧತಂತ್ರದ ಭಾಗವಾಗಿತ್ತು.

ಹಿಂದೆ ವೈದಿಕಶಾಹಿಪರ ಶಕ್ತಿಗಳು ಬೌದ್ಧ, ಜೈನರ ಧಾರ್ಮಿಕ ಸ್ಥಳಗಳನ್ನು ನಾಶಗೊಳಿಸಿದ್ದರೆ, ಶೈವ ಮತ್ತು ವೈಷ್ಣವರ ಕಲಹಗಳಿಗೆ ಅನೇಕ ಮಂದಿರಗಳು ಬಲಿಯಾಗಿವೆ. ನಂತರದ ಸಬುಕ್ತಿಗೀನ್, ಘಜನಿ ಮಹಮೂದ್ ನಂತಹವರ ದಾಳಿಗಳು ಸಂಪದ್ಭರಿತ ಮಂದಿರಗಳನ್ನು ಕೊಳ್ಳೆ ಹೊಡೆಯುವುದಕ್ಕೆ ಸೀಮಿತವಾಗಿದ್ದವು. ಆ ಮೇಲೆ ಸಾಮ್ರಾಜ್ಯ ಸ್ಥಾಪನೆಗಾಗಿ ಭಾರತಕ್ಕೆ ದಂಡೆತ್ತಿ ಬಂದ ತುರುಕರು ತಮ್ಮ ಸಾರ್ವಭೌಮತೆಯನ್ನು ಸ್ಥಾಪಿಸುವುದಕ್ಕಾಗಿ ಇಲ್ಲಿ ಆಗಲೆ ಅಸ್ತಿತ್ವದಲ್ಲಿದ್ದ ರಾಜದೇಗುಲಗಳ ನಾಶ/ಪಾವಿತ್ರ್ಯ ಭಂಗದ ಮಾದರಿಯನ್ನು ಅನುಸರಿಸಿದ್ದಲ್ಲದೆ ಅದನ್ನೇ ಮುಂದುವರಿಸಿದರೆಂದು ಇತಿಹಾಸಕಾರ ರಿಚರ್ಡ್ ಡೇವಿಸ್ ಹೇಳುತ್ತಾರೆ. ಈಟನ್ ಪ್ರಕಾರ ಸುಮಾರು 80 ಮಂದಿರಗಳನ್ನು ಅಪವಿತ್ರಗೊಳಿಸಿರುವ ಯಾ ನಾಶಗೊಳಿಸಿರುವ ಖಚಿತ ದಾಖಲೆಗಳು ಲಭ್ಯವಿವೆ ಹೊರತು ಹಿಂದೂ ರಾಷ್ಟ್ರೀಯವಾದಿಗಳು ಹೇಳುವಂತೆ ಸಾವಿರಾರಲ್ಲ.

ಮುಸಲ್ಮಾನ ಅರಸರಿಂದ ನಡೆದಿರುವ ಮಂದಿರ ನಾಶದ ವಿಷಯ ವ್ಯಾಪಕ (ಅಪ?)ಪ್ರಚಾರ ಪಡೆದುಕೊಂಡಿರುವ ಕಾರಣಕ್ಕೆ ಅದನ್ನು ಹೆಚ್ಚುಕಮ್ಮಿ ಎಲ್ಲ ಭಾರತೀಯರೂ ಅರಿತಿದ್ದಾರೆ. ಹೀಗಾಗಿ ಆ ವಿಚಾರವನ್ನು ಇಲ್ಲಿ ಪುನರುಚ್ಚರಿಸುವ ಅವಶ್ಯಕತೆ ಇಲ್ಲವೆಂದು ತೋರುತ್ತದೆ. ಬದಲಾಗಿ, ಬಹುತೇಕ ಪಠ್ಯಪುಸ್ತಕಗಳಲ್ಲಿ ಕಾಣಸಿಗದಂತಹ ಕೆಲವು ಐತಿಹಾಸಿಕ ಸತ್ಯಗಳನ್ನು ನೋಡೋಣ:

642ನೇ ಇಸವಿಯಲ್ಲಿ ಪಲ್ಲವ ಅರಸ ಮೊದಲನೆ ನಾರಸಿಂಹವರ್ಮನ್ ಚಾಳುಕ್ಯರ ರಾಜಧಾನಿ ವಾತಾಪಿಗೆ ದಾಳಿ ಮಾಡಿ ಅಲ್ಲಿಂದ ಗಣೇಶ ವಿಗ್ರಹವನ್ನು ಕೊಳ್ಳೆ ಹೊಡೆದಿದ್ದ.

50 ವರ್ಷಗಳ ತರುವಾಯ ಅದೇ ಚಾಳುಕ್ಯರ ಸೈನ್ಯಗಳು ಉತ್ತರಭಾರತಕ್ಕೆ ಲಗ್ಗೆಯಿಟ್ಟು ಅಲ್ಲಿ ತಾವು ಸೋಲಿಸಿದ ರಾಜ್ಯಗಳಿಂದ ಗಂಗೆ ಮತ್ತು ಯಮುನೆಯರ ವಿಗ್ರಹಗಳನ್ನು ಲೂಟಿಗೈದು ದಕ್ಷಿಣಕ್ಕೆ ತಂದಿದ್ದವು.

ಕ್ರಿಶ. 8ನೇ ಶತಮಾನದಲ್ಲಿ ಶಂಕರಾಚಾರ್ಯ ಮತ್ತಾತನ ಶಿಷ್ಯರು ಬೌದ್ಧ ಧರ್ಮದ ಗಟ್ಟಿ ನೆಲೆಯಾಗಿದ್ದ ನಾಗಾರ್ಜುನಕೊಂಡಕ್ಕೆ ದಾಳಿ ಮಾಡಿ ಸ್ತೂಪ, ಸ್ಮಾರಕ ಮತ್ತು ವಿಹಾರಗಳನ್ನು ಧ್ವಂಸಗೊಳಿಸಿದ್ದರು.

ಚಾಳುಕ್ಯರ 1ನೆ ಪುಲಕೇಶಿಯು ಅವನಾವತಿಯ ಬೌದ್ಧ ವಿಹಾರವನ್ನು ಧ್ವಂಸಗೈದು ಸುತ್ತಮುತ್ತಲ ಪ್ರದೇಶಗಳಲ್ಲಿ ಬೌದ್ಧ ಧರ್ಮವನ್ನು ಅಳಿಸಿಹಾಕಿದ್ದ.

ಪಾಂಡ್ಯ ರಾಜ ಶ್ರೀಮಾರ ಶ್ರೀವಲ್ಲಭನು ಶ್ರೀಲಂಕಾಕ್ಕೆ ದಾಳಿ ಮಾಡಿ ಅಲ್ಲಿನ 'ಆಭರಣ ಮಹಲ್'ನಲ್ಲಿ ಸ್ಥಾಪಿಸಲ್ಪಟ್ಟಿದ್ದ ಬುದ್ಧನ ಸ್ವರ್ಣಮೂರ್ತಿಯೊಂದನ್ನು ತನ್ನ ರಾಜಧಾನಿಗೆ ಸಾಗಿಸಿದ್ದ.

ಹತ್ತನೆ ಶತಮಾನದ ಆದಿಯಲ್ಲಿ ಪ್ರತಿಹಾರ ರಾಜ ಹೇರಂಬಪಾಲನು ಕಾಂಗ್ರಾದ ಸಾಹೀಅರಸನನ್ನು ಸೋಲಿಸಿ ಅಲ್ಲಿಂದ ವಿಷ್ಣು ವೈಕುಂಠನ ಸ್ವರ್ಣಬಿಂಬ ವೊಂದನ್ನು ಅಪಹರಿಸಿದ್ದ. ಅದೇ ವಿಗ್ರಹವನ್ನು ಹತ್ತನೆ ಶತಮಾನದ ಮಧ್ಯಭಾಗದಲ್ಲಿ ಪ್ರತಿಹಾರರಿಂದ ವಶಪಡಿಸಿಕೊಂಡ ಕಾಂಡೆಲ್ಲ ರಾಜ ಯಶೋವರ್ಮನ್, ಆ ಬಿಂಬವನ್ನು ಖಜುರಾಹೊದ ಲಕ್ಷ್ಮಣ ದೇವಸ್ಥಾನದಲ್ಲಿ ಸ್ಥಾಪಿಸಿದ್ದ.

ಹತ್ತನೆ ಶತಮಾನದ ಆದಿಯಲ್ಲಿ ರಾಷ್ಟ್ರಕೂಟರ ಅರಸ ಮುಮ್ಮಡಿ ಇಂದ್ರನು ಪ್ರತಿಹಾರ ಅರಸರ ಆಶ್ರಯದಲ್ಲಿದ್ದ ಕಲಪ್ರಿಯ ದೇಗುಲವನ್ನು ನಾಶಪಡಿಸಿದ್ದ. ಹನ್ನೊಂದನೆ ಶತಮಾನದ ಆದಿಯಲ್ಲಿ ಚೋಳ ರಾಜ ಮೊದಲನೆ ರಾಜೇಂದ್ರನು ಚಾಳುಕ್ಯ, ಕಳಿಂಗ, ಪಾಲ ಮುಂತಾದ ಹಲವಾರು ನೆರೆಹೊರೆಯ ರಾಜ್ಯಗಳ ಮೇಲೆ ದಾಳಿ ಮಾಡಿ ಅಲ್ಲಿಂದ ಕೊಳ್ಳೆಹೊಡೆದು ತಂದ ದುರ್ಗಾ, ಗಣೇಶ, ಭೈರವ, ಭೈರವಿ, ಕಾಳಿ, ನಂದಿ ಮತ್ತು ಈಶ್ವರನ ಮೂರ್ತಿಗಳನ್ನು ತನ್ನ ರಾಜಧಾನಿಯಲ್ಲಿ ಸ್ಥಾಪಿಸಿದ್ದ.

ರಾಜಪ್ರಭುತ್ವದ ಕಾಲಾವಧಿಯಲ್ಲಿ ರಾಜ, ದೇವತೆ, ಮಂದಿರ ಹಾಗೂ ಭೂಮಿಗಳ ನಡುವೆ ಒಂದು ಪವಿತ್ರ ಸಂಬಂಧವಿದೆಯೆಂದು ನಂಬಲಾಗುತ್ತಿತ್ತು. ಕ್ರಿಶ. ಆರನೆ ಶತಮಾನದ ಗ್ರಂಥವಾದ 'ಬೃಹತ್ ಸಂಹಿತಾ'ದಲ್ಲಿ ಇದರ ವಿವರಗಳನ್ನು ನೀಡಲಾಗಿದೆ. ಕ್ರಿಶ. 8ನೆ ಶತಮಾನದಿಂದ 13ನೆ ಶತಮಾನ ವರೆಗಿನ ಅವಧಿಯಲ್ಲಿ ರಾಜ್ಯಭಾರ ಮಾಡಿದ ವಿವಿಧ ಅರಸರು ತಮ್ಮ ರಾಜವಂಶದ ಮೂಲಗಳನ್ನು ಧಾರ್ಮಿಕ ಹಾಗೂ ದೈವಿಕಶಕ್ತಿಗಳೊಂದಿಗೆ ಜೋಡಿಸಿಕೊಳ್ಳುವ ಉದ್ದೇಶದಿಂದ ಅಸಂಖ್ಯಾತ ದೇಗುಲಗಳನ್ನು ಕಟ್ಟಿಸಿದರು. ಒಂದೊಂದು ರಾಜವಂಶಕ್ಕೆ ಒಂದು ಪ್ರತ್ಯೇಕ ರಾಷ್ಟ್ರದೇವತೆ(ಹೆಚ್ಚಾಗಿ ಶಿವ ಅಥವಾ ವಿಷ್ಣು) ಇರುತ್ತಿತ್ತು. ಆಳುವ ರಾಜವಂಶದ ರಾಷ್ಟ್ರದೇವತೆಯ ಮೂರ್ತಿ ಇದ್ದಂತಹ ದೇವಸ್ಥಾನವನ್ನು ರಾಜದೇಗುಲವೆಂದು ಪರಿಗಣಿಸಲಾಗುತ್ತಿತ್ತು.

ಹನ್ನೊಂದನೆ ಶತಮಾನದ ಅಂತ್ಯದಲ್ಲಿ ಕಾಶ್ಮೀರದ ಅರಸ ಹರ್ಷದೇವ ದೇವಸ್ಥಾನಗಳ ದೋಚುವಿಕೆಯನ್ನು ಸಾಂಸ್ಥೀಕರಣಗೊಳಿಸಿದ್ದ. ಆತನ ಆಸ್ಥಾನದಲ್ಲಿ "ದೇವೋತ್ಪಾತ ನಾಯಕ" ಅಂದರೆ ದೇಗುಲ ಭಂಜಕ ಎಂಬ ವಿಶೇಷಾಧಿಕಾರಿಯನ್ನೆ ನೇಮಿಸಲಾಗಿತ್ತು. ಇದರ ವಿವರಗಳನ್ನು ಕಲ್ಹಣದ "ರಾಜ ತರಂಗಿಣಿ"ಯಲ್ಲಿ ಓದಬಹುದು.

ಹನ್ನೆರಡನೆ ಶತಮಾನದ ಅಂತ್ಯ ಮತ್ತು ಹದಿಮೂರನೆ ಶತಮಾನದ ಆದಿಯಲ್ಲಿ ತುರುಕರು ಉತ್ತರಭಾರತದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸುತ್ತಿದ್ದ ಕಾಲದಲ್ಲಿ ಪರಮಾರ ರಾಜವಂಶದ ಅರಸರು ಗುಜರಾತ್‌ನ ಜೈನ ಮಂದಿರಗಳಿಗೆ ದಾಳಿಮಾಡಿ ಅವುಗಳನ್ನು ಕೊಳ್ಳೆ ಹೊಡೆದಿದ್ದರು.

ದೇವಾಲಯಗಳನ್ನು ಕೊಳ್ಳೆಹೊಡೆಯುವ ಅಥವಾ/ನಾಶಪಡಿಸುವ ಈ ಪ್ರಕ್ರಿಯೆ 16ನೆ ಶತಮಾನದ ವರೆಗೂ ಮುಂದುವರಿದಿರುವುದಕ್ಕೆ ಒರಿಸ್ಸಾದ ಕಪಿಲೇಂದ್ರ, ವಿಜಯನಗರದ ಕೃಷ್ಣದೇವರಾಯ ಮುಂತಾದವರ ಉದಾಹರಣೆಗಳನ್ನು ನೀಡಬಹುದಾಗಿದೆ. ಒರಿಸ್ಸಾದ ಸೂರ್ಯ ವಂಶಿ ಗಜಪತಿ ರಾಜವಂಶದ ಸಂಸ್ಥಾಪಕ ಕಪಿಲೇಂದ್ರನು 1460ರ ದಶಕದಲ್ಲಿ ತಮಿಳು ದೇಶದ ವಿರುದ್ಧ ಯುದ್ಧ ಮಾಡಿದ್ದಾಗ ಕಾವೇರಿ ಮುಖಜಭೂಮಿಯಲ್ಲಿದ್ದ ಶೈವ ಮತ್ತು ವೈಷ್ಣವ ದೇವಾಲಯಗಳೆರಡನ್ನೂ ನಾಶಪಡಿಸಿದ್ದ. 1514ನೆ ಇಸವಿಯಲ್ಲಿ ಉದಯಗಿರಿಯನ್ನು ಸೋಲಿಸಿದ ಕೃಷ್ಣ ದೇವರಾಯ ಅದನ್ನು ತನ್ನ ವಿಸ್ತರಿಸುತ್ತಿದ್ದ ಸಾಮ್ರಾಜ್ಯಕ್ಕೆ ಸೇರ್ಪಡೆಗೊಳಿಸಿದಾಗ ಅಲ್ಲಿಂದ ಬಾಲಕೃಷ್ಣನ ಮೂರ್ತಿಯೊಂದನ್ನು ಕೊಳ್ಳೆ ಹೊಡೆದಿದ್ದ.

ಇಂಡೊ-ಮುಸ್ಲಿಂ ಆಳ್ವಿಕೆಯಲ್ಲಿ ಧರ್ಮದ ಪಾತ್ರ

ಮುಸ್ಲಿಂ ರಾಜರ ಆಳ್ವಿಕೆಯ ಕಾಲದಲ್ಲಿ ಮಸೀದಿಗಳು ಮೂಲತಃ ರಾಜಕೀಯವಾಗಿ ನಿಷ್ಕ್ರಿಯವಾಗಿದ್ದವು. ವಾಸ್ತವದಲ್ಲಿ ಅವು ರಾಜಕೀಯರಹಿತವಾಗಿದ್ದುದರಿಂದ ಮಸೀದಿಗಳ ನಾಶ ಅಥವಾ ಪಾವಿತ್ರ್ಯಭಂಗದ ಕೃತ್ಯಗಳಿಂದ ರಾಜನ ನ್ಯಾಯಸಮ್ಮತತೆಗೆ ಭಂಗವುಂಟಾಗುತ್ತಿರಲಿಲ್ಲ. ಹೀಗಾಗಿ ಅಂತಹ ಕೃತ್ಯಗಳು ಸಾಮಾನ್ಯವಾಗಿ ಕಾಣಸಿಗುವುದಿಲ್ಲ.

ಭಾರತದಲ್ಲಿ ನೂತನ ಇಂಡೊ-ಮುಸ್ಲಿಂ ಸಾಮ್ರಾಜ್ಯಗಳ ಸಂಸ್ಥಾಪನಾ ಪ್ರಕ್ರಿಯೆ ಆರಂಭವಾದಾಗ ಅದರ ಜೊತೆ ಅತ್ಯಂತ ನಿಕಟವಾಗಿ ಗುರುತಿಸಿಕೊಂಡದ್ದು ಚಿಸ್ತೀ ಪಂಥ. ಪರಿಣಾಮವಾಗಿ ಚಿಸ್ತೀ ಪಂಥಕ್ಕೂ ರಾಜವಂಶದ ಸೌಭಾಗ್ಯಕ್ಕೂ ಪರಸ್ಪರ ಸಂಬಂಧವಿರಬೇಕೆಂಬ ಕಲ್ಪನೆ ಸಾರ್ವಜನಿಕರಲ್ಲಿ ಮತ್ತು ಆಡಳಿತವರ್ಗಗಳಲ್ಲಿ ಪ್ರಚಲಿತವಾಗಿತ್ತು. ಹೀಗಾಗಿ ಆಳುವ ರಾಜವಂಶವೊಂದು ತಾನು ನ್ಯಾಯೋಚಿತವಾಗಿ ಇಸ್ಲಾಮೀ ಮತ್ತು ಅಧಿಕೃತವಾಗಿ ಭಾರತೀಯವೆಂದು ಘೋಷಿಸಿಕೊಂಡು ಚಿಸ್ತೀ ಶ್ರದ್ಧಾಕೇಂದ್ರಗಳ ಪೋಷಕನಾಗಿರುತ್ತಿತ್ತು. ಮುಸ್ಲಿಂ ದೊರೆಗಳು ಪದೇಪದೇ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ಸಾಧುಸಂತರ ಆಶೀರ್ವಾದ ಪಡೆದುಕೊಳ್ಳುತ್ತಿದ್ದರು. ಮೊಘಲರ ಶ್ರೇಣೀಕೃತ ಆಡಳಿತ ವ್ಯವಸ್ಥೆಯಲ್ಲಿ ರಾಜಕೀಯ ಮತ್ತು ಧರ್ಮಗಳು ಬೆರೆತಿದ್ದ ಅಧಿಕಾರ ಮುಘಲ್ ಸಾಮ್ರಾಟನಿಂದ ಆತನ ಮನ್‌ಸಬದಾರನಿಗೆ, ಮನ್‌ಸಬದಾರನಿಂದ ಸ್ಥಳೀಯ ರಾಷ್ಟ್ರದೇವತೆಗೆ, ರಾಷ್ಟ್ರದೇವತೆಯಿಂದ ಸಾಮಂತರಾಜನಿಗೆ, ಸಾಮಂತರಾಜನಿಂದ ಪ್ರಜೆಗಳಿಗೆ ಹರಿದುಬರುತ್ತಿತ್ತು. ಪುರಿಯ ಜಗನ್ನಾಥ ಮಂದಿರ ಇದಕ್ಕೊಂದು ಉತ್ತಮ ನಿದರ್ಶನ.

ಭಾರತದಲ್ಲಿ ಚಿಸ್ತೀ ಪಂಥದ ಸಂಸ್ಥಾಪಕನಾದ ಸೂಫಿ ಸಂತ ಮುಯಿನ್ ಅಲ್-ದೀನ್ ಚಿಸ್ತೀಯ ಸಮಾಧಿ ಅಜ್ಮೀರದಲ್ಲಿದೆ. ಸುಲ್ತಾನ್ ಮುಹಮ್ಮದ್ ಬಿನ್ ತುಘಲಕನು ಮೊಂಗೋಲರ ವಿರುದ್ಧದ ಯುದ್ಧವೊಂದನ್ನು ಮುಗಿಸಿದ ತರುವಾಯ ಅಜ್ಮೀರಕ್ಕೆ ತೀರ್ಥಯಾತ್ರೆ ಕೈಗೊಂಡಿದ್ದ. ತುಘಲಕ ಸಾಮ್ರಾಜ್ಯ ಅವನತಿಗಿಳಿಯುತ್ತ ಇನ್ನಷ್ಟು ಸ್ವತಂತ್ರ ಸಂಸ್ಥಾನಗಳು ಹುಟ್ಟಿಕೊಂಡಾಗಲೂ ಮೇಲಿನ ಮಾದರಿ ಪುನರಾವರ್ತಿತವಾಯಿತು. ಬಾಬರ್, ಅಕ್ಬರ್, ಜಹಾಂಗೀರ್, ಶಾ ಜಹಾನ್, ಔರಂಗಜೇಬ್ ಮುಂತಾದ ಮೊಘಲ್ ಬಾದಶಾಹರು ಕೂಡ ಚಿಸ್ತೀ ಪುಣ್ಯಕ್ಷೇತ್ರಗಳಿಗೆ ಆಶ್ರಯ ಒದಗಿಸಿದರಲ್ಲದೆ ಆಗಾಗ ತೀರ್ಥಯಾತ್ರೆಗಳನ್ನೂ ನಡೆಸುತ್ತಿದ್ದರು.

ಅಕ್ಬರ್ ಹದಿನಾಲ್ಕು ಬಾರಿ ಅಜ್ಮೀರ ದರ್ಗಾವನ್ನು ಸಂದರ್ಶಿಸಿದ್ದ. ಔರಂಗಜೇಬ್ ಅಜ್ಮೀರ, ದೆಹಲಿಯ ಕ್ಷೇತ್ರಗಳಲ್ಲದೆ ದಕ್ಷಿಣದ ತುಘಲಕ್ ಪ್ರಾಂತಗಳಲ್ಲಿದ್ದ ಗುಲ್ಬರ್ಗಾ ಅಥವಾ ಖುಲ್ದಾಬಾದ್‌ನಂತಹ ವಿವಿಧ ಚಿಸ್ತೀ ದರ್ಗಾಗಳಿಗೂ ಭೇಟಿ ನೀಡಿ ಅವುಗಳಿಗೂ ಯಥೇಚ್ಛ ದೇಣಿಗೆ ನೀಡಿದ್ದ. ಹೀಗೆ ಮೊಘಲರ ಆಸ್ಥಾನ ಸಂಸ್ಕೃತಿಯು ಚಿಸ್ತೀ ಪಂಥದೊಂದಿಗೆ ಅಸಾಧಾರಣ ರೀತಿಯಲ್ಲಿ ಹಾಸುಹೊಕ್ಕಾಗಿತ್ತು. ಇಂದಿಗೂ ಇದರ ಅವಶೇಷಗಳನ್ನು ಸಾಮಾನ್ಯವಾಗಿ ಎಲ್ಲಾ ಚಿಸ್ತೀ ಪುಣ್ಯಕ್ಷೇತ್ರಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಅಜ್ಮೀರದಲ್ಲಿ, ನಡೆಸಲಾಗುವ ಸಾಂಪ್ರದಾಯಿಕ ಆಚರಣೆ, ಅಲ್ಲಿನ ಪದಪ್ರಯೋಗ-ವಿಧಿವಿಧಾನಗಳಲ್ಲಿ ಕಾಣಬಹುದು.

ಮಾನವಕುಲದ ಚೈತನ್ಯಯುತ ಮುನ್ನಡೆಯು ಧಾರ್ಮಿಕ ಜಗತ್ತಿನೊಂದಿಗೆ ನಿಕಟವಾಗಿ ಬೆಸೆಯಲ್ಪಟ್ಟಿದೆಯೆಂದು ಬಹಮನಿ ಸುಲ್ತಾನರ ಆಸ್ಥಾನಕವಿ ಅಬ್ದ್ ಅಲ್-ಮಲಿಕ್ ಇಸಾಮೀ ನಂಬಿದ್ದ. "ಪ್ರತಿಯೊಂದು ದೇಶದಲ್ಲೂ ಆ ದೇಶವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುವ ಧಾರ್ಮಿಕ ಪುರುಷನೊಬ್ಬ ಇರುತ್ತಾನೆ"ಂದು ಇಸಾಮೀ ಪ್ರತಿಪಾದಿಸಿದ್ದ.

ಭಾರತದಲ್ಲಿ ನೂತನ ಇಂಡೊ-ಮುಸ್ಲಿಂ ಸಾಮ್ರಾಜ್ಯಗಳ ಸಂಸ್ಥಾಪನಾ ಪ್ರಕ್ರಿಯೆ ಆರಂಭವಾದಾಗ ಅದರ ಜೊತೆ ಅತ್ಯಂತ ನಿಕಟವಾಗಿ ಗುರುತಿಸಿಕೊಂಡದ್ದು ಚಿಸ್ತೀ ಪಂಥ. ಪರಿಣಾಮವಾಗಿ ಚಿಸ್ತೀ ಪಂಥಕ್ಕೂ ರಾಜವಂಶದ ಸೌಭಾಗ್ಯಕ್ಕೂ ಪರಸ್ಪರ ಸಂಬಂಧವಿರಬೇಕೆಂಬ ಕಲ್ಪನೆ ಸಾರ್ವಜನಿಕರಲ್ಲಿ ಮತ್ತು ಆಡಳಿತವರ್ಗಗಳಲ್ಲಿ ಪ್ರಚಲಿತವಾಗಿತ್ತು. ಹೀಗಾಗಿ ಆಳುವ ರಾಜವಂಶವೊಂದು ತಾನು ನ್ಯಾಯೋಚಿತವಾಗಿ ಇಸ್ಲಾಮೀ ಮತ್ತು ಅಧಿಕೃತವಾಗಿ ಭಾರತೀಯವೆಂದು ಘೋಷಿಸಿಕೊಂಡು ಚಿಸ್ತೀ ಶ್ರದ್ಧಾಕೇಂದ್ರಗಳ ಪೋಷಕನಾಗಿರುತ್ತಿತ್ತು. ಮುಸ್ಲಿಂ ದೊರೆಗಳು ಪದೇಪದೇ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ಸಾಧುಸಂತರ ಆಶೀರ್ವಾದ ಪಡೆದುಕೊಳ್ಳುತ್ತಿದ್ದರು.

ಬ್ರಿಟಿಷರ ಆಳ್ವಿಕೆ

ಮೊಘಲರ ನಂತರದಲ್ಲಿ ದೇಶವನ್ನಾಳಿದ ಬ್ರಿಟಿಷರು ರಾಜ್ಯಾಡಳಿತದಿಂದ ಧರ್ಮವನ್ನು ದೂರವಿಡುವ ನೀತಿಯನ್ನು ಅನುಸರಿಸಿದರಾದರೂ ಭಾರತೀಯ ಸಮಾಜವನ್ನು ಧರ್ಮದ ಆಧಾರದಲ್ಲಿ ಒಡೆಯಲೆತ್ನಿಸಿದರು. ಬ್ರಿಟಿಷರ ಒಡೆದಾಳುವ ನೀತಿಗೆ ಪೂರಕವಾಗಿ ಅವರ ವಸಾಹತುಶಾಹಿ ಇತಿಹಾಸಕಾರರು ಪ್ರಪ್ರಥಮವಾಗಿ ಭಾರತದ ನಾಗರಿಕತೆಯನ್ನು 'ಹಿಂದೂ' ಮತ್ತು 'ಮುಸ್ಲಿಂ' ಕಾಲಘಟ್ಟಗಳು ಎಂಬುದಾಗಿ ವಿಭಜಿಸಿದರು. ಅದನ್ನೆ ಪಾಕಿಸ್ತಾನಿ ಮತ್ತು ಹಿಂದೂ ರಾಷ್ಟ್ರೀಯವಾದಿ ಬಣಗಳು ಯಥಾವತ್ತಾಗಿ ಅನುಸರಿಸಿದವು.

ಬ್ರಿಟಿಷರ ಕಾಲದಲ್ಲಿ ಬ್ರಾಹ್ಮಣರು ಆಡಳಿತದ ಪ್ರಮುಖ ಸ್ಥಾನಗಳನ್ನು ಆಕ್ರಮಿಸಿಕೊಂಡರಾದರೂ ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪಕ್ಕೆ ಅವಕಾಶ ಸಿಗಲಿಲ್ಲ. ಹೀಗಾಗಿ ಹಿಂದಿನ ಬ್ರಾಹ್ಮಣ ಪ್ರಾಬಲ್ಯವನ್ನು ಮರುಸ್ಥಾಪಿಸಲೋಸುಗ ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದಂತಹ ಸಂಸ್ಥೆಗಳು ಹುಟ್ಟಿಕೊಂಡವು. ಅಂದಿನಿಂದ ಇಂದಿನ ತನಕವೂ ವೈದಿಕಶಾಹಿ ಈ ದೇಶವನ್ನು ತನ್ನ ಸಂಪೂರ್ಣ ಹತೋಟಿಗೊಳಪಡಿಸಲು ಅತ್ಯಂತ ಸುವ್ಯವಸ್ಥಿತವಾಗಿ ಹಾಗೂ ಅವಿರತವಾಗಿ ಶ್ರಮಿಸುತ್ತಿದೆ. ಈ ಸತ್ಯಾಂಶವನ್ನು ಸರಕಾರದ ಅಧಿಕೃತ ದಾಖಲೆಗಳೆ ಹೇಗೆ ದೃಢಪಡಿಸುತ್ತವೆ ಎಂಬುದನ್ನು ಮುಂದೆ ವಿವರಿಸಲಾಗಿದೆ.

ಸ್ವಾತಂತ್ರ್ಯಾನಂತರದಲ್ಲಿ

1947ರಲ್ಲಿ ಸ್ವಾತಂತ್ರ್ಯ ಲಭಿಸಿದಾಗ ನಮ್ಮ ಹಿರಿಯರು ಯುರೋಪ್‌ನ ಸೆಕ್ಯೂಲರ್ ಮೌಲ್ಯಗಳನ್ನು ಅನುಸರಿಸುವ ನಿರ್ಧಾರ ಕೈಗೊಂಡರು. ಅಂತೆಯೆ ರಾಜ್ಯಾಡಳಿತದಲ್ಲಿ ಜಾತ್ಯತೀತತೆಯ ಸಂಪ್ರದಾಯವನ್ನು ಮುಂದುವರಿಸಿ ನಂತರ ಒಂದು ಮೌಲ್ಯವಾಗಿ ಸಂವಿಧಾನದಲ್ಲಿಯೂ ಅದನ್ನು ಅಳವಡಿಸಿಕೊಳ್ಳಲಾಯಿತು. ಆದರೆ ಜಾತ್ಯತೀತತೆಯ ಪರಿಕಲ್ಪನೆಗೆ ಆರಂಭದಿಂದಲೆ ಕಾಂಗ್ರೆಸ್ ಪಕ್ಷದ ಒಳಗಿನಿಂದಲೂ (ಉದಾ: ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮ ದಾಸ್ ಟಂಡನ್ ಮುಂತಾದವರು. ಲಾಲಾ ಲಜ್‌ಪತ್ ರಾಯ್, ಮದನ್ ಮೋಹನ್ ಮಾಲವೀಯರಂತಹ ಅನೇಕ ಕಾಂಗ್ರೆಸಿಗರು ಹಿಂದೂ ಮಹಾಸಭಾದ ಸದಸ್ಯರೂ ಆಗಿದ್ದರು) ಹಾಗೂ ಹೊರಗಿನಿಂದಲೂ ಬಹಳಷ್ಟು ವಿರೋಧಗಳು ಬಂದಿದ್ದವು.

ಸೋಮನಾಥ ದೇವಾಲಯದ ಜೀರ್ಣೋದ್ಧಾರ ಕಾರ್ಯ ಸರಕಾರದ ವತಿಯಿಂದ ನಡೆಯಬೇಕೆಂದು ಅಂದಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಮತ್ತು ಆಹಾರ ಸಚಿವ ಕೆ.ಎಂ. ಮುನ್ಷಿ ಒತ್ತಾಯಿಸಿದಾಗ ಪ್ರಧಾನಿ ನೆಹರೂ ಅದನ್ನು ವಿರೋಧಿಸಿದ್ದರು. ದೇವಾಲಯದ ಉದ್ಘಾಟನೆಗೆ ಹೋಗಲೇಬೇಕೆಂದು ರಾಜೇಂದ್ರ ಪ್ರಸಾದ್ ಪಟ್ಟು ಹಿಡಿದಾಗ ಅದನ್ನು ಸಚಿವಸಂಪುಟದ ಸಭೆಯಲ್ಲಿ ಚರ್ಚಿಸಲಾಯಿತು. ರಾಜೇಂದ್ರ ಪ್ರಸಾದ್ ಸರಕಾರದ ಪ್ರತಿನಿಧಿಯಾಗಿ ಅಲ್ಲ, ವೈಯುಕ್ತಿಕ ನೆಲೆಯಲ್ಲಿ ಹೋಗಬಹುದೆಂದು ಸಚಿವ ಸಂಪುಟ ತೀರ್ಮಾನಿಸಿತು. ಆದರೆ ನೆಹರೂ ಕಾಲಾನಂತರದಲ್ಲಿ ಕಾಂಗ್ರೆಸ್ ಮೇಲೆ ಮೃದು ಹಿಂದುತ್ವದ ಪ್ರಭಾವ ಮರುಕಳಿಸಿರುವುದನ್ನು ಪ್ರತ್ಯಕ್ಷವಾಗಲ್ಲದಿದ್ದರೂ ಪರೋಕ್ಷವಾಗಿ ಕಾಣಬಹುದು. ದೇಶದ ರಾಜಕಾರಣದ

ಮೇಲೆ ವೈದಿಕಶಾಹಿ ಶಕ್ತಿಗಳ ಪ್ರಭಾವ ವರ್ಧಿಸುತ್ತಿರುವುದನ್ನು ಸರಕಾರದ ಅಂಕಿಅಂಶಗಳೆ ಬಹಿ ರಂಗಪಡಿಸುತ್ತವೆ.

ಬ್ರಿಟಿಷರ ಕಾಲದಲ್ಲಿ ಅತ್ಯಧಿಕ ಸರಕಾರಿ ಹುದ್ದೆಗಳನ್ನು ಪಡೆದುಕೊಂಡವರು ಕಾಯಸ್ಥರಾಗಿದ್ದರೆ ಮುಸ್ಲಿಮರು ಮತ್ತು ಕ್ರೈಸ್ತರು ದ್ವಿತೀಯ ಮತ್ತು ತೃತೀಯ ಸ್ಥಾನಗಳಲ್ಲಿದ್ದರು. ಜನಸಂಖ್ಯೆಯ ಶೇಕಡಾ 3.5ರಷ್ಟಿದ್ದ ಬ್ರಾಹ್ಮಣರು ಶೇಕಡಾ 3ರಷ್ಟು ಸರಕಾರಿ ಹುದ್ದೆಗಳನ್ನು ಪಡೆದುಕೊಂಡಿದ್ದರು. ಆದರೀಗ ಸ್ವತಂತ್ರ ಭಾರತದ ಸಾರ್ವಜನಿಕ ಸೇವಾ ವಲಯದಲ್ಲಿ ಅರ್ಥಾತ್ ಅಧಿಕಾರಶಾಹಿಯಲ್ಲಿ (ಉಪಕಾರ್ಯದರ್ಶಿ ಹಾಗೂ ಮೇಲಿನ ಹುದ್ದೆಗಳು) ಕಾಯಸ್ಥರ, ಮುಸ್ಲಿಮರ ಮತ್ತು ಕ್ರೈಸ್ತರ ಪ್ರಾತಿನಿಧ್ಯ ಕಮ್ಮಿಯಾಗಿ ತೀರಾ ಕೆಳಮಟ್ಟಕ್ಕಿಳಿದಿದ್ದರೆ ಬ್ರಾಹ್ಮಣ ಅಧಿಕಾರಿಗಳ ಸಂಖ್ಯೆಯಲ್ಲಿ ಅಪಾರ ಏರಿಕೆಯಾಗಿದ್ದು ಅದು ಶೇಕಡಾ 70ಕ್ಕೂ ಅಧಿಕವಿದೆ.

ಪ್ರಸಕ್ತ ವಿದ್ಯಮಾನಗಳನ್ನು ಗಮನಿಸಿದರೆ ಧರ್ಮ ಮತ್ತು ರಾಜಕಾರಣಗಳ ಪರಸ್ಪರ ನಂಟಿನ ಹಿಂದಿನ ಮಾದರಿ ಪುನರಾವರ್ತನೆ ಆಗುತ್ತಿರುವುದಷ್ಟೆ ಅಲ್ಲ, ಇವೆರಡರೊಂದಿಗೆ ಕಾರ್ಪೊರೇಟ್ ಹಿತಾಸಕ್ತಿಗಳೂ ಕೈಜೋಡಿಸಿರುವುದರ ಪರಿಣಾಮವಾಗಿ ಪ್ರಭುತ್ವವು ತ್ರಿಮೂರ್ತಿಗಳ ಒಕ್ಕೂಟವಾಗಿರುವುದನ್ನು ಕಾಣಬಹುದು. ವಸ್ತುಸ್ಥಿತಿ ಹೀಗಿರುವಾಗ ಉದ್ಯಮಪತಿಗಳಿಂದ ಮತ್ತು ಅವರ ಸಂಘದಿಂದ ಅಭಿವೃದ್ಧಿಯ ಹರಿಕಾರರೆಂಬ ಹೊಗಳಿಕೆಗೆ ಪಾತ್ರರಾಗುವ ಕೋಮುವಾದಿ, ನರಹಂತಕ ರಾಜಕಾರಣಿಗಳಿಗೆ ಶಿಕ್ಷೆಯಾಗುತ್ತದೆಂದು ನಿರೀಕ್ಷಿಸಲಾದೀತೇ? ಗಮನಿಸಬೇಕಾದ ಅಂಶವೆಂದರೆ ಇಂದು ಅನೇಕ ಉದ್ಯಮಪತಿಗಳು ಮಾಧ್ಯಮಪತಿಗಳೂ ಆಗಿದ್ದಾರೆ; ಮಾಧ್ಯಮಪತಿಗಳಲ್ಲಿ ಉದ್ಯಮಪತಿಗಳೂ ಇದ್ದಾರೆ. ಈ ತ್ರಿಮೂರ್ತಿಗಳ ಒಕ್ಕೂಟದ ಒಂದು ಆಯಾಮವಾದ ಉದ್ಯಮಪತಿ ಮತ್ತು ರಾಜಕಾರಣಿಗಳ ಅಪವಿತ್ರ ಮೈತ್ರಿಯನ್ನು 2-ಜಿ ಹಗರಣ ಬಯಲಿಗೆಳೆದಿದೆ.

ಇನ್ನು ಉದ್ಯಮಪತಿ ಮತ್ತು ಧರ್ಮಗಳ ನಿಕಟ ಸಂಬಂಧದ ಆಯಾಮವನ್ನು ಉದ್ಯಮಪತಿ ಶಿಷ್ಯರುಗಳ ಉದಾರ ದೇಣಿಗೆಯಿಂದ ಆಧುನಿಕ ಜಗದ್ಗುರುಗಳು ಮತ್ತು ಮಠಮಂದಿರಗಳು ನಿರ್ಮಿಸಿ ನಡೆಸುತ್ತಿರುವ ಗುರುಕುಲ, ವಿಶ್ವವಿದ್ಯಾನಿಲಯ, ಛತ್ರ, ಹೈಟೆಕ್ ಆಸ್ಪತ್ರೆ ಇತ್ಯಾದಿಗಳಲ್ಲಿ ಕಾಣಬಹುದು. ಟಿವಿ ವಾಹಿನಿಗಳಲ್ಲಿ ಹೆಚ್ಚಿರುವ ಜ್ಯೋತಿಷಿಗಳ ಭರಾಟೆಯಲ್ಲೂ ನೋಡಬಹುದು. ಪುರಾತನಕಾಲದ ರಾಜರಂತೆ ತಾವೂ ಧರ್ಮರಕ್ಷಕರೆಂದು ಭಾವಿಸಿಕೊಂಡಿರುವ ರಾಜಕಾರಣಿ, ಉದ್ಯಮಪತಿಗಳ ಸಂಖ್ಯೆಯಲ್ಲಿ ಬೃಹತ್ತಾದ ಬೆಳವಣಿಗೆಯಾಗಿದೆ. ಇಂತಹವರ ಓಲೈಕೆಗೆ ನಿಂತಿರುವ ಧಾರ್ಮಿಕ ಗುರುಗಳ ಸಂಖ್ಯೆಯೂ ಬಹಳ ದೊಡ್ಡದಿದೆ. ಇವರ ಪೈಕಿ ಸ್ವಾಮಿ ಅಸೀಮಾನಂದ, ಶಾರದಾ ಸರ್ವಜ್ಞ ಪೀಠದ ಶಂಕರಾಚಾರ್ಯ ಸ್ವಾಮಿ ಅಮೃತಾನಂದ, ಮಹರ್ಷಿ ದಯಾನಂದನ ಶಿಷ್ಯ ಆನಂದ ಮಿತ್ರಾನಂದ ಸ್ವಾಮಿ, ಸಾಧ್ವಿ ಪ್ರಜ್ಞಾ ಸಿಂಗ್‌ರಂತಹ ಬಾಂಬ್ ಪ್ರಿಯರೂ ಇದ್ದಾರೆ.

ಜಾಗತೀಕರಣದ ಪ್ರಕ್ರಿಯೆ ನಿರ್ಮಿಸಿಕೊಟ್ಟಿರುವ ಒಂದು ಪೂರಕ ವಾತಾವರಣದಲ್ಲಿ ಪ್ರಭುತ್ವ, ವಾಣಿಜ್ಯೋದ್ಯಮ ಮತ್ತು ಧರ್ಮಗಳ ಈ ಕೂಡಿಕೆ ಸೊಂಪಾಗಿ ಬೆಳೆಯುತ್ತಿದೆ. ಜಾತ್ಯತೀತತೆಯ ತೆಳ್ಳನೆಯ ಪರದೆಯ ಹಿಂದೆ ಭಾರತದ ಸಾರ್ವಜನಿಕ ವಲಯಗಳ ಹಿಂದೂಕರಣ (ಅಥವಾ ಕೇಸರೀಕರಣ) ವ್ಯಾಪಕವಾಗಿ ನಡೆಯುತ್ತಿದೆ. ಭಾರತದ ಸೆಕ್ಯೂಲರ್ ಆಗಸವನ್ನು ಹಿಂದೂತ್ವವಾದದ ದಟ್ಟ ಕಾರ್ಮೋಡಗಳು ಆವರಿಸಿಕೊಳ್ಳುತ್ತಿವೆ. ವಾಸ್ತವಾಂಶ ಏನೆಂದರೆ ಸ್ವಾತಂತ್ರ್ಯಾನಂತರದ ಸರಕಾರಗಳು ಈ ದೇಶದಲ್ಲಿರುವ ವಿವಿಧ ಮತಧರ್ಮಗಳಿಗೆ ಸಮಾನ ಗೌರವ ತೋರುವ ಗುಣವನ್ನು ಅಥವಾ ತಾಟಸ್ಥ್ಯದ ಧೋರಣೆಯನ್ನು ಅಳವಡಿಸಿಕೊಂಡೆ ಇಲ್ಲ.

ಬದಲಿಗೆ ಜಾತ್ಯತೀತತೆಯ ತತ್ವಗಳಿಗೆ ಎಳ್ಳುನೀರು ಬಿಟ್ಟು ಹಿಂದೂ ಧರ್ಮಕ್ಕೇ ಹೆಚ್ಚು ಒತ್ತು ನೀಡಿ ಅದನ್ನೇ ರಾಷ್ಟ್ರ ಧರ್ಮವೆಂದು ಬಿಂಬಿಸಲಾಗುತ್ತಿದೆ. ಹೆಚ್ಚುಕಮ್ಮಿ ಪ್ರತಿಯೊಂದು ಸರಕಾರಿ ಕಚೇರಿ, ಪೊಲೀಸ್ ಠಾಣೆ ಮತ್ತು ಸಾರ್ವಜನಿಕ ವಲಯದ ಸಂಸ್ಥೆಯಲ್ಲಿ ಹಲವಾರು ವರ್ಷಗಳಿಂದ ಕೇವಲ ಹಿಂದೂ ದೇವತೆಗಳ ಆರಾಧನೆ ರಾಜಾರೋಷವಾಗಿ ನಡೆಯುತ್ತಿದೆ. ಆದರೆ ಜಾಣ ಕುರುಡರಂತಿರುವ ಸರಕಾರಗಳು ಈ ಸಂವಿಧಾನದ ಅಪಚಾರವನ್ನು ನಿಲ್ಲಿಸುವ ಗೋಜಿಗೆ ಇದುವರೆಗೆ ಹೋಗಿಲ್ಲ. ಒಟ್ಟಾರೆಯಾಗಿ ನೋಡಿದರೆ ಜಾತ್ಯತೀತತೆಯ ಸೋಗಿನಲ್ಲಿ ಧರ್ಮಾಧರಿತ ಹಿಂದೂ ರಾಷ್ಟ್ರವೊಂದರ ನಿರ್ಮಾಣ ಭರದಿಂದ ಸಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ವೈದಿಕಶಾಹಿ ವಿರುದ್ಧ ಬಂಡಾಯ ಸಾರಿದ್ದ ಬುದ್ಧ, ಮಹಾವೀರ, ಫುಲೆ, ಬಸವಣ್ಣ, ನಾರಾಯಣ ಗುರು ಮುಂತಾದ ಮಹಾತ್ಮರ ಹಿಂಬಾಲಕ ಮಠಗಳು, ರಾಜಕಾರಣಿಗಳು, ಉದ್ಯಮಿಗಳು ಮತ್ತು ಭಕ್ತರ ಪೈಕಿ ಅನೇಕರು ಇಂದು ಅದೇ ವೈದಿಕಶಾಹಿಯ ಹಿಂದೂತ್ವವಾದದ ಪಲ್ಲಕ್ಕಿಗೆ ಹೆಗಲು ಕೊಡುತ್ತಿರುವುದನ್ನು ಗಮನಿಸಬಹುದು. ಆದರೆ ಬ್ರಾಹ್ಮಣೇತರ ನಾಯಕರನ್ನು ಕೇವಲ ಅಧಿಕಾರ ಗ್ರಹಣಕ್ಕಾಗಿ ಬಳಸಿಕೊಳ್ಳುವ ವೈದಿಕಶಾಹಿ ಅಂತಿಮವಾಗಿ ಅಂತಹವರನ್ನು ಕಬ್ಬಿನ ಚರಟದಂತೆ ಹೊರಗೆಸೆದು ತಾನೇ ಗದ್ದುಗೆಗೇರಲು ಮುಂದಾಗುತ್ತದೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಇಂದು ದೇಶಾದ್ಯಂತ ಅಸಂಖ್ಯಾತ ಮಠಮಾನ್ಯ ಮತ್ತು ದೇವಾಲಯಗಳು ತಲೆಯೆತ್ತಿವೆ. ಭಕ್ತಾದಿಗಳ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿದೆ. ಅರ್ಚಕರ ಶಿಕ್ಷಣ ಹಾಗೂ ತರಬೇತಿ ಸಂಸ್ಥೆಗಳಿಗೆ; ಭಕ್ತಾದಿಗಳ ಸಲುವಾಗಿರುವ ಶಾಲೆ, ಆಸ್ಪತ್ರೆ, ಛತ್ರ ಇತ್ಯಾದಿ ಸೌಕರ್ಯಗಳಿಗೆ ಬೇಡಿಕೆ ಹೆಚ್ಚಿದೆ. ಇದನ್ನೆಲ್ಲ ಒದಗಿಸುವುದಕ್ಕೆ ಹೆಚ್ಚೆಚ್ಚು ಭೂಮಿ ಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಸರಕಾರ ಒಂದೋ ಉಚಿತವಾಗಿ ಇಲ್ಲಾ ಕಮ್ಮಿ ಬೆಲೆಗೆ ಭೂಮಿ ಒದಗಿಸುವುದು ಮಾತ್ರವಲ್ಲದೆ ತೆರಿಗೆ ವಿನಾಯಿತಿ/ರಿಯಾಯಿತಿ ಮತ್ತಿತರ ಸವಲತ್ತುಗಳನ್ನೂ ಕೊಡಮಾಡುತ್ತದೆ. ಹೀಗೆ ದೇಶಾದ್ಯಂತ ಗುರುಕುಲ, ಋಷಿಕುಲ, ವೈದಿಕ ಪಾಠಶಾಲೆ, ಆಗಮಿಕ ಪಾಠಶಾಲೆಯಂತಹ ಅಸಂಖ್ಯಾತ ಅರ್ಚಕ ತರಬೇತಿ ಶಾಲೆಗಳನ್ನೂ, ಅನೇಕ ಶಿಕ್ಷಣ ಸಂಸ್ಥೆಗಳನ್ನೂ, ಡೀಮ್ಡ್ ವಿಶ್ವವಿದ್ಯಾನಿಲಯಗಳನ್ನೂ ಸ್ಥಾಪಿಸಲಾಗುತ್ತಿದೆ. ಸತ್ಯ ಸಾಯಿ ಬಾಬಾ, ಶ್ರೀ ರವಿಶಂಕರ, ಬಾಬಾ ರಾಮದೇವ, ಮಾತಾ ಅಮೃತಾನಂದಮಯಿ, ಸ್ವಾಮಿ ಚಿನ್ಮಯಾನಂದ, ಮಹರ್ಷಿ ಮಹೇಶ್ ಯೋಗಿ ಮುಂತಾದ ಆಧುನಿಕ ಜಗದ್ಗುರುಗಳ ಹೆಸರಲ್ಲಿ ಸ್ಥಾಪಿಸಲಾಗುವ ಸಂಸ್ಥೆಗಳಿಗೆ ಆಯಾ ಗುರುವಿನ ಉದ್ಯಮಪತಿ ಶಿಷ್ಯರುಗಳಿಂದ ಉದಾರ ಧನಸಹಾಯ ಹರಿದುಬರುತ್ತದೆ. ಅಣಬೆಗಳ ಮಾದರಿಯಲ್ಲಿ ತಲೆಯೆತ್ತಿರುವ ಇಂತಹ ವಿದ್ಯಾಸಂಸ್ಥೆಗಳ ಮೂಲಕ ಆಧುನಿಕ ವಿಷಯಗಳ ಜೊತೆಗೆ ಸಂಸ್ಕೃತ, ಜ್ಯೋತಿಷ, ವೈದಿಕ ವಿಜ್ಞಾನಗಳನ್ನು ಕೂಡ ವ್ಯಾಪಕವಾಗಿ ಹರಡಲಾಗುತ್ತಿದೆ. ಇಂತಹ ವಿದ್ಯಾಸಂಸ್ಥೆಗಳು ವಾಸ್ತವದಲ್ಲಿ ಮೃದು ಹಿಂದೂತ್ವದ ಪ್ರತಿಪಾದಕರಾಗಿವೆ.

ಧಾರ್ಮಿಕ ವಲಯ, ವಾಣಿಜ್ಯೋದ್ಯಮ ಮತ್ತು ಸರಕಾರಗಳ ಹಿತಾಸಕ್ತಿಗಳು ಒಟ್ಟು ಸೇರಿರುವುದಕ್ಕೆ ಹಲವು ಉದಾಹರಣೆಗಳನ್ನು ನೀಡಬಹುದು. ಪಶ್ಚಿಮ ಬಂಗಾಲದ ಮಾಯಾಪುರದಲ್ಲಿರುವ ಹರೇಕೃಷ್ಣ ಮಂದಿರದ ನಿರ್ಮಾಣದಲ್ಲಿ ಫೋರ್ಡ್ ಮೋಟರ್ ಸಂಸ್ಥೆ ಪಾಲ್ಗೊಂಡಿದೆ. ತಮಿಳುನಾಡಿನಲ್ಲಿ ಮಂದಿರಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಟಿವಿಎಸ್ ಗುಂಪು ಸಕ್ರಿಯವಾಗಿ ಭಾಗಿಯಾಗಿದೆ. ಇನ್ನು ಸರಕಾರಗಳು ಕೂಡ ತಮ್ಮ ಬೊಕ್ಕಸದಿಂದ ಮಂದಿರ, ಮಠಮಾನ್ಯಗಳಿಗೆ ಬೇಕಾಬಿಟ್ಟಿಯಾಗಿ ಅನುದಾನ ನೀಡುತ್ತಿವೆ. ಧಾರ್ಮಿಕ ಪ್ರವಾಸ ಮತ್ತು ತೀರ್ಥಯಾತ್ರೆಗಳಿಗೆ ಉತ್ತೇಜನ ನೀಡುವ ಏಕಮಾತ್ರ ಉದ್ದೇಶದಿಂದ ಸಾಂಪ್ರದಾಯಿಕ ಹಿಂದೂ ಹಬ್ಬಗಳಿಗೆ ಹೊಸ ರೂಪು ಕೊಟ್ಟು ಜನಪ್ರಿಯಗೊಳಿಸಲಾಗುತ್ತಿದೆ. ಪರಿಣಾಮವಾಗಿ ಹೆಚ್ಚುತ್ತಿರುವ ಧಾರ್ಮಿಕ ಪ್ರವಾಸಗಳು ಮೂರೂ ಹಿತಾಸಕ್ತಿಗಳ ಪಾಲಿಗೆ ಬಹುದೊಡ್ಡ ಲಾಭದಾಯಕ ಉದ್ಯಮವಾಗಿಬಿಟ್ಟಿದೆ. ಜಮ್ಮುಕಾಶ್ಮೀರದ ವೈಷ್ಣೋದೇವಿ, ಗುಜರಾತಿನ ಶಬರಿ ಕುಂಭ, ಮಕರ ಸಂಕ್ರಾಂತಿ, ನವರಾತ್ರಿ ಉತ್ಸವ, ಮೈಸೂರು ದಸರಾ, ಶಬರಿಮಲೆಯ ಮಕರವಿಳಕ್ಕುಂ ಮುಂತಾದ ಅನೇಕಾನೇಕ ನಿದರ್ಶನಗಳನ್ನು ಕೊಡಬಹುದು. ಸರಕಾರ, ವಾಣಿಜ್ಯೋದ್ಯಮ ಮತ್ತು ಧರ್ಮಗಳು ಒಟ್ಟಾಗಿರುವುದಕ್ಕೆ ಇನ್ನೂ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ:

1983ರಲ್ಲಿ ವಿಶ್ವ ಹಿಂದೂ ಪರಿಷತ್ತು ಆಯೋಜಿಸಿದ್ದ ಏಕತ್ಮತಾ ಯಜ್ಞದಲ್ಲಿ ಸರಕಾರಿ ಅಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಗಳು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು.

ಗುಜರಾತ್‌ನ ಪೋರ್‌ಬಂದರ್‌ನಲ್ಲಿರುವ "ಶ್ರೀ ಹರಿ ಮಂದಿರ"ವನ್ನು ಮತ್ತು "ಸಂದೀಪನಿ ವಿದ್ಯಾನಿಕೇತನ"

1983ರಲ್ಲಿ ವಿಶ್ವ ಹಿಂದೂ ಪರಿಷತ್ತು ಆಯೋಜಿಸಿದ್ದ ಏಕತ್ಮತಾ ಯಜ್ಞದಲ್ಲಿ ಸರಕಾರಿ ಅಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಗಳು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. ಗುಜರಾತ್‌ನ ಪೋರ್‌ಬಂದರ್‌ನಲ್ಲಿರುವ "ಶ್ರೀ ಹರಿ ಮಂದಿರ"ವನ್ನು ಮತ್ತು "ಸಂದೀಪನಿ ವಿದ್ಯಾನಿಕೇತನ" ಎಂಬ ಅರ್ಚಕ ತರಬೇತಿ ಸಂಸ್ಥೆಯನ್ನು ಗುಜರಾತ್ ಸರಕಾರ ಮತ್ತು ಅಂಬಾನಿಗಳ ಜಂಟಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದೆ. ಇದರ ಉದ್ಘಾಟನೆಗೆ ಬಂದಿದ್ದ ಚುನಾಯಿತ ಪ್ರತಿನಿಧಿಗಳು ಸಂವಿಧಾನದ ಜಾತ್ಯತೀತತೆಯ ಮೌಲ್ಯವನ್ನು ಸಂಪೂರ್ಣವಾಗಿ ಮರೆತು ಪೂಜೆ ಸಲ್ಲಿಸಿದ್ದರು.

ಎಂಬ ಅರ್ಚಕ ತರಬೇತಿ ಸಂಸ್ಥೆಯನ್ನು ಗುಜರಾತ್ ಸರಕಾರ ಮತ್ತು ಅಂಬಾನಿಗಳ ಜಂಟಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದೆ. ಇದರ ಉದ್ಘಾಟನೆಗೆ ಬಂದಿದ್ದ ಚುನಾಯಿತ ಪ್ರತಿನಿಧಿಗಳು ಸಂವಿಧಾನದ ಜಾತ್ಯತೀತತೆಯ ಮೌಲ್ಯವನ್ನು ಸಂಪೂರ್ಣವಾಗಿ ಮರೆತು ಪೂಜೆ ಸಲ್ಲಿಸಿದ್ದರು.

ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಹಿಂದೂ ಅರ್ಚಕರ ವೇತನಗಳನ್ನು ಸರಕಾರಿ ಖಜಾನೆಯಿಂದ ಪಾವತಿಸಲಾಗುತ್ತಿದೆ.

ಬಿಲಿಯಾಧಿಪತಿ ಗಣಿಧಣಿ ಅನಿಲ್ ಅಗರ್‌ವಾಲ್‌ನ ವೇದಾಂತ ರಿಸೋರ್ಸಸ್ ಸಂಸ್ಥೆ ಒರಿಸ್ಸಾದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ "ವೇದಾಂತ ವಿಶ್ವವಿದ್ಯಾನಿಲಯ"ಕ್ಕೆ ಸರಕಾರ 8000 ಎಕರೆ ಭೂಮಿ ನೀಡುವ ಭರವಸೆ ಕೊಟ್ಟಿದೆ. (ಇದಕ್ಕೀಗ ಕೇಂದ್ರ ಪರಿಸರ ಖಾತೆ ಆಕ್ಷೇಪ ಎತ್ತಿದೆ.) ಇದೇ ಅನಿಲ್ ಅಗರ್‌ವಾಲ್ ಬ್ರಿಟನ್‌ನಲ್ಲಿ ಸರಕಾರಿ ಅನುದಾನದಿಂದ ನಡೆಸಲಾಗುತ್ತಿರುವ "ಕೃಷ್ಣ ಆವಂತಿ" ಎಂಬ ಸಾಂಪ್ರದಾಯಿಕ ಶಾಲೆಗಳ ಸ್ಥಾಪನೆಯಲ್ಲಿ ಭಾಗಿಯಾಗಿದ್ದ.

ಅಮೆರಿಕಾದ ಪೆನ್ಸಿಲ್ವಾನಿಯ ರಾಜ್ಯದಲ್ಲಿರುವ ಆಧುನಿಕ ಸ್ವಾಮಿ ದಯಾನಂದ ಸರಸ್ವತಿಯ "ಆರ್ಷ ವಿದ್ಯಾ ಕೇಂದ್ರ" ಭಾರತದಲ್ಲಿ ಎರಡು ಶಾಖೆಗಳನ್ನು ತೆರೆದಿದೆ. ಅಲ್ಲಿ ಸಂಸ್ಕೃತ, ಯೋಗ, ಅದ್ವೈತ ವೇದಾಂತ, ಜ್ಯೋತಿಷ ಮುಂತಾದ ವಿಷಯಗಳನ್ನು ಕಲಿಸಲಾಗುತ್ತಿದೆ.

ಶ್ರೀಶ್ರೀ ರವಿಶಂಕರ್ ಸ್ವಾಮಿಯ "ಆರ್ಟ್ ಆಫ್ ಲಿವಿಂಗ್" ಮುಖ್ಯವಾಗಿ ಐಟಿ, ಬಿಟಿಗಳ ಮಧ್ಯಮವರ್ಗದ ಜನರನ್ನು ಗುರಿಯಾಗಿಸಿರುವ ಮಿಲಿಯಾಂತರ ಡಾಲರುಗಳ ಉದ್ಯಮವಾಗಿದೆ. ಈತನ ಆಶ್ರಮ ಮತ್ತು ಅದರ ಸುತ್ತಮುತ್ತಲಿನ ಭೂಮಿಯನ್ನು ಸರಕಾರದಿಂದ 99 ವರ್ಷಗಳ ಲೀಸಿಗೆ ಪಡೆಯಲಾಗಿದೆ. ಅಲ್ಲದೆ ಒರಿಸ್ಸಾ ಸರಕಾರ ಅಗ್ಗ ದರದಲ್ಲಿ ಒದಗಿಸಿದ 200 ಎಕರೆ ಜಮೀನಿನಲ್ಲಿ ಸ್ಥಾಪಿಸಲಾಗುವ "ಶ್ರೀಶ್ರೀ ಆರ್ಟ್ ಆಫ್ ಲಿವಿಂಗ್ ವಿಶ್ವವಿದ್ಯಾನಿಲಯ"ದಲ್ಲಿ ವಿಜ್ಞಾನ, ತಂತ್ರಜ್ಞಾನದ ಕೋರ್ಸುಗಳ ಜೊತೆಗೆ ಭಗವದ್ಗೀತೆ, ವೇದಾಂತ, ಯೋಗ ಮುಂತಾದ ವಿಷಯಗಳನ್ನೂ ಕಲಿಸಲಾಗುವುದಂತೆ.

ಮಧ್ಯ ಪ್ರದೇಶದಲ್ಲಿರುವ "ಮಹರ್ಷಿ ಮಹೇಶ ಯೋಗಿ ವೈದಿಕ ವಿವಿ" ಸಕಲ ಸರಕಾರಿ ಸವಲತ್ತುಗಳನ್ನು ಪಡೆದುಕೊಂಡಿದೆ. ಇಲ್ಲಿ ವೈದಿಕ ಸಂಸ್ಕೃತಿ ಆಧರಿತ ಶಿಕ್ಷಣ ನೀಡಲಾಗುತ್ತದೆ. ಛತ್ತೀಸ್‌ಗಢದಲ್ಲಿಯೂ ಒಂದು ಮ್ಯಾನೇಜ್‌ಮೆಂಟ್ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ. ಇದಕ್ಕೆ ಯುಜಿಸಿ ಮಾನ್ಯತೆಯೂ ದೊರೆತಿದೆ.

ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ವ್ಯಾಪಕವಾಗಿ ಹರಡುವುದಕ್ಕಾಗಿ ಆರೆಸ್ಸೆಸ್ ನಿರ್ಮಿಸಲು ಹೊರಟಿರುವ "ಕೇಶವ ವಿದ್ಯಾಪೀಠ ವಿಶ್ವವಿದ್ಯಾನಿಲಯ"ಕ್ಕೆ ರಾಜಸ್ಥಾನ ಸರಕಾರ 2300 ಎಕರೆಗಳಷ್ಟು ಜಾಗ ಮಂಜೂರು ಮಾಡಿದೆ. ಅಲ್ಲಿ ಕಾಲೇಜು ಮಟ್ಟದಲ್ಲಿ ವೈದಿಕ ವಿಜ್ಞಾನಗಳನ್ನು ಕಲಿಸಲಾಗುವುದಂತೆ.

ಮಿಲಿಯಾಧಿಪತಿ ಸ್ವಾಮಿ ಬಾಬಾ ರಾಮದೇವನಿಗೆ ಮಧ್ಯ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳು ದಾನವಾಗಿ ಕೊಟ್ಟಿರುವ ಎಕರೆಗಟ್ಟಲೆ ಭೂಮಿಗಳಲ್ಲಿ ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗುತ್ತಿದೆ. ಆತನ "ಪತಂಜಲಿ ಯೋಗ ಪೀಠ"ಕ್ಕೆ ಅನಿಲ್ ಅಗರ್‌ವಾಲ್, ಹಿಂದೂಜಾ ಸೋದರರು, ಲಕ್ಷ್ಮಿ ಮಿತ್ತಲ್ ಮುಂತಾದ ಉದ್ಯಮಪತಿಗಳು ಉದಾರ ಧನಸಹಾಯ ನೀಡಿದ್ದಾರೆ.

ಐರೋಪ್ಯ ದೇಶಗಳ ಅರಸರೂ ರೋಮನ್ ಚರ್ಚು ಮತ್ತು ಧರ್ಮ ಗುರುಗಳಿಗೆ ಜಮೀನುಗಳನ್ನು ಉಂಬಳಿ ನೀಡುವ ಪರಿಪಾಠ ಇಟ್ಟುಕೊಂಡಿದ್ದರು. ಕಾಲಕ್ರಮೇಣ ಸಂಪೂರ್ಣವಾಗಿ ಐಹಿಕ ವ್ಯವಹಾರಗಳಲ್ಲಿ ಮುಳುಗಿ ಆಗರ್ಭ ಶ್ರೀಮಂತಿಕೆಯನ್ನು ತನ್ನ ದಾಗಿಸಿಕೊಂಡ ಚರ್ಚ್ ವ್ಯವಸ್ಥೆಯೊಳಗೆ ಸುಖಲೋಲುಪತೆ, ಅಧಿಕಾರ ದಾಹ, ಭ್ರಷ್ಟಾಚಾರ – ಅನೈತಿಕ ಚಟುವಟಿಕೆಗಳು ತಾಂಡವವಾಡತೊಡಗಿದವು. ರಾಜ್ಯಾಡಳಿತದಲ್ಲಿ ಚರ್ಚಿನ ಹಸ್ತಕ್ಷೇಪ ಮಿತಿಮೀರಿದಾಗ ಒಂದು ಹಂತದಲ್ಲಿ ಪ್ರಭುತ್ವ ಮತ್ತು ಧರ್ಮದ ಮಧ್ಯೆ ಸಂಘರ್ಷ ತಲೆದೋರಿತು.

ಹಿಂದೂತ್ವವಾದಿಗಳಿಗೆ ಬಹಳ ಬೇಕಾದವನಾದ ಸ್ವಾಮಿ ರಾಮದೇವ ಈಗ ಖುದ್ದು ರಾಜಕಾರಣಕ್ಕೆ ಧುಮುಕಿದ್ದಾನೆ.

ಎನ್‌ಡಿಎ ಸರಕಾರದ ಕಾಲದಲ್ಲಿ "ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ" ಮತ್ತು ಎರಡು ಕೇಂದ್ರೀಯ ವಿದ್ಯಾಪೀಠಗಳಿಗೆ ಡೀಮ್ಡ್ ವಿಶ್ವವಿದ್ಯಾನಿಲಯಗಳ ಸ್ಥಾನಮಾನ ನೀಡಲಾಗಿದೆ. ಈ ಮೂರೂ ಸಂಸ್ಥೆಗಳು ಸಂಸ್ಕೃತ, ಯೋಗ ಮತ್ತು ವೈದಿಕ ವಿಜ್ಞಾನ ವಿಷಯಗಳಲ್ಲಿ ಡಿಗ್ರಿ ಕೋರ್ಸುಗಳನ್ನು ನಡೆಸುತ್ತಿವೆ.

ತಮಿಳ್ನಾಡಿನ ಪುದುಕೋಟ್ಟೈಯಲ್ಲಿರುವ ಜನಸಾಮಾನ್ಯರ ಮಾರಿಯಮ್ಮನ್ ಮಂದಿರವನ್ನು ಕುಲೀನ ಸ್ಥಾನಕ್ಕೆ ಏರಿಸಿರುವುದು ಐಯಂಗಾರ್ ಬ್ರಾಹ್ಮಣರ ಟಿವಿಎಸ್ ಗುಂಪಿನ ಸಂಸ್ಥೆ. ಇದು ಬುಡಕಟ್ಟುಗಳ ದೈವ, ದೇವಿಯರನ್ನು ಹಿಂದೂಕರಣಗೊಳಿಸುವ ಪ್ರಕ್ರಿಯೆಯ ಭಾಗವಾಗಿದೆ. ತಮಿಳ್ನಾಡಿನಾದ್ಯಂತ ದೇವಾಲಯಗಳ ಜೀರ್ಣೋದ್ಧಾರದಲ್ಲಿ ತೊಡಗಿರುವ "ಇಂಡಿಯನ್ ಕಲ್ಚರ್ ಆಂಡ್ ಹೆರಿಟೇಜ್ ಟ್ರಸ್ಟ್"ಗೆ ಅತಿ ಹೆಚ್ಚು ದೇಣಿಗೆ ನೀಡುತ್ತಿರುವುದೆ ಈ ಟಿವಿಎಸ್ ಗುಂಪು.

ವೈದಿಕ ಧರ್ಮದ ಶ್ರೇಣೀಕೃತ ಸಮಾಜರಚನೆ ಮತ್ತು ಕಂದಾಚಾರಗಳಿಂದ ಸಿಡಿದೆದ್ದು ಬಂಡಾಯ ಸಾರಿದ ಬಸವಣ್ಣನಂಥವರ ಶ್ರೇಷ್ಠ ಪರಂಪರೆ ಹೊಂದಿರುವ ಕರ್ನಾಟಕ ಇಂದು ಹಿಂದೂತ್ವವಾದಿಗಳ ಆಡುಂಬೊಲವಾಗಿದೆ. ಉಡುಪಿಯ ಅಷ್ಟಮಠಗಳು ಸೇರಿದಂತೆ ರಾಮಚಂದ್ರಾಪುರ, ಸಿದ್ಧಗಂಗಾ, ಆದಿಚುಂಚನಗಿರಿ, ಸುತ್ತೂರು, ಸಿರಿಗೆರೆ, ಭಗೀರಥ, ಲಂಬಾಣಿ ಮುಂತಾದ ಅನೇಕ ಮಠಗಳು ಹಿಂದೂತ್ವದ ಪ್ರಭಾವಕ್ಕೊಳಗಾಗಿವೆ. ಕಮ್ಮಿ ಬೆಲೆಗೆ ಜಮೀನು ಮತ್ತಿತರ ಸರಕಾರಿ ಸವಲತ್ತುಗಳನ್ನು ಪಡೆದುಕೊಂಡ ಆದಿಚುಂಚನಗಿರಿ ಮಹಾಸಂಸ್ಥಾನ ಮತ್ತು ಸುತ್ತೂರು ಮಠಗಳು ನೆರೆ ರಾಜ್ಯಗಳಲ್ಲಿ ಸಹಿತ ನೂರಾರು ಶಿಕ್ಷಣಸಂಸ್ಥೆಗಳನ್ನು ನಡೆಸುತ್ತಿವೆ.

ಅವುಗಳಲ್ಲಿ ಆಧುನಿಕ ವಿಷಯಗಳ ಜೊತೆಗೆ ವೇದ, ಆಗಮ ಶಾಸ್ತ್ರಗಳನ್ನು ಬೋಧಿಸುವ ಕಾಲೇಜುಗಳೂ ಸೇರಿವೆ. ವಿಶ್ವ ಹಿಂದೂ ಪರಿಷತ್ತಿನ ಸಂಸ್ಥಾಪಕರಲ್ಲೊಬ್ಬನಾದ ಸ್ವಾಮಿ ಚಿನ್ಮಯಾನಂದನ ಚಿನ್ಮಯ ಮಿಷನ್ ಕೂಡಾ ಸುಮಾರು 75 ಶಾಲೆಗಳನ್ನು ನಡೆಸುತ್ತಿದ್ದು ಅವು ವಿವಿಧ ರಾಜ್ಯಗಳಲ್ಲಿ ಹರಡಿಕೊಂಡಿವೆ. ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಸೊಸೈಟಿಗೆ ಶಿಕ್ಷಣ ಸಂಸ್ಥೆ, ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆ, ಸಂಶೋಧನಾ ಕೇಂದ್ರಗಳನ್ನು ನಿರ್ಮಿಸಲು ಬೇಕಾದ ಅಗ್ಗ ಬೆಲೆಯ ಭೂಮಿ ಮತ್ತಿತರ ಸವಲತ್ತುಗಳನ್ನು ಸರಕಾರವೆ ಮಂಜೂರುಮಾಡುತ್ತದೆ. ಇತ್ತೀಚೆಗೆ ವ್ಯಾಪಕ ಪ್ರತಿರೋಧಗಳ ನಡುವೆಯೂ ಸರಕಾರದ ವತಿಯಿಂದ ಒಂದು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ.

ಯುರೋಪ್‌ನ ಅನುಭವಗಳು

ಮಧ್ಯಯುಗದಲ್ಲಿ ಐರೋಪ್ಯ ದೇಶಗಳ ಅರಸರೂ ರೋಮನ್ ಚರ್ಚು ಮತ್ತು ಧರ್ಮ ಗುರುಗಳಿಗೆ ಜಮೀನುಗಳನ್ನು ಉಂಬಳಿ ನೀಡುವ ಪರಿಪಾಠ ಇಟ್ಟುಕೊಂಡಿದ್ದರು. ಕಾಲಕ್ರಮೇಣ ಸಂಪೂರ್ಣವಾಗಿ ಐಹಿಕ ವ್ಯವಹಾರಗಳಲ್ಲಿ ಮುಳುಗಿ ಆಗರ್ಭ ಶ್ರೀಮಂತಿಕೆಯನ್ನು ತನ್ನದಾಗಿಸಿಕೊಂಡ ಚರ್ಚ್ ವ್ಯವಸ್ಥೆಯೊಳಗೆ ಸುಖಲೋಲುಪತೆ, ಅಧಿಕಾರ ದಾಹ, ಭ್ರಷ್ಟಾಚಾರ ಮತ್ತು ಅನೈತಿಕ ಚಟುವಟಿಕೆಗಳು ತಾಂಡವವಾಡತೊಡಗಿದವು. ರಾಜ್ಯಾಡಳಿತದಲ್ಲಿ ಚರ್ಚಿನ ಹಸ್ತಕ್ಷೇಪ ಮಿತಿಮೀರಿದಾಗ ಒಂದು ಹಂತದಲ್ಲಿ ಪ್ರಭುತ್ವ ಮತ್ತು ಧರ್ಮದ ಮಧ್ಯೆ ಸಂಘರ್ಷ ತಲೆದೋರಿತು. ಅಂತಿಮವಾಗಿ ಜನರ ವಿಚಾರಣಾಪ್ರವೃತ್ತಿ ಮತ್ತು ವಿಮರ್ಶಾಗುಣಗಳು ಮೇಲುಗೈ ಸಾಧಿಸಿ 16ನೆ ಶತಮಾನದಲ್ಲಿ ನಡೆದ ಮತ ಸುಧಾರಣೆ ವ್ಯಾಪಕ ಬದಲಾವಣೆಗೆ ಕಾರಣವಾಯಿತು. ಪೋಪ್ ಗುರುವಿನ ಸಾಮ್ರಾಜ್ಯ ಕೇವಲ ವ್ಯಾಟಿಕನ್‌ಗಷ್ಟೆ ಸೀಮಿತಗೊಂಡಿತು. ಮತಸುಧಾರಣೆಯ ಕ್ರಾಂತಿಯ ನಂತರದಲ್ಲಿ ಬೌದ್ಧಿಕ ಸ್ವಾತಂತ್ರ್ಯ ಮತ್ತೆ ಚಿಗುರಿ, ವೈಚಾರಿಕತೆ ಬೆಳೆದು, ಕುರುಡು ನಂಬಿಕೆ ಮತ್ತು ಅಂಧಾತ್ಮಕ ಸಿದ್ಧಾಂತಗಳು ಅಳಿದಾಗ ಆಧುನಿಕತೆಯ ದಿಕ್ಕಿನಲ್ಲಿ ದಾಪುಗಾಲಿಟ್ಟ ಯುರೋಪ್, ಮುಂದಿಟ್ಟ ಹೆಜ್ಜೆಯನ್ನು ಇದುವರೆಗೆ ಹಿಂದೆಗೆದುಕೊಂಡಿಲ್ಲ.

ಅದೇ ಭಾರತದಲ್ಲಾದರೆ ಬುದ್ಧ, ಮಹಾವೀರ, ಬಸವಣ್ಣ ಮುಂತಾದವರಿಂದ ಅನೇಕ ಬಂಡಾಯಗಳಾಗಿವೆಯಾದರೂ ಪ್ರತಿಬಾರಿಯೂ ವೈದಿಕಶಾಹಿ ಅವುಗಳನ್ನು ಮೆಟ್ಟಿನಿಂತು ತಾನೇ ವಿಜೃಂಭಿಸಿದೆ. ಗ್ಲಾನಿಯಿಂದ ಕೂಡಿರುವ ಪ್ರಸಕ್ತ ಭಾರತೀಯ ಸಮಾಜವನ್ನು ಉದ್ಧರಿಸಬೇಕಿದ್ದರೆ ಧರ್ಮ, ರಾಜಕಾರಣ ಮತ್ತು ಕಾರ್ಪೊರೇಟ್‌ಗಳ ಅಪವಿತ್ರ ಕೂಡಿಕೆಯನ್ನು ಸದೆಬಡಿದು ಶಾಶ್ವತವಾಗಿ ಸಮಾಧಿ ಮಾಡಬಲ್ಲಂತಹ ಒಂದು ಶಕ್ತಿಯುತ ಕ್ರಾಂತಿಯ ಜರೂರಿಯಿದೆ.

ಆಕರಗ್ರಂಥಗಳು:

* The God Market – ಮೀರಾ ನಂದಾ
  Confessions of A Secular Fundamentalist
  ಮಣಿ ಶಂಕರ್ ಐಯರ್
* The Culture and Civilisation of Ancient India
  ಡಿ.ಡಿ.ಕೋಸಾಂಬಿ
* Temple Desecration and Indo-Muslim States – ರಿಚರ್ಡ್ ಎಂ. ಈಟನ್
* Landmarks in World History
  ಸಿ.ಎಲ್. ಮರಿವಾಲಾ, ಎ.ಎಲ್. ಡಿಸೋಜಾ, ಬಿ.ಕೆ. ಗೋಖಲೆ
* ಶಂಕರಾಚಾರ್ಯ ಮತ್ತು ಪ್ರತಿಗಾಮಿತನ
  ಡಾ. ಕೆ.ಎಸ್. ಭಗವಾನ್
* ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ – ಸ್ವಾಮಿ ಧರ್ಮತೀರ್ಥ; ಅನು: ಕೆ. ಎಸ್ ಭಗವಾನ್ □

2000 ಜನ ಹೃದ್ರೋಗಿಗಳಿಗೆ ಉಚಿತ ಚಿಕಿತ್ಸೆಗೆ ಅವಕಾಶ
ಹೃದ್ರೋಗಿಗಳಲ್ಲಿ ಬದುಕುವ ಭರವಸೆ ಮೂಡಿಸಿದ
'ಹೃದಯ ಸಂಜೀವಿನಿ'
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಂದ ಚಾಲನೆ.
ಪ್ರತಿಯೊಬ್ಬರಿಗೂ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಮೂಲಕ ಕರ್ನಾಟಕವನ್ನು 'ಆರೋಗ್ಯಧಾಮ'ವನ್ನಾಗಿ ರೂಪಿಸಲು ಸರ್ಕಾರ ಕಂಕಣಬದ್ಧವಾಗಿದೆ. ಈ ನಿಟ್ಟಿನಲ್ಲಿ ಜನಪರ ಕಾಳಜಿಯುಳ್ಳ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಜಾರಿಗೆ ತಂದ 'ಆರೋಗ್ಯ ಕವಚ', 'ಆರೋಗ್ಯ ಭಾಗ್ಯ', 'ಹೃದಯ ಸಂಜೀವಿನಿ' ಯೋಜನೆಗಳು ರಾಜ್ಯದ ಆರೋಗ್ಯ ಸೇವಾ ಕ್ಷೇತ್ರದ ಚಿತ್ರಣವನ್ನು ಕ್ರಾಂತಿಕಾರಿಯಾಗಿ ಬದಲಾಯಿಸಿವೆ.
ಸರ್ಕಾರ ಯಶಸ್ವಿಯಾಗಿ ಒಂದು ವರ್ಷ ಪೂರೈಸುತ್ತಿರುವ ಈ ಶುಭ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಹೃದ್ರೋಗದಿಂದ ಬಳಲುತ್ತಿರುವ ಬಡಜನರಿಗಾಗಿ 'ಹೃದಯ ಸಂಜೀವಿನಿ' ಯೋಜನೆಯಡಿ ಉಚಿತ ಚಿಕಿತ್ಸೆ ಪಡೆದುಕೊಳ್ಳಲು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆಯಲ್ಲಿ 2000 ಜನರಿಗೆ ಅವಕಾಶ ಕಲ್ಪಿಸುವ ಮೂಲಕ ಸರ್ಕಾರಕ್ಕಿರುವ ಮಾನವೀಯ ಕಳಕಳಿಗೆ ಮುನ್ನುಡಿ ಬರೆದಿದ್ದಾರೆ.
ಚಿಕಿತ್ಸೆ ಪಡೆಯಲು ಬೇಕಾದ ಅರ್ಹತೆ / ದಾಖಲೆ ವಿವರಗಳು
* ರೋಗಿಯ ಭಾವಚಿತ್ರದ ಪಾಸ್‌ಪೋರ್ಟ್ ಅಳತೆಯ ಮೂರು ಪ್ರತಿ.
* ರೋಗಿಯ ವಿಳಾಸದ ದೃಢೀಕರಣ ದಾಖಲಾತಿ (ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ವಾಹನ ಚಾಲನಾ ಪರವಾನಗಿ ಪತ್ರ) ಇವುಗಳಲ್ಲಿ ಒಂದನ್ನು ಸಲ್ಲಿಸಬೇಕು
* ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆಯಿಂದ ಪಡೆದ ಅಂದಾಜು ಪಟ್ಟಿಯ ಮೂಲ ಪ್ರತಿ.
* ಬಿಪಿಎಲ್ ಕಾರ್ಡ್‌ನ ಒಂದು ಜೆರಾಕ್ಸ್ ಪ್ರತಿ/ಸಂಬಂಧಿಸಿದ ತಹಶೀಲ್ದಾರರಿಂದ ದೃಢೀಕರಿಸಿದ ಕಡಿಮೆ ವರಮಾನ ಪ್ರಮಾಣ ಪತ್ರದ ಮೂಲ ಪ್ರತಿ.
* ಅರ್ಜಿ ನಮೂನೆಯನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿ ಶಾಖೆ, ಕೊಠಡಿ ಸಂಖ್ಯೆ 242, 2ನೇ ಮಹಡಿ, ವಿಧಾನಸೌಧ, ಬೆಂಗಳೂರು - 560001 ಇಲ್ಲಿಂದ ಪಡೆಯಬಹುದು.
ಕರ್ನಾಟಕ ವಾರ್ತೆ

ಪುಸ್ತಕ ಅವಲೋಕನ

ಭೂದೇವತೆಗಳ ಪ್ರಣಾಳಿಕೆ

ಡಾ. ಡೊಮಿನಿಕ್. ಡಿ

'ಭೂದೇವತೆಗಳ ಪ್ರಣಾಳಿಕೆ' ಎನ್ನುವುದು ನಾವೆಲ್ಲ ಮರೆತು ಬಿಟ್ಟಿರುವ ಅಥವಾ ನಮ್ಮ ಪ್ರಗತಿಪರತೆಯನ್ನು ತೋರಿಸಿಕೊಳ್ಳಲು ಆಗೊಮ್ಮೆ ಹೀಗೊಮ್ಮೆ ನೆನಪಿಸಿಕೊಳ್ಳುವ ಬಿ. ಶ್ಯಾಮಸುಂದರ್‌ರವರ ಪ್ರಮುಖ ಕೃತಿ. ಈ ಕೃತಿಯು ಹಿಂದಿಯಲ್ಲಿ ಪ್ರಕಟವಾಗಿ, ಕಳೆದೆರಡು ತಿಂಗಳ ಹಿಂದೆಯಷ್ಟೆ ಕನ್ನಡಕ್ಕೆ ಅನುವಾದಗೊಂಡಿರುವುದು. ಕನ್ನಡಕ್ಕೆ ಅನುವಾದಿಸಿದವರು ಡಾ. ಎಚ್.ಟಿ. ಪೋತೆ ಮತ್ತು ಡಾ. ಜಗನ್ನಾಥ ಸಿಂಧೆ.

ಈ ಕೃತಿಯನ್ನು ಚರ್ಚೆಗೆ ತೆಗೆದುಕೊಳ್ಳುವ ಮುನ್ನ ಅದರ ಕರ್ತೃವಿನ ಬಗ್ಗೆ ಒಂದಷ್ಟು ವಿವರಗಳನ್ನು ತಿಳಿದುಕೊಳ್ಳುವುದು ಮುಖ್ಯ. ಇದು ಎರಡು ಕಾರಣಗಳಿಂದ ಮುಖ್ಯ: ಒಂದು ಬಿ. ಶ್ಯಾಮಸುಂದರ್‌ರವರು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಮಕಾಲೀನರು ಮತ್ತು ಅವರ ಬದುಕು, ಬರಹ ಮತ್ತು ಹೋರಾಟಗಳ ಪ್ರಭಾವಕ್ಕೊಳಗಾಗಿ ಅವರೊಡನೆ ಶೋಷಿತ ತಳಸಮುದಾಯಗಳ ಅದರಲ್ಲೂ ದಲಿತ ಸಮುದಾಯಗಳ ವಿಮೋಚನೆಗಾಗಿ ತಮ್ಮ ಬದುಕನ್ನು ಅರ್ಪಿಸಿ ಕೊಂಡವರು. ಡಾ. ಅಂಬೇಡ್ಕರ್‌ರವರ ಹೋರಾಟದ ಕ್ಷೇತ್ರ ಅಖಿಲ ಭಾರತ ಮಟ್ಟದ್ದಾದರೆ, ಬಿ. ಶ್ಯಾಮಸುಂದರ್‌ರವರ ಕಾರ್ಯಕ್ಷೇತ್ರ ಹೈದರಾಬಾದ್ ಕರ್ನಾಟಕವಾಗಿತ್ತು. ಇಂಥ ಮಹನೀಯ ವ್ಯಕ್ತಿತ್ವವನ್ನು ಅದೇಕೋ ನಾವು ಮರೆತುಬಿಟ್ಟಿದ್ದೇವೆ; ಅಥವಾ ನಮ್ಮ ಜನ ಚಳುವಳಿಯ ಚಿಂತಕರು/ನೇತಾರರು ಜಾಣ ಕುರುಡುತನವನ್ನು ವ್ಯಕ್ತಪಡಿಸಿದ್ದಾರೋ ಅನ್ನುವ ಸಂದೇಹ ಮೂಡುತ್ತದೆ.

ಇಂಥ ಆಧುನಿಕ ಕಾಲದ ನಿರ್ಲಕ್ಷ್ಯ ಎನ್ನುವುದು ಅಂತಿಮವಾಗಿ ಜಾತಿಯನ್ನು ಮತ್ತದರ ವಕ್ತಾರರನ್ನು ಹಾಗೆಯೇ ಉಳಿಸಿಕೊಳ್ಳುವ ಹುನ್ನಾರವೇನೋ! ಇಂಥ ಪರಿಸ್ಥಿತಿಯನ್ನು ಗಮನಿಸಿಯೇ ಬಿ. ಶ್ಯಾಮಸುಂದರ್‌ರವರು ತಮ್ಮ ಕೃತಿ 'ಭೂದೇವತೆಗಳ ಪ್ರಣಾಳಿಕೆ' ಕೃತಿಯ ಮುನ್ನುಡಿಯಲ್ಲಿ ಹೀಗೆಂದಿದ್ದಾರೆ, "ಪ್ರಜೆಗಳ ಬಡತನ, ದೈನ್ಯ, ರೋಗಗ್ರಸ್ತತೆ, ದಾರಿದ್ರ್ಯ, ಧಾರ್ಮಿಕ ಸಂಪ್ರದಾಯಿಕತೆಗಳು ಹಾಗೂ ಸಾಮಾಜಿಕ ಜೀವನದಲ್ಲಿರುವ ಮೇಲು-ಕೀಳು ಭಾವನೆಗಳು ಎಲ್ಲವೂ ಮನುಷ್ಯನ ಪೂರ್ವಜನ್ಮದ ಕರ್ಮಗಳ ಫಲ ಎಂದು ಯಾವ ದೇಶದ ಅಧಿಕಾಂಶ ನಿವಾಸಿಗಳು ಧಾರ್ಮಿಕವಾಗಿ ನಂಬಿದ್ದಾರೋ, ಅಂಥ ದೇಶದ ಜನತೆಯಲ್ಲಿ ಆತ್ಮಗೌರವ ಹಾಗೂ ಆತ್ಮಬಲವನ್ನು ಹುಟ್ಟು ಹಾಕುವುದು ಸರಳವಾದ ಕೆಲಸವೇನಲ್ಲ... ಜನಸಾಮಾನ್ಯರ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಲು ಅಧಿಕಾರರೂಢ ವರ್ಗ ಅತ್ಯಾಚಾರ ಹಾಗೂ ದಮನಕಾರಿ ವರ್ತನೆಯಿಂದ ಜನತೆಯನ್ನು ಪೀಡಿಸುವುದು, ಬರ್ಬರತೆಯ ಜೊತೆ-ಜೊತೆಗೆ ನಾನಾ ಮಾರ್ಗಗಳನ್ನು ಅನುಸರಿಸುತ್ತದೆ.

ಧರ್ಮವೇ ಅವರ ಬಹು ಮುಖ್ಯ ಆಯುಧವಾಗಿದೆ. ಬಾಣ, ತ್ರಿಶೂಲ, ಖಡ್ಗ ಹಾಗೂ ಶಿಲುಬೆ ಶತಮಾನಗಳಿಂದ ಒಂದು ಮತ್ತೊಂದಕ್ಕೆ ಸಹಾಯಕವಾಗಿವೆ. ಎರಡೂ ಜೊತೆಗೂಡಿ ಮಾನವ ಅಧಿಕಾರಗಳ ಮೇಲೆ ಒಂದೇ ಸಮನೆ ಆಕ್ರಮಣ ನಡೆಸಿವೆ. ಆದರೆ 20ನೇ ಶತಮಾನದಲ್ಲಿ ಹೂಡುತ್ತಿರುವ ತಂತ್ರ ಅದಕ್ಕಿಂತ ಅತ್ಯಂತ ದುಷ್ಟತನ ಹಾಗೂ ಮೋಸದಿಂದ ಕೂಡಿದ್ದಾಗಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಜನತೆಯ ಜೀವನದಲ್ಲಿ ಧರ್ಮ ಹಾಗೂ ರಾಜನೀತಿಯನ್ನು ಯಾವ ರೀತಿ ಸಮನ್ವಯಗೊಳಿಸಲಾಗುತ್ತಿದೆಯೆಂದರೆ, ಆ ಮುಗ್ದ ಜೀವಿಗಳು ತಮ್ಮ ಸಮಸ್ಯೆಗಳನ್ನು ಸರಿಯಾದ ರೂಪದಲ್ಲಿ ನೋಡುವ ಬದಲು ರಾಜಕೀಯ ಮೌಲ್ಯಗಳಲ್ಲಿ ಹೂತು ಹೋಗುತ್ತಿದ್ದಾರೆ." ಇಂಥ ಜನತೆಯನ್ನು ಎಚ್ಚರಿಸುವ ಸಲುವಾಗಿಯೇ ಶ್ರೀ ಬಿ. ಶ್ಯಾಮಸುಂದರ್‌ರವರು 'ಭೂದೇವತೆಗಳ ಪ್ರಣಾಳಿಕೆ' ಎನ್ನುವ ಕೃತಿಯನ್ನು ರಚಿಸಿದರು.

> **ಬಾಣ, ತ್ರಿಶೂಲ, ಖಡ್ಗ ಹಾಗೂ ಶಿಲುಬೆ ಶತಮಾನಗಳಿಂದ ಒಂದು ಮತ್ತೊಂದಕ್ಕೆ ಸಹಾಯಕವಾಗಿವೆ. ಎರಡೂ ಜೊತೆಗೂಡಿ ಮಾನವ ಅಧಿಕಾರಗಳ ಮೇಲೆ ಒಂದೇ ಸಮನೆ ಆಕ್ರಮಣ ನಡೆಸಿವೆ. ಆದರೆ 20ನೇ ಶತಮಾನದಲ್ಲಿ ಹೂಡುತ್ತಿರುವ ತಂತ್ರ ಅದಕ್ಕಿಂತ ಅತ್ಯಂತ ದುಷ್ಟತನ ಹಾಗೂ ಮೋಸದಿಂದ ಕೂಡಿದ್ದಾಗಿದೆ ಎಂಬುದನ್ನು ಎಚ್ಚರಿಸಲು ಶಾಮಸುಂದರ್ ಈ ಕೃತಿಯನ್ನು ರಚಿಸಿದ್ದಾರೆ.**



ಮೂಲ : ಬಿ. ಶ್ಯಾಮಸುಂದರ್
ಕನ್ನಡಕ್ಕೆ : ಡಾ. ಎಚ್. ಟಿ. ಪೋತೆ
ಡಾ. ಜಗನ್ನಾಥ ಸಿಂಧೆ
ಬೆಲೆ : ರೂ ೩೦೦/-
ಪ್ರ : ಕುಟುಂಬ ಪ್ರಕಾಶನ ಗುಲಬರ್ಗಾ

ಇಂಥ ಕೃತಿಯು ಕನ್ನಡದಲ್ಲಿ ಕಾಣಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿಯೇ ಸರಿ. "ಡಾ. ಬಿ.ಆರ್. ಅಂಬೇಡ್ಕರ್‌ರವರು ಹೊತ್ತಿಸಿದ ಜಾಗೃತಿಯ ದೀಪವನ್ನು ಬಿ. ಶ್ಯಾಮಸುಂದರ್ ಅವರು ಮುಂದಿನ ತಲೆಮಾರಿಗೆ ಅಧಿಕೃತವಾಗಿ ಹಸ್ತಾಂತರಿಸಿದ್ದಾರೆ. ಈ ಕಾರಣಕ್ಕಾಗಿಯೇ ಚಿಂತಕಲೋಕ ಶ್ಯಾಮಸುಂದರ್ ಅವರನ್ನು ದಲಿತ ಚಳುವಳಿಯ ಪಿತಾಮಹನೆಂದೂ, ಅಂಬೇಡ್ಕರೋತ್ತರ ದಲಿತ ಚಳುವಳಿಯ ಏಕೈಕ ಮಹಾನಾಯಕರೆಂದೂ ಪರಿಗಣಿಸುತ್ತಾ ಬಂದಿದೆ." ಎಂದು ಕೃತಿಯ ಅನುವಾದಕರು ಶ್ರೀ ಬಿ. ಶ್ಯಾಮಸುಂದರ್‌ರವರ ಬಗ್ಗೆ ಹೇಳಿರುವುದು ನಮ್ಮ ಪರಿಶೀಲನೆಗೆ ಮುಖ್ಯವಾದುದು. ಆದ್ದರಿಂದ ಪ್ರಸ್ತುತ ಲೇಖನ ಮೊದಲಿಗೆ ಬಿ. ಶ್ಯಾಮಸುಂದರ್‌ರವರ ಬದುಕನ್ನು ಮೊದಲಿಗೆ ಪರಿಚಯಿಸಿಕೊಂಡು ತದನಂತರದಲ್ಲಿ 'ಭೂದೇವತೆಗಳ ಪ್ರಣಾಳಿಕೆ' ಎನ್ನುವ ಕೃತಿಯನ್ನು ವಿಶ್ಲೇಷಣೆಗೆ ತೆಗೆದುಕೊಳ್ಳುತ್ತದೆ.

ಡಿಸೆಂಬರ್ 21, 1908ರಲ್ಲಿ ಶ್ರೀ ಬಿ. ಶ್ಯಾಮಸುಂದರ್‌ರವರು ಹುಟ್ಟಿದ್ದು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ. ಮಹರ್ ದಲಿತ ಸಮುದಾಯದಲ್ಲಿ ಬದುಲಾ ಮಾಣಿಕ್ಯಂ ಮತ್ತು ಸುಧಾಬಾಯಿ ಎನ್ನುವವರ ಪುತ್ರರಾಗಿ, ಬಾಲ್ಯದ ವಿದ್ಯಾಭ್ಯಾಸವನ್ನು ಔರಂಗಾಬಾದಿನಲ್ಲಿಯೇ ಮುಗಿಸಿದರು. ತಂದೆಯವರು ಆಗಿನ ಸರ್ಕಾರದ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಹೈದಾರಾಬಾದಿಗೆ ವರ್ಗಾವಣೆಗೊಂಡಾಗ, ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಷಯವನ್ನು ತೆಗೆದುಕೊಂಡು ಬಿ.ಎ ಪದವಿಯನ್ನು ರ್‍ಯಾಂಕ್ ಸಮೇತ ಪಡೆದು 'ಖುಸ್ರು ಎ ದಕ್ಕನ್ ಎಂಬ ಬಿರುದು ಮತ್ತು ಚಿನ್ನದ ಪದಕವನ್ನು ಪಡೆಯುತ್ತಾರೆ. ಆದರೆ ಇಷ್ಟಕ್ಕೆ ತೃಪ್ತರಾಗದೆ ಅದೇ ವಿ.ವಿಯಲ್ಲಿ ಕಾನೂನು ಪದವಿಯನ್ನೂ ಸಹ ಪಡೆದುಕೊಳ್ಳುತ್ತಾರೆ.

ವಿದ್ಯಾರ್ಥಿ ಬದುಕಿನಲ್ಲಿಯೇ ನಾಯಕತ್ವನ್ನು ವಹಿಸಿಕೊಳ್ಳುತ್ತಾ, 1939ರಲ್ಲಿ ಸರೋಜಿನಿ ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಹೈದಾರಾಬಾದ್‌ನಲ್ಲಿ ಜರುಗಿದ ಪದವೀದರರ ಸಮಾವೇಶದ ಕಾರ್ಯದರ್ಶಿಯಾಗಿ ಬಿ. ಶ್ಯಾಮಸುಂದರ್ ಕಾರ್ಯ ನಿರ್ವಹಿಸುತ್ತಾರೆ. ಮುಂದೆ 1944ರಲ್ಲಿ ಅವರು ಉಸ್ಮಾನಿಯಾ ವಿ.ವಿ ಸೆನೆಟ್ ಸದಸ್ಯರಾಗಿ ನೇಮಕಗೊಂಡು ಬಹುಕಾಲ ಸೇವೆ ಸಲ್ಲಿಸುತ್ತಾರೆ. 1946ರಲ್ಲಿ ಒಂದಷ್ಟು ಕಾಲ ನಿಝಾಮ್ ಸ್ಟೇಟ್ ರೈಲ್ವೆ ನೌಕರರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ.

ನಿಝಾಮ್ ಸರ್ಕಾರ 1942ರಲ್ಲಿ ದಲಿತ ಸಮುದಾಯಗಳ ಶಿಕ್ಷಣಕ್ಕೆಂದು ಟ್ರಸ್ಟ್‌ಮಾಡಿ ಬಿ. ಶ್ಯಾಮಸುಂದರ್‌ರವರನ್ನು ಅಧ್ಯಕ್ಷರಾನ್ನಾಗಿ ಮಾಡುತ್ತದೆ ಮತ್ತು ಅದಕ್ಕಾಗಿ ಒಂದು ಕೋಟಿ ರೂ.ಗಳನ್ನು ನೀಡುತ್ತದೆ. ಈ ನಿಧಿಯಿಂದ ನಿಝಾಮ್ ಸಂಸ್ಥಾನದ ವ್ಯಾಪ್ತಿಯಲ್ಲಿ 28 ವಸತಿ ಶಾಲೆಗಳನ್ನು ಬಿ. ಶ್ಯಾಮ ಸುಂದರ್ ಪ್ರಾರಂಭಿಸುತ್ತಾರೆ. ಔರಂಗಾಬಾದ್‌ನಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರು ಸ್ಥಾಪಿಸಿದ ಜನತಾ ಶಿಕ್ಷಣಾ ಸಂಸ್ಥೆಗೆ ಸಮಿತಿಯು 12 ಲಕ್ಷ ರೂಪಾಯಿಗಳನ್ನು ಧನಸಹಾಯ ರೂಪದಲ್ಲಿ ನೀಡುತ್ತದೆ.

ಇದಲ್ಲದೆ, ನಿಝಾಮ್ ಸಂಸ್ಥಾನದಲ್ಲಿ ವಿಶೇಷ ಕಾನೂನು ತಂದು ಉಳುವವನೇ ಭೂಮಿಯ ಒಡೆಯ

ಎಂದು ಸರ್ಕಾರ ಘೋಷಿಸುವಂತೆ ಮಾಡಿದ್ದಲ್ಲದೆ, ಸರಕಾರದ ಯಾವುದೇ ಅನಾಮ್ಧತ್ತಾದ ಭೂಮಿಯಿದ್ದರೂ ಅದನ್ನು ಭೂಹೀನರಿಗೆ ಹಂಚುವ ಕಾರ್ಯಕ್ರಮವನ್ನು ರೂಪಿಸಿ, ನಿಝಾಮ ಸರಕಾರದ ಅನುಮತಿಯನ್ನು ಕೊಡಿಸುತ್ತಾರೆ. ಜೊತೆಗೆ ಹಳ್ಳಿ ಹಳ್ಳಿಗೆ ತಿರುಗಿ ಜನತಾ ಸಭೆಗಳನ್ನು ನಡೆಸಿ, ಬೇನಾಮಿ ಜಮೀನಿದ್ದರೆ ಅಂತಹದ್ದೆಲ್ಲವನ್ನು ಆಕ್ರಮಿಸಿ ಉಳುಮೆ ಮಾಡಿಕೊಳ್ಳಲು ಬಹಿರಂಗವಾಗಿ ಕರೆ ನೀಡುತ್ತಾರೆ. 1942ರಲ್ಲಿ ಸರಕಾರವು ವಿಶ್ವ ಸಂಸ್ಥೆಗೆ ತನ್ನ ನಿಯೋಗವನ್ನು ಕಳುಹಿಸಿದಾಗ ಅದರ ನೇತೃತ್ವವನ್ನು ಬಿ. ಶ್ಯಾಮಸುಂದರ್ ವಹಿಸಿದ್ದರು.

ಅದೇ ಸಂದರ್ಭದಲ್ಲಿ ಇವರು ನಿಝಾಮ್ ಸಂಸ್ಥಾನ ಸ್ವತಂತ್ರವಾದ ರಾಷ್ಟ್ರವಾಗಬೇಕೆಂಬ ಇವರ ಹೇಳಿಕೆಯಿಂದ ಭಾರತ ಸರಕಾರ ಪೂನಾದಲ್ಲಿ ಶ್ಯಾಮಸುಂದರ್‌ರವರನ್ನು 9 ತಿಂಗಳ ಕಾಲ ಬಂಧನದಲ್ಲಿಡುತ್ತದೆ. ಆದರೂ ಧೃತಿಗೆಡದೆ ಫಿನಿಕ್ಸ್ ಪಕ್ಷಿಯಂತೆ ಮತ್ತೆ ಮರುಹುಟ್ಟು ಪಡೆದು ಹೊರಬಂದು, ಗುಲಬರ್ಗಾ, ಬೀದರ್ ಮತ್ತು ರಾಯಚೂರು ಪ್ರದೇಶಗಳಲ್ಲಿ ತನ್ನದೇ ಆದ ಕಾರ್ಯಪಡೆಯನ್ನು ಕಟ್ಟಲು ತೊಡಗುತ್ತಾರೆ. 1950ರ ಸುಮಾರಿಗೆ ಶ್ಯಾಮಸುಂದರ್‌ರವರು ಡಿಪ್ರೆಸ್ಡ್ ಕ್ಲಾಸ್ ಅಸೋಶಿಯೇಷನ ಅಧ್ಯಕ್ಷರಾಗಿ ಡಾ. ಅಂಬೇಡ್ಕರ್‌ರವರ ಚಿಂತನಗಳ ಪ್ರಚಾರಕ್ಕಾಗಿ ಕಾರ್ಯೋನ್ಮುಖರಾಗುತ್ತಾರೆ.

1957ನೇ ಮಹಾಚುಣಾವಣೆಯಲ್ಲಿ ಶ್ಯಾಮ ಸುಂದರ್‌ರವರು ಬಾಲ್ಕಿ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಆಯ್ಕೆಯಾಗುತ್ತಾರೆ. ಆ ಮೂಲಕ ದಲಿತ ಸಮುದಾಯಗಳಿಗೆ ಅಗತ್ಯವಾಗಿದ್ದ ನಾಯಕತ್ವವನ್ನು ನೀಡುತ್ತಾರೆ. ಮೂಲಭಾರತೀಯರು ಅಶ್ಪ್ರಶರು. ಕಳೆದುಹೋದ ರಾಜ್ಯಾಧಿಕಾರವನ್ನು ಬೇಡುವುದರಿಂದ ಅದು ಸಿಗುವುದಿಲ್ಲ. ಬದಲಿಗೆ ಆಳುವ ವರ್ಗದ ಕೈಯಿಂದ ಕಿತ್ತುಕೊಳ್ಳಬೇಕು ಎಂದು ಘೋಷಿಸುತ್ತಾರೆ. ಇದರೊಡನೆ ಅಂದಿನ ಜಮೀನ್ದಾರಿ ವ್ಯವಸ್ಥೆಯಡಿ ದಲಿತ ಸಮುದಾಯಗಳು ಅನುಭವಿಸುತ್ತಿದ್ದ ದೌರ್ಜನ್ಯವನ್ನು ತಡೆಯಲು ಶಿಕ್ಷಣ-ಸಂಘಟನೆ-ಹೋರಾಟದ ಅರಿವಿನ ಮೂಲಕ ಮಾತ್ರ ದಲಿತರ ಏಳ್ಗೆ ಸಾಧ್ಯವೆಂದು ನಂಬಿ, ಡಾ. ಬಿ. ಆರ್. ಅಂಬೇಡ್ಕರ್‌ರವರ 77ನೇ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಅಂದರೆ 29-04-1968ರಂದು ಭಾರತೀಯ ಭೀಮಸೇನೆ ಸಂಘಟನೆಯನ್ನು ಗುಲಬರ್ಗಾದ ಹೃದಯ ಭಾಗವಾದ ಜಗತ್ ಸರ್ಕಲ್‌ನಲ್ಲಿ ಸ್ಥಾಪಿಸುತ್ತಾರೆ. 'ಭೀಮ ಸೇನೆ' ಸಂಘಟನೆಯನ್ನು ಡಾ. ಅಂಬೇಡ್ಕರ್‌ರವರ ಹೆಸರಿನಲ್ಲೇ ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ಅವರೇ ಆಯ್ಕೆಗೊಳ್ಳುತ್ತಾರೆ. (ಈ ಎಲ್ಲ ವಿವರಗಳು 'ಭೂದೇವತೆಗಳು' ಎನ್ನುವ ಕೃತಿಯ ಪೀಠಿಕೆಯಲ್ಲೇ ಓದುಗರಿಗೆ ದೊರೆಯುವಂತೆ ಡಾ. ಎಚ್.ಟಿ. ಪೋತೆ ಮತ್ತು ಡಾ. ಜಗನ್ನಾಥ ಸಿಂಧೆಯವರು ಓದುಗರಿಗೆ ನೀಡಿದ್ದಾರೆ.)

ಭಾರತೀಯ ಸಂದರ್ಭದಲ್ಲಿ ಸಂಸ್ಕೃತ ಪರಂಪರೆಯು ಸೃಷ್ಟಿಸಿರುವ ಜಾತಿಯನ್ನು ಬುಡಸಮೇತ ಕಿತ್ತೊಗೆಯಬೇಕಾದರೆ ನಾವು ನಾಸ್ತಿಕರಾಗಬೇಕಾದ ಅನಿವಾರ್ಯವಿದೆ. ಇಲ್ಲಿ ನಾಸ್ತಿಕರಾಗುವುದೆಂದರೆ ವೇದ ಪ್ರಾಮಣ್ಯವನ್ನು ನಿರಾಕರಿಸುವುದೇ ಆಗುತ್ತದೆ. ಈ ಸೂಕ್ಷ್ಮವನ್ನು ಅರಿತಂತೆ ಬಿ. ಶ್ಯಾಮಸುಂದರ್‌ರವರು ಅಪ್ಪಟ ನಾಸ್ತಿಕರಾಗಿದ್ದು ಅಸ್ಪೃಶ್ಯತೆಗೆ ಕಾರಣವಾಗಿದ್ದ ಹಿಂದೂ ದೇವ-ದೇವತೆಗಳ ಫೋಟೋಗಳನ್ನು ಸಾಮೂಹಿಕ ದಹನಗೊಳಿಸುವಂತಹ ವಿನೂತನ ಚಳುವಳಿಯನ್ನು ಕೈಗೊಳ್ಳುತ್ತಾರೆ. ಭೀಮ

ಈ ಕೃತಿಯಲ್ಲಿ ಒಟ್ಟು 16 ವಿಭಾಗಗಳಿದ್ದು ಅವು 'ಬ್ರಹ್ಮ ಗುಹೆಯಿಂದ ಆರಂಭವಾಗಿ ಬ್ರಾಹ್ಮಣಧರ್ಮದ ಆಧಾರಗಳು, ವಿದ್ಯೆಯ ಪ್ರಚಾರ ಹಾಗೂ ವರ್ಣಾಶ್ರಮಧರ್ಮ, ರಾಜನೀತಿಯ ಕರ್ಮಮೀಮಾಂಸೆ, ಸಂವಿಧಾನ ಮತ್ತು ಧರ್ಮನಿರಪೇಕ್ಷತೆ, ಅಸ್ಪೃಶ್ಯ: ನಡೆದಾಡುವ ಸ್ಮಶಾನ, ಇತಿಹಾಸದ ರೂಪ ಹೇಗೆ ಬದಲಾಯಿತು, ಬೌದ್ಧಮತ-ಪ್ರಪಂಚದ ಮತಮತಾಂತರಗಳ ಮೂಲ, ಜನತೆ ಮತ್ತು ರಾಜಕೀಯ ಅಧಿಕಾರ ಮತ್ತು ಬ್ರಹ್ಮಗುಹೆಯ ಮೇಲೆ ವಿಜಯ ಸಾಧನೆ ಮುಂತಾದ ವಿಷಯಗಳ ಮೂಲಕ ಓದುಗರು ಕೃತಿಯೊಳಗೆ ಪಯಣಿಸುತ್ತಾ ತಾವು ರೂಡಿಸಿಕೊಂಡತಂಹ ವೈಚಾರಿಕೆ ನಿಲುವುಗಳನ್ನು ಭಾವನಾತ್ಮಕವಾಗಿ ಮುಖಾಮುಖಿಯಾಗಿ ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತಾರೆ. "ನಿಹಿತ ಸ್ವಾರ್ಥಪರ ವರ್ಗದ ಮನೋಭಾವ ಹಾಗೂ ಮನಃಸ್ಥಿತಿಗಳು ಮತ್ತು ಅವರ ನೀತಿಯ ವಿಭಿನ್ನ ಮಗ್ಗುಲುಗಳ ಮೇಲೆ ಈ ಪುಸ್ತಕದಲ್ಲಿ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ.

ಸೇನೆಯ ಮೂರು ಸಾವಿರ ಸದಸ್ಯರು ಕಲಬುರ್ಗಿಯಲ್ಲಿದ್ದರು. ಅವರು ಹಿಂದೂ ದೇವರುಗಳನ್ನು ಸುಡುವುದು, ಮನೆಯಲ್ಲಿರುವ ಫೋಟೋಗಳನ್ನು ಮೋರಿ, ಚರಂಡಿಗೆ ಎಸೆಯುವುದನ್ನು ಕಂಡು ಅಂದಿನ ಮುಖ್ಯಮಂತ್ರಿಯಾಗಿದ್ದ, ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ಮುಂತಾದವರು ದಿಗ್ಭ್ರಮೆ ವ್ಯಕ್ತಪಡಿಸುತ್ತಾರೆ.

ಸಾಮಾಜಿಕ ಸಮಾನತೆಗಾಗಿ ಹೋರಾಡುತ್ತಿದ್ದ ಇವರನ್ನು ಸಮಾಜ ಘಾತುಕರೆಂದು ಬಂಧಿಸಲಾಯಿತೆಂದು ಡೆಕ್ಕನ್ ಹೆರಾಲ್ಡ್ (10-09-1968) ವರದಿ ಮಾಡುತ್ತದೆ. ಇದರ ಪರವಾಗಿ ದಲಿತ ಸಮುದಾಯಗಳು ಬೆಂಬಲ ವ್ಯಕ್ತಪಡಿಸಿದರೆ, ಹಿಂದೂವಾದಿಗಳು ಈ ಸಂಘಟನೆಯನ್ನು ವಿರೋಧಿಸುತ್ತಾರೆ. ಈ ಸಂಘಟನೆ ತನ್ನೊಳಗೇ ಒಂದು ಗುಪ್ತದಳವನ್ನು ಹೊಂದಿದ್ದು ಹಳ್ಳಿಗಳಲ್ಲಿ ದಲಿತರ ಮೇಲೆ ನಡೆಯುವಂಥ ದೌರ್ಜನ್ಯಗಳನ್ನು ತಡೆಯಲು ಈ ಗುಪ್ತದಳದಲ್ಲಿದ್ದವರು ಸದಾ ತಯಾರಾಗಿರುತ್ತಿದ್ದರು. ಈ ಸಂಘಟನೆಯ ಕ್ರಿಯಾಶೀಲತೆಯಿಂದಾಗಿ ಅದರ ಶಾಖೆಗಳು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಲಕ್ನೌ, ಕಾನ್‌ಪುರ, ಬಿಹಾರ, ಪಂಜಾಬ್ ಮತ್ತು ಕಲ್ಕತ್ತಾಗಳಲ್ಲೂ ಆರಂಭವಾಗಿದ್ದವು. ಹೀಗೆ ದಕ್ಷಿಣ ಭಾರತದಲ್ಲಿ ಅಂಬೇಡ್ಕರೋತ್ತರ ದಲಿತ ಚಳುವಳಿಯ ನೇತಾರರಾಗಿ ಬಿ. ಶ್ಯಾಮಸುಂದರರವರು ಕಾಣಿಸಿಕೊಳ್ಳುತ್ತಾರೆ.

ಹೀಗಿರುವಾಗ 19-05-1975ರಲ್ಲಿ ಬಿ. ಶ್ಯಾಮಸುಂದರರವರು ನಿಧನರಾಗುತ್ತಾರೆ. ಅಲ್ಲಿಗೆ ಭಿಮಸೇನೆಯ ಚಟುವಟಿಕೆಗಳೂ ಸಹ ಸ್ಥಗಿತಗೊಂಡು, ಅದರ ಸದಸ್ಯರು ಚದುರಿಹೋಗುತ್ತಾರೆ. ಆದರೆ ಇದನ್ನು ಮುಂದುವರೆಸಿದಂತೆ ದಕ್ಷಿಣ ಕರ್ನಾಟಕದಲ್ಲಿ ಬಿ. ಬಸವಲಿಂಗಪ್ಪನವರ ಬೂಸಾ ಚಳುವಳಿ, ಕನ್ನಡ ಸಾಹಿತ್ಯದಲ್ಲಿದ್ದ ಬ್ರಾಹ್ಮಣ್ಯವನ್ನು ಎತ್ತಿತೋರಿಸುತ್ತದೆ. ತದನಂತರದಲ್ಲಿ ಕರ್ನಾಟಕದಲ್ಲಿ ದಲಿತ ಚಳುವಳಿ ದಲಿತ ಸಮುದಾಯಗಳ ಅಸ್ತಿತ್ವಕ್ಕೆ ಮತ್ತೊಂದು ಬಗೆಯ ಚಾರಿತ್ರಿಕ ತಿರುವನ್ನು ನೀಡುವುದನ್ನು ನಾವು ನೋಡುತ್ತೇವೆ. ಅಂದರೆ ದಲಿತ ಸಮುದಾಯಗಳ ಹೋರಾಟ ಎನ್ನುವುದು ಯಾವುದೋ ಒಂದು ಕಾಲಘಟ್ಟದ್ದು ಎನ್ನುವದರ ಬದಲು ಅದು ನಿರಂತರವಾಗಿ ಚರಿತ್ರೆಯಲ್ಲಿ ನಡೆಯುತ್ತಿರುವ ವಿದ್ಯಮಾನ ಎನ್ನುವುದನ್ನು ಮರೆಯುವಂತಿಲ್ಲ.

ಇನ್ನು ಈ ಲೇಖನದ ಎರಡನೇ ಭಾಗವಾಗಿ 'ಭೂದೇವತೆಗಳ ಪ್ರಣಾಳಿಕೆ' ಎನ್ನುವ ಕೃತಿಯನ್ನು ವಿಶ್ಲೇಷಣೆಗೆ ತೆಗೆದುಕೊಳ್ಳೋಣ. ಈ ಕೃತಿಯಲ್ಲಿ ಒಟ್ಟು 16 ವಿಭಾಗಗಳಿದ್ದು ಅವು 'ಬ್ರಹ್ಮ ಗುಹೆಯಿಂದ ಆರಂಭವಾಗಿ ಬ್ರಾಹ್ಮಣ ಧರ್ಮದ ಆಧಾರಗಳು, ವಿದ್ಯೆಯ ಪ್ರಚಾರ ಹಾಗೂ ವರ್ಣಾಶ್ರಮ ಧರ್ಮ, ರಾಜನೀತಿಯ ಕರ್ಮಮೀಮಾಂಸೆ, ಸಂವಿಧಾನ ಮತ್ತು ಧರ್ಮನಿರಪೇಕ್ಷತೆ, ಅಸ್ಪೃಶ್ಯ: ನಡೆದಾಡುವ ಸ್ಮಶಾನ, ಇತಿಹಾಸದ ರೂಪ ಹೇಗೆ ಬದಲಾಯಿತು, ಬೌದ್ಧಮತ-ಪ್ರಪಂಚದ ಮತಮತಾಂತರಗಳ ಮೂಲ, ಜನತೆ ಮತ್ತು ರಾಜಕೀಯ ಅಧಿಕಾರ ಮತ್ತು ಬ್ರಹ್ಮಗುಹೆಯ ಮೇಲೆ ವಿಜಯ ಸಾಧನೆ ಮುಂತಾದ ವಿಷಯಗಳ ಮೂಲಕ ಓದುಗರು ಕೃತಿಯೊಳಗೆ ಪಯಣಿಸುತ್ತಾ ತಾವು ರೂಡಿಸಿಕೊಂಡತಂಹ ವೈಚಾರಿಕ ನಿಲುವುಗಳನ್ನು ಭಾವನಾತ್ಮಕವಾಗಿ ಮುಖಾಮುಖಿಯಾಗಿ ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತಾರೆ. ಕೊನೆಯಲ್ಲಿ ಅನುವಾದಕರು ಬಿ.ಶ್ಯಾಮಸುಂದರ್‌ರವರ ಬದುಕನ್ನು ಕಾಲಾನುಕ್ರಮದಲ್ಲಿ ಕಟ್ಟಿಕೊಟ್ಟಿದ್ದಾರೆ.

ಬಿ. ಶ್ಯಾಮಸುಂದರ್‌ರವರ ಈ ಕೃತಿ ಒಂದು ಅದ್ಭುತ ಕಾದಂಬರಿಯಂತೆ ನನಗೆ ಕಂಡುಬರುತ್ತದೆ. ಈ ಕೃತಿಯ ಕಥಾ ಜಗತ್ತು ಹಿಮಾಲಯದ ತಪ್ಪಲಿನಲ್ಲಿರುವ ಒಂದು ಆಶ್ರಮದಲ್ಲಿ ಆರಂಭವಾಗುತ್ತದೆ. ಲೇಖಕರೇ ಮುನ್ನುಡಿಯಲ್ಲಿ ಈ ಕೃತಿಯ ಆಶಯವನ್ನು ಕುರಿತು ಹೀಗೆನ್ನುತ್ತಾರೆ, "ನಿಹಿತ ಸ್ವಾರ್ಥಪರ ವರ್ಗದ ಮನೋಭಾವ ಹಾಗೂ ಮನಃಸ್ಥಿತಿಗಳು ಮತ್ತು ಅವರ ನೀತಿಯ ವಿಭಿನ್ನ ಮಗ್ಗುಲುಗಳ ಮೇಲೆ ಈ ಪುಸ್ತಕದಲ್ಲಿ ಬೆಳಕು

ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆಗೇ ಅವರ ಧಾರ್ಮಿಕ ಸಿದ್ಧಾಂತಗಳ ಆಧಾರವನ್ನು ವ್ಯಾಖ್ಯಾನಿಸಲು ಇತಿಹಾಸ ದರ್ಶನವನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

ಅದಕ್ಕಾಗಿ ಈ ಕೃತಿಯಲ್ಲಿ ನಿರೂಪಕ ಪಾತ್ರವೊಂದು ಕೃತಿಯ ಉದ್ದಕ್ಕೂ ಓದುಗರ ಅರಿವನ್ನು ವಿಸ್ತರಿಸುವ ಸಾಕ್ಷಿಪ್ರಜ್ಞೆಯಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ ಈ ನಿರೂಪಕನ ವೈಚಾರಿಕ ಗೊಂದಲಗಳನ್ನು ನಿವಾರಿಸುವ ಮತ್ತು ಆಧುನಿಕ ಭಾರತದಲ್ಲಿ ಸಂವಿಧಾನಬದ್ಧವಾಗಿ

(43ನೇಪುಟಕ್ಕೆ)



ಕಥೆ

ಅವಳನ್ನ ಕ್ಷಮಿಸಿಬಿಡಿ

○ ಪ್ರಶಾಂತ್ ಹುಲ್ಕೋಡ್

ಒಂದಾನೊಂದು ಕಾಲದಲ್ಲಿ ಆ ಹಾಡಿಯವರೆಗೂ ಬರಬೇಕೆಂದರೆ ಹತ್ತಾರು ಕಿಲೋಮೀಟರ್ ಕಾಲುಹಾದಿಯನ್ನ ಸವೆಸಬೇಕಿತ್ತು. ಅಂದರೆ ಈ ಕಥೆ ಶುರುವಾಗುವುದು ಎಂಬತ್ತರ ದಶಕದಲ್ಲಿ. ಪಶ್ಚಿಮಘಟ್ಟದ ದುರ್ಗಮ ಪರಿಸರದಲ್ಲಿ ಒಡಮೂಡಿದ್ದ ಹಾಡಿಗೂ ಒಂದು ಹೆಸರಿದೆ. ಮಲೆನಾಡಿನ ಸಂಸ್ಕೃತಿಯಂತೆ ಒಂಟೊಂಟಿ ಮನೆಗಳು, ಸುತ್ತ ಹಸಿರು ಕಾಡು, ವರ್ಷಕ್ಕೆ ನಾಲ್ಕಾರು ತಿಂಗಳು ಮನೆಯಿಂದ ಹೊರಗೆ ಕಾಲಿಡಲಾರದಂತ ಮಳೆ. ಹೀಗಾಗಿಯೇ ಈ ಹಾಡಿ ಹೊರಗಿನವರ ಪಾಲಿಗೆ ಬಿಡಿಸಲಾರದಂತ ಒಗಟಂತೆ, ಯಾವತ್ತೂ ತಣಿಯದ ಕುತೂಹಲದ ಕೇಂದ್ರದಂತಿತ್ತು. ಅಂತಹ ಒಂದು ಪರಿಸರದಲ್ಲಿತ್ತು ನಮ್ಮ ಕಥಾ ನಾಯಕಿ ಕಾವೇರಮ್ಮ ಹಾಗೂ ಆಕೆಯ ಗಂಡ ಸುಬ್ಬಯ್ಯನ ಮನೆ. ಅದು ಅವರ ಪಾಲಿಗೆ ಅರಮನೆಯಾದ್ದರಿಂದ ಅದನ್ನ ಗುಡಿಸಲು ಅಂತಾನೋ ಅಥವಾ ಇನ್ಯಾವುದೇ ಹೆಸರಿಂದ ಕರೆಯುವುದಕ್ಕೆ ಬರುವುದಿಲ್ಲ. ಈ ಕಥೆಯನ್ನ ಮುಂದುವರೆಸುವುದಕ್ಕೆ ಮುನ್ನ ಕಾವೇರಮ್ಮನ ಕುರಿತು ಒಂದೆರಡು ಮಾತುಗಳನ್ನ ಈಗಲೇ ಹೇಳಿಬಿಡಬೇಕು. ಆಕೆ ಸುಬ್ಬಯ್ಯನನ್ನ ಮದ್ವೆಯಾಗಿ ಬಂದಾಗ ಆಗಷ್ಟೆ ಹರೆಯಕ್ಕೆ ಕಾಲಿಟ್ಟಿದ್ದಳು. ಆದರೆ ವಯಸ್ಸಿಗೆ ಮೀರಿದ ಜವಾಬ್ದಾರಿ ಹೊತ್ತುಕೊಂಡು ಸುಬ್ಬಯ್ಯನನ್ನ ಕೈಹಿಡಿದು ಹಾಡಿಗೆ ಕಾಲಿಟ್ಟಾಗ ಇನ್ನೂ ಅರಿವು ಮೂಡದ ಅವಳ ಮನಸ್ಸು ಸಣ್ಣಗೆ ಕಂಪಿಸಿತ್ತು.

ಆದರೆ ಅದು ಗಟ್ಟಿ ಹೃದಯವಾದ್ದರಿಂದ ಮುಂದೆ ಬಂದ ಎಲ್ಲವನ್ನೂ ಅನಾಯಾಸವಾಗಿ ದಾಟಿ ಎರಡು ಮಕ್ಕಳಿಗೆ ಜನ್ಮ ನೀಡಿದ್ದಳು. ಮಕ್ಕಳು ಹುಟ್ಟಿ, ಅಂಬೆಗಾಲಿಟ್ಟು, ಹೆಜ್ಜೆ ಊರಿ ನಡೆಯುವುದಕ್ಕೆ ಶುರುಮಾಡಿದಂತೆ ಕಾವೇರಮ್ಮ ಕೂಡ ಹಾಡಿಯಲ್ಲಿ ಸ್ವತಂತ್ರವಾಗಿ ನಡೆದಾಡುವಷ್ಟು ಬೆಳೆದುಬಿಟ್ಟಿದ್ದಳು. ದೊಡ್ಡ ಮಗ ಎಂಟು ತುಂಬಿ ಒಂಬತ್ತಕ್ಕೆ ಬೀಳುವ ಹೊತ್ತಿಗೆ ಕಾವೇರಮ್ಮ ಮಗನನ್ನ ತನ್ನ ತವರು ಮನೆಗೆ ಕಳುಹಿಸಲು ನಿರ್ಧರಿಸಿಬಿಟ್ಟಿದ್ದಳು. ಇದಕ್ಕೆ ಅಜೀವ ಪರ್ಯಂತವಾಗಿ ಹಾಡಿಯಲ್ಲೇ ಬದುಕುವ ಶಪಥತೊಟ್ಟಂತೆ, ತಲೆಮಾರುಗಳಿಂದ ಬದುಕು ಕಟ್ಟಿಕೊಂಡ ಬದುಕಿಗೆ ಉತ್ತರಾಧಿಕಾರಿಯಾಗಿದ್ದ ಸುಬ್ಬಯ್ಯ ಸಮ್ಮತಿ ನೀಡಿದ್ದ. ಅದಕ್ಕೆ ಒಂದು ಕಾರಣವೂ ಇತ್ತು. 'ನಮ್ಮ ಬದುಕು ಇಲ್ಲಿಗೆ ಮುಗಿದು ಹೋಗ್ತದೆ ಕಾವೇರಿ, ಆದ್ರೆ ಒಬ್ಬ ಮಗನಾದ್ರೂ ಓದ್ಲಿ ಬಿಡು' ಅಂತ ಹೆಂಡತಿಗೆ ಹೇಳಿ ಸುಮ್ಮನೆ ಎದ್ದು ಹೋಗಿಬಿಟ್ಟಿದ್ದ. ಹೀಗೆ ಕಾವೇರಿ ಎಂಬ ಮದುಮಗಳು ಕಾಡನಡುವಿನ ಹಾಡಿಗೆ ಬಂದು ಕಾವೇರಮ್ಮನಾಗಿ ಬದಲಾದ ಕಥೆ ಯಾದ್ರೆ, ಕಾವೇರಮ್ಮನ ಮುಂದಿನ ಬದುಕು ಕಥೆಯಾದುದ್ದೇ ಒಂದು ಕಥೆ.

ಹಾಡಿ ಅಂದ್ರೆ ನಮ್ಮ ನಿಮ್ಮೆಲ್ಲರ ಹಳ್ಳಿಯಂತಿರುತ್ತೆ. ಆದ್ರೆ ಇದು ಪಶ್ಚಿಮಘಟ್ಟದ ಗರ್ಭದಲ್ಲಿ ಹುದುಗಿರೋ ಹಾಡಿಯಾಗಿರೋದ್ರಿಂದ ಹಸಿರನ್ನ ಬಿಟ್ಟು ಈ ಹಾಡಿಯನ್ನ ಕಲ್ಪಿಸಿಕೊಳ್ಳೊದು ಕೂಡ ಊಹಿಸಿಕೊಳ್ಳಲು ಬರದು. ಅಂತಹ ಒಂದು ನಿಸರ್ಗ ನಡುವಿನ ತಪ್ಪಲಿನ ನಡುವೆ ಸುಬ್ಬಯ್ಯನ ಮನೆಯಿತ್ತು. ಹೆಚ್ಚು ಕಡಿಮೆ ಒಂದು ಕಿಲೋಮೀಟರ್ ಅಂತರದಲ್ಲಿ ಮತ್ಯಾವ ಮನೆಗಳು ಇರದಿದ್ದರೂ, ದೂರದ ಮನೆಗಳಲ್ಲಿ ಬೆಳಗ್ಗೆ ಒಂದ್ಸಾರಿ, ಸಂಜೆ ಒಂದ್ಸಾರಿ ತಪ್ಪದ ದಿನಚರಿಯಂತೆ ಅನಂತ ಸೇರುತ್ತಿದ್ದ ಹೊಗೆಯಿಂದ ಭಾವಾನಾತ್ಮಕ ಸಂಪರ್ಕ ಸೇತುವೆ ಒಂದು ಹೆಣೆದುಕೊಂಡಂತಿತ್ತು. ಅದರಲ್ಲೂ ಮಳೆಗಾಲ ಶುರುವಾಯ್ತು ಅಂದ್ರೆ ಎರಡು ಮೂರು ತಿಂಗಳು ಮನೆಯ ಅಂಗಳದಲ್ಲಿ ಪಾಚಿ ಬೆಳೆದು ನಡೆದಾಡಲೂ ಪ್ರಯಾಸ ಪಡುವಂತಹ ಪರಿಸ್ಥಿತಿ. ಕೆಲವೊಮ್ಮೆ ಅಪರಾತ್ರಿಯಲ್ಲಿ ಶುರುವಾಗುವ ಮಳೆ ಬಿಡುತ್ತಿದ್ದದ್ದು ಎರಡು ಹಗಲು, ಇನ್ನೊಂದು ರಾತ್ರಿ ಕಳೆದಮೇಲೆನೆ. ಅದು ಎಂಥಹಾ ಮಳೆ ಅಂತಂದ್ರೆ ಘಟ್ಟದ ತಪ್ಪಲಿನಿಂದ ಬೀಸುವ ಕವಣದ ಜೊತೆಯಲ್ಲಿ ಸುರಿಯುವ ನೀರು ಸುಬ್ಬಯ್ಯ–ಕಾವೇರಮ್ಮನ ಮನೆಯ ಮೇಲಿಂದೆ ಜಲಪಾತದಂತೆ ಸುರಿಯುತ್ತಿತ್ತು. ಹಾಗಾಗೆ ಮಕ್ಕಳು ದೊಡ್ಡವರಾಗುವ, ಸ್ವಲ್ಪ ಬುದ್ದಿ ತಿಳಿಯುವ ವಯಸ್ಸಿಗೆ ಬರುವ ಹೊತ್ತಿಗೆ ಕಾವೇರಮ್ಮನಿಗೆ ಅವರನ್ನ ಜತನದಿಂದ ಕಾಪಾಡುವುದೇ ದೊಡ್ಡ ಕೆಲಸವಾಗಿತ್ತು. ಮಳೆಗಾಲನಲ್ಲಿ ವರ್ಷಕೊಮ್ಮೆ ಬರುವ ಜ್ವರ ಎಂಬ ಪೀಡೆಗೆ ಕಷಾಯ ರೆಡಿಮಾಡಿ, ಗಂಡ–ಮಕ್ಕಳಿಗೆ ಕುಡಿಸಿದರೇನೆ ಸಮಾಧಾನವಾಗುತ್ತಿದ್ದದು. ಕಾವೇರಿ ಮದುಮಗಳಾಗಿ ಹಾಡಿಗೆ ಕಾಲಿಟ್ಟದ್ದು ಇಂತಹ ಒಂದು ಮಳೆಗಾಲದಲ್ಲಿ. ಅವತ್ತು ಮನೆಯ ಹೊಸ್ತಿಲಿನ ಅಕ್ಕಿಸೇರನ್ನ ತನ್ನ ಬಲಗಾಲಲ್ಲಿ ಒದ್ದು, ಒಳಬರುವ ಮುನ್ನ ಅಂಗಳದ ಪಾಚಿಯಲ್ಲಿ ಕಾವೇರಿಯ ಕಾಲು ಜಾರಿತ್ತು. ಅವತ್ತೇ ಸುಬ್ಬಯ್ಯನ ತಾಯಿ ಜತನದಿಂದ ಸೊಸೆಗೆ ಮಳೆಗಾಲದ ವಿರುದ್ಧ ಹೋರಾಡುವ ಸಮಸ್ಥ ಕಲೆಗಳನ್ನ ದಾರೆ ಎರೆದಂತೆ ಕಷಾಯ ಮಾಡುವುದನ್ನ ಕಲಿಸಿಬಿಟ್ಟಿದ್ದರು...

ಮುಂಜಾನೆ ಬೆಳಕು ಹರಿಯುತ್ತಲೆ ಇನ್ನೂ ಆರದ ಕವಣವನ್ನ ದಾಟಿಕೊಂಡು ಸುಬ್ಬಯ್ಯ ಮನೆ ಎದುರಿಗಿನ ಕಾಡು ಸೇರಿಕೊಳ್ಳುತ್ತಿದ್ದ. ಸೊಂಟದಲ್ಲೊಂದು ಕತ್ತಿ,

ತಲೆಯ ಮೇಲೊಂದು ಕಂಬಳಿ ಕೊಪ್ಪೆ ಇದ್ದರೆ ಸುಬ್ಬಯ್ಯ ಎಂತಹ ಕಾಡನ್ನಾದರೂ ಬೇಧಿಸಿಕೊಂಡು ಬರುತ್ತಿದ್ದ. ಕಾಡು ಮೆಣಸಿನ ಕಾಳು, ಮುರಗುನ ಹುಳಿ, ಅಡ್ಡುಳಿ, ಜೇನು, ರಾಂಪತ್ರೆ, ಹಾಲುಮಡ್ಡಿ, ಬೆತ್ತ ಹೀಗೆ ಕಾಡು ನೀಡುವ ಊಟವನ್ನ ಆಯ್ದು ಆತ ಮನೆ ಸೇರುವ ಹೊತ್ತಿಗೆ ಕಾವೇರಿ ಅಕ್ಕಿ ಹಿಟ್ಟಿನ ಕಡುಬು ಮಾಡಿ ಇಡುತ್ತಿದ್ದಳು. ತಿಂಡಿ ಮುಗಿಸುತ್ತಿದ್ದಂತೆ ಕಾವೇರಿ, ಗಂಡ ಮುಡಿಯಲ್ಲಿ ತಂದದ್ದನ್ನ ಸಾರಿಸಿ ಒಪ್ಪ ಮಾಡಿ ಮಾರಾಟಕ್ಕೆ ಸಿದ್ದಮಾಡುತ್ತಿದ್ದಳು. ಇಷ್ಟಾಗುವ ಹೊತ್ತಿಗೆ ಸರಿಯಾಗಿ ಸೂರ್ಯ ಅವರ ಮನೆಯ ನೆತ್ತಿಗೆ ಬರುತ್ತಿದ್ದ. ಮದ್ಯಾಹ್ನದ ಬುತ್ತಿ ಕಟ್ಟಿಕೊಂಡು ಮನೆ ಮುಂದಿನ ಗುಡ್ಡದ ಬುಡದಲ್ಲಿ ಮಾಡಿಕೊಂಡ ಅರ್ಧ ಎಕರೆ ಭತ್ತದ ಗದ್ದೆಯಲ್ಲಿ ಗಂಡ-ಹೆಂಡತಿ ಕೆಲಸಕ್ಕೆ ಹೊರಟರೆ ತಿರುಗಿ ಬರುತ್ತಿದ್ದದ್ದು ಸಂಜೆ ಕಡೆಗೆ. ರಾತ್ರಿ ಅಡುಗೆಗೆ ಕಾವೇರಿ ನೀರಿಡುವ ಹೊತ್ತಿಗೆ ಸುಬ್ಬಯ್ಯ ಬಚ್ಚಲಿಗೆ ಬೆಂಕಿ ಹಾಕಿ ನೀರು ಕಾಸುತ್ತಿದ್ದ. ಬೆಳಗ್ಗೆಯಿಂದ ಸುರಿದ ಬೆವರು, ದಣಿದ ಮೈಗೆ ಬಿಸಿನೀರಿನ ಮಜ್ಜನ ಮಾಡಿಸಿ ದಂಪತಿ ಅವತ್ತಿಗೆ ಅನ್ನವೊ, ಗಂಜಿ ಕುಡಿದು ಹಾಸಿಗೆ ಹೊಸ್ತಿಲಿಗೆ ಬರುವ ಹೊತ್ತಿಗೆ ಹೊಸ ಮನುಷ್ಯರಾಗಿ ಬಿಡುತ್ತಿದ್ದರು. ಅಲ್ಲಿ ಅವರಿಬ್ಬರ ಮನಸ್ಸುಗಳು ಶೃತಿಗೊಂಡು, ಮೃದಗೊಂಡ ಮುದಗೊಳ್ಳುವ ವೇಳೆಗೆ ಒಂದು ಚಿರನಿದ್ರೆ...ಅಂದಾಗೆ ಇದಿಷ್ಟು ಕಾವೇರಮ್ಮ ಎಂಬ ಸಾಮಾನ್ಯ ಹೆಣ್ಣುಮಗಳ ಬದುಕಿನ ಇಪ್ಪತ್ತೈದು ವರ್ಷಗಳ ಹಿಂದಿನ ಸಂತೃಪ್ತ ಕಥೆ.

೨

'ನಿನ್ನ ಇಲ್ಲಿಗೆ ಕರ್ಕೊಂಬಂದು ತ್ಯಪ್ಪು ಮಾಡ್ಬಟ್ವೆ ಕಣೇ' ಅಂದ ಸುಬ್ಬಯ್ಯನ ದನಿ ಸಣ್ಣಗೆ ಕಂಪಿಸುತ್ತಿತ್ತು. ಮನೆಯ ಅಂಗಳಕ್ಕೆ ಮಾಡಿದ್ದ ಬಿದುರಿನ ಬೇಲಿ ಸಾಲಿಗೆ ಕಣ್ಕಟ್ಟು ಮಾಡುತಿದ್ದ ಅವನ ಕೈಗಳು ಯಾಂತ್ರಿಕವಾಗಿ ಕಾಡಿನ ಬೀಳನ್ನ ಬೇಲಿಗೆ ಸುತ್ತಿ ಗಂಟು ಹಾಕುತಿತ್ತು. ಅಲ್ಲಿಯವರೆಗೂ ಅಳು ತಡೆದುಕೊಂಡು ಪಕ್ಕದಲ್ಲಿ ಬೀಳನ್ನ ಸೀಳಿಕೊಡುತಿದ್ದ ಕಾವೇರಿಗೆ ಅಳು ಎಂಬು ಕಟ್ಟೆ ಒಡೆದಂತೆ ಹರಿದುಬಂತು. 'ಅಯ್ಯೋ, ಹಂಗ್ಯಾಕಂತೀರಿ, ಎಲ್ಲಾ ಹಣೆಲಿ ಬರ್ದಂಗೆ ಆಗ್ತೈತಿ, ಅಪ್ಪೆಯಾ' ಅಂದವಳೆ ಮನೆಯ ಹಿಂದಿನ ದನದ ಕೊಟ್ಟಿಗೆ ಕಡೆ ಓಡಿದಳು. ಅಲ್ಲಿ ಆರು ತಿಂಗಳ ಗರ್ಭ ಕಟ್ಟಿಕೊಂಡು ನಿಂತಿದ್ದ ಮೋಟು ಕಾಲಿನ ಹಸಿ ಹುಲ್ಲು ಜಗಿಯುತ್ತ ನಿಂತಿತ್ತು. ಕಾವೇರಿ ಕಣ್ಣೀರು ಸುರಿಸುತ್ತ, ಗಬ್ಬದ ದನದ ತಲೆಯ ಮೇಲೆ ಕೈ ಇಟ್ಟೊಡನೆ, ಹುಲ್ಲು ಜಗಿಯುವುದನ್ನ ನಿಲ್ಲಿಸಿ ತಲೆ ಎತ್ತಿ ಸುಮ್ಮನೆ ನಿಂತುಕೊಂಡಿತು. ಬಹುಷಃ ಅವರಿಬ್ಬರದು ಮಾತುಕತೆ ಇಲ್ಲದ ಸಂಬಂಧ. ಕಾವೇರಿಗೆ ಅಳು ಬಂದಾಗೆಲ್ಲ ದನದ ಜೊತೆ ಸಲ್ಲಾಪ ನಡೆಸುತ್ತಾ ಸಂತೈಸಿಕೊಳ್ಳುತ್ತಿದ್ದಳು. ಆದರೆ ಇವತ್ತು ಕಾವೇರಿಗೆ ತನ್ನ ಪ್ರೀತಿಯ ದನದ ಮುಂದೆ ನಿಂತಾಗಲೂ ಅಳುವನ್ನ ತಡೆದುಕೊಳ್ಳಲಾಗಲಿಲ್ಲ. ಸುಬ್ಬಯ್ಯ ಬೇಲಿ ಕಟ್ಟುತ್ತಿದ್ದವನು ಬಂದು ಹೆಂಡತಿಯ ಪಕ್ಕ ಮಾತಿಲ್ಲದೆ ನಿಂತ. ಅವರಿಬ್ಬರಿಗೂ ಮನೆಯ ಮದ್ಯದಲ್ಲಿ, ನಿಜ್ಮನೆಯಲ್ಲಿಟ್ಟಿದ್ದ ದೇವರ ಹಲಗೆಯ ಎದುರಿಗೆ ವಾರದ ಹಿಂದೆ ಸ್ಥಾಪಿತಗೊಂಡ ಹಸಿರು ಫಲಕ ಎದ್ದು ಕಾಣುತಿತ್ತು. ಇಷ್ಟಕ್ಕೂ ಆಗಿದ್ದೇನು ಅಂದ್ರೆ, ಅವತ್ತೊಂದಿನ ಗದ್ದೆಯಲ್ಲಿ ನೀರು ಕಟ್ಟುತ್ತಿದ್ದವರನ್ನ ಯಾರೋ ಕೂಗಿದಂತಾಯಿತು. ಕೆಲಸವನ್ನ ಅರ್ಧಕ್ಕೆ ಬಿಟ್ಟು ಬಂದವರ ಎದುರಿಗೆ ನಾಲ್ಕಾರು ಖಾಕಿ ಬಟ್ಟೆಯ ಮಂದಿ ನಿಂತಿದ್ದರು. ಅವರ ಕೈಯಲ್ಲಿ ನಾಲ್ಕಾರು ಕಾಗದ ಪತ್ರಗಳಿದ್ದವು. ಮೈಕೈ ಕೆಸರು ಮಾಡಿಕೊಂಡು ಬಂದ ಇವರನ್ನ ಒಂಥರಾ ಅಸಡ್ಡೆಯಲ್ಲಿ ನೋಡಿ, 'ಇದು ನಿಮ್ಮದೇ ಮನೇಯೇನ್ರಿ' ಅಂದರು.

ಸುಬ್ಬಯ್ಯ ಹೌದು ಎನ್ನುವಂತೆ ತಲೆ ಆಡಿಸಿದ್ದನ್ನ ಗಣನೆಗೂ ತೆಗೆದುಕೊಳ್ಳದೆ,' ಕಂದಾಯ ಕಟ್ಟುತ್ತಿದ್ದೀರಾ?' ಎಂಬ ಪ್ರಶ್ನೆ ಎದುರಾಯಿತು. ಹೀಗೆ ಒಂದಷ್ಟು ಕಾಯ್ದೆ-ಕಾನೂನು ಅಂತೆಲ್ಲಾ ಅವರು ಮಾತನಾಡಿದರಾದ್ರು, ಸಾರಾಂಶದಲ್ಲಿ ಸುಬ್ಬಯ್ಯ-ಕಾವೇರಮ್ಮನ ಮನೆ ರಕ್ಷಿತಾರಣ್ಯದ ಸುಪರ್ದಿಗೆ ಬರುತ್ತಾದ್ದರಿಂದ ಆದಷ್ಟು ಬೇಗ ಖಾಲಿಮಾಡುವಂತೆ ಸೂಚ್ಯವಾಗಿ ತಿಳಿಸಿ ಹೋಗಿದ್ರು, ಅವರು ಹೋಗುವ ಮುನ್ನ ಟೇಪುಗಳನ್ನ, ದುರ್ಬಿನುಗಳನ್ನ ತೆಗೆದುಕೊಂಡು ನಾಲ್ಕಾರು ಸುತ್ತು ಅಳತೆ ಮಾಡಿ, ಮನೆಯ ನಿಜ್ಮನೆಗೆ ಒಂದು ಹಸಿರು ಫಲಕ ನೆಟ್ಟು ಹೊರಡು ಹೋಗಿದ್ರು, ಅದರ ಮೇಲೆ 'ಆರ್‌ಎಫ್' ಅಂತೆ ಬಿಳಿ ಬಣ್ಣದಲ್ಲಿ ಬರೆಯಲಾಗಿತ್ತು. ಇದು ನಡೆದ ದಿನ ಗಂಡ ಹೆಂಡತಿ ಇಬ್ಬರು ಮಾತುಕತೆಯಿಲ್ಲದೆ ನಡುಮನೆಯಲ್ಲಿ ಮಾವುದೋ ಮಾಂತ್ರಿಕನ ಮಾಟದ ಗುರುತಂತೆ ಕುಳಿತಿದ್ದ ಹಸಿರು ಫಲಕವನ್ನೇ ನೋಡುತ್ತಾ ಕುಳಿತುಬಿಟ್ಟಿದ್ದರು. ರಾತ್ರಿ ನಿದ್ದೆಯಲ್ಲೂ ಕೂಡ ಕಣ್ಣು ಮುಚ್ಚಿದೊಡನೆ ಭೂತ-ಪ್ರೇತಗಳು ಪರಕಾಯ ಪ್ರವೇಶ ಮಾಡಿದಂತೆ, ತಲತಲಾಂತರಗಳಿಂದ ಬಾಳಿ ಬದುಕಿದ ಮನೆಗೆ ಬೆಂಕಿ ಇಟ್ಟಂತೆ, ಗುಡ್ಡದ ತಪ್ಪಲಿನವರೆಗೂ ಚಾಚಿದ ಬೆಂಕಿಯ ಕೆನ್ನಾಲಿಗೆಯ ನಡುವೆ ಮಕ್ಕಳು ಚೀರಿಕೊಂಡಂತೆ..ಹೀಗೆ ಬೇಡವಾದ ಸಪ್ಪನಗಳು ಕಾಡತೊಡಗಿದ್ದವು. ಆದರೆ ಮಾರನೆ ದಿನ ಇವರು ದಿನನಿತ್ಯದ ಕೆಲಸಗಳನ್ನ ಯಾಂತ್ರಿಕವಾಗಿ ಮುಗಿಸಿ ಬರುವ ಹೊತ್ತಿಗೆ

ಅವತ್ತೊಂದಿನ ಗದ್ದೆಯಲ್ಲಿ ನೀರು ಕಟ್ಟುತ್ತಿದ್ದವರನ್ನ ಯಾರೋ ಕೂಗಿದಂತಾಯಿತು. ಕೆಲಸವನ್ನ ಅರ್ಧಕ್ಕೆ ಬಿಟ್ಟು ಬಂದವರ ಎದುರಿಗೆ ನಾಲ್ಕಾರು ಖಾಕಿ ಬಟ್ಟೆಯ ಮಂದಿ ನಿಂತಿದ್ದರು. ಅವರ ಕೈಯಲ್ಲಿ ನಾಲ್ಕಾರು ಕಾಗದ ಪತ್ರಗಳಿದ್ದವು. ಮೈಕೈ ಕೆಸರು ಮಾಡಿಕೊಂಡು ಬಂದ ಇವರನ್ನ ಒಂಥರಾ ಅಸಡ್ಡೆಯಲ್ಲಿ ನೋಡಿ, 'ಇದು ನಿಮ್ಮದೇ ಮನೇಯೇನ್ರಿ' ಅಂದರು. ಸುಬ್ಬಯ್ಯ ಹೌದು ಎನ್ನುವಂತೆ ತಲೆ ಆಡಿಸಿದ್ದನ್ನ ಗಣನೆಗೂ ತೆಗೆದುಕೊಳ್ಳದೆ,' ಕಂದಾಯ ಕಟ್ಟುತ್ತಿದ್ದೀರಾ?' ಎಂಬ ಪ್ರಶ್ನೆ ಎದುರಾಯಿತು. ಹೀಗೆ ಒಂದಷ್ಟು ಕಾಯ್ದೆ-ಕಾನೂನು ಅಂತೆಲ್ಲಾ ಅವರು ಮಾತನಾಡಿದರಾದ್ರು, ಸಾರಾಂಶದಲ್ಲಿ ಸುಬ್ಬಯ್ಯ-ಕಾವೇರಮ್ಮನ ಮನೆ ರಕ್ಷಿತಾರಣ್ಯದ ಸುಪರ್ದಿಗೆ ಬರುತ್ತಾದ್ದರಿಂದ ಆದಷ್ಟು ಬೇಗ ಖಾಲಿಮಾಡುವಂತೆ ಸೂಚ್ಯವಾಗಿ ತಿಳಿಸಿ ಹೋಗಿದ್ರು, ಅವರು ಹೋಗುವ ಮುನ್ನ ಟೇಪುಗಳನ್ನ, ದುರ್ಬಿನುಗಳನ್ನ ತೆಗೆದುಕೊಂಡು ನಾಲ್ಕಾರು ಸುತ್ತು ಅಳತೆ ಮಾಡಿ, ಮನೆಯ ನಿಜ್ಮನೆಗೆ ಒಂದು ಹಸಿರು ಫಲಕ ನೆಟ್ಟು ಹೊರಟು ಹೋಗಿದ್ರು, ಅದರ ಮೇಲೆ 'ಆರ್‌ಎಫ್' ಅಂತ ಬಿಳಿ ಬಣ್ಣದಲ್ಲಿ ಬರೆಯಲಾಗಿತ್ತು. ಇದು ನಡೆದ ದಿನ ಗಂಡ ಹೆಂಡತಿ ಇಬ್ಬರು ಮಾತುಕತೆಯಿಲ್ಲದೆ ನಡುಮನೆಯಲ್ಲಿ ಮಾವುದೋ ಮಾಂತ್ರಿಕನ ಮಾಟದ ಗುರುತಂತೆ ಕುಳಿತಿದ್ದ ಹಸಿರು ಫಲಕವನ್ನೇ ನೋಡುತ್ತಾ ಕುಳಿತುಬಿಟ್ಟಿದ್ದರು.

ಕಾವೇರಮ್ಮನ ಚಿಕ್ಕ ಮಗು ಹಸಿರು ಫಲಕಕ್ಕೆ ಅರಶಿಣ-ಕುಂಕುಮ ಹಚ್ಚಿ, ಮನೆ ಎದುರಿನ ದಾಸವಾಳದ ಕೆಂಪು ಹೂವು ಮುಡಿಸಿ ದೇವರ ಆಟ ಆಡುತ್ತಿದ್ದನು.

ಇದನ್ನ ನೋಡುತ್ತಿದ್ದಂತೆ ಕಾವೇರಿ ಕಣ್ಣಲ್ಲಿ ನೀರು ಬಂತಾದರೂ ಮಗನ ಮುಂದೆ ಅಳಬಾರದು ಎಂಬ ಹಟದಲ್ಲಿ ತಡೆದುಕೊಂಡಿದ್ದಳು. ಹಾಗೂ, ಹೀಗೂ ವಾರ ಕಳೆಯುವ ಹೊತ್ತಿಗೆ ಹಾಡಿಯ ದೂರದ ಮನೆಗಳಲ್ಲೂ ಇಂತಹದೆ ಒಂದು ಪವಾಡ ನಡೆದು, ಸಾಮೂಹಿಕ ಮಾಟಕ್ರಿಯೆ ನಡೆದಿದೆ ಎಂಬ ಸಂಗತಿ ಹೊರಬೀಳತೊಡಗಿತು. ಅವತ್ತು ಸಂಜೆ ಗದ್ದೆಯಲ್ಲಿ ಬೆಳೆದು ನಿಂತಿದ್ದ ಪೈರಿಗೆ ಸಗಣಿ ನೀರು ಹರಿಸುತ್ತಿದ್ದ ಸುಬ್ಬಯ್ಯನಿಗೆ ದೂರದಲ್ಲಿ ಹಾಡಿಯ ಒಂದಷ್ಟು ಹುಡುಗರು ಬರುವುದು ಕಾಣಿಸಿತು. ಅದರಲ್ಲಿ ಹಾಡಿಯ ಏಕೈಕ ಪದವೀದರ ನಿರುದ್ಯೋಗಿ ಪರಮ ಕೂಡ ಇದ್ದ. ಪರಮ ನಾಲ್ಕಾರು ವರ್ಷಗಳ ಹಿಂದೆ ದೂರದ ಊರಲ್ಲಿ ಪದವಿ ಓದುತ್ತಿದ್ದ. ಆಗಿನಿಂದಲೂ ಹಾಡಿಗೆ ಬಂದರೆ ಎಲ್ಲರ ಮನೆಗಳಿಗೂ ಹೋಗಿ, ಕ್ಷೇಮ ಸಮಾಚಾರ ಕೇಳುವ ಹವ್ಯಾಸ ಬೆಳೆಸಿಕೊಂಡಿದ್ದ. ಅದರಲ್ಲೂ ಕಾವೇರಮ್ಮಗೆ ಪರಮನ ಕಂಡರೆ ಅದೊಂತರ ತಾಯಿ ಮಮತೆ. ದೊಡ್ಡ ಮಗನನ್ನ ತವರು ಮನೆಯಲ್ಲಿ ಓದಲು ಬಿಡುವುದಕ್ಕೆ ಪರಮನ ಮಾತುಗಳ ಪ್ರಭಾವವೂ ಇತ್ತು. ಅವತ್ತು ಪರಮ ಹಾಗೂ ಒಂದಷ್ಟು ಹಾಡಿಯ ಹುಡುಗರು ಸುಬ್ಬಯ್ಯನ ಹತ್ತಿರ ಬಂದು ಸಾಮೂಹಿಕ ಮಾಟದ ವಿಚಾರ ತೆಗೆದರು. ಬದುಕಿನ ಕೊನೆಯ ಆಶಯದಂತಿದ್ದ ಅವರ ಮಾತುಗಳನ್ನ ಕೇಳಿಸಿಕೊಳ್ಳುತ್ತಲೇ ಅವರೆಲ್ಲರನ್ನ ಕರೆದುಕೊಂಡು ಸುಬ್ಬಯ್ಯ ಮನೆಗೆ ಬಂದನು. ಕಾವೇರಿ ಪರಮ ಹಾಗೂ ಹುಡುಗರನ್ನ ಎಂದಿನ ಸಲಿಗೆಯಲ್ಲಿ ಮಾತನಾಡಿಸಿ ಕಾಫಿ ಮಾಡಿ ತಂದಿಟ್ಟಳು. ವಿದ್ಯಾವಂತ ಪರಮ 'ಆರ್‌ಎಫ್' ಇಂಗ್ಲಿಷ್‌ನ ಎರಡಕ್ಷರದ ಹಿಂದಿರುವ ಸಮಸ್ತ ಕಾನೂನು ಕಟ್ಟಳೆಗಳನ್ನು ತಿಳಿಸಿ ಇದರ ವಿರುದ್ಧ ಹೋರಾಟ ಒಂದೇ ಮಾರ್ಗ, ಇಲ್ಲದಿದ್ದರೆ ಹಾಡಿ ಹಾಡಿಯಾಗಿರುವುದಿಲ್ಲ ಎಂಬುದನ್ನ ಸರಳವಾಗಿ ಬಿಡಿಸಿ ಅವರೆದುರು ಇಟ್ಟಿದ್ದ. ಜೊತೆಗೆ ಮುಂದಿನ ಸೋಮವಾರ ಜಿಲ್ಲೆಯ ದೊರೆಗೆ ಒಂದು ಮನವಿ ಪತ್ರ ಸಲ್ಲಿಸುವ ಸಲುವಾಗಿ ಎಲ್ಲರೂ ಹೋಗಬೇಕು ಎಂದು ಆಗ್ರಹದ ದನಿಯಲ್ಲಿ ತಿಳಿಸಿದ್ದ. ಅವನ ಆಗ್ರಹ, ಇವರ ಅಗತ್ಯವೂ ಆದ್ದರಿಂದ ಮುಂದಿನ ಸೋಮವಾರಕ್ಕೆಲ್ಲ ತಮ್ಮ

ನಿಜ್ಮಯ ಒಳಗೆ ಕುಳಿತಿದ್ದವರಿಗೆ ಅಂಗಳದಲ್ಲಿ ಯಾರೋ ಸರಿದ ಸದ್ದು ಕೇಳಿಸಿತು. ಕ್ಷಣ ಮಾತು ನಿಲ್ಲಿಸಿ ಕಿವಿಯನ್ನ ಆಲಿಸಿದರಾದರು ನೀರವ ಮೌನದ ಹೊರತು ಮತ್ತೇನು ಕೇಳಿಸಲಿಲ್ಲ. ಅದೇನೊ ಹೇಳಲು ಕಾವೇರಮ್ಮ ಬಾಯಿ ತೆರೆಯುತ್ತಿದ್ದಂತೆ ಮನೆಯ ಗೋಡೆಗಳನ್ನ ಸೀಳಿ ಒಂದು ಗುಂಡು ಹಾರಿ ಆಕೆಯ ಭುಜಕ್ಕೆ ಬಡಿಯಿತು. ಏನಾಯಿತು ಅಂತ ನೋಡುವ ಒಳಗೆ ಪಟಾಕಿ ಸರಕ್ಕೆ ಬೆಂಕಿ ಕೊಟ್ಟಂತೆ ಸಿಡಿದ ಗುಂಡುಗಳು ಮನೆಯ ಅಷ್ಟು ಜೀರ್ಣವಾಗಿದ್ದ ಗೋಡೆಗಳಿಗೆ ರಂಗೋಲಿ ಹಾಕಿದಂತೆ ಚಿತ್ತಾರ ಬಿಡಿಸಿಯಾಗಿತ್ತು. ಕೊಟ್ಟಿಗೆಯಲ್ಲಿದ್ದ ಗಬ್ಬದ ಹಸು ಅಂಬಾ ಅಂತ ಕೂಗಿ ಕಣ್ಮುಚ್ಚಿತು. ಅಷ್ಟೊತ್ತಿಗೆ ಕಾವೇರಿ ಮಡಿಲಲ್ಲಿದ್ದ ಮಗ ಮತ್ತೆಂದು ಏಳದ ಚಿರನಿದ್ರೆಗೆ ಜಾರಿಯಾಗಿತ್ತು. ಅವನ ತಲೆಯಿಂದ ಹಾರಿದ ರಕ್ತ ಹಸಿರು ಫಲಕಕ್ಕೆ ಮಾಟದ ಕಳನೀಡಿ ಅಪಶಕುನದ ಕುರುಹುವಿನಂತೆ ಕೆಳಕ್ಕೆ ಇಳಿಯತೊಡಗಿತು.

ಸಂಕಷ್ಟಗಳು ಪರಿಹಾರ ಕಾಣಲಿವೆ ಎಂಬ ವಿಶ್ವಾಸದಿಂದ ಅವತ್ತು ರಾತ್ರಿ ಕಾವೇರಮ್ಮ ಹಾಗೂ ಸುಬ್ಬಯ್ಯ ನೆಮ್ಮದಿಯ ನಿದ್ರೆಗೆ ಜಾರಿದ್ದರು.

೩

ಅದು ಬೃಹತ್ ನಗರವಲ್ಲದಿದ್ದರೂ ಮಲೆನಾಡಿನ ಕೊನೆಯ ಭಾಗದಲ್ಲಿ ಇದ್ದ ದೊಡ್ಡ ನಗರ. ಅದರಲ್ಲೂ ಕಾಡಿನ ಹಾಡಿಯ ಜನರಿಗೆ ಇದು ಹಲವಾರು ಕೌತುಕಗಳು ಹುಟ್ಟಲು ಕಾರಣವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಹಾಡಿಯ ಮಕ್ಕಳು ಒಂದಷ್ಟು ಓದಿಕೊಂಡು ದೇಶ ಸುತ್ತುವ ಕೆಲಸ ಮಾಡಲು ಶುರುಮಾಡಿದ ನಂತರ ನಗರ ಎಂಬುದು ತೀರ ಅಪರಿಚಿತವಾಗಿ ಉಳಿದಿರಲಿಲ್ಲ. ಆದರೂ ಅವತ್ತು ಅಲ್ಲಿಗೆ ಬಂದವರಲ್ಲಿ ಹಾಡಿಯ ಅಳಿದುಳಿದ ಎಲ್ಲಾ ತಲೆಮಾರಿನ ಮುದುಕರು, ಮುದುಕಿಯರು, ಹೆಂಗಸರು, ಗಂಡಸರು, ಮಕ್ಕಳು ಮರಿಗಳೆಲ್ಲ ಸೇರಿದ್ದರು. ಹಾಡಿಯ ಕೆಲವರಿಗೆ ರಸ್ತೆಯ ತುಂಬ ಹರಿದಾಡುತ್ತಿದ್ದ ವಾಹನಗಳು, ಚಿತ್ರವಿಚಿತ್ರ ಬಟ್ಟೆ ತೊಟ್ಟ ಮನುಷ್ಯರು ಕುತೂಹಲ ಮೂಡಿಸಿದ್ದಕ್ಕಿಂತ ಹೆಚ್ಚಾಗಿ ರಸ್ತೆಯ ಇಕ್ಕೆಲಗಳಲ್ಲಿ ಸುಮ್ಮನೆ ಮೆರವಣಿಗೆ ನೋಡುತ್ತಿದ್ದ ಜನರಿಗೆ ಇವರ ಬಗ್ಗೆ ಒಂತರಹ ಕುತೂಹಲ ಮೂಡಿತ್ತು.

ಮೆರವಣಿಗೆ ಮುಂಭಾಗದಲ್ಲಿದ್ದ ಕೆಲವರು ಪರಿಚಿತ ಮುಖಗಳೇ ಆದರೂ, ಅವರ ಹಿಂಬಾಲಕರಂತೆ ಘೋಷಣೆ ಕೂಗುತ್ತಿದ್ದ ಜನ ಹೊಸಬರಂತೆ ಕಾಣುತ್ತಿದ್ದರು. ಅದರಲ್ಲೂ ನೈಟಿ ಹಾಕಿಕೊಂಡು, ಬಿಳಿ ಬಣ್ಣದ ಜೂಲಿ ನಾಯಿಯನ್ನ ಸಾಕಿಕೊಂಡು, ಮನೆಯಲ್ಲಿ ಎಂದೂ ಮುಗಿಯದ ಸೀರಿಯಲ್ ನೋಡಬೇಕಾದ ಹೆಂಗಸರಂತಿದ್ದ ಕಾವೇರಮ್ಮನಂತಹ ಹಾಡಿಯ ಹೆಣ್ಣುಮಕ್ಕಳು ರಸ್ತೆಯಲ್ಲಿ 'ನ್ಯಾಯ ಬೇಕು' ಅಂತ ಕೂಗುತ್ತಿದ್ದದ್ದು ವಿಚಿತ್ರವಾಗಿ ಕಾಣುತಿತ್ತು. ಅಂತು ನಗರದ ರಸ್ತೆಗಳನ್ನೆಲ್ಲಾ ಸುತ್ತಿ ಮುಗಿಸಿ ಜಿಲ್ಲಾಧಿಕಾರಿಯವರ ಕಚೇರಿ ತಲುಪುವ ಹೊತ್ತಿಗೆ ನಡುಮಧ್ಯಾಹ್ನದ ಬಿರುಬಿಸಿಲು ಎಲ್ಲರ ಹಣೆಯ ಮೇಲೆ ಬೆವರು ಸಾಲುಗಳನ್ನ ಮೂಡಿಸಿತ್ತು. ನಂತರ ಒಂದಷ್ಟು ಭಾಷಣ, ಘೋಷಣೆಗಳೆಲ್ಲಾ ಮುಗಿಯುವ ಹೊತ್ತಿಗೆ ಎಲ್ಲರ ಹೊಟ್ಟೆಗಳು ತಾಳಹಾಕುತ್ತಿದ್ದವು. ಪರಮ ಮತ್ತಿತರ ಹುಡುಗರು ಎಲ್ಲಿಂದಲೋ ತಂದ ಚಿತ್ರಾನ್ನವನ್ನ ಇಟ್ಟು ಊಟಕ್ಕೆ ರೆಡಿಮಾಡಿದ್ದರು. ಕಾವೇರಮ್ಮ ಮುಂದೆ ನಿಂತು ಊಟ ಬಡಿಸುವ ಕೆಲಸಮಾಡಿ ಎಲ್ಲರ ಪ್ರೀತಿಯ ಕಾವೇರಮ್ಮನಾದಳು. ಅವತ್ತು ಸುಬ್ಬಯ್ಯ ಕಾವೇರಮ್ಮ ಕೆಲಸಮಾಡುತ್ತಿದ್ದ ರೀತಿಗೆ ಬೆರಗಾಗಿದ್ದ. ಇಪ್ಪತ್ತೈದು ವರ್ಷಗಳ ಹಿಂದೆ ಮುದ್ದಿನ ಮಡದಿಯಾಗಿ ಬಂದ ಕಾವೇರಿ ಎಲ್ಲಿ, ಇವತ್ತಿನ ಕಾವೇರಮ್ಮ ಎಲ್ಲಿ ಅಂತ ಮನಸ್ಸು ಲೆಕ್ಕಾಚಾರ ಹಾಕಿತ್ತು. ಸಂಜೆ ಸುಮಾರಿಗೆ ದೊಡ್ಡ ಆಪೀಸಿನಿಂದ ನಾಲ್ಕಾರು ಜನರನ್ನ ಬೆನ್ನಿಗಿಟ್ಟುಕೊಂಡು ಹೊರಬಂದ ಅಧಿಕಾರಿ ಇವರು ಕೊಟ್ಟಿದ್ದನ್ನ ಇಟ್ಟುಕೊಂಡು, ಶಾಮಿಯಾನದ ಮುಂದೆ ಹಾಕಿದ್ದ ಮೈಕಿನಲ್ಲಿ ಒಂದಷ್ಟು ಮಾತನಾಡಿ ವಾಪಾಸ್ಸು ಹೊರಟುಹೋಗಿದ್ದ. ಇದನ್ನೆಲ್ಲ ನೋಡಿದ ಕಾವೇರಮ್ಮ ಪಕ್ಕದಲ್ಲಿ ಕುಳಿತಿದ್ದ ಹೆಂಗಸೊಬ್ಬಳಿಗೆ 'ಅಲ್ಲಾ..ಈಯಪ್ಪ ತನ್ನ ಕೈಲೇನು ಇಲ್ಲೆ. ನಿಮ್ಮ ದೂರನ್ನ ಸರ್ಕಾರಕ್ಕೆ ತಲುಪಿಸುತ್ತೇನೆ ಅಂತಾನಲ್ಲ. ಮತ್ಯಾಕೆ ನಾವು ಇವನತ್ರ ಬರಬೇಕಿತ್ತು' ಅಂತ ಹತಾಶಳಾಗಿ ಅಂದಿದ್ದಳು. ಪಕ್ಕದಲ್ಲಿದ್ದವರ್‍ಯಾರಿಗೋ ಈ ಮಾತು ಕಿವಿಯ ಮೇಲೆ ಬಿದ್ದು ಸುಮ್ಮನೆ ನಕ್ಕಿದ್ದರು.

ಇಷ್ಟೆಲ್ಲ ಮುಗಿಸಿ ಹಾಡಿ ತಲುಪುವ ಹೊತ್ತಿಗೆ ರಾತ್ರಿ ಮೂಡಿತ್ತು. ಹಾಸಿಗೆ ಮೇಲೆ ಕತ್ತಲ ಸೂರು ದಿಟ್ಟಿಸುತ್ತಾ ಅವತ್ತು ರಾತ್ರಿ ಗಂಡ-ಹೆಂಡತಿ ಬೆಳಗ್ಗೆಯಿಂದ ನಡೆದ ಎಲ್ಲವನ್ನೂ ಮೆಲಕು ಹಾಕುತ್ತ ನಿದ್ದೆಗೆ ಜಾರಿದ್ದರು.

೪

ಸಂಜೆಯ ಕತ್ತಲು ಸಣ್ಣಗೆ ಆವರಿಸುಕೊಳ್ಳುತ್ತಿತ್ತು. ಕಾಡು ನಡುವಿನಿಂದ ಸಣ್ಣನೆಯ ಬೆಳಕು ಬಿಟ್ಟುಕೊಂಡು ಪರಮ ಹಾಗು ಮತ್ತೊಬ್ಬ ಅಪರಿಚಿತ ಕಾವೇರಮ್ಮನ ಮನೆಯ ಬಾಗಿಲು ಬಡಿಯುವ ವೇಳೆಗೆ ಪಕ್ಕದ ಕಾಡಿನಲ್ಲಿ ಜೀರುಂಡೆಗಳು ನಾದಗೋಷ್ಠಿ ಶುರುವಿಟ್ಟುಕೊಂಡಿದ್ದವು. ಎದುರಿಗಿನ ಗುಡ್ಡದ ತಲೆಯಿಂದ ಜಾರಿದ ಸೂರ್ಯನ ಜಾಗದಲ್ಲಿ ಅಮವಾಸ್ಯೆಯ ಕಾರಿರುಳ ರಾತ್ರಿ ಆವರಿಸಿದ ಕಾರಣಕ್ಕೇನೋ ಅನ್ನುವಂತೆ ಮುದಿಗೂಬೆಯೊಂದು ಅಪಶಕುನ ನುಡಿಯುತ್ತಿತ್ತು. ಪರಮ ಬರುವ ವೇಳೆಗೆ ಕಾವೇರಮ್ಮ ಅಡುಗೆ ಕೆಲಸ ಮುಗಿಸಿ ಊಟಕ್ಕೆ ಬಡಿಸುವ ಸಲುವಾಗಿ ತಟ್ಟೆಗಳನ್ನ ತೊಳೆದು ಮಗನ ಕೈಗೆ ನೀರುಹಾಕುತ್ತಿದ್ದಳು. ಪರಮ ಬಂದವನೆ ಮನೆಯ ನಿಜ್ಮನೆಯಲ್ಲಿ ಚಾಪೆ ಹಾಸಿಕೊಂಡು ಸುಬ್ಬಯ್ಯನ ಜೊತೆ ಮಾತಿಗೆ ಕುಳಿತುಕೊಂಡ. ಅವನ ಮಾತುಗಳಲ್ಲಿ ಹೊಸ ಹುರುಪು ಇತ್ತಾದರೂ, ಹಸಿರು ಫಲಕದ ಆತಂಕದ ಸಣ್ಣ ಕಂಪನವನ್ನ ಎದುರಿಗಿದ್ದವರ ಅರಿವಿಗೆ ಬರುತ್ತಿತ್ತು. ಅವರಿಬ್ಬರ ಮಾತುಕತೆ ನಡೆಯವಾಗಲೇ ಕಾವೇರಮ್ಮ ಎಲ್ಲರಿಗೂ ಊಟಕ್ಕೆ ಬಡಿಸಿ ತಾನು ಬಂದು ಕುಳಿತುಕೊಂಡಳು. ಅವರ ಮಾತು ಭವಿಷ್ಯದ ಆತಂಕದ ನಡುವೆಯೇ ಮುಂದೇನು? ಅನ್ನುವ ಕುರಿತು ಹೊರಳಿತು. ಇದ್ಯಾವುದರ ಪರಿವೆಯೇ ಇಲ್ಲದ ಕಾವೇರಮ್ಮನ ಚಿಕ್ಕ ಮಗ ಮಾತ್ರ ಅಮ್ಮನ ಮಡಿಲಲ್ಲಿ ತಲೆ ಇಟ್ಟುಕೊಂಡು ನಿದ್ದೆಗೆ ಜಾರುವ ವೇಳೆಗೆ ಹೊತ್ತು ಕಳೆದು ಮುಸರೆ ಕೈಗಳು ಒಣಗಲಾರಂಭಿಸಿದ್ದವು. ಮಾತಿಗೆ ಚಿಕ್ಕ ತಡೆ ಹಾಕಿ ತಟ್ಟೆಯಲ್ಲೇ ಎಲ್ಲರಿಗೂ ಕೈತೊಳೆಯಲು ತಿಳಿಸಿ ಕಾವೇರಮ್ಮ ಮುಸರೆ ಪಾತ್ರೆಗಳನ್ನ ಹಿಂದಿನ ಬಚ್ಚಲಿನಲ್ಲಿ ಇಟ್ಟು ಬಂದಳು. ಬರುವ ಮುನ್ನ ಗಬ್ಬದ ಹಸುವಿಗೆ ಒಂದಷ್ಟು ಒಣಹುಲ್ಲು ಹಾಕಿ, ತಲೆ ಸವರಿ ಗುಡ್ಡದ ದಯ್ಯಕ್ಕೆ ಸುಸೂತ್ರ ಹೆರಿಗೆ ಮಾಡಿಸು ಅಂತ ಸಾವಿರದ ಒಂದನೇ ಬಾರಿ ಎಂಬಂತೆ ಕೈಮುಗಿದಳು.

ಇಷ್ಟಾಗುವ ಹೊತ್ತಿಗೆ ರಾತ್ರಿ ನಿಧಾನವಾಗಿ ಸರಿದು ಬರುತ್ತಿತ್ತು. ಅಲ್ಲಿ ಅವರ ಮಾತುಕತೆ ಬಿಟ್ಟರೆ, ಅಪರಾತ್ರಿ ಜೀರುಂಡೆಗಳ ಸದ್ದು ತಪ್ಪಲಿನವರೆಗೂ ಕೇಳಿಸುತ್ತಿತ್ತು. ನಿಜ್ಮಯ ಒಳಗೆ ಕುಳಿತಿದ್ದವರಿಗೆ ಅಂಗಳದಲ್ಲಿ ಯಾರೋ ಸರಿದ ಸದ್ದು ಕೇಳಿಸಿತು. ಕ್ಷಣ ಮಾತು ನಿಲ್ಲಿಸಿ ಕಿವಿಯನ್ನ ಆಲಿಸಿದರಾದರು ನೀರವ ಮೌನದ ಹೊರತು ಮತ್ತೇನು ಕೇಳಿಸಲಿಲ್ಲ. ಅದೇನೊ ಹೇಳಲು ಕಾವೇರಮ್ಮ ಬಾಯಿ ತೆರೆಯುತ್ತಿದ್ದಂತೆ ಮನೆಯ ಗೋಡೆಗಳನ್ನ ಸೀಳಿ ಒಂದು ಗುಂಡು ಹಾರಿ ಆಕೆಯ ಭುಜಕ್ಕೆ ಬಡಿಯಿತು. ಏನಾಯಿತು ಅಂತ ನೋಡುವ ಒಳಗೆ ಪಟಾಕಿ ಸರಕ್ಕೆ ಬೆಂಕಿ ಕೊಟ್ಟಂತೆ ಸಿಡಿದ ಗುಂಡುಗಳು ಮನೆಯ ಅಷ್ಟು ಜೀರ್ಣವಾಗಿದ್ದ ಗೋಡೆಗಳಿಗೆ ರಂಗೋಲಿ ಹಾಕಿದಂತೆ ಚಿತ್ತಾರ ಬಿಡಿಸಿಯಾಗಿತ್ತು. ಕೊಟ್ಟಿಗೆಯಲ್ಲಿದ್ದ ಗಬ್ಬದ ಹಸು ಅಂಬಾ ಅಂತ ಕೂಗಿ ಕಣ್ಮುಚ್ಚಿತು. ಅಷ್ಟೊತ್ತಿಗೆ ಕಾವೇರಿ ಮಡಿಲಲ್ಲಿದ್ದ ಮಗ ಮತ್ತೆಂದು ಏಳದ ಚಿರನಿದ್ರೆಗೆ ಜಾರಿಯಾಗಿತ್ತು. ಅವನ ತಲೆಯಿಂದ ಹಾರಿದ ರಕ್ತ ಹಸಿರು ಫಲಕಕ್ಕೆ ಮಾಟದ ಕಳನೀಡಿ ಅಪಶಕುನದ ಕುರುಹುವಿನಂತೆ ಕೆಳಕ್ಕೆ ಇಳಿಯತೊಡಗಿತು. ಪರಮ ಒಣಗಿದ ಕೈಗಳಲ್ಲಿ ಇನ್ನೂ ಅಂಟಿದ್ದ ಅನ್ನದ ಕಾಳುಗಳು ರಕ್ತದಲ್ಲಿ ತೋಯಿಸಿಕೊಂಡು ನಿಜ್ಮನೆಯ ಒಳಗೆ ಚೆಲ್ಲಾಡಿಹೋದವು. ಸುಬ್ಬಯ್ಯ ಹಾಗೂ ಅವನ ಪಕ್ಕದಲ್ಲೇ ಕುಳಿತಿದ್ದ ಅಪರಿಚಿತ ಹುಡುಗ ಕೊನೆಯ ತುತ್ತು ಬಡಿಸಿದ ಕಾವೇರಮ್ಮನ ಕಡೆಗೊಮ್ಮೆ ನೋಡಿ ಕಣ್ಣು ಮುಚ್ಚಿದರು. ಇವೆಲ್ಲವನ್ನೂ ರಕ್ತದ ಮಡುವಿನಲ್ಲಿ ಬಿದ್ದಿದ್ದ ಕಾವೇರಮ್ಮ ನೋಡಿದಳಾದರೂ ಆಕೆಯಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಅಷ್ಟೊತ್ತಿಗಾಗಲೇ ಆಕೆಯ ತಾಯಿ ಹೃದಯ ತನ್ನ ಮಿಡಿತವನ್ನ ನಿಲ್ಲಿಸಿಬಿಟ್ಟಿತು.

೫

ಅಂದ್ಹಾಗೆ ಇವತ್ತು ಕಾವೇರಮ್ಮನ ಹಾಡಿಯವರೆಗೂ ಚೆಂದದ ರಸ್ತೆಯಾಗಿದೆ. ಮನೆಯ ಮುಂದೆ ಪಾಚಿ ಕಟ್ಟುವುದೂ ಇಲ್ಲ. ಎರೆಡೆರಡು ಮೊಬೈಲ್ ಟವರ್‌ಗಳು ಗುಡ್ಡದ ತಪ್ಪಲನ್ನ ಏರಿ ಕುಳಿತಿವೆ. ಸಮಸ್ತ ಸಂಪರ್ಕ ಸಾಧನಗಳು ಪುಟ್ಟ ಮನೆಯನ್ನ ಅರಸಿ ಬಂದಿವೆಯಾದರೂ ಕಾವೇರಮ್ಮ ಮಾತ್ರ ವ್ಯಾಪ್ತಿ ಪ್ರದೇಶದ ಹೊರಗಿದ್ದಾಳೆ. □

ಗುಲಾಮಗಿರಿ ಬೆಲೆ: ರೂ: ೭೦/-
ಲೇ: ಮಹಾತ್ಮ ಜ್ಯೋತಿರಾವ್ ಫುಲೆ
ಅನು: ಡಾ.ಸೂರ್ಯಕಾಂತ ಸುಜ್ಯಾತ್

ಮಹಾತ್ಮ ಫುಲೆ ಅವರ ಪ್ರಖರ ಗ್ರಹಿಕೆಯಿಂದ ಮರಾಠಿ ಭಾಷೆಯಲ್ಲಿ ಒಡಮೂಡಿದ ವಿಚಾರಪ್ರಧಾನವಾದ ಕ್ರಾಂತಿಕಾರಿ ಕೃತಿ ಕನ್ನಡಕ್ಕೆ ಅನುವಾದಗೊಂಡಿದೆ. ಪೌರಾಣಿಕ ಪರಿಕಲ್ಪನೆಯ ಅಸಂಬದ್ಧತೆ, ಅತಾರ್ಕಿಕತೆ, ಸಾಂಪ್ರದಾಯಿಕ ಉದ್ಯಮವಾಗಿರುವ ಧಾರ್ಮಿಕ ಮತ್ತು ಪುರೋಹಿತಶಾಹಿ ವ್ಯವಸ್ಥೆಯ ಹುನ್ನಾರಗಳನ್ನು ಬಯಲುಗೊಳಿಸಿದೆ. ಗೊಡ್ಡು ಸಂಪ್ರದಾಯಗಳು ಹೇಗೆ ಶ್ರಮಿಕ ವರ್ಗವನ್ನು ಶೋಷಿಸುತ್ತಿವೆ ಎಂಬುದನ್ನು ಇಬ್ಬರ ನಡುವೆ ನಡೆಯುವ ತಾರ್ಕಿಕ ಸಂಭಾಷಣೆ ಯಮೂಲಕ ಪರಿಣಾಮಕಾರಿಯಾಗಿ ಬಿಂಬಿಸಲಾಗಿದೆ.

ಪ್ರಕಾಶಕರು: ಸುಮೇಧ ಪ್ರಕಾಶನ
ಗುಲಬರ್ಗಾ-೫೮೫೧೦೬



ಹೊಸ ಪುಸ್ತಕ

ಇಲ್ಲಿ ಯಾವುದೂ ಅಮುಖ್ಯವಲ್ಲ
ಲೇ: ಡಿ.ಎಸ್ ನಾಗಭೂಷಣ
ಬೆಲೆ: ರೂ: ೧೫೦/-

ಸಾಹಿತ್ಯ, ಸಿನಿಮಾ, ನಾಟಕ, ರಾಜಕೀಯಕ್ಷೇತ್ರ...ಸೇರಿದಂತೆ ಸಮಕಾಲೀನ ವಿದ್ಯಮಾನಗಳಿಗೆ ಮುಖಾಮುಖಿಯಾಗುವ ಈ ಕೃತಿಯಲ್ಲಿನ ವಿಚಾರ-ವಿಮರ್ಶೆ, ವಿಶ್ಲೇಷಣೆಗಳು ಹೆಚ್ಚು ಮೌಲಿಕ ಪ್ರಶ್ನೆಗಳನ್ನೆತ್ತಿ ಮಹತ್ವದ ಚರ್ಚೆಗಳಿಗೆ, ವಾಗ್ವಾದಗಳಿಗೆ ವೇದಿಕೆಯನ್ನೊದಗಿಸುತ್ತವೆ. ಅಲ್ಲದೆ ನಮ್ಮ ಅಲೋಚನೆಗಳನ್ನು ನಿಕಷಕ್ಕೆ ಒಡ್ಡಿಕೊಳ್ಳುವಂತೆ ಪ್ರೇರೇಪಿಸುವಷ್ಟು ಪ್ರಖರತೆಯನ್ನು ಹೊಂದಿವೆ. ಸಾಮಾಜವಾದಿ ನೆಲೆ ಹಿನ್ನಲೆ ಹೊಂದಿರುವ ಇಲ್ಲಿನ ಬರಹಗಳಲ್ಲಿ ವೈವಿಧ್ಯತೆಯಿದೆ, ವೈಚಾರಿಕತೆಯಿದೆ, ಎಲ್ಲರಿಗೂ ಒಳಿತನ್ನು ಬಯಸುವ ಆಶಯವಿದೆ.

ಪ್ರಕಾಶಕರು: ಹಸಿರು ಪ್ರಕಾಶನ
ಬೆಂಗಳೂರು







- **ಜಾತಿ ಪದ್ಧತಿ ಬೆಲೆ: ರೂ. ೧೨೫/-**
  ಲೇ: ಡಾ. ರಾಮಮನೋಹರ ಲೋಹಿಯಾ
  ಅನು: ಹಸನ್ ನಯೀಂ ಸುರಕೋಡ
- **ಅಸ್ಪೃಶ್ಯ ವಸಂತ ಬೆಲೆ: ರೂ. ೨೦೦/-**
  ಲೇ: ಜಿ. ಕಲ್ಯಾಣರಾವು
  ಅನು: ನಗರಗೆರೆ ರಮೇಶ್
- **ಗೋವು ಪವಿತ್ರ ಎಂಬ ಮಿಥ್ಯೆ**
  ಲೇ: ಡಿ.ಎನ್. ಝಾ
  ಅನು: ನಾ. ದಿವಾಕರ
  ಬೆಲೆ: ರೂ. ೮೦/-
- **ರಾಮಾಯಣ ವಿಷವೃಕ್ಷ ಬೆಲೆ: ರೂ ೭೫/-**
  ಲೇ: ಡಾ. ಬಂಜಗೆರೆ ಜಯಪ್ರಕಾಶ

ಲಂಕೇಶ್ ಪ್ರಕಾಶನದಿಂದ ಪ್ರಕಟಗೊಂಡಿರುವ ಈ ಮೇಲಿನ ನಾಲ್ಕು ಪುಸ್ತಕಗಳು ವಿಭಿನ್ನ ನೆಲೆಗಟ್ಟನ್ನು ಹೊಂದಿವೆ. ಮೊದಲನೆಯದು ಹೆಣ್ಣು-ಗಂಡಿನ ನಡುವಿನ ಅಸಮಾನತೆ, ಜಾತಿ ಜಾತಿಯ ನಡುವಿನ ವೈಷಮ್ಯ, ಬಡವ ಶ್ರೀಮಂತರ ನಡುವಿನ ಕಂದರ-ಇವುಗಳಿಂದುಟಾದ ದುರ್ಬಲ, ಕೊಳಕು ಸಮಾಜ: ತನ್ನ ಲಿಂಗ, ಜಾತಿ, ವರ್ಗಗಳು ಸೃಷ್ಟಿಸಿದ ಇಲ್ಲಿನ ರಾಜಕೀಯ, ಗುಲಾಮಗಿರಿ, ಬಡತನ, ಮೂಢನಂಬಿಕೆ, ಕ್ರಿಯಾಶೀಲತೆಯಿಲ್ಲದ ಘೌಲ್ಯರಹಿತ ಬದುಕಿನ ದುಷ್ಪರಿಣಾಮಗಳನ್ನು ತಮ್ಮ ಅಪಾರ ಅನುಭವ, ಪಾಂಡಿತ್ಯಗಳಿಂದ ವಿಶ್ಲೇಷಣೆಗೆ ಒಳಪಡಿಸಿದ ಲೋಹಿಯಾರ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಲಾಗಿದೆ.

ಎರಡನೆಯದು ಆಂಧ್ರ ಪ್ರದೇಶದ ತೆಲುಗು ದಲಿತ ಸಮುದಾಯಗಳ ಆತ್ಮಕಥನ 'ಅಂಟರಾನಿ ವಸಂತಂ' ಕನ್ನಡದಲ್ಲಿ 'ಅಸ್ಪೃಶ್ಯ ವಸಂತ' ಹೆಸರಿನಲ್ಲಿ ಪ್ರಕಟಗೊಂಡಿದೆ. ಒಂದು ಮಹಾಕಾವ್ಯದ ವ್ಯಾಪ್ತಿಯನ್ನು ಹೊಂದಿರುವ ಇಲ್ಲಿನ ಕಥಾಹಂದರ 19ನೇ ಶತಮಾನದಿಂದ 20ನೇ ಶತಮಾನದ ಕೊನೆಯವರೆಗೂ ಹರಡಿಕೊಂಡಿದ್ದು, ನಾಲ್ಕು ತಲೆಮಾರು ಅನುಭವಿಸಿದ ಅವಮಾನ, ಅಸಡ್ಡೆ, ತಿರಸ್ಕಾರಗಳಿಗೆ ಒಳಗಾದ ದಲಿತ ಕುಟುಂಬಗಳು ತಮ್ಮ ಸ್ವಾಭಿಮಾನ ರಕ್ಷಣೆಗಾಗಿ ಮುನ್ನಡೆಸುವ ಹೋರಾಟವನ್ನು ಮನಮಿಡಿಯುವಂತೆ ಕಟ್ಟಿಕೊಡಲಾಗಿದೆ.

ಮೂರನೇ ಕೃತಿಯಲ್ಲಿ ಈಗಾಗಲೇ ಸಾಕಷ್ಟು ವಿವಾದಗಳಿಗೆ ಎಡೆ ಮಾಡಿಕೊಟ್ಟಿರುವ ಗೋಮಾಂಸ ಸೇವನೆಯ ಬಗ್ಗೆ ಐರೋಪ್ಯ ಹಾಗೂ ಭಾರತೀಯ ಮಹತ್ವದ ಶಾಸ್ತ್ರೀಯ ಗ್ರಂಥಗಳನ್ನು ಆಳವಾಗಿ ಅಭ್ಯಸಿಸಿ ಗೋವು ಪವಿತ್ರ ಎಂಬುದು ಮಿಥ್ಯೆ ಹಾಗೂ ಹಿಂದೂ, ಬೌದ್ಧ ಮತ್ತು ಜೈನರ ಧಾರ್ಮಿಕ ಗ್ರಂಥಗಳಲ್ಲಿನ ಅಂಶಗಳನ್ನು ಉಲ್ಲೇಖಿಸಿ ಗೋಮಾಂಸ ಭಕ್ಷಣೆಯನ್ನು ಭಾರತಕ್ಕೆ ಪರಿಚಯಿಸಿದ್ದು ಮುಸ್ಲಿಮರಲ್ಲ, ಅದು ಪ್ರಾಚೀನ ಭಾರತದಲ್ಲಿ ಹಿಂದೂಗಳ ಆಹಾರ ಪದ್ಧತಿಯ ಭಾಗವಾಗಿತ್ತು ಎಂಬುದರ ಬಗ್ಗೆ ಆಧಾರ ಸಹಿತ ಅಪಾರ ಸಾಕ್ಷ್ಯ ಒದಗಿಸುತ್ತದೆ.

ನಾಲ್ಕನೇ ಕೃತಿಯನ್ನು ತೆಲಗು ಸಾಹಿತ್ಯದಲ್ಲಿ ದೊಡ್ಡ ಚರ್ಚೆಯ ಅಲೆಯನ್ನು ಎಬ್ಬಿಸಿದ ಮುಪ್ಪಾಳು ರಂಗನಾಯಕಮ್ಮನವರ 'ರಾಮಾಯಣ ವಿಷವೃಕ್ಷಮ್' ಎಂಬ ಪ್ರತಿಕ್ರಿಯಾತ್ಮಕ ಕೃತಿಯನ್ನು ಆಧರಿಸಿ ರಚಿಸಲಾಗಿದೆ. ರಾಮಾಯಣದಲ್ಲಿರುವ ಊಳಿಗಮಾನ್ಯ, ಸ್ತ್ರೀ ವಿರೋಧಿ, ಅಧಿಕಾರ ಲಾಲಸೆ, ಜಾತಿವಾದ, ಸ್ವಾರ್ಥ, ವಾಂಛೆ, ಶೋಷಣೆ, ತಾರತಮ್ಯ, ಹುಸಿ ಆದರ್ಶ ಹಾಗೂ ಜನ ವಿರೋಧಿ ನೀತಿಗಳನ್ನು ಬಯಲುಗೊಳಿಸುವುದರ ಮೂಲಕ ರಾಮಾಯಣದ ಬಗೆಗಿನ ನಂಬಿಕೆಗಳನ್ನು ಬುಡಮೇಲು ಮಾಡುವಂತೆ ನಿದರ್ಶನಗಳ ಸಹಿತ ಅದರ ಚಾರಿತ್ರೀಕ ಹಿನ್ನಲೆಯನ್ನು ಲೇವಡಿ ಮಾಡಲಾಗಿದೆ.

ಮೇಲಿನ ನಾಲ್ಕು ಪುಸ್ತಕಗಳ ಪ್ರಕಾಶಕರು:
ಲಂಕೇಶ್ ಪ್ರಕಾಶನ, ಬೆಂಗಳೂರು-೪
ದೂ: ೦೮೦-೨೬೬೭೬೪೨೭

'ವಿಪಶ್ಯನ' ಎಂಬ ಹೊಸ ಲೋಕ

-೭-

ಜ್ಯೋತಿ ಗುರುಪ್ರಸಾದ್

ವಿದ್ಯಾವಂತರ ಸಂಖ್ಯೆ ಹೆಚ್ಚಿ ಆಧುನಿಕತೆಯ ಪ್ರಭಾವ ಇದ್ದರೂ ಕೂಡ ಇನ್ನೂ ಎಷ್ಟೋ ಕುಟುಂಬಗಳಲ್ಲಿ ಮುಟ್ಟಾದ ಸ್ತ್ರೀಯರನ್ನು ಮೂರು ದಿನಗಳ ನಂತರದ ಅವರ 'ಸ್ನಾನ' ಆದ ಮೇಲೆ ಮಾತ್ರ ಅವರು 'ಶುದ್ಧ' ಎಂದು ತೀರ್ಮಾನ ನೀಡಿ ಒಳಗೆ ಕರೆದುಕೊಳ್ಳುವ ಅಸ್ಪೃಶ್ಯತಾ ಆಚರಣೆ ಜಾರಿಯಲ್ಲಿದೆ. ವೈದಿಕ ಕುಟುಂಬಗಳಲ್ಲಿ ಇದು ಹೆಚ್ಚು 'ಮುಟ್ಟು' ಎಂಬ ಸ್ತ್ರೀ ಜೀವನದ ಒಂದು ಸಹಜ ಸುಂದರ ನೈಸರ್ಗಿಕ ಘಟ್ಟವು ಮೌಢ್ಯದ ಶಂಕೆಯಿಂದ ನಿರ್ದೇಶಿಸಲ್ಪಡುತ್ತಿತ್ತು. ಆದರೆ ಬುದ್ಧ ಆ ಕಾಲದಲ್ಲೇ ಇಂಥ ಎಲ್ಲ ಸೂಕ್ಷ್ಮಗಳಿಗೂ ಸ್ಪಷ್ಟವಾದ ವೈಚಾರಿಕ ನೆಲೆಯ ಚಿಂತನೆಯನ್ನು ಒದಗಿಸಿದ್ದ.

ಗೌತಮ ಬುದ್ಧನ ಧ್ಯಾನ ಮಾರ್ಗದ ಅರಿವಿನ ಕುತೂಹಲವಾಗಿ ನಾನು ಹತ್ತು ದಿನಗಳ ಒಂದೇ ಒಂದು 'ವಿಪಶ್ಯನ' ಶಿಬಿರದಲ್ಲಿ ಭಾಗವಹಿಸಿದ್ದೆ. ಬುದ್ಧ ಕಣ್ಣು ಮುಚ್ಚಿ ಕುಳಿತು ಒಳಗಣ್ಣಿನಲ್ಲಿ ನೋಡುವ – ಕಾಣುವ ಆ ನೋಟ ನನಗೆ ಯಾವತ್ತಿಗೂ ಒಂದು ಹೊಸ ಚಿಂತನೆಯನ್ನು ಉಂಟು ಮಾಡುವಂಥದ್ದು.

ವಿಪಶ್ಯನ ಅಥವಾ ಅಂತರ್ದರ್ಶನ ಧ್ಯಾನವು ಕ್ರಿಸ್ತನು ಹುಟ್ಟುವುದಕ್ಕಿಂತ ಹಲವಾರು ಶತಮಾನಗಳ ಹಿಂದೆಯೇ ಭಾರತದಲ್ಲಿ ಗೌತಮ ಬುದ್ಧನಿಂದ ಪರಿಶೋಧಿಸಲ್ಪಟ್ಟಿತ್ತು. ಇದಕ್ಕೆ ಸಂಬಂಧಿಸಿದ ಯಾವ ಮಾಹಿತಿಗಳು ಬೇಕಾದರೂ ಅಂತರ್ಜಾಲದಲ್ಲಿ ಸಿಗುವಷ್ಟು ಈಗ ತಂತ್ರಜ್ಞಾನ ಮುಂದುವರಿದಿದೆ. ಆದರೆ ನಾನಿಲ್ಲಿ ಅದನ್ನೆಲ್ಲಾ ಹೇಳಲು ಹೊರಡದೆ ನನ್ನ ಅನುಭವಕ್ಕೆ ಬಂದ ಈ 'ವಿಪಶ್ಯನ ಧ್ಯಾನ'ದ ಪ್ರಸ್ತುತತೆಯ ಒಂದು ಹೊಸ ಹೊಳಹಿನ ಒಳ ನೋಟವನ್ನು ಇಲ್ಲಿ ವಿಶ್ಲೇಷಿಸಬಯಸುತ್ತೇನೆ.

ಮುಖ್ಯವಾಗಿ ಈ ಧ್ಯಾನ ಮಾರ್ಗ ವೇದ ಕಾಲದ ಒಂದು ಪ್ರಾಚೀನ ಉಲ್ಲೇಖವಾಗಿದ್ದರೂ ಇದಕ್ಕೆ ಯಾವ ದೇವರು–ಧರ್ಮ ಎಂಬ ಭಾವನೆಯನ್ನು ಕೆರಳಿಸುವ ಸೋಂಕು ಅಂಟಿಕೊಂಡಿಲ್ಲ. ಸ್ತ್ರೀ–ಪುರುಷರನ್ನು ಅವರ ದೈಹಿಕ ಬದಲಾವಣೆಯ ನೈಸರ್ಗಿಕ ಕಾರಣಕ್ಕೂ ಕೂಡ ಬೇಧ ಮಾಡಿ ನೋಡದ ಶುದ್ಧ ವೈಚಾರಿಕ ಮಾರ್ಗವೆಂಬುದು ನನ್ನ ಗಮನಕ್ಕೆ ಬಂದ ಮೊದಲನೆಯ ಸ್ವಾಗತಾರ್ಹ ಅಂಶ. ಮುಟ್ಟಾಗುವ ಮಹಿಳೆಯ ನಮ್ಮ ಸಮಾಜದಲ್ಲಿನ ಪಾಡನ್ನು ಗಮನದಲ್ಲಿಟ್ಟುಕೊಂಡು ಈ ಅಂಶಕ್ಕೆ ಒತ್ತುಕೊಡುತ್ತಿದ್ದೇನೆ. ಈಗ ವಿದ್ಯಾವಂತರ ಸಂಖ್ಯೆ ಹೆಚ್ಚಿ ಆಧುನಿಕತೆಯ ಪ್ರಭಾವ ಇದ್ದರೂ ಕೂಡ ಇನ್ನೂ ಎಷ್ಟೋ ಕುಟುಂಬಗಳಲ್ಲಿ ಮುಟ್ಟಾದ ಸ್ತ್ರೀಯರನ್ನು ಮೂರು ದಿನಗಳ ನಂತರದ ಅವರ 'ಸ್ನಾನ' ಆದ ಮೇಲೆ ಮಾತ್ರ ಅವರು 'ಶುದ್ಧ' ಎಂದು ತೀರ್ಮಾನ ನೀಡಿ ಒಳಗೆ ಕರೆದುಕೊಳ್ಳುವ ಅಸ್ಪೃಶ್ಯತಾ ಆಚರಣೆ ಜಾರಿಯಲ್ಲಿದೆ.

ವೈದಿಕ ಕುಟುಂಬಗಳಲ್ಲಿ ಇದು ಹೆಚ್ಚು ನನ್ನ ಕಾಲೇಜು ದಿನಗಳಲ್ಲಿ ನನ್ನಜ್ಜಿ ಮನೆಯಲ್ಲಿ 'ಆ ಮೂರು ದಿನಗಳ' ಕಟ್ಟುಪಾಡಿಗೆ ಒಳಗಾಗಿ ಅಸ್ಪೃಶ್ಯತಾ ಪ್ರಹಾರಕ್ಕೆ ಒಳಗಾಗುತ್ತಿದ್ದ ನಾನು ಶಾಲೆಯಲ್ಲಿ ವಿಜ್ಞಾನ ಪಾಠ ಕೇಳಿ ತಿಳಿದುಕೊಂಡ ತಿಳಿವಳಿಕೆಯೇ ತಪ್ಪೇ? ಎಂದು ಕಸಿವಿಸಿಗೊಳ್ಳುತ್ತಿದ್ದೆ. ಅಷ್ಟೂಂದು 'ದೇವರ ಭಯ'ದಲ್ಲಿ 'ಮುಟ್ಟು' ಎಂಬ ಸ್ತ್ರೀ ಜೀವನದ ಒಂದು ಸಹಜ ಸುಂದರ ನೈಸರ್ಗಿಕ ಘಟ್ಟವು ಮೌಢ್ಯದ ಶಂಕೆಯಿಂದ ನಿರ್ದೇಶಿಸಲ್ಪಡುತ್ತಿತ್ತು. ಆದರೆ ಬುದ್ಧ ಆ ಕಾಲದಲ್ಲೇ ಇಂಥ ಎಲ್ಲ ಸೂಕ್ಷ್ಮಗಳಿಗೂ ಸ್ಪಷ್ಟವಾದ ವೈಚಾರಿಕ ನೆಲೆಯ ಚಿಂತನೆಯನ್ನು ಒದಗಿಸಿದ್ದ ಎಂಬುದೇ ಈ ಧ್ಯಾನದ ಹಿರಿಮೆ. ಈ 'ವಿಪಶ್ಯನ' ಶಿಬಿರದ ಮಧ್ಯೆ ಮಹಿಳೆ ಮುಟ್ಟಾದರೂ ಕೂಡ ಅವಳನ್ನು ಶಿಬಿರದ ಹೊರಗಿಡುವುದಿಲ್ಲ. ಸ್ವಚ್ಛತೆಯ ಕಡೆಗೆ ಮಾತ್ರ ಸಹಜವಾದ ಗಮನ ಕೊಟ್ಟು ಬೇರೆ ಯಾವ ನಿಬಂಧನೆಯಿಲ್ಲದೆ ಧ್ಯಾನ ಸಾಧನೆಯಲ್ಲಿ ತೊಡಗಿಕೊಳ್ಳಬಹುದು ಹಾಗೂ ಈ ಸಮಯದಲ್ಲಿನ ಧ್ಯಾನ ಇನ್ನೂ ಹೆಣ್ಣಿನ ಆರೋಗ್ಯದ ಮಟ್ಟವನ್ನು ಹೆಚ್ಚು ಸುಧಾರಿಸುತ್ತದೆ ಎಂಬ ಖಚಿತ ನಿರ್ದೇಶನದ ತಿಳುವಳಿಕೆ ದೊರೆಯುತ್ತದೆ.

ಈಗ ಭಾರತದಲ್ಲಿ ಈ ವಿಪಶ್ಯನ ಧ್ಯಾನ ಕ್ರಮವನ್ನು ಶ್ರೀ ಸತ್ಯನಾರಾಯಣ ಗೋಯೆಂಕಾರವರಿಂದ ನಾನಾ ಬಗೆಯ ಪಂಥ ಸಂಸ್ಕೃತಿಗಳಿಗೆ ಸೇರಿದ ಸಹಸ್ರಾರು ಜನರು ಕಲಿಯುತ್ತಿದ್ದಾರೆ. ಬರ್ಮಾದಲ್ಲಿ ಜನಿಸಿದ ಇವರು ಈಗ ವಿಪಶ್ಯನವನ್ನು ಭಾರತದಲ್ಲಿಯೇ ಅಲ್ಲದೇ ಅನೇಕ ಪಾಶ್ಚಾತ್ಯ ದೇಶಗಳಲ್ಲಿಯೂ ಬೋಧಿಸುತ್ತಿದ್ದಾರೆ. ಐಶ್ವರ್ಯವಂತ ವ್ಯಾಪಾರಸ್ಥ ಕುಟುಂಬದಲ್ಲಿ ಜನಿಸಿದ ಶ್ರೀ ಗೋಯೆಂಕಾರವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ವ್ಯಾಪಾರದಲ್ಲಿ ಚೆನ್ನಾಗಿ ಹೆಸರು ಗಳಿಸಿದವರು. ಐಶ್ವರ್ಯದ ಜೊತೆಗೇ ಅವರಿಗೆ ತುಂಬಾ ಬಾಧೆಯನ್ನುಂಟುಮಾಡುವ ಪಾರ್ಶ್ವ ತಲೆಶೂಲೆಯು ಅಂಟಿಕೊಂಡಿತು. ನೋವನ್ನು ದಮನಗೊಳಿಸುವ ಈ ಔಷಧಿಯ ಚಟಕ್ಕೆ ಬಲಿಯಾಗದಿರಲು ಅವರ ವೈದ್ಯರು ಅವರಿಗೆ ಪಾಶ್ಚಾತ್ಯ ದೇಶಗಳಲ್ಲಿ ಚಿಕಿತ್ಸೆ ಪಡೆಯಲು ಸೂಚಿಸಿದರು. ಗೋಯೆಂಕಾರವರು ಪರಿಣಾಮಕಾರಿಯಾದ ಚಿಕಿತ್ಸೆಯನ್ನು ಹುಡುಕಿಕೊಂಡು ಯೂರೋಪ್, ಅಮೇರಿಕಾ, ಜರ್ಮನಿ, ಜಪಾನ್ ದೇಶಗಳನ್ನು ಸುತ್ತಿದರು. ಎಲ್ಲ ಚಿಕಿತ್ಸೆಗಳೂ ವ್ಯರ್ಥವಾದವು.

ಬರ್ಮಾಕ್ಕೆ ಬಂದ ಮೇಲೆ ಸ್ನೇಹಿತರೊಬ್ಬರು ಅವರ ರೋಗ ಪರಿಹಾರಾರ್ಥವಾಗಿ ಶ್ರೀ ಸಯಾಜಿ ಉಬಾಖಿನ್‌ರವರ ಬಳಿ ವಿಪಶ್ಯನ ಧ್ಯಾನವನ್ನು ಕಲಿಯಲು ಸೂಚಿಸಿದರು. ಉಬಾಖಿನ್‌ರವರು ಆಗ ಬರ್ಮಾದ ಅಕೌಂಟೆಂಟ್ ಜನರಲ್ ಆಗಿದ್ದರು. ವಿಪಶ್ಯನವು ಬರೀ ತಲೆನೋವನ್ನು ಪರಿಹಾರ ಮಾಡುವ ಚಿಕಿತ್ಸೆ ಅಲ್ಲವೆಂದೂ ಅದು ಮನಸ್ಸನ್ನು ಪರಿಶುದ್ಧಗೊಳಿಸುವ ವಿಧಾನವೆಂದೂ ಉಬಾಖಿನ್‌ರವರು ಗೋಯೆಂಕಾರವರಿಗೆ ತಿಳಿಯಪಡಿಸಿದರು. ಅವರಿಗೆ ನಿಜವಾಗಿಯೂ ವಿವೇಕ, ಜ್ಞಾನ ಬೇಕಾಗಿದ್ದರೆ ಈ ಧ್ಯಾನದ ಸಾಧನೆಯನ್ನು ಕೈಗೊಳ್ಳಬಹುದೆಂದರು. ವಿಪಶ್ಯನ ಅಭ್ಯಾಸದಿಂದ ಅವರ ಖಾಯಿಲೆಯು ವಾಸಿಯಾಯಿತು! ಇದರ ಜೊತೆಗೆ ಅವರ ಇಡೀ ಜೀವನವೇ ಪರಿವರ್ತನೆಯಾಯಿತು. ಉಬಾಖಿನ್‌ರವರು 1991ರಲ್ಲಿ ಕಾಲವಾದ ಮೇಲೆ ಗೋಯೆಂಕಾರವರೇ ಈ ಕಲೆಯನ್ನು ಇತರರಿಗೆ ಬೋಧಿಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಅವರು ಮಹಾರಾಷ್ಟ್ರದಲ್ಲಿ ತಂಗಿದ್ದರೂ ಸಹ ಭಾರತದಾದ್ಯಂತ ವಿಪಶ್ಯನ ಕಲಿಸುವ ಕೇಂದ್ರ ಶಾಖೆಗಳು ಹರಡಿವೆ. ಇದಕ್ಕಾಗಿ ಅವರು ಯಾವ ಶುಲ್ಕವನ್ನೂ ಸ್ವೀಕರಿಸುವುದಿಲ್ಲ. ಶಿಬಿರಕ್ಕೆ ಬರುವ ವಿದ್ಯಾರ್ಥಿಗಳ ಊಟ ಮತ್ತು ವಸತಿಗಳ ಖರ್ಚನ್ನು ಹಳೆಯ ವಿದ್ಯಾರ್ಥಿಗಳ ದಾನದಿಂದ ಭರಿಸಲಾಗುತ್ತದೆ.

ವಿಪಶ್ಯನಕ್ಕಾಗಿ ಹತ್ತು ದಿನಗಳ ಶಿಬಿರ ಅವಶ್ಯಕ. ವಿದ್ಯಾರ್ಥಿಯು ಬೆಳ್ಳಿಗ್ಗೆ 4 ಗಂಟೆಗೆ ಎದ್ದು ರಾತ್ರಿ 9 ಗಂಟೆಯವರೆಗೂ ಸತತವಾಗಿ ಧ್ಯಾನ ಮಾಡುತ್ತಾನೆ. ಊಟ ಮತ್ತು ವಿಶ್ರಾಂತಿಗಾಗಿ ಮಧ್ಯೆ ಮಧ್ಯೆ ವಿರಾಮ ಕಾಲವಿರುತ್ತದೆ. ಧ್ಯಾನವನ್ನು ಪ್ರತಿನಿತ್ಯದ ಜೀವನದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬಹುದೆಂದು

ಮೊದಲನೆಯ ಸಂಜೆಯ ಪ್ರವಚನದಲ್ಲೇ ಆಚಾರ್ಯರು (ಶಿಬಿರದ ನಿರ್ದೇಶಕರು) ವಿವರಿಸುತ್ತಾರೆ. 'ಧ್ಯಾನವು ಒಂದು ಜೀವನ ಕಲೆಯಾಗಿದ್ದು ಸಮಸ್ಯೆಗಳಿಂದ ಪಲಾಯನರಾಗದೆ ಮನಸ್ಸಿನ ಅಂತರಂಗದಾಳಕ್ಕೆ ಹೋಗಿ ಅದರ ವಿಕಾರಗಳ ಕಾರಣವನ್ನು ಕಂಡುಹಿಡಿದು ಅದನ್ನು ನಿರ್ಮೂಲಗೊಳಿಸಲು ಮನಸ್ಸಿಗೆ ತರಬೇತಿ ನೀಡುತ್ತೇವೆ. ಮನಸ್ಸು ತನ್ನಲ್ಲಿ ಕ್ರೋಧ, ದ್ವೇಷ, ಭಯ, ಮತ್ಸರ ಮುಂತಾದ ಅನೇಕ ವಿಚಾರಗಳನ್ನು ಸಂಗ್ರಹಿಸಿಕೊಂಡಿದೆ. ಅವುಗಳಿಂದ ನಾವು ಬಿಡುಗಡೆ ಹೊಂದಬೇಕು' ಎಂದು ಬೋಧಿಸಲಾಗುತ್ತದೆ.

ಆಚಾರ್ಯರು ಹೇಗೆ ಕಲಿಸಿಕೊಡುವರೋ ಅದರಂತೆಯೇ ಸಾಧನೆ ಮಾಡುವ ಸಮರ್ಪಣ ಮನೋಭಾವದಿಂದ ವಿದ್ಯಾರ್ಥಿ ವಿಪಶ್ಯನವನ್ನು ಆರಂಭಿಸಬೇಕಾಗುತ್ತದೆ. ಮೊದಲು ಆ ವಿಧಿಯನ್ನು ಕಲಿಸಿಕೊಡಲು ಆಚಾರ್ಯರನ್ನು ಪ್ರಾರ್ಥಿಸಲಾಗುತ್ತದೆ. ಹತ್ತು ದಿನಗಳ ಅವಧಿಯಲ್ಲಿ ಹಿಂಸೆ, ಕಳ್ಳತನ, ವ್ಯಭಿಚಾರ, ಸುಳ್ಳು ಹೇಳುವುದು ಮತ್ತು ಮಧ್ಯಪಾನ ಮಾಡುವುದು ಇವುಗಳಿಂದ ದೂರವಿರುವ ವ್ರತವನ್ನು ಕೈಗೊಳ್ಳಬೇಕಾಗುತ್ತದೆ. ಈ ನೈತಿಕ ಬುನಾದಿಯ ಜೊತೆಗೆ ಒಂಭತ್ತು ದಿನಗಳವರೆಗೆ ಸಂಪೂರ್ಣ ಮೌನವನ್ನು ಆಚರಿಸಬೇಕಾಗುತ್ತದೆ. ಆದರೆ ಆಚಾರ್ಯರೊಡನೆ ಸಾಧನೆಯ ಬಗ್ಗೆ ಪ್ರಶ್ನಿಸಿ ತಿಳಿದುಕೊಳ್ಳಲು ಅವಕಾಶವಿರುತ್ತದೆ. ಸ್ತ್ರೀ-ಪುರುಷರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯ ಜೊತೆಗೆ ಸರಳ ಜೀವನದ ಆರೋಗ್ಯಕ್ಕೆ ತಕ್ಕಂಥ ಊಟದ ವ್ಯವಸ್ಥೆಯೂ ಇರುತ್ತದೆ.

'ವಿಧ್ಯಾರ್ಥಿ'ಗಳನ್ನು 'ಸಾಧಕರು' ಎಂದೇ ಕರೆಯಲಾಗುತ್ತದೆ ಹಾಗೂ ವಿದ್ಯಾ ಭಿಕ್ಷೆಯನ್ನು ಅರಸಿ ಬಂದಿರುವ 'ಭಿಕ್ಷು'ಗಳೆಂದು ಪರಿಗಣಿಸಲಾಗುತ್ತದೆ. ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡುವುದಾಗಲೀ, ಮುಟ್ಟುವುದಾಗಲೀ ಈ ಶಿಬಿರದ ಸಂದರ್ಭದಲ್ಲಿ ನಿಶಿದ್ಧವೆಂದು ಪರಿಗಣಿಸಲಾಗುತ್ತದೆ. ಪರಸ್ಪರ ಮಾತಾಡಿಕೊಳ್ಳುವ ಕ್ರಮವಂತೂ ಮೊದಲೇ ನಿಶಿದ್ಧ! ಯಾಕೆಂದರೆ ಇವೆಲ್ಲಾ ವಿಪಶ್ಯನ ಸಾಧನೆಯ ಏಕಾಗ್ರತೆಗೆ ಭಂಗ ತರುವುದೆಂಬ ಏಕೈಕ ಕಾರಣಕ್ಕಾಗಿ. ಹೀಗಾಗಿ ವಿಪಶ್ಯನ ಧ್ಯಾನ ಶಿಬಿರದ ವ್ರತದ ಸಂದರ್ಭದಲ್ಲಿ ಪರಸ್ಪರ ಒಟ್ಟಾಗಿ ಒಂದೇ ಸೂರಿನಡಿಯಲ್ಲಿ ನಾವುಗಳು ಬದುಕುತ್ತಿದ್ದರೂ ಮಾತು-ಸ್ಪರ್ಶ-ಜಗಳ ಮುಂತಾದ ಯಾವ ವಿಚಲಿತಗೊಳಿಸುವ ಅವಲಂಬನೆಗಳಿಗೂ ಒಳಗಾಗದೆ ನಮ್ಮಷ್ಟಕ್ಕೆ ನಾವು ನಮ್ಮ ತನು-ಮನಗಳನ್ನು ಸಂತೈಸಿಕೊಳ್ಳುವ-ಅರಿಯುವ ಒಂದು ಸ್ವಾವಲಂಬಿ- ಸೌಹಾರ್ದ ಯುತವಾದ ವಿಶ್ವ ಮಾನವ ತತ್ವವನ್ನು ಬದುಕಬಹುದಾದ ಸಾಧ್ಯತೆ ನನಗೆ ಈ ಶಿಬಿರದಲ್ಲಿ ಅನುಭವಕ್ಕೆ ಬಂದಿತು.

ಒಂದು ವಿಷಯ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. 'ವಿಪಶ್ಯನ ಧ್ಯಾನ' ವೆಂದರೆ ಬೌದ್ಧಮತವಲ್ಲ. ಆದರೆ ಇದನ್ನು ಬೋಧಿಸಿದವನು ಬುದ್ಧನೇ. ಬುದ್ಧನೆಂದರೆ ಜ್ಞಾನೋದಯ ಪಡೆದವನು; ಮುಕ್ತನಾದವನು ಎಂದರ್ಥ. ಮುಕ್ತನಾದವನು ಎಂದೆಂದಿಗೂ ಒಂದು ಮತವನ್ನು ಬೋಧಿಸುವುದಿಲ್ಲ. ಸ್ಥಾಪಿಸುವುದೂ ಇಲ್ಲ. ಆತನು ಸಾರ್ವಜನಿಕವಾಗಿರುವ ಜೀವನ ಕಲೆಯನ್ನು ಬೋಧಿಸುತ್ತಾನೆ. ಆದ್ದರಿಂದ ಬೌದ್ಧಮತ ಎಂಬುದಿಲ್ಲ. ಇದು ಜೀವನ ಕಲೆಯಾಗಿದೆ. ಆದ್ದರಿಂದ ಯಾವುದೇ ಪಂಥ, ಜಾತಿ, ಮತಕ್ಕೆ ಸೇರಿದವನಾದಾಗ್ಯೂ ಇದನ್ನು ಸುಲಭವಾಗಿ ಅಭ್ಯಾಸ ಮಾಡಬಹುದು.

'ವಿಪಶ್ಯನ ಧ್ಯಾನ' ವೆಂದರೆ ಬೌದ್ಧ ಮತವಲ್ಲ. ಆದರೆ ಇದನ್ನು ಬೋಧಿಸಿದವನು ಬುದ್ಧನೇ. ಬುದ್ಧನೆಂದರೆ ಜ್ಞಾನೋದಯ ಪಡೆದವನು; ಮುಕ್ತನಾದವನು ಎಂದರ್ಥ ಮುಕ್ತನಾದವನು ಎಂದೆಂದಿಗೂ ಒಂದು ಮತವನ್ನು ಬೋಧಿಸುವುದಿಲ್ಲ. ಸ್ಥಾಪಿಸುವುದೂ ಇಲ್ಲ. ಆತನು ಸಾರ್ವಜನಿಕವಾಗಿರುವ ಜೀವನ ಕಲೆಯನ್ನು ಬೋಧಿಸುತ್ತಾನೆ. ಆದ್ದರಿಂದ ಬೌದ್ಧಮತ ಎಂಬುದಿಲ್ಲ. ಇದು ಜೀವನ ಕಲೆಯಾಗಿದೆ. ಆದ್ದರಿಂದ ಯಾವುದೇ ಪಂಥ, ಜಾತಿ, ಮತಕ್ಕೆ ಸೇರಿದವನಾದಾಗ್ಯೂ ಇದನ್ನು ಸುಲಭ ವಾಗಿ ಅಭ್ಯಾಸ ಮಾಡಬಹುದು. ರಾಗ ಅಥವಾ ದ್ವೇಷದಿಂದ ಪ್ರಭಾವಿತವಾಗದ ಸಮತೋಲನವುಳ್ಳ ಮನಸ್ಸೇ ಯಾವಾಗಲೂ ಸರಿಯಾದ ನಿರ್ಧಾರಗಳನ್ನು ಮಾಡಬಲ್ಲದು.

ರಾಗ ಅಥವಾ ದ್ವೇಷದಿಂದ ಪ್ರಭಾವಿತವಾಗದ ಸಮತೋಲನವುಳ್ಳ ಮನಸ್ಸೇ ಯಾವಾಗಲೂ ಸರಿ ಯಾದ ನಿರ್ಧಾರಗಳನ್ನು ಮಾಡಬಲ್ಲದು. ವಿಪಶ್ಯನ ಧ್ಯಾನ ವೆಂದರೆ ಇದೊಂದು ಮನಸ್ಸಿನ ಮಾಲಿನ್ಯವನ್ನು ಕಳೆಯಲು ಮನಸ್ಸಿನ ಮೇಲೆ ನಡೆಸುವ ಶಸ್ತ್ರ ಚಿಕಿತ್ಸೆ. ನಮಗೆ ಗೊತ್ತಿಲ್ಲದಂತೆಯೇ ನಾವು ದಿನ ನಿತ್ಯ ನಮ್ಮ ಮನಸ್ಸನ್ನು ಗಮನಿಸುತ್ತ ಅರಿಯುವ ಕ್ರಿಯೆಯಲ್ಲಿ ಈ ಕ್ರಮ ತಂತಾನೇ ಜರುಗುತ್ತಿರುತ್ತದೆ. ನನ್ನ ಅನುಭವದಲ್ಲಿ ಕವಿತೆಯೊಂದು ಹುಟ್ಟುವಾಗಲೆಲ್ಲಾ ಇಂಥ ಒಂದು ಹೊಸತನದ ಅನುಭವವಾಗುತ್ತಿರುತ್ತದೆ. ಆದರೆ ಈ ಶಿಬಿರದಲ್ಲಿ ಕಲಿಯುವ ಈ ವಿಪಶ್ಯನ ಕ್ರಮ ಉಸಿರಾಟ ಕ್ರಮಕ್ಕೂ ಒಂದು ಬದ್ಧತೆಯನ್ನು ಒದಗಿಸಿ ಯಾರೂ ಬೇಕಾದರೂ ಇದನ್ನು ಪರಿಶ್ರಮವಹಿಸಿ ಅಭ್ಯಾಸ ಮಾಡಿ ಸರಳವಾಗಿಯೇ ದೇಹ-ಮನಸ್ಸುಗಳ ಆರೋಗ್ಯದ ಸಮತೆಯನ್ನು ಕಾಯ್ದುಕೊಳ್ಳುವ ಪ್ರಯೋಗಶೀಲತೆಗೆ ಒಡ್ಡಿಗೊಳ್ಳಬಹುದಾಗಿದೆ.

ಶಿಬಿರದ ಮೊದಲ ಮೂರು ದಿನಗಳಲ್ಲಿ ಉಸಿರನ್ನು ಸತತವಾಗಿ ಗಮನಿಸುವುದರಿಂದ ಹಂತ ಹಂತವಾಗಿ ಮನಸ್ಸು ತುಂಬಾ ಏಕಾಗ್ರವಾಗಿ -ಸೂಕ್ಷ್ಮವಾಗಿ ಶುದ್ಧವಾಗಲಾರಂಭಿಸುತ್ತದೆ. "ಉಸಿರು ಒಳ ಹೋಗುತ್ತಿದೆ, ಹೊರಗೆ ಬರುತ್ತಿದೆ; ಒಳಗೆ ಬರುತ್ತಿರುವ ಉಸಿರು, ಹೊರಗೆ ಹೋಗುತ್ತಿರುವ ಉಸಿರು; ಸ್ವಾಭಾವಿಕ ಸಹಜ ಉಸಿರು ಮತ್ತು ಬರಿಯ ಉಸಿರು. ಅದನ್ನು ಸುಮ್ಮನೆ ಗಮನಿಸಿ" - ಎಂದು ಆಚಾರ್ಯರು ಹೇಳುತ್ತಾರೆ. ಈ ಅಭ್ಯಾಸದಿಂದ ಮನಸ್ಸಯ ಏಕಾಗ್ರವಾಗುದಲ್ಲದೆ ಪರಿಣಾಮಕಾರಿಯಾದ ಶಸ್ತ್ರ ಚಿಕಿತ್ಸೆಯೂ ಆಗುತ್ತದೆ. ಚಂಚಲವಾಗಿರುವ ಅಲೆದಾಡುತ್ತಿರುವ ದೃಢತೆಯಿಲ್ಲದ ಮನಸ್ಸು ಏಕಾಗ್ರ ಮಾಡುವುದರಿಂದ ಅದು ಸೂಕ್ಷ್ಮವಾಗುತ್ತದೆ. ಹೀಗೆ ಕೆಲವು ದಿನಗಳು ಉಸಿರಿನ ಮೇಲೆ ಏಕಾಗ್ರತೆ ಸಾಧಿಸಿದ ನಂತರ ಸಾಧಕರು ವಿಪಶ್ಯನ ಕಲಿಯಲು ಅರ್ಹರಾಗುತ್ತಾರೆ.

ಗಮನವನ್ನು ಮೂಗಿನ ಹೊಳ್ಳೆಗಳ ಕೆಳ ಭಾಗದಿಂದ ತೆಗೆದು ತಲೆಯ ಮಧ್ಯದ ಮೆದುವಾದ ಭಾಗದಲ್ಲಿ ಇರಿಸುವಂತೆ ಸಾಧಕರಿಗೆ ಆದೇಶ ನೀಡಲಾಗುತ್ತದೆ. ಆ ಸಮಯದಲ್ಲಿ ಅಲ್ಲಿ ಉಂಟಾಗುತ್ತಿರುವ ನೋವು, ಒತ್ತಡ, ಹಗುರತ್ವ, ಕಚಗುಳಿಯಾಗುವುದು, ಭಾರ, ಬಿಸಿ, ತಂಪು, ಇತ್ಯಾದಿ ಯಾವುದೇ ಸಂವೇದನೆಯ ಅನುಭವಗಳನ್ನು ಗಮನಿಸಬೇಕಾಗುತ್ತದೆ. ಕ್ರಮೇಣ ಶಿರದಿಂದ ಹಿಡಿದು ಕತ್ತು, ಭುಜಗಳು, ಕೈಗಳು, ಎದೆ, ಹೊಟ್ಟೆ, ಬೆನ್ನು, ಸೊಂಟ, ಕಾಲುಗಳು ಕೊನೆಗೆ ಪಾದದ ಬೆರಳುಗಳವರೆಗೆ ಶರೀರದ ಅಂಗ ಪ್ರತ್ಯಂಗಗಳಲ್ಲಿ ಆಗುತ್ತಿರುವ ಸಂವೇದನೆಗಳನ್ನು ಸಮತಾಭಾವದಿಂದ ಗಮನಿಸುತ್ತಿರುವುದೇ ವಿಪಶ್ಯನ ಧ್ಯಾನವಾಗಿದೆ.

ಸಂವೇದನೆಗಳು ಎಷ್ಟೇ ಸುಖಕರವಾಗಿರಲೀ ಅಸುಖಕರವಾಗಿರಲೀ ಅವನ್ನು ಸಮತಾ ಭಾವದಿಂದ ಗಮನಿಸುವಂತೆ ಪದೇ ಪದೇ ಆಚಾರ್ಯರು ಎಚ್ಚರಿಸುತ್ತಿರುತ್ತಾರೆ, 'ಕೇವಲ ಗಮನಿಸಿ; ಬಹಳ ಜಾಗರೂಕತೆಯಿಂದ ಎಚ್ಚರವಾಗಿರಿ' ಎನ್ನುವುದೇ ನಿರ್ದೇಶನವಾಗಿರುತ್ತದೆ. ಪ್ರಜ್ಞೆಯನ್ನು ಬೆಳೆಸುವುದೇ ಈ ಧ್ಯಾನದ ಬಹುಮುಖ್ಯ ಭಾಗವಾಗಿದೆ. 'ದೇಹ ಮತ್ತು ಮನಸ್ಸುಗಳು ಬರೀ ತರಂಗಗಳಲ್ಲದೆ ಬೇರೇನೂ ಅಲ್ಲ' ಎಂಬ ಅರಿವು ಮೂಡತೊಡಗುತ್ತದೆ. ಇಡೀ ವಿಶ್ವವೆಲ್ಲಾ ಬರಿಯ ಅಲೆಗಳೇ- ತರಂಗಗಳೇ ಅಲ್ಲವೆ? ಎಂಬ ಪ್ರಶ್ನೆ ಮೂಡುತ್ತದೆ.

ಮಹಾತ್ಮಾಗಾಂಧಿಯವರು ವಿಪಶ್ಯನ ಹೆಸರನ್ನು ಕೇಳಿರದೆ ಇದ್ದರೂ ಅವರು ವಿಪಶ್ಯನವನ್ನೇ ಮಾಡುತ್ತಿದ್ದರೆಂಬ ಸತ್ಯ ಕ್ರಮೇಣ ತಿಳಿಯಿತಂತೆ! ಅದೇ ಶರೀರದ ಅಂತರಾಳದಲ್ಲಿನ ಸತ್ಯತೆಯನ್ನು ಗಮನಿಸುವುದು. ಈ ಸತ್ಯವನ್ನು ಗಮನಿಸಿ ನಡೆದುಕೊಳ್ಳುವ 'ಮಾರ್ಗ'ದಲ್ಲಿ ಜೀವನದಲ್ಲಿ ಬರುವ ಪ್ರತಿ ಸಮಸ್ಯೆಗೂ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ನಮ್ಮ ಸಾಮರ್ಥ್ಯ ಹೆಚ್ಚಿ ಶಾಂತಿ ಪಸರಿಸುತ್ತದೆ ಎಂಬುದು ನನ್ನ 'ವಿಪಶ್ಯನ'ದ ಮನನ. □

ಸುತ್ತಿಗೆಯನ್ನು ಯೋಚಿಸುತ್ತಾ

ಅಪ್ಪ
ಕುಳಿತಲ್ಲೇ
ಕುಳಿತುಬಿಡುತ್ತಾನೆ.
ಒಮ್ಮೊಮ್ಮೆ ಧ್ಯಾನಿಯಂತೆ
ಮೊಗದೊಮ್ಮೆ
ಸಾಕ್ಷಾತ್ ವಿಶ್ವಾಮಿತ್ರನಂತೆ
ಧರ್ಮಾಂಧರು
ಅವನ
ಕೈಕಾಲುಗಳಿಗೆ ತೊಡಿಸಿದ
ಬೇಡಿಗಳನ್ನು
ತುಂಡರಿಸಲು
ಸುತ್ತಿಗೆಯನ್ನು
ಯೋಚಿಸುತ್ತಾ...!!

○ ಹಳ್ಳಿ ವೆಂಕಟೇಶ್

ಮಾನವ ಹಕ್ಕುಗಳು ಮತ್ತು ರಾಜಕೀಯದಿಂದಾಚೆಯ ಸಂಕಥನಗಳು



ಭಾರತದಲ್ಲಿ ಮಾನವ ಹಕ್ಕುಗಳ ಕುರಿತಂತೆ ಚರ್ಚಿಸುವಾಗ ಕೆಲವು ವಿರೋಧಾಭಾಸಗಳು ಕಂಡು ಬರುತ್ತವೆ. ಒಂದೆಡೆ ಭಾರತದ ಸರಕಾರ ಮಾನವ ಹಕ್ಕುಗಳನ್ನು ಪಠ್ಯಪುಸ್ತಕದಲ್ಲಿ, ಕಾಲೇಜುಗಳಲ್ಲಿ ಐಚ್ಛಿಕ ವಿಷಯವನ್ನಾಗಿ ಅಳವಡಿಸುತ್ತದೆ. ಆದರೆ ಅದನ್ನು ಪ್ರತಿಪಾದಿಸುವವರನ್ನು ವಿರೋಧಿಗಳನ್ನಾಗಿಸಿ ಚಿತ್ರಿಸುತ್ತದೆ. ಅಲ್ಲದೇ ಸಂಘಟನೆಗಳು ರಾಜಕೀಯದ ವಿರೋಧಿಗಳೆಂದು ಕಲ್ಪಿಸುತ್ತದೆ. ಆದರೆ ಸಂಘಟನೆಗಳು ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಹಾಗೂ ಜಾತ್ಯತೀತತೆಯ ಚೌಕಟ್ಟನ್ನು ಗಟ್ಟಿಗೊಳಿಸುವಲ್ಲಿ ವಹಿಸಿದ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ.

ಮಾನವ ಹಕ್ಕುಗಳ ಹೋರಾಟಗಾರ ಬಿನಾಯಕ್ ಸೇನ್ ರಿಗೆ ಜೀವಾವಧಿ ಶಿಕ್ಷೆ ನೀಡಿದ ಛತ್ತೀಸ್‌ಗಡ್‌ನ ನ್ಯಾಯಾಲಯದ ತೀರ್ಪು ಯಾರಿಗೂ ಸಂತೋಷವನ್ನುಂಟು ಮಾಡಿಲ್ಲ. ಮಾನವ ಹಕ್ಕುಗಳ ಹೋರಾಟಗಳ ಮಂಚೂಣಿಯಲ್ಲಿರುವವರು ಒಂದೇ ತತ್ವದಿಂದ ಬಂದವರಲ್ಲ– ಅವರಲ್ಲಿ ಗಾಂಧಿವಾದಿಗಳು ಇದ್ದಾರೆ, ವಸಾಹತುಶಾಹಿ ವಿರೋಧಿಗಳು, ಆಧುನಿಕತೆಯ ವಿಮರ್ಶಕಾರರು, ಲೋಹಿಯಾವಾದಿಗಳು, ಅಂಬೇಡ್ಕರ್‌ವಾದಿಗಳೂ ಹಾಗೂ ಅದರೊಂದಿಗೆ ಮಾರ್ಕ್ಸ್‌ವಾದಿಗಳೂ ಕೂಡ ಇದ್ದಾರೆ. ಅದರರ್ಥ ಅವರೆಲ್ಲರೂ ಮಾರ್ಕ್ಸ್‌ವಾದಿಗಳು ಎಂದರ್ಥವಲ್ಲ. ಮಾನವ ಹಕ್ಕುಗಳ ಹೋರಾಟ ಭಾರತದ ಸಂದರ್ಭದಲ್ಲಿ ತಾತ್ವಿಕತೆಯ "ಸಲಾದ್" ಎಂದು ಕರೆಯಬಹುದು. ಯಾಕೆಂದರೆ ವಿವಿಧ ತಾತ್ವಿಕ ಹಿನ್ನಲೆಯಿಂದ ಬಂದಿರುವ ಕಾರಣ ಮಾನವ ಹಕ್ಕುಗಳನ್ನು, ಬಡತನವನ್ನು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ತಮ್ಮದೇ ಆದ ದೃಷ್ಟಿಕೋನದಿಂದ ನೋಡುವುದು ಸಹಜ. ವಿಚಿತ್ರವೆಂದರೆ ಭಾರತದಲ್ಲಿ ಮಾನವ ಹಕ್ಕುಗಳ ಸಂಘಟನೆಯನ್ನು ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಆರಂಭಿಸಿದವರು ಜಯಪ್ರಕಾಶ್ ನಾರಾಯಣರವರು. ಮಾನವ ಹಕ್ಕುಗಳ ಕುರಿತಾದ ಕಾಳಜಿ ಭಾರತದಲ್ಲಿ ಬಹಳ ಹಳೆಯದು. ಅದು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ನೆಹರೂರವರ ಕಾಲದಲ್ಲಿ ನೋಡಬಹುದು.

ಭಾರತದಲ್ಲಿ ಮಾನವ ಹಕ್ಕುಗಳ ಕುರಿತಂತೆ ಚರ್ಚಿಸುವಾಗ ಕೆಲವು ವಿರೋಧಾಭಾಸಗಳು ಕಂಡು ಬರುತ್ತವೆ. ಒಂದೆಡೆ ಭಾರತದ ಸರಕಾರ ಮಾನವ ಹಕ್ಕುಗಳನ್ನು ಪಠ್ಯಪುಸ್ತಕದಲ್ಲಿ, ಕಾಲೇಜುಗಳಲ್ಲಿ ಐಚ್ಛಿಕ ವಿಷಯವನ್ನಾಗಿ ಅಳವಡಿಸುತ್ತದೆ. ಆದರೆ ಅದನ್ನು ಪ್ರತಿಪಾದಿಸುವವರನ್ನು ವಿರೋಧಿಗಳನ್ನಾಗಿಸಿ ಚಿತ್ರಿಸುತ್ತದೆ. ಅಲ್ಲದೇ ಸಂಘಟನೆಗಳು ರಾಜಕೀಯದ ವಿರೋಧಿಗಳೆಂದು ಕಲ್ಪಿಸುತ್ತದೆ. ಆದರೆ ಸಂಘಟನೆಗಳು ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಹಾಗೂ ಜಾತ್ಯತೀತತೆಯ ಚೌಕಟ್ಟನ್ನು ಗಟ್ಟಿಗೊಳಿಸುವಲ್ಲಿ ವಹಿಸಿದ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಇದಕ್ಕೆ ಪಿಯುಸಿಯಲ್‌ನ ಕೊಡುಗೆ ಒಂದು ಉತ್ತಮ ಉದಾಹರಣೆ. ಇವತ್ತು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬರಬೇಕಾದರೆ ಮಾನವ ಹಕ್ಕುಗಳ ಸಂಘಟನೆ ಪಿಯುಸಿಯಲ್ ಮೂಲ ಕಾರಣವೆಂಬುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ಕರ್ನಾಟಕದಲ್ಲಿ ಬಾಬ ಬುಡನ್‌ಗಿರಿಯ ವಿಷಯವನ್ನು ಎಲ್ಲರಿಗಿಂತ ಮೊದಲೇ ಅದು ಎತ್ತಿ ಕೊಂಡದ್ದು ಕೂಡ ಗೊತ್ತಿರಲಿಕ್ಕಿಲ್ಲ.

ಬಹುಷ: ಬಿನಾಯಕ್ ಸೇನ್‌ರ ಜೀವಾವಧಿ ಶಿಕ್ಷೆ ಕುರಿತು ಬಂದಿರುವ ಟೀಕೆಗಳಲ್ಲಿ ಖ್ಯಾತ ಸಮಾಜ ಶಾಸ್ತ್ರಜ್ಞ ಶಿವ್ ವಿಶ್ವನಾಥನ್‌ರ ಟೀಕೆ ಪ್ರಮುಖ. ಶಿವ್ ವಿಶ್ವನಾಥನ್ ಯಾವತ್ತೂ ಮಾರ್ಕ್ಸ್ ವಾದಿಯಾಗಿರಲಿಲ್ಲ ಅಥವಾ ಎಡಪಂಥೀಯರೂ ಅಲ್ಲ. ಅವರು ಸೇನ್‌ರ ರಾಜಕೀಯವನ್ನು ಒಪ್ಪುವುದಿಲ್ಲ, ಆದರೊಂದಿಗೆ ಅವರಿಗೆ ನೀಡಿದ ಶಿಕ್ಷೆಯನ್ನು ಕೂಡ ಸಮ್ಮತಿಸುವುದಿಲ್ಲ. ಅವರು ಪ್ರಧಾನ ಮಂತ್ರಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿರುವ ಕಾಳಜಿಗಳು ಬೇರೆ–ಅದರಲ್ಲಿ ನಮ್ಮಲ್ಲಿರುವ ಪಲಾಯನವಾದದ ಕುರಿತಾದ ವಿಮರ್ಶೆಗಳಿವೆ, ರಾಜಕೀಯದಿಂದಾಚೆ ನೋಡುವ ಸೂಕ್ಷ್ಮತೆ ಅಡಕವಾಗಿದೆ. ಆ ಪತ್ರವನ್ನು ಇಲ್ಲಿ ಉಲ್ಲೇಖಿಸುವುದು ಉತ್ತಮ:

The sadness of our state is that its categories have become numb and lifeless. Categories like the nation state, the idea of security, our sense of territoriality lack a recognition of generosity, the courage, the challenge to categories that dissenters make. Yet the risk the dissenter takes is preferable to the silence that exonerates violence torture, injustice or genocide. Mr.Binayak Sen should be in your cabinet Mr.Singh, or a member of your development councils, not in jail. A life giving career cannot be met with a life sentence. Think of your own angst and silent suffering after 1984. You are an honest man, a sensitive man and a gentle man. Think of the slow indifference to justice then.

ಈ ಸಂದರ್ಭದಲ್ಲಿ ಮಾನವ ಹಕ್ಕುಗಳ ಸಂಕಥನ ರಾಜಕೀಯದಿಂದಾಚೆ ಇರಬೇಕೇ? ಎಂಬ ಚರ್ಚೆ ಬಹಳ ಪ್ರಸ್ತುತವೆನಿಸುತ್ತದೆ. ಅಲ್ಲದೇ ಕಳೆದ ಒಂದು ದಶಕದಿಂದಾಚೆ ಬೆಳೆಯುತ್ತಿರುವ ಮಾನವ ಹಕ್ಕುಗಳ ಕುರಿತಾದ ಕಾಳಜಿಗಳಿಗೆ ಮೂಲಭೂತ ಕಾರಣಗಳನ್ನು ಹುಡುಕುವುದು ಕೂಡ ಅಷ್ಟೇ ಅನಿವಾರ್ಯವೆನಿಸುತ್ತದೆ. ಇವತ್ತು ಯಾವುದೇ ರಾಜಕೀಯ ವ್ಯವಸ್ಥೆ ಮಾನವ ಹಕ್ಕುಗಳ ಸಂಕಥನದ ಮಹತ್ವವನ್ನು ಹಾಗೂ ಅದನ್ನು ಪ್ರತಿಪಾದಿಸುವ ಜಾಗತಿಕ ಸಂಸ್ಥೆಗಳ ವಿಶಾಲವಾದ ಅಜೆಂಡಾವನ್ನು ಕಡೆಗಣಿಸಲು ಸಾಧ್ಯವಿಲ್ಲ. ಮಾನವ ಹಕ್ಕುಗಳ ಕಾಳಜಿಗಳು ಮೆಲ್ನೋಟಕ್ಕೆ ರಾಜಕೀಯ ವ್ಯವಸ್ಥೆಯ ಹಾಗೂ ರಾಜಕೀಯ ಸಂಕಥನದ ಭಾಗವಾಗಿರುವುದು ಅಷ್ಟೇ ಸ್ಪಷ್ಟ. ಯಾಕೆಂದರೆ ಮಾನವ ಹಕ್ಕುಗಳು ಇವತ್ತಿನ ಸಂದರ್ಭದಲ್ಲಿ ಆಧುನಿಕ ಪ್ರಜಾಪ್ರಭುತ್ವದ ಗಟ್ಟಿತನ ಹಾಗೂ ಪ್ರಜಾಪ್ರಭುತ್ವ ವನ್ನು ಅಳೆಯುವ ಅಳತೆಗೋಲು ಹಾಗೂ ಮಾನದಂಡವಾಗಿದೆ ಎಂದರೂ ತಪ್ಪಾಗಲಾರದು.

ಅದರರ್ಥ ಮಾನವ ಹಕ್ಕುಗಳನ್ನು ಗಟ್ಟಿಗೊಳಿಸುವ ಹಾಗೂ ನೆಲೆಗಳಿಗೊಳಿಸುವ ಕಾರ್ಯಗಳು ಸಂಪೂರ್ಣಗೊಂಡಿವೆ ಎಂದರ್ಥವಲ್ಲ. ಅದು ಈಗಲೂ ಸಂಪೂರ್ಣಗೊಳ್ಳದಿರುವ ಒಂದು ಪ್ರಕ್ರಿಯೆ. ಈ ಅಂಸಪೂರ್ಣತೆಯಲ್ಲಿ ಅದರ ವಿರೋಧಾಭಾಸಗಳು ಅಡಗಿವೆ. ಈ ಸಂದರ್ಭದಲ್ಲಿ ಮಾನವ ಹಕ್ಕುಗಳನ್ನು ಮೂರು 'ತಲೆಮಾರಿನ" ರೂಪದಲ್ಲಿ ನೋಡುವ ಅಥವಾ ವಿಶ್ಲೇಷಿಸುವ ಯತ್ನವನ್ನು ನಾವು ನೋಡಬಹುದು.. ವಾಸ್ತವವಾಗಿ ಪ್ರಥಮ ತಲೆಮಾರಿನ ಹಕ್ಕುಗಳಲ್ಲಿ ರಾಜಕೀಯ ಹಾಗೂ ನಾಗರೀಕ ಹಕ್ಕುಗಳನ್ನು ನೋಡುತ್ತವೆ. ಎರ



ಡನೇ ತಲೆಮಾರಿನಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ನೋಡಲಾಗುತ್ತದೆ. ಮೂರನೇ ತಲೆಮಾರಿನಲ್ಲಿ ಸಾಮಾಜಿಕ ಚಳುವಳಿಗಳು ಹಾಗೂ ಐಡೆಂಟಿಟಿಗಳು ಎತ್ತಿಕೊಂಡಿರುವ ಹಕ್ಕುಗಳನ್ನು ಪ್ರತಿಪಾದಿಸಲಾಗುತ್ತಿದೆ. ಈ ತಲೆಮಾರಿನ ಕುರಿತು ಒಂದೆರೆಡು ತಗಾದೆಗಳಿವೆ.

ಬಹಳಷ್ಟು ಸಲ ಈ ಎಲ್ಲಾ ಹಕ್ಕುಗಳು ಒಂದಕ್ಕೊಂದು ಬೆಸೆದುಕೊಂಡಿರುವ ಕಾರಣ ಯಾವುದೇ ಒಂದು ಹಕ್ಕನ್ನು ಬೇರ್ಪಡಿಸಿ ನೋಡುವುದು ಸರಿಯಲ್ಲ, ಅಥವಾ ಅತ್ಯಂತ ಮಹತ್ವ ಎಂದು ವಾದಿಸುವುದು ಕೂಡ ಸರಿಯಲ್ಲ. ಇದಕ್ಕೆ ಸರಿಯಾಗಿ ಎರಡನೇ ತಗಾದೆ ಬಂದಿರುವುದು ಮಾನವ ಹಕ್ಕುಗಳನ್ನು "ಶ್ರೇಣಿಕೃತ"ವಾಗಿ ವಿಭಜಿಸಬಹುದೆ? ಎಂಬುದರ ಕುರಿತಾಗಿದೆ. ಅದರ ಪ್ರಕಾರ ಮಾನವ ಹಕ್ಕುಗಳ ಸಂಕಥನಗಳಲ್ಲಿ ಎಲ್ಲಾ ಹಕ್ಕುಗಳನ್ನು ಶ್ರೇಣಿಕೃತವಾಗಿ, ಪ್ರಾಶಸ್ತ್ಯಕ್ಕನುಗುಣವಾಗಿ ವಿಭಜಿಸಲು ಸಾಧ್ಯವಿಲ್ಲ-ಯಾಕೆಂದರೆ ಅವುಗಳಲ್ಲಿ ಕೆಲವು ಹಕ್ಕುಗಳು ಸಂದರ್ಭಕ್ಕನುಗುಣವಾಗಿ ಅತ್ಯಂತ ಪ್ರಾಶಸ್ತ್ಯ ಹೊಂದಿರುತ್ತದೆ. ಕೆಲವೊಮ್ಮೆ ರಾಜಕೀಯ ಹಕ್ಕುಗಳನ್ನು ಪ್ರಾಥಮಿಕವೆನ್ನುವುದೇ ಹಾಸ್ಯಾಸ್ಪದವಾಗಿರುತ್ತದೆ. ಇದಕ್ಕೆ ಕಾರಣವಿದೆ: ಆರ್ಥಿಕ ಅಸಮಾನತೆ ಆಥವಾ ಅಸಮರ್ಪಕ ಬೆಳವಣಿಗೆಯ ನಡುವೆ ರಾಜಕೀಯ ಹಕ್ಕುಗಳನ್ನು ಪ್ರಾಥಮಿಕ ಅಥವಾ ಅತ್ಯಂತ ಮಹತ್ವವೆನ್ನಲು ಸಾಧ್ಯವೇ? ಆದ ಕಾರಣವೇ ಬಹಳಷ್ಟು ಹಿಂದುಳಿದ /ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಆರ್ಥಿಕ ಹಕ್ಕುಗಳು ಪ್ರಾಥಮಿಕವಾಗಿರುತ್ತದೆಯೇ ಹೊರತು ರಾಜಕೀಯವಲ್ಲ. ಕೆಲವೊಮ್ಮೆ ಸಾಂಸ್ಕೃತಿಕ ಹಕ್ಕುಗಳು ರಾಜಕೀಯ ಹಕ್ಕುಗಳಿಗಿಂತ ಮಹತ್ವದಾಗಿರುತ್ತದೆ. ಈ ರೀತಿಯ ವಿಭಿನ್ನತೆ ವಿವಿಧ ರೂಪದ ಚರ್ಚೆಗೆ, ಘರ್ಷಣೆಗೆ ಕಾರಣವಾದದ್ದನ್ನೂ ನಾವು ಅಲ್ಲಗಳೆಯಲು ಸಾಧ್ಯವಿಲ್ಲ.

ಇದಕ್ಕೆ ತಕ್ಕಂತೆ ಇನ್ನೊಂದು ವಾದ ಬೆಳೆಯುತ್ತಿದೆ. ಅದನ್ನು ಅನಿವಾರ್ಯತೆಯ ವಾದವೆನ್ನಬಹುದು. ರಾಜಕೀಯ ವ್ಯವಸ್ಥೆ ಎಲ್ಲಾ ಮಾನವ ಹಕ್ಕುಗಳ ಅಂತರಾಷ್ಟ್ರೀಯ ಒಡಂಬಡಿಕೆಗಳನ್ನು, ಹಾಗೂ ಅದಕ್ಕೆ ಪೂರಕವಾಗಿರುವ ಕಾನೂನುಗಳನ್ನು ಅನುಷ್ಠಾನಕ್ಕೆ ತರಲೇಬೇಕೆಂಬ ಒತ್ತು ಈ ವಾದದ ಹಿಂದೆ ಅಡಕವಾಗಿದೆ. ಇದನ್ನು ಅನುಷ್ಠಾನಕ್ಕೆ ತರಬೇಕಾದ್ದು ರಾಜಕೀಯ ವ್ಯವಸ್ಥೆ, ಆಸಕ್ತಿದಾಯಕ ವಿಷಯವೆಂದರೆ ಮಾನವಹಕ್ಕುಗಳು ಉಲ್ಲಂಘನೆಯಾದಾಗಲೆಲ್ಲ ರಾಜ್ಯವನ್ನೇ ಜವಾಬ್ದಾರಿಯನ್ನಾಗಿಸುತ್ತದೆಯಲ್ಲದೇ ಅಪರಾಧಿಯನ್ನಾಗಿಸುತ್ತದೆ. ಆದ ಕಾರಣ ಮಾನವಹಕ್ಕುಗಳ ಅನುಷ್ಠಾನದ ಸಂದರ್ಭದಲ್ಲಿ ರಾಜ್ಯಕ್ಕೆ ಕೆಲವು ಜವಾಬ್ದಾರಿಗಳನ್ನು ನೀಡುತ್ತದೆ: ಮಾನವ ಹಕ್ಕುಗಳನ್ನು ಸಂರಕ್ಷಿಸುವ, ಪ್ರತಿಷ್ಠಾಪಿಸುವ, ಎತ್ತಿಹಿಡಿಯುವ, ಇನ್ನಷ್ಟು ವಿಸ್ತರಿಸುವ ಇತ್ಯಾದಿಗಳನ್ನು ಇಲ್ಲಿ ದಾಖಲು ಮಾಡಬೇಕು.. ಇಲ್ಲಿ ರಾಜಕೀಯ ವ್ಯವಸ್ಥೆ ಮಾತ್ರವೇ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ವಾದಿಸಿದರೆ ಅತಿಶಯೋಕ್ತಿಯಾಗುತ್ತದೆ. ಆದ ಕಾರಣ ರಾಜಕೀಯದಿಂದಾಚೆ ನೋಡುವುದು ಅತೀ ಅವಶ್ಯಕವೆನಿಸುತ್ತದೆ.

ಇಂದಿನ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು ಅವಶ್ಯಕ: ಮಾನವ ಹಕ್ಕುಗಳನ್ನು ಇವತ್ತಿನ ಅದರಲ್ಲೂ ಜಾಗತೀಕರಣದ ಸಂದರ್ಭದಲ್ಲಿ ರಾಜ್ಯ ಅದರಲ್ಲೂ ಪ್ರಭುತ್ವಗಳೇಕೆ ಬಹು ಮುಖ್ಯವಾಗಿ ಮಾತನಾಡುತ್ತವೆ? ಅವುಗಳಿಗೂ ಪ್ರಜಾಪ್ರಭುತ್ವಕ್ಕೂ ಇರುವ ಸಂಬಂಧಗಳೇನು? ಅಲ್ಲದೇ ಅವುಗಳು ಮಾರುಕಟ್ಟೆ ಪ್ರೇರಿತ ಮಾನವ ಹಕ್ಕುಗಳೇ?

ವಾಸ್ತವವಾಗಿ ಮಾನವ ಹಕ್ಕುಗಳ ಚರ್ಚೆಗಳು ಹಲವು ಮಿಥ್ಯೆಗಳನ್ನು ನಿರ್ಮಿಸಿರುವುದು ನಿರ್ವಿವಾದ. ಒಂದು ಮಿಥ್ಯೆ ಏನೆಂದರೆ ಮಾನವ ಹಕ್ಕುಗಳ ಸಂಕಥನ ಹಾಗೂ ಕಾಳಜಿಗಳು ಪಾಶ್ಚಾತ್ಯ ನಾಗರಿಕತೆ ಹಾಗೂ ಪಾಶ್ಚಾತ್ಯ ಆಧುನಿಕತೆಗೆ ಮಾತ್ರ ಸೀಮಿತಗೊಂಡಿದೆ .ಈ ಮಿಥ್ಯೆ ಪೌರಾತ್ಯದ ಸಂಸ್ಕೃತಿ ಹಾಗೂ ಇತಿಹಾದಲ್ಲಿರುವ ಬಹು ಮುಖ್ಯವಾದ ಚರ್ಚೆಗಳನ್ನು ಹಾಗೂ ಕಾಳಜಿಗಳನ್ನು ಒಂದೋ ಕಡೆಗಣಿಸುತ್ತದೆ ಇಲ್ಲವೇ ಅದನ್ನು ಮರೆಮಾಚುತ್ತದೆ. ವಾಸ್ತವವಾಗಿ ಮಾನವ ಹಕ್ಕುಗಳ ಕುರಿತಾದ ಕಾಳಜಿಗಳು ಪೌರಾತ್ಯದ ಇತಿಹಾಸದ ಪುಟಗಳಲ್ಲಿ ಕಂಡು ಬರುತ್ತದೆ. ಈ ಕಾಳಜಿಗಳು ಹಕ್ಕುಗಳಿಗೆ ಕಾನೂನಿನ ಚೌಕಟ್ಟನ್ನು ನಿರ್ಮಿಸುವಲ್ಲಿಯೂ ಕಂಡುಬರುತ್ತದೆ. ಅದಕ್ಕೆ ಉತ್ತಮ ಉದಾಹರಣೆ ಕ್ರಿ.ಪೂ.6ನೇ ಶತಮಾನದ ಸೈರಸ್ ಮಹಾನ್ ಚಕ್ರವರ್ತಿಯ ಸೈರಸ್ ಸಿಲಿಂಡರ್ ಎಂಬ ಮಾನವ ಹಕ್ಕುಗಳ ದಾಖಲಾತಿ. ಇದನ್ನು ಇತಿಹಾಸದ ಪ್ರಪ್ರಥಮ ಮಾನವ ಹಕ್ಕುಗಳ ದಾಖಲಾತಿಯೆನ್ನುತ್ತಾರೆ.

ಈ ದಾಖಲಾತಿ ಪ್ರತಿಯೊಬ್ಬ ನಾಗರೀಕನಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದ್ದಲ್ಲದೆ ಗುಲಾಮಗಿರಿ ಪದ್ಧತಿಯನ್ನು ನಿಷೇಧಿಸಿತ್ತು. ಮಾನವ ಹಕ್ಕುಗಳಿಗೆ ಒಂದು ನ್ಯಾಯ ಬದ್ಧತೆಯನ್ನು ನೀಡುವ ಪರಿಕ್ರಮ ಉರ್‌ನ ರಾಜನಾದ ನಮುನ ಕಾಲದಲ್ಲೂ, ಹಮ್ಮರಬ್ಬಿಯ ಕಾಲದಲ್ಲೂ ಹಾಗೂ ಅಶೋಕನ ಕಾಲದಲ್ಲೂ ನೋಡಬಹುದು. ಇದರ ಫಲಶ್ರುತಿಯಾಗಿ ವಿವಿಧ ಸಾಂಸ್ಕೃತಿಕ ಹಕ್ಕುಗಳನ್ನು ಮನ್ನಿಸುವ ಹಾಗೂ ಗೌರವಿಸುವ ವಿರೋಧಿಸುವ ಹಕ್ಕುಗಳನ್ನು ರಾಜಕೀಯ ನೀಡುವುದನ್ನು ನಾವು ಗಮನಿಸಬೇಕು. ಆದಕಾರಣ ಆಧುನಿಕತೆ ಅಥವಾ ಪಾಶ್ಚಾತ್ಯ ನಾಗರೀಕತೆ ಮಾನವ ಹಕ್ಕುಗಳನ್ನು ಪ್ರತಿನಿಧಿಸುತ್ತದೆ ಎಂದರೆ ತಪ್ಪಾಗುತ್ತದೆ. ವಾಸ್ತವವಾಗಿ ಪಾಶ್ಚಾತ್ಯ ನಾಗರೀಕತೆ ವಸಾಹತುಶಾಹಿ ರೂಪವಾಗಿ ಮಾಡಿದ ಅವಾಂತರವನ್ನು ಗಮನಿಸಿದರೆ ಸಾಕು. ಅದು ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಬದಲಿಗೆ ಉಲ್ಲಂಘಿಸಿದ್ದೇ ಹೆಚ್ಚು.

ಮಾನವ ಹಕ್ಕುಗಳ ಉಲ್ಲಂಘನೆಯ ಇತಿಹಾಸವನ್ನು ಗಮನಿಸಿದರೆ ಅದು ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿಯೊಂದಿಗೆ ಬೆಸೆದುಕೊಂಡದ್ದು ತೆರೆದ ಸಂಗತಿ. ಬಹಳಷ್ಟು ಸಲ ಅದು ಆಧುನಿಕ ರೋಗಗಳನ್ನು ವಸಾಹತುಗಳ ಮೇಲೆ ಸೂಕ್ಷವಾಗಿ ಹೇರಿ ಮೂಲ ನಿವಾಸಿಗಳನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಿದ್ದನ್ನು ಮೂಲ ನಿವಾಸಿಗಳ ಇತಿಹಾಸ ಹೇಳುತ್ತದೆ. ಈ ರಾಜ

ವಾಸ್ತವವಾಗಿ ಮಾನವ ಹಕ್ಕುಗಳ ಚರ್ಚೆಗಳು ಹಲವು ಮಿಥ್ಯೆಗಳನ್ನು ನಿರ್ಮಿಸಿರುವುದು ನಿರ್ವಿವಾದ. ಒಂದು ಮಿಥ್ಯೆ ಏನೆಂದರೆ ಮಾನವ ಹಕ್ಕುಗಳ ಸಂಕಥನ ಹಾಗೂ ಕಾಳಜಿಗಳು ಪಾಶ್ಚಾತ್ಯ ನಾಗರಿಕತೆ ಹಾಗೂ ಪಾಶ್ಚಾತ್ಯ ಆಧುನಿಕತೆಗೆ ಮಾತ್ರ ಸೀಮಿತಗೊಂಡಿದೆ. ಈ ಮಿಥ್ಯೆ ಪೌರಾತ್ಯದ ಸಂಸ್ಕೃತಿ ಹಾಗೂ ಇತಿಹಾದಲ್ಲಿರುವ ಬಹುಮುಖ್ಯವಾದ ಚರ್ಚೆಗಳನ್ನು ಹಾಗೂ ಕಾಳಜಿಗಳನ್ನು ಒಂದೋ ಕಡೆಗಣಿಸುತ್ತದೆ. ಇಲ್ಲವೇ ಅದನ್ನು ಮರೆಮಾಚುತ್ತದೆ. ವಾಸ್ತವವಾಗಿ ಮಾನವ ಹಕ್ಕುಗಳ ಕುರಿತಾದ ಕಾಳಜಿಗಳು ಪೌರಾತ್ಯದ ಇತಿಹಾಸದ ಪುಟಗಳಲ್ಲಿ ಕಂಡು ಬರುತ್ತದೆ. ಈ ಕಾಳಜಿಗಳು ಹಕ್ಕುಗಳಿಗೆ ಕಾನೂನಿನ ಚೌಕಟ್ಟನ್ನು ನಿರ್ಮಿಸುವಲ್ಲಿಯೂ ಕಂಡುಬರುತ್ತದೆ. ಅದಕ್ಕೆ ಉತ್ತಮ ಉದಾಹರಣೆ ಕ್ರಿ.ಪೂ. 6ನೇ ಶತಮಾನದ ಸೈರಸ್ ಮಹಾನ್ ಚಕ್ರವರ್ತಿಯ ಸೈರಸ್ ಸಿಲೆಂಡರ್ ಎಂಬ ಮಾನವ ಹಕ್ಕುಗಳ ದಾಖಲಾತಿ.

ಕಾರಣದಲ್ಲಿ ಯದ್ಧ ಪ್ರಧಾನವಾಗಿರಲಿಲ್ಲ ಹೊರತು ಚಾಣಾಕ್ಷತೆ, ತಂತ್ರಗಾರಿಕೆ ಪ್ರಧಾನವಾಗಿತ್ತು. ಅಂದರೆ ಯಾವುದೇ ಯುದ್ಧವನ್ನು ಮಾಡದೇ ಮೂಲ ನಿವಾಸಿಗ ಳನ್ನು ನಾಶ ಮಾಡುವ ಕಲೆಯನ್ನು ನಾವು ಪಾಶ್ಚಾತ್ಯ ನಾಗರೀಕತೆಯಿಂದ ಅಥವಾ ದೇಶದವರಿಂದಲೇ ಕಲಿಯಬೇಕು. ವಸಾಹತುಶಾಹಿ ಜಗತ್ತಿನ ವಿವಿಧೆಡೆ ಅಳವಡಿಸಿದ ಹೊಸ ಹೊಸ ರೊ. ಗಗಳನ್ನು ಗಮನಿಸಿ: ಮಲೇರಿಯಾ, ಪ್ಲೇಗ್, ಇತ್ಯಾದಿ. ಈ ತಂತ್ರಗಾರಿಕೆಯ ಫಲಶ್ರುತಿಯಾಗಿ ಕೆನರಿ ದ್ವೀಪದ ಮೂಲ ನಿವಾಸಿಗಳು 16ನೇ ಶತಮಾನ ದಲ್ಲಿ ಸಂಪೂರ್ಣವಾಗಿ ನಾಶವಾದದ್ದನ್ನು ಮರೆಯಬಾ ರದು. ಅದೇರೀತಿ ಆಸ್ಟ್ರೇಲಿಯಾ ತನ್ನ ಅರ್ಧದಷ್ಟು ಮೂಲ ನಿವಾಸಿಗಳನ್ನು ಕಳೆದುಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಇದೇ ಸ್ಥಿತಿ ಫಿಜಿ ದ್ವೀಪಕ್ಕಾಯಿತು.

ಇದಕ್ಕೆ ತದ್ವಿರುದ್ಧವಾದ ತಂತ್ರಗಾರಿಕೆಯನ್ನು ಭಾರತದಂತಹ ದೇಶದಲ್ಲಿ ಅದು ಉಪಯೊಗಿಸಿತ್ತು. ಅದು ಮೂಲತಃವಾಗಿ ಚೌಕಟ್ಟಿನ ಅಸಮರ್ಥತೆಯನ್ನು ನಿರ್ಮಿಸುವುದರಲ್ಲಿ ನೋಡಬಹುದು. ಇದರ ಫಲಶ್ರುತಿಯಾಗಿ ಮುರ್ಶಿದಾಬಾದ್‌ದಂತಹ ಪಟ್ಟಣಗಳು ಅಕ್ಕೈಗಾರಿಕಾ ನಗರಗಳಾಗಿ, ಜನರಿಲ್ಲದ ಪಟ್ಟಣಗಳಾಗಿ ಪರಿವರ್ತಿತವಾದವು. ಅದೇ ಸಂದರ್ಭ,ದಲ್ಲಿ ಭಾರತದಲ್ಲಿ ಬರಗಾಲವೆಂಬುದು ದಿನನಿತ್ಯದ ವಿಚಾರವಾಯಿತು. ವಸಾಹತುಶಾಹಿಯ ಆಡಳಿತದ ಸಂದರ್ಭದಲ್ಲಿ ಲಕ್ಷಗಟ್ಟಲೇ ಜನ ಬರಗಾಲಕ್ಕೆ ತುತ್ತಾದರು. ಇಲ್ಲಿ ನಾವು ಒಂದು ಅಂಶವನ್ನು ಮರೆಯಬಾರದು: ಜಾಗತೀಕರಣವನ್ನು ವಸಾಹುತುಶಾಹಿಯ ವಿಸ್ತೃತ ರೂಪವಾಗಿ ನೋಡಬೇಕೆ ಹೊರತು ಅದನ್ನು ಹೊಚ್ಚ ಹೊಸ ರೂಪವಾಗಿ ಅಲ್ಲ. ವಸಾಹತು ಸಂದರ್ಭದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರತ್ಯಕ್ಷವಾಗಿ, ನೇರವಾಗಿ ವಸಾಹತುಶಾಹಿಯ ಮೂಗಿನ ನೇರಕ್ಕೆ ನಡೆದರೆ ಜಾಗತೀಕರಣ ಸಂದರ್ಭದಲ್ಲಿ ಅದು ಮಾರುಕಟ್ಟೆಯ ಮುಖಾಂತರ ನಡೆಯುವುದನ್ನು ಗಮನಿಸಬೇಕು.

ಎರಡನೇ ಮಿಥ್ಯೆ ಮಾನವ ಹಕ್ಕುಗಳನ್ನು ಏಕರೂಪಿಯಾಗಿ ವಿಶ್ಲೇಷಿಸುತ್ತದೆ ಹಾಗೂ ಜಾಗತಿಕವಾಗಿ ಅದನ್ನು ಏಕರೂಪವಾಗಿ ಅಳವಡಿಸಬೇಕೆಂದು ಬಯಸುತ್ತದೆ. ಈ ವಾದವನ್ನು ಬಹಳಷ್ಟು ಸಂದರ್ಭದಲ್ಲಿ ಅದರಲ್ಲೂ ಮುಖ್ಯವಾಗಿ ಸಂಘರ್ಷದ ಸಂದರ್ಭದಲ್ಲಿ ಒಪ್ಪಿಕೊಳ್ಳಲು ಅಸಾಧ್ಯವಾಗುತ್ತದೆ. ಯಾಕೆಂದರೆ ಒಂದು ವರ್ಗಕ್ಕಿರುವ ಹಕ್ಕಿನ ಮಹತ್ವ ಇನ್ನೊಂದು ವರ್ಗಕ್ಕೆ ಇರದೇ ಹೋಗಬಹುದು. ಅಥವಾ ಅದನ್ನು ಒಪ್ಪದಿರಬಹುದು. ಉದಾ: ಇಸ್ರೇಲ್ ಮತ್ತು ಪಾಲೆಸ್ತೈನ್‌ಗಳ ಸಂಘರ್ಷದ ಸಂದರ್ಭದಲ್ಲಿ ಪಾಲೆಸ್ತೈನಿಗಳ ಬದುಕುವ ಹಕ್ಕು ಇಸ್ರೇಲಿಗಳಿಗೆ ಮಹತ್ವದ್ದಾಗದೇ ಇರುವುದನ್ನು ಗಮನಿಸಬೇಕು.

ಮೂರನೇ ವಾದದ ಪ್ರಕಾರ ಎಲ್ಲಾ ರಾಜಕೀಯ ವ್ಯವಸ್ಥೆಗಳು ಯಾವುದೇ ತಗಾದೆಗಳಿಲ್ಲದೆ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆಯನ್ನು ಚಾಚು ತಪ್ಪದೆ ಆಚರಣೆಗೆ ತರುತ್ತವೆ ಹಾಗೂ ಮಾನವಹಕ್ಕುಗಳನ್ನು ಎತ್ತಿ ಹಿಡಿಯುತ್ತವೆ. ಇದನ್ನು ಪರಿಪೂರ್ಣ ಸತ್ಯವೆನ್ನಲು ಸಾಧ್ಯವಿಲ್ಲ. ಬಹಳಷ್ಟು ದೇಶಗಳು ಅಂತರರಾಷ್ಟ್ರೀಯ ಘೋಷಣೆಗಳಿಗೆ ಸಹಿ ಮಾಡಿದರೂ ಮೂಲಭೂತವಾಗಿ ಮಾನವ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ ಅಸಫಲವಾಗಿ ಹೊಗುತ್ತವೆ. ಅತೀ ಶ್ರೇಷ್ಠ ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳುವ ಅಮೇರಿಕಾವು ಇದಕ್ಕೆ ಅಪವಾದವಲ್ಲ.

ಅಮೇರಿಕಾದ ಜೈಲುಗಳಲ್ಲಿರುವ ಕೈದಿಗಳೇ ಸಾಕ್ಷಿ. ಜಗತ್ತಿನ ಅತೀ ಹೆಚ್ಚು ಜೈಲು ಕೈದಿಗಳಿರುವ ದೇಶ ವೆಂಬ ಹೆಗ್ಗಳಿಕೆ ಅದಕ್ಕಿದೆ- 2004ರಲ್ಲಿ 2.2 ಮಿಲಿಯನ್ ಕೈದಿಗಳಿದ್ದರು. ಅಲ್ಲದೆ ಇದೇ ದೇಶ ಮಾನವ ಹಕ್ಕುಗಳ ಎಲ್ಲಾ ಒಡಂಬಡಿಕೆಗೆ ಸಹಿ ಮಾಡಿದೆ ಎಂದು ಯಾರಾದರೂ ನಂಬಿದರೆ; ಅದೂ ಕೂಡ ಸುಳ್ಳು. ಹೆಚ್ಚು ಕಡಿಮೆ ಎಂಟು ಮಹತ್ವ ಪೂರ್ಣ ಅಂತರರಾಷ್ಟ್ರೀಯ ಒಡಂಬ ಡಿಕೆಗಳಿಗೆ ಈಗಲೂ ಸಹ ಆ ದೇಶ ಸಹಿ ಹಾಕಿಲ್ಲ. ಅದರಲ್ಲಿ ಸಾವಿನ ಶಿಕ್ಷೆ, ಹಿಂಸೆ, ನಿರಾಶ್ರಿತರ ಸ್ಥಾನ ಮಾನ, ರಾಜ್ಯರಹಿತರ ಸ್ಥಾನಮಾನ ಇತ್ಯಾದಿ ಅಂತರ ರಾಷ್ಟ್ರೀಯ ಒಡಂಬಡಿಕೆಗಳು ಸೇರಿವೆ.

ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ಅನಿವಾರ್ಯವೆನಿಸುತ್ತದೆ. ಮಾನವ ಹಕ್ಕುಗಳ ರಾಜಕೀಯವು ನವ ಉದಾರವಾದಿ ಯೋಜನೆಯ ಅಥವಾ ರಾಜಕೀಯದ ಭಾಗವೇ? ಮಾನವ ಹಕ್ಕುಗಳ ಕುರಿತಾದ ಕಾಳಜಿಗಳು ಯಾವ ಸಂದರ್ಭಗಳಲ್ಲಿ ಹುಟ್ಟಿಕೊಂಡಿತ್ತು? ರಾಜಕೀಯ ವ್ಯವಸ್ಥೆಗಳು ದೊಡ್ಡ ಧ್ವನಿಯಲ್ಲಿ ಅದರ ಪ್ರತಿಪಾದಕರಂತೆ ಯಾಕೆ ಮಾತನಾಡುತ್ತವೆ? ವಾಸ್ತವವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಕುರಿತಾದ ತೀವ್ರತರವಾದ ಕಾಳಜಿಗಳು ಹುಟ್ಟಿಕೊಂಡಿದ್ದು ಸೊವಿಯತ್ ಯೂನಿಯನ್‌ನ ಪತನದ ನಂತರವೆಂದೇ ಹೇಳಬೇಕು ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನವ ಉದಾರವಾದಿ ತತ್ವ ಗಟ್ಟಿಯಾಗಿ ಬೇರೂರಲು ಆರಂಭಿಸಿದಾಗವೆಂದೇ ಹೇಳಬೇಕು.

ಪ್ರಾರಂಭದಲ್ಲಿ ಅದು ವಿಶ್ವ ಸಂಸ್ಥೆಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳ ಬೃಹತ್ ರಾಜಕೀಯ ಯೋಜನೆಯಾಗಿ, ಅದರಲ್ಲೂ ಪಾಶ್ಚೀಮಾತ್ಯ ಮಾದರಿಯ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಯೋಜನೆಯಾಗಿ ಬಂತು. ಈ ಯೋಜನೆ ಆರಂಭದಲ್ಲಿ ಮಾಜಿ ಕಮ್ಯುನಿಷ್ಟ್ ದೇಶಗಳ ಸುತ್ತ ಗಿರಕಿ ಹೊಡೆದರೆ ತದನಂತರ ಉಳಿದ ದೇಶಗಳಿಗೂ ಹರಡಿತ್ತು. ಇದಕ್ಕಾಗಿ ಅಂತರರಾಷ್ಟ್ರೀಯ ಸಂಸ್ಥೆಗಳು ವಿವಿಧ ಪರಿಭಾಷೆಗಳನ್ನು ಉಪಯೋಗಿಸಿದ್ದು ವಿಚಿತ್ರವೆನ್ನಬಹುದು ಉದಾ: "ಪ್ರಜಾಪ್ರಭುತ್ವದ ಕೊರತೆ," "ಸೋತ ರಾಜ್ಯಗಳು" ಇತ್ಯಾದಿ. ವಾಸ್ತವವಾಗಿ ಇದರ ಹಿಂದೆ ಇದ್ದ ಅಜೆಂಡಾಗಳು ಬೇರೆ: ಅದು ಮೂಲತ:ವಾಗಿ ಮಾರುಕಟ್ಟೆ ಆಧಾರಿತ ಮಾನವ ಹಕ್ಕುಗಳ ಚೌಕಟ್ಟುಗಳನ್ನು ನಿರ್ಮಿಸುವುದಾಗಿತ್ತು. ದುರಂತವೆಂದರೆ ಮಾರುಕಟ್ಟೆ ಆಧಾರಿತ ಮಾನವ ಹಕ್ಕುಗಳೇ ಮುಂದೆ ದೇಶವೊಂದರ ಪ್ರಜಾಪ್ರಭುತ್ವವನ್ನು ಅಳೆಯುವ ಮಾನದಂಡವಾಯಿತು. ಆದಕಾರಣ ಮಾರುಕಟ್ಟೆ ಕೇಂದ್ರೀಕೃತವಾದಗಳನ್ನು ಹುಟ್ಟುಹಾಕಲಾಯಿತು. ಅಲ್ಲದೇ ಅದನ್ನೇ ಸರ್ವಕಾಲಿಕ ಸತ್ಯವೆಂದು ಬಿಂಬಿಸಲಾಯಿತು.

ವಾಸ್ತವವಾಗಿ "ತತ್ವದ ಅಂತ್ಯ"ದ ಸಂದರ್ಭದಲ್ಲಿ ಮಾರುಕಟ್ಟೆಯೇ ಒಂದು ಭಲಾಢ್ಯ ತತ್ವವಾಗಿ ಹೊರಹೊಮ್ಮಿದ್ದು ಆಶ್ಚರ್ಯವೇನಲ್ಲ. ಇಲ್ಲಿರುವ ವಾದಗಳನ್ನು ಗಮನಿಸಿ: ಮಾರುಕಟ್ಟೆ ಹೊಸ ಹೊಸ ಹಕ್ಕುಗಳನ್ನು ನೀಡುತ್ತದೆ ಹಾಗೂ ನಿರ್ಮಿಸುತ್ತದೆ- ಚೌಕಾಶಿ ಮಾಡುವ, ನಿರ್ಗಮಿಸುವ, ಮಾರುಕಟ್ಟೆಗೆ ಸ್ವತಂತ್ರವಾಗಿ ಆಗಮಿಸುವ ಇತ್ಯಾದಿ. ಅಲ್ಲದೇ ಅದು ಹೊಸ ಸಾಮಾಜಿಕ ಐಡೆಂಟಿಟಿಗಳನ್ನು ನಿರ್ಮಿಸುತ್ತದೆ, ವ್ಯಕ್ತಿಗಳನ್ನು ಸ್ವಾಯತ್ತ ಹಾಗೂ ಸ್ವತಂತ್ರ ವ್ಯಕ್ತಿಗಳಾಗಿ ಪರಿವರ್ತಿಸುತ್ತದೆ. ವಿಚಿತ್ರವೆಂದರೆ ಇವುಗಳು ಆರ್ಥಿಕ ಹಕ್ಕುಗಳೇ ಹೊರತು ರಾಜಕೀಯ ಹಕ್ಕುಗಳಲ್ಲ. ಮಾಲ್‌ಗಳು, ಡಿಪಾರ್ಟಮೆಂಟಲ್ ಸ್ಟೋರ್‌ಗಳು , ದೊಡ್ಡ ದೊಡ್ಡ ಬಜಾರ್‌ಗಳು ಈ ನವ ಮಾನವ ಹಕ್ಕುಗಳ ಸಂಕೇತಗಳಾಗಿ, ಹಾಗೂ ಮಾನದಂಡಗಳಾಗಿ ಬಿಡುತ್ತವೆ. ಆದಕಾರಣ ಹೆಚ್ಚು ಹೆಚ್ಚು ಬಿಗ್ [illegible]ಗಳನ್ನು, ಮಾಲ್‌ಗಳನ್ನು ಅದು ಬಯಸುತ್ತದೆ.

ಅಲ್ಲದೇ ಎಲ್ಲವನ್ನು ಮಾರುಕಟ್ಟೆ ಆಧಾರಿತವಾಗಿರಬೇಕೆಂದು ಸೂಕ್ಷವಾಗಿ ಪ್ರತಿಪಾದಿಸುತ್ತದೆ. ಇದನ್ನು ನಾವು ಕ್ರಿಕೆಟ್‌ನಿಂದ ತಿನ್ನುವ ಆಹಾರದ ತನಕ ನೋಡಬಹುದು. ಇಲ್ಲಿರುವಂತಹ ಬಹು ಮುಖ್ಯ ಕಲ್ಪನೆಯೆಂದರೆ ಮಾರುಕಟ್ಟೆ ಕೇಂದ್ರೀಕೃತ ಮಾನವ ಹಕ್ಕುಗಳು ತತ್‌ಕ್ಷಣದಿಂದಲೇ ರಾಜಕೀಯ ಹಕ್ಕುಗಳಾಗಿ ಪರಿವರ್ತಿತವಾಗುತ್ತವೆ ಎಂಬುದಾಗಿದೆ. ಮಾರುಕಟ್ಟೆಯೇ ಈ ರೀತಿಯ ಪರಿವರ್ತನೆಗೆ ಅವಕಾಶ ಮಾಡಿಕೊಡುತ್ತದೆ, ಅಲ್ಲದೆ ಅದು ಶಾಶ್ವತವಾಗಿ ರಾಜಕೀಯ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತದೆ ಎಂಬ ವಾದ ಕೂಡ ಇಲ್ಲಿ ಸೇರಿದೆ. ವಾಸ್ತವವಾಗಿ ಇದೊಂದು ಮಿಥ್ಯೆ. ಮಾರುಕಟ್ಟೆ ನಿರ್ಮಿಸುವುದು ಮಾರುಕಟ್ಟೆ ಆಧಾರಿತ ಮಾನವ ಹಕ್ಕುಗಳನ್ನೇ ಹೊರತು ಪ್ರಜಾ ಪ್ರಭುತ್ವವನ್ನಲ್ಲ. ಅದರ ಅಂತಿಮ ಗುರಿ ಮಾರುಕಟ್ಟೆ ಪೂರಕವಾದ ಸ್ವತಂತ್ರ ಹಾಗೂ ಸ್ವಾಯತ್ತ ವ್ಯಕ್ತಿಗಳನ್ನು ನಿರ್ಮಿಸುವುದಾಗಿಯೇ ಹೊರತು ರಾಜಕೀಯ ಚೌಕಟ್ಟುಗಳನ್ನಲ್ಲ.

ಮಾರುಕಟ್ಟೆ ನಿಂತಿರುವುದೇ ಈ ರೀತಿಯ ವರ್ಗಗಳ ನಿರ್ಮಿತಿಯಿಂದ. ಮಾರುಕಟ್ಟೆಗೆ ಜೋತುಬೀಳುವ ಸಾವಿರಾರು ವರ್ಗಗಳು ಹುಟ್ಟಿದಷ್ಟು ಮಾರುಕಟ್ಟೆಗೆ ಸಂತೋಷ. ಆದಕಾರಣ ಅದರ ಶೋಷಣೆ ಸೂಕ್ಷವಾಗಿರುತ್ತದೆ: ಮೇಲ್ನೋಟಕ್ಕೆ ಕಂಡು ಬರುವುದಿಲ್ಲ. ಆದಕಾರಣ ನಾವು ಅದನ್ನು ಅಪರಾಧಿ ಸ್ಥಾನಕ್ಕೆ ತರಲು ಹಿಂದೇಟು ಹಾಕುತ್ತೇವೆ. ಯಾಕೆಂದರೆ ನವ ಉದಾರವಾದ ನಿರ್ಮಿಸುವ ಮಾರುಕಟ್ಟೆ ದಿನನಿತ್ಯದ ಸಂವಾದಗಳಲ್ಲಿ ಅಭಿವೃದ್ಧಿಯ ಪ್ರತೀಕವಾಗುತ್ತದೆ, ಆಧುನಿ[illegible]ಯ

ಬೆಂಗಳೂರಿನ ಗರುಡ ಮಾಲ್, ಬಿಗ್ ಬಜಾರ್‌ಗಳನ್ನೆ ಗಮನಿಸಿ. ಅವು ಉಪಯೋಗಿಸುವ ಒಟ್ಟು ವಿದ್ಯುತ್‌ಶಕ್ತಿ ಕಡಿಮೆಯೆಂದರೂ ಮೂವತ್ತು ಹಳ್ಳಿಗಳನ್ನು ಬೆಳಗಿಸಲು ಸಾಕು. ಕೋಕಕೋಲ ತನ್ನ ಬಾಟ್ಲಿಂಗ್ ಕಂಪೆನಿಯಲ್ಲಿ ಉಪಯೋಗಿಸುವ ನೀರು ನೂರಾರು ಹಳ್ಳಿಗಳಿಗೆ, ಗದ್ದೆಗಳಿಗೆ ಉಣಬಡಿಸಲು ಸಾಕು. ಮಾರುಕಟ್ಟೆ ಆಧಾರಿತ ಶೋಷಣೆಯ ಸೂಕ್ಷ್ಮತೆಯನ್ನು ವಿವಿಧ ರೂಪಗಳಲ್ಲಿ ನೋಡಬಹುದು: ಅದರಲ್ಲಿ ಪ್ರಮುಖವಾಗಿರುವುದು ಭೌಧ್ಧಿಕ ಆಸ್ತಿಯ ಹಕ್ಕು ಅಥವಾ ಪೇಟೆಂಟ್ ಹಕ್ಕಿನ ಪ್ರತಿಪಾದನೆ. ಇದು ನೂರಾರು ರೈತರನ್ನು ರಾತ್ರೋರಾತ್ರೆ ಮಾರುಕಟ್ಟೆ ಆಧಾರಿತ ರೈತರನ್ನಾಗಿಸಿದ್ದು ಸತ್ಯ.

ಸಂಕೇತವಾಗುತ್ತದೆ. ರಾಜಕೀಯ ವ್ಯವಸ್ಥೆ ಕೂಡ ಇದನ್ನು ಒಪ್ಪಿಕೊಳ್ಳುವ ಕಾರಣ ಅದನ್ನು ಅಪರಾಧಿ ಸ್ಥಾನಕ್ಕೆ ತರಲು ಸಾಧ್ಯವಾಗುವುದೇ ಇಲ್ಲ.

ಬೆಂಗಳೂರಿನ ಗರುಡ ಮಾಲ್, ಬಿಗ್ ಬಜಾರ್ ಗಳನ್ನೇ ಗಮನಿಸಿ. ಅವು ಉಪಯೋಗಿಸುವ ಒಟ್ಟು ವಿದ್ಯುತ್‌ಚ್ಛಕ್ತಿ ಕಡಿಮೆಯೆಂದರೂ ಮೂವತ್ತು ಹಳ್ಳಿಗಳನ್ನು ಬೆಳಗಿಸಲು ಸಾಕು. ಕೋಕಕೋಲ ತನ್ನ ಬಾಟ್ಲಿಂಗ್ ಕಂಪೆನಿಯಲ್ಲಿ ಉಪಯೋಗಿಸುವ ನೀರು ನೂರಾರು ಹಳ್ಳಿಗಳಿಗೆ, ಗದ್ದೆಗಳಿಗೆ ಉಣಬಡಿಸಲು ಸಾಕು.

ಮಾರುಕಟ್ಟೆ ಆಧಾರಿತ ಶೋಷಣೆಯ ಸೂಕ್ಷ್ಮತೆಯನ್ನು ವಿವಿಧ ರೂಪಗಳಲ್ಲಿ ನೋಡಬಹುದು: ಅದರಲ್ಲಿ ಪ್ರಮುಖವಾಗಿರುವುದು ಬೌದ್ಧಿಕ ಆಸ್ತಿಯ ಹಕ್ಕು ಅಥವಾ ಪೇಟೆಂಟ್ ಹಕ್ಕಿನ ಪ್ರತಿಪಾದನೆ. ಇದು ನೂರಾರು ರೈತರನ್ನು ರಾತ್ರೋರಾತ್ರಿ ಮಾರುಕಟ್ಟೆ ಆಧಾರಿತ ರೈತರನ್ನಾಗಿಸಿದ್ದು ಸತ್ಯ. ಇದರಿಂದಾಗಿ ರೈತರು ತಮ್ಮ ಸಾಂಪ್ರದಾಯಿಕ ಹಕ್ಕುಗಳನ್ನು ಅದರಲ್ಲೂ ಬೀಜ ಸಂಸ್ಕೃತಿಯನ್ನು ಉಳಿಸುವ ಹಕ್ಕನ್ನು ಕಳೆದುಕೊಳ್ಳಬೇಕಾಯಿತು.

ಹೊಸ ಮಾರುಕಟ್ಟೆ ಸಾವಿರಾರು ರೈತರ ಆತ್ಮಹತ್ಯೆಗೆ ಕಾರಣೀಭೂತವಾದ್ದನ್ನು ನಾವು ಮರೆಯಬಾರದು. ಭಾರತದಲ್ಲಿ 1990–2007ರ ನಡುವೆ ಕಡಿಮೆಯೆಂದರೂ 2 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡದ್ದು ವಾಸ್ತವ. ಕಳೆದ ಒಂದುವರುಷ (2009)ದಲ್ಲಿಯೇ 1,27,151 ರೈತರು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಗಳು ಹೇಳುತ್ತವೆ, ಅಲ್ಲದೇ ಇವತ್ತು ಪ್ರತಿ 32 ನಿಮಿಷಕ್ಕೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾನೆ. ಆದಕಾರಣ ಭಾರತ "ಜಗತ್ತಿನ ಆತ್ಮಹತ್ಯೆಯ ರಾಜಧಾನಿ" ಎಂದು ಕರೆಯುವ ಹಂತಕ್ಕೆ ತಲುಪಿರುವುದನ್ನು ಇಲ್ಲಿ ದಾಖಲಿಸಬೇಕು. ರೈತರ ಆತ್ಮಹತ್ಯೆ ಒಂದು ರಾಜ್ಯಕ್ಕೆ ಮಾತ್ರ ಸೀಮಿತಗೊಂಡಿಲ್ಲ– ಮಧ್ಯ ಪ್ರದೇಶ ಅತೀ ಹೆಚ್ಚು ಆತ್ಮಹತ್ಯೆ ಮಾಡಿಕೊಳ್ಳುವ ರಾಜ್ಯವಾಗಿ ಪರಿವರ್ತಿತವಾಗುತ್ತಿದೆ. (ಇದರ ಮೊದಲು ಆಂಧ್ರ ಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕವಿತ್ತು). ಹೊಸ ಮಾರುಕಟ್ಟೆ ಆಹಾರ ಧಾನ್ಯಗಳ ಕೊರತೆಗೆ, ಆಹಾರದ ದೊಂಬಿಗೆ, ಕುಡಿಯುವ ನೀರಿನ ಕೊರತೆಗೆ, ಪೌಷ್ಟಿಕಾಂಶದ ಕೊರತೆಗೆ, ಕಾರಣವಾಗಿರುವುದು ಕೂಡ ಅಷ್ಟೇ ಸತ್ಯ.

ಹೊಸ ಮಾರುಕಟ್ಟೆಯನ್ನು ರಾಜಕೀಯ ವ್ಯವಸ್ಥೆ ತಡೆಗಟ್ಟಲು ಸಾಧ್ಯವೇ? ಇದು ಅಷ್ಟು ಸುಲಭದ ವಿಷಯವಲ್ಲ. ಯಾಕೆಂದರೆ ಮಾರುಕಟ್ಟೆಗೆ ರಾಜಕೀಯ ವ್ಯವಸ್ಥೆ ಕೂಡ ಅಧೀನವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಸ್ತವವಾಗಿ ಕೋಕ ಕೋಲಾ, ಪೆಪ್ಸಿಕೋಲಾ, ಫಾಸ್ಟ್ ಫುಡ್, ಮೊಬೈಲ್‌ಗಳು ನಿರ್ಮಿಸುವ ಮಾರುಕಟ್ಟೆ ನೋಡಲು ಆಕರ್ಷಕ, ಆದರೆ ಅದು ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಪರಿ ಅಥವಾ ರೂಪ ಮಾತ್ರ ವಿಶಿಷ್ಟ. 3ಜಿ ಮೊಬೈಲ್ ನಮ್ಮ ಖಾಸಗಿ ಜೀವನದ ಮೇಲೆ ಮಾಡುವ ಹಾನಿ ಒಂದೇ ಸಾಕು. ನಮಗೀಗ ಖಾಸಗಿ ಜೀವನವೇ ಇಲ್ಲ ಅಥವಾ ಖಾಸಗೀತನವೆಂಬುದೇ ಇಲ್ಲ ಖಾಸಗೀತನವೆಂಬುದು ಮಾರುಕಟ್ಟೆಯ ಭಾಗವಾಗಿದೆ. ಆದಕಾರಣವೇ ಮಾನವ ಹಕ್ಕುಗಳ ಸಂಕಥನದಲ್ಲಿ, ಚರ್ಚೆಗಳಲ್ಲಿ ರಾಜಕೀಯದಾಚೆ ನೋಡುವುದು ಅಷ್ಟೇ ಮುಖ್ಯವಾಗುತ್ತದೆ. □

ಭೂದೇವತೆಗಳ ಪ್ರಣಾಳಿಕೆ

(33ನೇ ಪುಟದಿಂದ)

ಇರುವ ಪ್ರಜಾಪ್ರಭುತ್ವವನ್ನು ಮತ್ತಷ್ಟು ಗಟ್ಟಿಗೊಳಿಸುವ ಚರ್ಚೆಯನ್ನು ಹುಟ್ಟುಹಾಕುವ ಪಾತ್ರವೆಂದರೆ 'ಧನ–ಸಂಪತ್ತಿ ಸರ್ವಾಧಿಕಾರ್ ಮಹಾರಾಜ್'. ಈ ಪಾತ್ರದ ಬಗ್ಗೆ ಲೇಖಕರೇ ಹೀಗೆ ವಿವರಿಸುತ್ತಾರೆ, "ನಿಹಿತ ಸ್ವಾರ್ಥಪರ ವರ್ಗದ ವಿಚಾರಧಾರೆಗಳ ಪ್ರತಿನಿಧಿ, ಪ್ರಚಾರಕ ಹಾಗೂ ದೇಶದ ಧಾರ್ಮಿಕ ಮಹಂತರ ಮುಖಂಡರೂ ಆದ ಮಹಾತ್ಮ ಧನ–ಸಂಪತ್ತಿ ಸರ್ವಾಧಿಕಾರ್ ಮಹಾರಾಜ್ ಅವರು ಸಿದ್ಧಾಂತಗಳ ಭಕ್ತರನ್ನು ಭೂದೇವತೆಗಳೆಂದು ಹೆಸರಿಸಿದ್ದಾರೆ.

ಗುರುಗಳು 'ದೇವತೆ' ಎಂಬ ಶಬ್ದವನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತಾರೆ – 'ಇಡೀ ಭೂಮಂಡಲದಲ್ಲಿ ಶ್ರಮಿಸುವ ಎಲ್ಲಾ ಮನುಷ್ಯರ ಶ್ರಮದ ಲಾಭವನ್ನು ಪಡೆಯುವುದು ಧಾರ್ಮಿಕ ಅಧಿಕಾರ ಹೊಂದುವುದು ಯಾವ ವರ್ಗಕ್ಕೆ ಸಹಜವಾಗಿ ಪ್ರಾಪ್ತವಾಗಿದೆಯೋ ಆ ವರ್ಗ ಭೂದೇವತೆಗಳ ವರ್ಗವೆಂದು ಕರೆಸಿಕೊಳ್ಳುತ್ತದೆ.' ಹೀಗೆ ಕೃತಿಯಲ್ಲಿ ಈ ಎರಡು ಮುಖ್ಯ ಪಾತ್ರಗಳೊಡನೆ ವೈಚಾರಿಕ ಸಂಘರ್ಷದಲ್ಲಿ ತೊಡಗುವ ಇತರೆ ಪಾತ್ರಗಳು ಕಾಣಿಸಿಕೊಳ್ಳುತ್ತವೆ: "ಗುರುಗಳು ಹಿಮಾಲಯದ ಶಿಖರ ಕೈಲಾಸದ ಒಂದು ಗುಹೆಯಲ್ಲಿ ವಿರಾಜಮಾನರಾಗಿದ್ದಾರೆ. ತಮ್ಮ ಗುಹೆಗೆ ಬರುವ ಸಾಧು–ಸಂತರು, ಮುಖಂಡರು, ಪುರೋಹಿತರು ಮೊದಲಾದವರಿಗೆ ತಮ್ಮ ಸಿದ್ಧಾಂತದ ದೀಕ್ಷೆ ನೀಡಿ ಸಮಸ್ತ ಪ್ರಪಂಚದಲ್ಲಿ ತಮ್ಮ ಸಿದ್ಧಾಂತ ಮತ್ತು ನೀತಿಗಳನ್ನು ಪ್ರಚಾರ ಮಾಡಲು ಆದೇಶಿಸುತ್ತಾರೆ.

ಇಂತದ್ದೇ ಸಂದರ್ಭದಲ್ಲಿ ದೀಕ್ಷೆ ಪಡೆದುಕೊಳ್ಳುವವರು ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳಲು ಗುರುಗಳಿಗೆ ಕೇಳಿದ ಪ್ರಶ್ನೆಗಳು ಹಾಗೂ ಅದಕ್ಕೆ ಮಹಾತ್ಮಾ ಧನ–ಸಂಪತ್ತಿ ಸರ್ವಾಧಿಕಾರ್ ಮಹಾರಾಜ್ ನೀಡಿದ ಬ್ರಹ್ಮ ವಾಕ್ಯದ ರೂಪದ ಉತ್ತರಗಳನ್ನು ಈ ಪುಸ್ತಕದಲ್ಲಿ ಸಮಾ ಹಿತವಾಗಿಸಿದೆ." ಈ ಮಾತುಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದಲ್ಲಿ ಅಲ್ಲೊಂದು ತೀವ್ರವಾದ ವ್ಯಂಗ್ಯ ಎದ್ದು ಕಾಣುತ್ತದೆ.

ಸಾಮಾನ್ಯ ಓದುಗ ಈ ಮಹಾತ್ಮಾ ಧನ–ಸಂಪತ್ತಿ ಸರ್ವಾಧಿಕಾರ್ ಮಹಾರಾಜ್ ಪಾತ್ರವನ್ನು ಪ್ರಸ್ತುತ ಧಾರ್ಮಿಕ ವ್ಯಕ್ತಿಗಳ ಸೋಗಲಾಡಿತನದ ಪ್ರತೀಕವೆಂಬಂತಾದರೂ ತೆಗೆದುಕೊಳ್ಳಬಹುದು ಇಲ್ಲವೇ ವೈದಿಕ ಜಗತ್ತಿನ ವಕ್ತಾರನಂತೆಯೂ ತೆಗೆದುಕೊಳ್ಳಬಹುದು.

ಇದಕ್ಕೆ ನಿದರ್ಶನವೆಂಬಂತೆ ಕೃತಿಯ ಒಳಗಡೆಯೇ ಈ ವಿವರಗಳು ಸಿಗುತ್ತವೆ: "ಮಹಾತ್ಮಾ ಧನ–ಸಂಪತ್ತಿ ಸರ್ವಾಧಿಕಾರ್ ಮಹಾರಾಜ್‌ರಿಗೆ ಬ್ರಾಹ್ಮಣ ವರ್ಗವು ಬಹಳ ಬೇಗ ವಿಶ್ವದ ಅನ್ಯ ವಿಶಿಷ್ಟ ವರ್ಗಗಳನ್ನು ತನ್ನ ಸಹಭಾಗಿಗಳನ್ನಾಗಿಸಿಕೊಂಡು ಪ್ರಪಂಚದ ಸಾಮಾನ್ಯ ಜನತೆಯ ವಿರುದ್ಧ ಒಂದು ಪ್ರಬಲ ದಳವನ್ನು ತಯಾರುಗೊಳಿಸುವಲ್ಲಿ ಯಶಸ್ವಿಯಾಗುತ್ತದೆ ಎಂಬುದರಲ್ಲಿ ಸಂಪೂರ್ಣವಾಗಿ ನಂಬಿಕೆಯಿದೆ. ಗುರುಗಳ ಪ್ರಕಾರ ಗಣತಂತ್ರ ರಾಜ್ಯದ ಪದ್ಧತಿ ಪ್ರಜೆಗಳನ್ನು ಭ್ರಮೆಯಲ್ಲಿರಿಸುವ ಒಂದು ಪವಾಡ ಮಾತ್ರ... ಗುರುಗಳ ವ್ಯಕ್ತಿತ್ವದಲ್ಲಿ ಅಧಿಕಾರರೂಢ ವರ್ಗ ಹಾಗೂ ನಹಿತ ಸ್ವಾರ್ಥಪರ ವರ್ಗದ ಎಲ್ಲಾ ಗುಣಗಳು ಪೂರ್ಣವಾಗಿ ವಿದ್ಯಮಾನದಲ್ಲಿವೆ. ದಯೆ, ದಾನ ಹಾಗೂ ನ್ಯಾಯದ ಹೆಸರಿನಲ್ಲಿ ಅನಾಚಾರ ಹಾಗೂ ಹಿಂಸೆಯನ್ನು ಮುಂದುವರೆಸಿಕೊಂಡು ಬರುವುದು ಗುರುಗಳ ಪರಮಧರ್ಮವಾಗಿದೆ.

ಖುದಾ ಹಾಗೂ ಭಗವಂತನ ಹೆಸರಿನಲ್ಲಿ ಜನತೆಯ ಅಧಿಕಾರಗಳ ಮೇಲೆ ಧಾಳಿ ಮಾಡುವುದು ಅವರ ಸಮಾನಾಂತರ ಸಹಚರರ ನಿಯತ್ತಿನ ಒಂದು ಅಂಗವಾಗಿದೆ. ಅವತಾರ ಪುರುಷರು ಹಾಗೂ ಪ್ರವಾದಿಗಳ ಹೆಸರು ಹೇಳುತ್ತಾ ಮೋಸ ವಂಚನೆಯ ಕೆಲಸ ಮಾಡುವುದು ಅವರ ಸಹಜ ಸ್ವಭಾವವಾಗಿದೆ." ಈ ವೈಚಾರಿಕ ಚರ್ಚೆಯು ವರ್ತಮಾನದ ಕರ್ನಾಟಕದ ರಾಜಕಾರಣಕ್ಕೆ ಕನ್ನಡಿಯಾಗಿರುವುದನ್ನು ನಾವು ಕಾಣುತ್ತೇವೆ.

ಜನ ಬದುಕನ್ನು ಧರ್ಮದ ಹೆಸರಿನಲ್ಲಿ ಮತ್ತಷ್ಟು ಮರಳು ಮಾಡುವ ಸನ್ನಿವೇಶವನ್ನು "ಭೂದೇವತೆಗಳ ಪ್ರಣಾಳಿಕೆ" ಕೃತಿಯು ಸಮರ್ಥವಾಗಿ ಚರ್ಚಿಸಿ ಅದರಿಂದ ಎಚ್ಚೆತ್ತುಕೊಳ್ಳುವ ಮಾರ್ಗವನ್ನು ನಿರೂಪಕನ ಮೂಲಕ ಕೃತಿಯು ಸಾಧಿಸುತ್ತದೆ. ಅಲ್ಲದೆ, ಬಿ. ಶ್ಯಾಮಸುಂದರ್‌ರವರು ಭಾರತದ ಇತಿಹಾಸದ ಬಗ್ಗೆ ಹೇಳಿರುವ ಈ ಮಾತುಗಳನ್ನು ನಾವು ಗಮನಿಸಬೇಕು: "ಆ[illegible] ಆಕ್ರಮಣಕಾರರೆದುರು ಪ್ರತಿಬಾರಿ ಸೋಲಲು ಕಾರಣವೆಂದರೆ ಜನತೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದಾಗಲೀ ಅಥವಾ ಅವರೊಡನೆ ಸಮಾನವಾಗಿ ವ್ಯವಹರಿಸುವುದಾಗಲೀ ಅವರಿಗೆ ಯಾವುದೇ ರೀತಿಯಲ್ಲಿ ಸ್ವೀಕಾರಾರ್ಹವಾಗಿರಲಿಲ್ಲ...ಮುಸಲ್ಮಾನರಿಗೆ ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವ ಅವಕಾಶ ದೊರೆತು ಅವರು ಶಾಸನದ ಸೂತ್ರವನ್ನು ಕೈಯಲ್ಲಿ ಹಿಡಿದಾಗ ಅವರ ಹೆಚ್ಚಿನ ಸಮಯ ತಮ್ಮ ಜನಿವಾರಧಾರಿ ಗುಲಾಮರನ್ನು ಸಂತೋಷಪಡಿಸುವುದರಲ್ಲೇ ಕಳೆದರು.

ಜನತೆಯೊಡನೆ ಸಂಪರ್ಕ ಸ್ಥಾಪಿಸಲು ಹಾಗೂ ಅವರ ಒಳಿತು, ಹಿತಾಸಕ್ತಿಗಳ ಬಗೆಗೆ ಯೋಚಿಸುವ ಸದಾವಕಾಶ ಎಂದೂ ಅವರಿಗೆ ಒದಗಿ ಬರಲೇ ಇಲ್ಲ. [illegible]ಗ್ಲರ ಶಾಸನವಂತೂ ಜನಿವಾರಧಾರಿ, ನಿಹಿತ ಸ್ವಾರ್ಥಪರ ವರ್ಗ ದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲೇ ಕಳೆದುಹೋಯಿತು. ನಮ್ಮ ಸಮಾಜದಲ್ಲಿ ಅಸ್ಪೃಶ್ಯರೆಂದು ಕರೆಯಿಸಿಕೊಳ್ಳುತ್ತಿರುವ ದಲಿತರು ಭಾರತದ ಮೂಲನಿವಾಸಿಗಳು. ಅಷ್ಟೆ ಅಲ್ಲ ಈ ನೆಲದ ಒಡೆಯರು ಹೌದು. ಈ ದೇಶದ ಆಡಳಿತದ ಚುಕ್ಕಾಣಿಯನ್ನು ಇವರು ಎಂದು ವಹಿಸಿಕೊಳ್ಳುತ್ತಾರೋ ಅಂದೇ ಭಾರತ ನಿಜವಾದ ಅರ್ಥದಲ್ಲಿ ಸ್ವತಂತ್ರವಾದಂತೆ." ಹೀಗೆ ಇಡೀ ಕೃತಿಯಲ್ಲಿ ಬಿ. ಶ್ಯಾಮಸುಂದರ್‌ರವರು ದಲಿತ ಸಮುದಾಯಗಳ ವಿಮೋಚನೆಗೆ ಅಗತ್ಯವಾದ ಒಂದು ವೈಚಾರಿಕ ಭೂಮಿಕೆಯನ್ನು ಸಂಭಾಷಣೆ, ಚರ್ಚೆಗಳ ಮೂಲಕ ಭೂದೇವತೆಗಳು ಎನ್ನುವ ಕೃತಿಯಲ್ಲಿ ಸಾಧಿಸುತ್ತಾರೆ.

ಇಂಥ ಕೃತಿಯನ್ನು ಅನುವಾದಿಸಿಕೊಟ್ಟ ಡಾ. ಎಚ್.ಟಿ. ಪೋತೆ ಮತ್ತು ಡಾ.ಜಗನ್ನಾಥ ಸಿಂಧೆಯವರನ್ನು ಅಭಿನಂದಿಸುತ್ತಾ ಕನ್ನಡ ನಾಡಿನ ಮೂಲನಿವಾಸಿಗಳು ಈ ಕೃತಿಯನ್ನು ಓದುವುದರ ಮೂಲಕ ಮತ್ತಷ್ಟು ಕ್ರಿಯಾಶೀಲರಾಗಲಿ ಎಂದು ಭಾವಿಸುತ್ತೇನೆ. □

ಭಯೋತ್ಪಾದನೆಯ ಬೇರುಗಳು

ಸಿಬಿಐ ಬಂಧನದಲ್ಲಿರುವ ಮಾಲೆಗಾಂವ್ ಬಾಂಬ್ ಸ್ಫೋಟದ ಆರೋಪಿ ಸ್ವಾಮಿ ಅಸೀಮಾನಂದ ನ್ಯಾಯಾಧೀಶರ ಎದುರು ನೀಡಿರುವ ಹೇಳಿಕೆಯಲ್ಲಿ ನವಭಾರತ್ ಎಂಬ ಹಿಂದೂ ಭೂಗತ ಸಂಘಟನೆ ನಡೆಸಿದ ಭಯೋತ್ಪಾದಕ ಕೃತ್ಯಗಳ ಬಗ್ಗೆ ಹೇಳಿಕೆ ನೀಡಿದ್ದಾನೆ. ಸಂಜೋತಾ ಎಕ್ಸ್‌ಪ್ರೆಸ್ ರೈಲು, ಮಾಲೆಗಾಂವ್, ಮೆಕ್ಕಾ ಮಸೀದಿ ಮತ್ತು ಅಜ್ಮೀರ್ ಷರೀಫ್‌ಗಳಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲಿ ಈ ನವಭಾರತ ಎಂಬ ಸಂಘಟನೆಯ ಪಾತ್ರವಿರುವುದನ್ನು ಆತ ತಿಳಿಸಿದ್ದಾನೆ. ಆರ್‌ಎಸ್‌ಎಸ್ ಸಂಘಟನೆಯ ಜೊತೆ ತನಗಿರುವ ಸಂಬಂಧವನ್ನೂ ಹೇಳಿಕೊಂಡಿದ್ದಾನೆ. ಅದರ ಸದಸ್ಯನಾಗಿರುವುದು ಮಾತ್ರವಲ್ಲದೆ, ಆರ್‌ಎಸ್‌ಎಸ್‌ನ ಹಲವಾರು ರಾಷ್ಟ್ರಮಟ್ಟದ ಮುಖಂಡರೊಂದಿಗೆ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರುವುದನ್ನೂ ಈ ಹೇಳಿಕೆಯಲ್ಲಿ ತಿಳಿಸಿದ್ದಾನೆ.

ಸ್ವಾಮಿ ಅಸೀಮಾನಂದ ತನ್ನ ಸಂಘಟನೆಯ ಸದಸ್ಯ ಎಂಬುದನ್ನು ಆರ್‌ಎಸ್‌ಎಸ್ ನಿರಾಕರಿಸಿದೆ. ಆರ್‌ಎಸ್‌ಎಸ್ ಈ ಬಗೆಯಲ್ಲಿ ವರ್ತಿಸುವುದು ಇದು ಮೊದಲ ಸಲವೇನಲ್ಲ. ಗಾಂಧೀಜಿಯನ್ನು ಹತ್ಯೆ ಮಾಡಿದ ನಾಥೂರಾಮ್ ಗೋಡ್ಸೆ ಆರ್‌ಎಸ್‌ಎಸ್ ಸದಸ್ಯನಾಗಿರಲಿಲ್ಲ ಎಂದು ಅದು ವಾದಿಸಿತ್ತು. ನಾಥೂರಾಮ್ ಗೋಡ್ಸೆಗೆ ಆರ್‌ಎಸ್‌ಎಸ್ ಸಂಘಟನೆಯ ಜೊತೆ ನಿಕಟ ಸಂಬಂಧವಿತ್ತು ಹಾಗೂ ಆ ಸಂಘಟನೆಯ ಗುಪ್ತ ಹುನ್ನಾರದ ಅಂಗವಾಗಿಯೇ ಆತ ಗಾಂಧೀಜಿಯ ಹತ್ಯೆಯ ಸಂಚನ್ನು ರೂಪಿಸಿದ್ದ ಎಂಬ ಬಗ್ಗೆ ಪರೋಕ್ಷವಾದ ಹಲವಾರು ಪುರಾವೆಗಳು ಲಭ್ಯವಿವೆಯಾದರೂ ಆತ ಆರ್‌ಎಸ್‌ಎಸ್ ಸದಸ್ಯನಾಗಿದ್ದ ಎಂಬುದಕ್ಕೆ ಪ್ರತ್ಯಕ್ಷ ದಾಖಲಾತಿಸಿಕ್ಕಿಲ್ಲ. ಸ್ವಾಮಿ ಅಸೀಮಾನಂದನನ್ನು ಆರ್‌ಎಸ್‌ಎಸ್‌ನ ಸದಸ್ಯ ಎಂಬುದನ್ನು ರುಜುವಾತು ಗೊಳಿಸುವ ವಿಷಯದಲ್ಲೂ ಇದೇ ಕಷ್ಟವನ್ನು ಎದುರಿಸಬೇಕಾಗಬಹುದು.

ಆರ್‌ಎಸ್‌ಎಸ್ ತನ್ನ ಆರಂಭದಿಂದಲೂ ಈ ಬಗೆಯ ದೊಂದು ಕಾರ್ಯಾಚರಣೆಯ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಅದೊಂದು ಗುಪ್ತ ಸಂಘಟನೆ. ಅದರ ಕಾರ್ಯಕಾರಿ ಮಂಡಳಿ ಮಾತ್ರವೇ ಅಧಿಕೃತವಾಗಿ ತನ್ನ ಚಹರೆಗಳನ್ನು ಸಾರ್ವಜನಿಕಗೊಳಿಸಿರುತ್ತದೆ. ಅದಕ್ಕೆ ಪ್ರಚಾರಕರು, ಸಂಚಾಲಕರು ಇದ್ದು, ಅವರೆಲ್ಲ ಬಹಿರಂಗವಾಗಿಯೇ ತಮ್ಮನ್ನು ಆರ್‌ಎಸ್‌ಎಸ್‌ನ ಪೂರ್ಣಾವಧಿ ಕಾರ್ಯಕರ್ತರೆಂದು ತೋರಿಸಿಕೊಂಡಿರುತ್ತಾರೆ. ಆದರೆ ಆರ್‌ಎಸ್‌ಎಸ್‌ನ ವಿಸ್ತೃತವಾದ ಬೆಂಬಲಿಗ ನೆಲೆ ಅದರ ಅಘೋಷಿತ ಸದಸ್ಯರ ನಡುವೆ ಹರಡಿಕೊಂಡಿರುತ್ತದೆ. ಅಂತಹ ಅಘೋಷಿತ ಸದಸ್ಯರು ತಾವು ಹೊಂದಿರುವ ಆರ್‌ಎಸ್‌ಎಸ್ ಸದಸ್ಯತ್ವವನ್ನು ಬಹಿರಂಗಗೊಳಿಸಬಾರದು ಎನ್ನುವುದು ಮೊದಲೇ ಒಪ್ಪಂದವಾ ಗಿರುತ್ತದೆ.

ಈ ಮುಚ್ಚುಮರೆಯ ಸದಸ್ಯರ ಮೂಲಕವೇ ಸರ್ಕಾರಿ ಯಂತ್ರಾಂಗದಲ್ಲಿ, ಸಾರ್ವಜನಿಕ ಸಂಘಸಂಸ್ಥೆಗಳಲ್ಲಿ ತನ್ನ ಗುಪ್ತ ಅಜೆಂಡವನ್ನು ಆರ್‌ಎಸ್‌ಎಸ್ ಚಾಲ್ತಿಯಲ್ಲಿಟ್ಟಿರುತ್ತದೆ. ಇಂತಹ ಮುಚ್ಚು ಮರೆಯ ಸದಸ್ಯರು ಅಧಿಕೃತವಾಗಿ ಸಂಘಟನೆಯ ಭಾಗವಾಗಿದ್ದಾರೆ ಎನ್ನುವುದು ಸಂಘಟನಾ ಸಂರಚನೆಯ ಸೀಮಿತ ವಲಯಗಳಿಗೆ ಮಾತ್ರ ಗೊತ್ತಿರುತ್ತದೆ.

ಯಾವುದಾದರೊಂದು ಕೃತ್ಯದ ಹೆಗ್ಗಳಿಕೆಯನ್ನು ಬಹಿರಂಗವಾಗಿ ತಾನು ಹೊತ್ತುಕೊಳ್ಳಬೇಕೆಂದು ಅದು ಬಯಸಿದರೆ ಆ ಕೃತ್ಯವನ್ನೆಸಗಿದ ವ್ಯಕ್ತಿಗೆ ಆರ್‌ಎಸ್‌ಎಸ್ ಜೊತೆಗಿರುವ ಸಂಬಂಧವನ್ನು ಪ್ರಕಟಗೊಳಿಸಲಾಗುತ್ತದೆ. ಯಾವುದಾದರೊಂದು ಕೃತ್ಯ ಸಂಭವಿಸಿದಾಗ ಅದರಿಂದ ಶಾಸನಾತ್ಮಕ ಅಥವಾ ಸಾಮಾಜಿಕ ತೊಡಕುಗಳು ಎದುರಾಗಬಹುದೆಂದು ಆರ್‌ಎಸ್‌ಎಸ್‌ಗೆ ಅನಿಸಿದರೆ ಅಥವಾ ಆ ಕೃತ್ಯದ ಹೊಣೆಯನ್ನು ಬೇರೆಯವರ ಮೇಲೆ ಹೊರಿಸಿ ಗೂಬೆಕೂರಿಸಬೇಕೆಂದು ಅದು ಬಯಸಿದರೆ ಅಂತಹ ಸಂದರ್ಭದಲ್ಲಿ ಸಂಬಂಧ ವನ್ನು ಅದು ನಿರಾಕರಿಸುತ್ತದೆ. ಇದು ಆರ್‌ಎಸ್‌ಎಸ್ ಸಂಘಟನೆಗೆ ಸಂಬಂಧಪಟ್ಟ ಕಾರ್ಯತಂತ್ರ ಮಾತ್ರವೇನಲ್ಲ. ಬಹುಪಾಲು ಭೂಗತ ಸಂಘಟನೆಗಳು ಕಾರ್ಯಾಚರಣೆ ಮಾಡುವ ಸಾಮಾನ್ಯ ವಿಧಾನ ಇದು. ವ್ಯತ್ಯಾಸವೇನೆಂದರೆ ತಮ್ಮ ಸದಸ್ಯ ಪಟ್ಟಿಯನ್ನು, ಕಾರ್ಯಕಲಾಪ ಪದ ಬಹಿರಂಗ ವಿವರಣೆಯನ್ನು ಒದಗಿಸದ ಬಹುಪಾಲು ಭೂಗತ ಸಂಘಟನೆಗಳು ಸರ್ಕಾರದಿಂದ ನಿಷೇಧಕ್ಕೊಳಗಾಗಿ ರಾಷ್ಟ್ರ ವಿರೋಧಿ ಸಂಘಟನೆಗಳೆಂಬ ಹಣೆಪಟ್ಟಿ ಹೊತ್ತಿರುತ್ತವೆ. ಆದರೆ ಆರ್‌ಎಸ್‌ಎಸ್ ತುರ್ತು ಪರಿಸ್ಥಿತಿಯ ಸಂದರ್ಭದ ಅಲ್ಪ ಕಾಲಾವಧಿಯನ್ನು ಹೊರತು ಪಡಿಸಿದರೆ ಅದನ್ನು ಕಾನೂನು ವಿರೋಧಿ ಭೂಗತ ಸಂಘಟನೆ ಎಂದು ನಿಷೇಧಿಸಲಾಗಿಲ್ಲ.

ಭಯೋತ್ಪಾದಕ ಸಂಘಟನೆಗಳಿಗೂ, ಆರ್‌ಎಸ್‌ಎಸ್‌ಗೂ ಇರುವ ಮುಖ್ಯ ವ್ಯತ್ಯಾಸಗಳೇನೆಂದು ಹುಡುಕಿದರೆ ಅಂತಹ ಮೂಲಭೂತ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಜನರ ನಡುವೆ ವಿಚ್ಛಿದ್ರಕಾರಿ ಸಂಗತಿಗಳನ್ನು ಹರಡುವುದು, ಜನವಿರೋಧಿ ಕಾರ್ಯಕ್ರಮಗಳನ್ನು ಪ್ರಚಾರಗೊಳಿಸುವುದು, ಹಿಂಸಾಚಾರ ಸಂಘಟಿಸುವುದು, ಕೋಮುದ್ವೇಷ ನೆಲೆಗೊಳ್ಳುವಂತೆ ಜನರನ್ನು ವಿಭಜಿಸುವುದು ಹಾಗೂ ಬಹುಸಂಖ್ಯಾತ ಹಿಂದೂ ಸಮಾಜದ ಸಂಸ್ಕೃತಿ ರಕ್ಷಣೆಯ ಹೆಸರಲ್ಲಿ ಸಮಾಜದ ಪಟ್ಟಭದ್ರ ಮೇಲ್ಜಾತಿ ಶ್ರೀಮಂತವರ್ಗದ ಹಿತಾಸಕ್ತಿಯನ್ನು ಕಾಪಾಡುವುದು ಅದರ ಮುಖ್ಯ ಗುರಿಗಳು. ಇದನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಅದು ನಡೆಸಿಕೊಂಡು ಬಂದಿದೆ. ದೇಶಭಕ್ತಿ ಮತ್ತು ಹಿಂದೂತ್ವಗಳನ್ನು ಅವಿಭಾಜ್ಯ ವಿಷಯಗಳೆಂಬಂತೆ ಬಿಂಬಿಸುತ್ತಾ ಹಿಂದೂ ಸಂಸ್ಕೃತಿಯ ರಕ್ಷಣೆ ಎಂದರೆ ರಾಷ್ಟ್ರದ ಸಂರಕ್ಷಣೆ ಎಂಬ ಭ್ರಾಂತಿಯುತ ನಿಲುವನ್ನು ಜನರ ನಡುವೆ ಅದು ಹಬ್ಬಿಸುತ್ತಾ ಬಂದಿದೆ. ಅದಕ್ಕೆ ಭಾರತದ ಸಂವಿಧಾನದ ಬಗ್ಗೆ ನಿಷ್ಠೆ ಇಲ್ಲ. ಭಾರತದ ರಾಷ್ಟ್ರ ಧ್ವಜವನ್ನು ಗೌರವಿಸುವುದಿಲ್ಲ. ರಾಷ್ಟ್ರೀಯ ದಿನಾಚರಣೆಗಳನ್ನೂ ಕೂಡ ಅದು ಆಚರಿಸುವುದಿಲ್ಲ. ಹೀಗಿದ್ದಾಗಲೂ ಅದನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಉಳಿದುಕೊಂಡು ಬರಲು ಬಿಡಲಾಗಿದೆ.

ಇದಕ್ಕೆ ಮುಖ್ಯ ಕಾರಣವೇನೆಂದರೆ ರಾಜಕೀಯ ಪಕ್ಷಗಳಲ್ಲಿ ಬಹುಸಂಖ್ಯಾತರ ಧರ್ಮವೆಂದು ಬಿಂಬಿಸಲಾಗಿರುವ ಹಿಂದೂ ಸಮೂಹಗಳ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆಂಬ ಭಯ. ಈ ಭಯವನ್ನು ಬಂಡವಾಳ ಮಾಡಿಕೊಂಡ ಆರ್‌ಎಸ್‌ಎಸ್ ಭಾರತ

ಗಾಂಧೀಜಿಯನ್ನು ಹತ್ಯೆ ಮಾಡಿದ ನಾಥೂ ರಾಮ್ ಗೋಡ್ಸೆ ಆರ್ ಎಸ್‌ಎಸ್ ಸದಸ್ಯನಾಗಿ ರಲಿಲ್ಲ ಎಂದು ಅದು ವಾದಿಸಿತ್ತು. ನಾಥೂ ರಾಮ್ ಗೋಡ್ಸೆಗೆ ಆರ್‌ಎಸ್‌ಎಸ್ ಸಂಘ ಟನೆಯ ಜೊತೆ ನಿಕಟ ಸಂಬಂಧವಿತ್ತು ಹಾಗೂ ಆ ಸಂಘಟನೆಯ ಗುಪ್ತ ಹುನ್ನಾರದ ಅಂಗವಾ ಗಿಯೇ ಆತ ಗಾಂಧೀ ಜಿಯ ಹತ್ಯೆಯ ಸಂಚನ್ನು ರೂಪಿಸಿದ್ದ ಎಂಬ ಬಗ್ಗೆ ಪರೋಕ್ಷ ವಾದ ಹಲವಾರು ಪುರಾವೆಗಳು ಲಭ್ಯವಿವೆ ಯಾದರೂ ಆತ ಆರ್ ಎಸ್‌ಎಸ್ ಸದಸ್ಯ ನಾಗಿದ್ದ ಎಂಬುದಕ್ಕೆ ಪ್ರತ್ಯಕ್ಷ ದಾಖಲಾತಿ ಸಿಕ್ಕಿಲ್ಲ. ಸ್ವಾಮಿ ಅಸೀ ಮಾನಂದ ನನ್ನು ಆರ್ ಎಸ್‌ಎಸ್‌ನ ಸದಸ್ಯ ಎಂಬುದನ್ನು ರುಜುವಾತು ಗೊಳಿಸುವ ವಿಷಯದಲ್ಲೂ ಇದೇ ಕಷ್ಟವನ್ನು ಎದುರಿ ಸಬೇಕಾಗಬಹುದು.

ವನ್ನು ಕೋಮುವಾದಿ ವಿಭಜನೆಗೆ ಹಾಗೂ ಪ್ರಕ್ಷೋಭ ಕಾರಕ ಸಾಮಾಜಿಕ ವಿಘಟನೆಗೆ ಗುರಿ ಮಾಡುತ್ತಾ ಬರುತ್ತಿದೆ. ಹಾಗೆ ನೋಡಿದರೆ ಇತ್ಯಂತ ಹೆಚ್ಚು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಿರುವುದು ಹಾಗೂ ಅದಕ್ಕೆ ಪ್ರತಿಕ್ರಿಯೆಯಾಗಿ ಮತ್ತಷ್ಟು ಭಯೋ ತ್ಪಾದಕ ಕೃತ್ಯಗಳನ್ನು ಹುಟ್ಟುಹಾಕಿರುವುದು ಈ ಆರ್‌ಎ ಸ್‌ಎಸ್ ಎಂಬ ಸಂಸ್ಥೆಯೇ ಆಗಿದೆ. ಸಾಮಾನ್ಯವಾಗಿ ಭಯೋತ್ಪಾದನೆಯ ವಿಷಯ ಬಂದಾಗ ನಮ್ಮ ಕಣ್ಣೆ ದುರಿಗೆ ಬರುವುದು ಮುಸ್ಲಿಂ ಸಮುದಾಯಕ್ಕೆ ಸೇರಿದ ಭೂಗತ ಸಂಘಟನೆಗಳು. ಯಾವುದೇ ಭಾಗದಲ್ಲಿ ಬಾಂಬ್ ಸ್ಫೋಟದಂತಹ ದುಷ್ಕೃತ್ಯಗಳು ನಡೆದಾಗ ಅನುಮಾನದ ಮೇಲೆ ಬಂಧನಕ್ಕೊಳಗಾಗುವವರೂ ಕೂಡ ಅಂತಹ ಸಂಘಟನೆಗಳಿಗೆ ಸಂಬಂಧಪಟ್ಟ ವ್ಯಕ್ತಿಗಳಾಗಿರುತ್ತಾರೆ ಮತ್ತು ಅವರೆಲ್ಲಾ ತಪ್ಪದೇ ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ.

ಸರ್ಕಾರಿ ಯಂತ್ರಾಂಗ ಹಾಗೂ ಪೊಲೀಸ್ ಇಲಾಖೆ ಒಂದು ರೀತಿಯ ಕೋಮುವಾದಿ ಪೂರ್ವಾಗ್ರಹದಿಂದಲೇ ಈ ಪ್ರಕರಣಗಳಲ್ಲಿ ವ್ಯವಹರಿಸುತ್ತದೆ. ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ನಡೆದ ಕೋಮುಗಲಭೆಗಳ ಸಮಯದಿಂದಲೂ ಈ ಕೋಮುವಾದಿ ಪೂರ್ವಾಗ್ರಹಪೀಡಿತ ಭಾವನೆ ಸರ್ಕಾರಿ ಸಶಸ್ತ್ರ ಪಡೆಗಳ ವಲಯದಲ್ಲಿ ಬಲಗೊಳ್ಳುತ್ತಲೇ ನಡೆದಿದೆ. ಪೂರ್ವಾಗ್ರಹದಿಂದ ಪ್ರೇರಿತವಾದ ಸರ್ಕಾರಿ ಯಂತ್ರಾಂಗದಿಂದ ಅಂಚಿಗೆ ನೂಕಲ್ಪಟ್ಟ ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ತಮ್ಮ ಅಸಹಾಯಕತೆಯನ್ನು, ಆಕ್ರೋಶವನ್ನು ವ್ಯಕ್ತಪಡಿಸುವುದಕ್ಕೆ ಕಾನೂನುಬದ್ಧ ನೈಜ ಅವಕಾಶಗಳು ದೊರೆಯದೇ ಹೋದ ಸಂದರ್ಭದಲ್ಲಿ ಕಾನೂನು ವಿರೋಧಿಯಾದ ಕೃತ್ಯಗಳಲ್ಲಿ ತೊಡಗಿಕೊಳ್ಳುವುದು, ಭೂಗತ ಸಂಘಟನೆಗಳನ್ನು ರಚಿಸಿಕೊಳ್ಳುವುದು ಹೆಚ್ಚುತ್ತಿದೆ.

ಆರ್‌ಎಸ್‌ಎಸ್‌ನಂತಹ ಸಂಸ್ಥೆಗೆ ಇದು ಬಹಳ ಹಿತಕಾರಿಯಾದ ಬೆಳವಣಿಗೆ. ಯಾವುದೋ ಒಂದು ನಿರ್ದಿಷ್ಟ ಕೋಮಿನ ಜನರನ್ನು ಅನ್ಯರಂತೆ ಬಿಂಬಿಸುವುದಕ್ಕೆ, ಅವರನ್ನು ರಾಷ್ಟ್ರದ್ರೋಹಿಗಳಂತೆ ಚಿತ್ರಿಸುವುದಕ್ಕೆ ಇಂತಹ ಬೆಳವಣಿಗೆಗಳು ಅದಕ್ಕೆ ಅತ್ಯಗತ್ಯವಾಗಿ ಬೇಕು. ಹಿಂದೂ ಎನಿಸಿಕೊಂಡಿರುವ ಜನಸಮುದಾಯಗಳನ್ನು ತನ್ನ ಕೋಮುವಾದಿ ರಾಜಕಾರಣದೆಡೆಗೆ ಸೆಳೆದುಕೊಳ್ಳಲಿಕ್ಕಾಗಿ ಅದು ವರ್ಷಾನುಗಟ್ಟಲೆ ನಡೆಸುವ ಸುಳ್ಳುಗಳನ್ನು ಆಧರಿಸಿದ ಪ್ರಚಾರಕ್ಕೆ ಹೋಲಿಸಿದರೆ ಜನನಿಬಿಡ ಸ್ಥಳಗಳಲ್ಲಿ ಸ್ಫೋಟಗೊಂಡು ಅಮಾಯಕರನ್ನು ಬಲಿತೆಗೆದುಕೊಳ್ಳುವ ಒಂದು ಬಾಂಬ್ ಹೆಚ್ಚು ಪರಿಣಾಮಕಾರಿ. ಸಾವು, ನೋವುಗಳ ಸನ್ನಿವೇಶದಲ್ಲಿ ಆತಂಕಿತ ಮನಃಸ್ಥಿತಿಗೆ ತಳ್ಳಲ್ಪಟ್ಟ ಸಾರ್ವಜನಿಕ ಮನಸ್ಸು ಇಂತಹ ದುಷ್ಕೃತ್ಯವನ್ನು ನಡೆಸುವವರ ಬಗ್ಗೆ ಆಕ್ರೋಶದ ಭಾವನೆ ತಳೆಯುವುದು ಸಹಜವಾದುದು. ಆ ಬಗೆಯ ಅಸಮಾಧಾನವನ್ನು ಹಾಗೂ ಆಕ್ರೋಶವನ್ನು ಸೇಡಿನ ಕಾರ್ಯಾಚರಣೆಗೆ ತಿರುಗಿಸುವುದು ಕೋಮುವಾದಿ ಸಂಘಟನೆಗಳಿಗೆ ಸುಲಭದ ಕೆಲಸ.

ಹಾಗಾಗಿ ಮುಸ್ಲಿಂ ಭೂಗತ ಸಂಘಟನೆಗಳು ನಡೆಸುವ ಭಯೋತ್ಪಾದಕ ದುಷ್ಕೃತ್ಯಗಳನ್ನು ಹಿಂದೂ ಕೋಮುವಾದಿ ಸಂಘಟನೆಯಾಗಿರುವ ಆರ್‌ಎಸ್‌ಎಸ್ ಗುಪ್ತವಾಗಿ ಬಯಸುತ್ತದೆ ಮಾತ್ರವಲ್ಲದೆ ಅಂತಹ ದುಷ್ಕೃತ್ಯಗಳ ಏರ್ಪಾಡಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಕುಮ್ಮಕ್ಕು ನೀಡುತ್ತದೆ. ಸಂಜೋತಾ ಎಕ್ಸ್‌ಪ್ರೆಸ್, ಮಾಲೆಗಾಂವ್, ಮೆಕ್ಕಾ ಮಸೀದಿ ಮುಂತಾದ ಕಡೆ ಅದು ನಡೆಸಿರಬಹುದಾದ ಬಾಂಬ್ ಸ್ಫೋಟದ ಕಾರ್ಯಾಚರಣೆಯು ದೇಶದಲ್ಲಿ ಮತ್ತಷ್ಟು ಭಯೋತ್ಪಾದಕ ಚಟುವಟಿಕೆಯನ್ನು ಹುಟ್ಟಿಹಾಕುವ ತಂತ್ರಗಾರಿಕೆಯನ್ನು ಒಳಗೊಂಡಿದೆ. ನೋಡುವವರಿಗೆ ಮುಸ್ಲಿಂ ಭಯೋತ್ಪಾದನೆಗೆ ವ್ಯಗ್ರಗೊಂಡ ದೇಶಭಕ್ತರ ಗುಂಪು ವ್ಯಕ್ತಪಡಿಸಿರುವ ಎದಿರೇಟಿನ ಕೃತ್ಯವಿದು ಎಂದು ಭಾಸವಾಗಲು ಸಾಧ್ಯವಿದೆಯಾದರೂ ಇದು ಮುಖ್ಯವಾಗಿ ಮುಸ್ಲಿಂ ಭೂಗತ ಸಂಘಟನೆಗಳಿಂದ ಹೆಚ್ಚಿನ ಪ್ರತೀಕಾರಾತ್ಮಕ ದುಷ್ಕೃತ್ಯಗಳನ್ನು ಪ್ರಚೋದಿಸಲು ಮಾಡಿರುವ ಸಂಚಾಗಿದೆ. ಹತಾಶಗೊಂಡಿರುವ ತರುಣರನ್ನು ಇಂತಹ ಭಯೋತ್ಪಾದಕ ಚಟುವಟಿಕೆಗಳಲ್ಲಿ ಹೆಚ್ಚುಹೆಚ್ಚು ತೊಡಗುವಂತೆ ಮಾಡಬೇಕೆಂಬುದು ಇಂತಹ ದುಷ್ಕೃತ್ಯಗಳ ಉದ್ದೇಶವಾಗಿದೆ.

ಭಯೋತ್ಪಾದನೆ, ಪ್ರತಿಭಯೋತ್ಪಾದನೆ ಎರಡೂ ಕೂಡ ಕೋಮುವಾದಿ ಸಂಘಟನೆಗಳ ಕಾರ್ಯಯೋಜನೆಯ ಅಂಗವಾಗಿವೆ. ಮುಸ್ಲಿಂ ಭಯೋತ್ಪಾದಕರನ್ನು ಎದುರಿಸುವುದಕ್ಕೆ ಹಿಂದೂ ಭಯೋತ್ಪಾದನೆ ಆರಂಭಿಸಬೇಕು ಎಂಬ ಪ್ರತೀಕಾರಾತ್ಮಕ ಅಭಿಪ್ರಾಯವನ್ನು ಬಲಗೊಳಿಸುವುದಕ್ಕೆ ಕೋಮುವಾದಿ ರಾಜಕಾರಣ ಪ್ರಯತ್ನಿಸುತ್ತಾ ಬಂದಿದೆ. ಭಯೋತ್ಪಾದಕ ದುಷ್ಕೃತ್ಯಗಳು ಸಮಾಜವನ್ನು ಅಭದ್ರತೆಯ ಮನೋಭಾವದಲ್ಲಿಡುತ್ತವೆ. ಇಂತಹ ಅಭದ್ರತೆಯ ಮನೋಸ್ಥಿತಿಯಲ್ಲಿ ಸಮುದಾಯಗಳು ಕೋಮು ಆಧಾರಿತವಾಗಿ ಹೆಚ್ಚುಹೆಚ್ಚು ಸಂಘಟಿತ ಗೊಳ್ಳುವ ಮೂಲಕ ಹುಸಿ ಭದ್ರತೆಯ ಭಾವನೆಯನ್ನು ಪಡೆದುಕೊಳ್ಳುತ್ತವೆ. ವಾಸ್ತವವಾಗಿ ನವ ಭಾರತ್‌ನಂತಹ ಭೂಗತ ಸಂಘಟನೆಗಳು ಸಂಘಟಿಸಿರುವ ಭಯೋತ್ಪಾದಕ ಚಟುವಟಿಕೆಗಳಿಗೆ ಮುಸ್ಲಿಂ ಭಯೋತ್ಪಾದನೆಯನ್ನು ಕೊನೆಗೊಳಿಸುವ ಉದ್ದೇಶವಿಲ್ಲ. ಬದಲಾಗಿ ಮುಸ್ಲಿಮರನ್ನು ಗಾಬರಿಗೊಳಿಸಿ, ಅವರು ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮೂಲಭೂತವಾದಿ ಸಂಘಟನೆಗಳ ತೆಕ್ಕೆಗೆ ಹೋಗಿ ಸೇರಿಕೊಳ್ಳಲಿ ಎಂಬ ಉದ್ದೇಶವನ್ನೇ ಹೊಂದಿವೆ. ಮುಸ್ಲಿಮರು ಹೆಚ್ಚು ಮೂಲಭೂತವಾದಿಗಳಾಗಿ ಮಾರ್ಪಟ್ಟರೆ ಅದರ ಲಾಭ ಮುಸ್ಲಿಮರಿಗಲ್ಲ, ಬದಲಾಗಿ ಹಿಂದೂ ಕೋಮುವಾದಿಗಳಿಗೆ.

ಭಯೋತ್ಪಾದನೆ, ಪ್ರತಿಭಯೋತ್ಪಾದನೆ ಎರಡೂ ಕೂಡ ಕೋಮುವಾದಿ ಸಂಘಟನೆಗಳ ಕಾರ್ಯಯೋಜನೆಯ ಅಂಗವಾಗಿವೆ. ಮುಸ್ಲಿಂ ಭಯೋತ್ಪಾದಕರನ್ನು ಎದುರಿಸುವುದಕ್ಕೆ ಹಿಂದೂ ಭಯೋತ್ಪಾದನೆ ಆರಂಭಿಸಬೇಕು ಎಂಬ ಪ್ರತೀಕಾರಾತ್ಮಕ ಅಭಿಪ್ರಾಯವನ್ನು ಬಲಗೊಳಿಸುವುದಕ್ಕೆ ಕೋಮುವಾದಿ ರಾಜಕಾರಣ ಪ್ರಯತ್ನಿಸುತ್ತಾ ಬಂದಿದೆ. ಭಯೋತ್ಪಾದಕ ದುಷ್ಕೃತ್ಯಗಳು ಸಮಾಜವನ್ನು ಅಭದ್ರತೆಯ ಮನೋಭಾವದಲ್ಲಿಡುತ್ತವೆ. ಇಂತಹ ಅಭದ್ರತೆಯ ಮನೋಸ್ಥಿತಿಯಲ್ಲಿ ಸಮುದಾಯಗಳು ಕೋಮು ಆಧಾರಿತವಾಗಿ ಹೆಚ್ಚುಹೆಚ್ಚು ಸಂಘಟಿತಗೊಳ್ಳುವ ಮೂಲಕ ಹುಸಿ ಭದ್ರತೆಯ ಭಾವನೆಯನ್ನು ಪಡೆದುಕೊಳ್ಳುತ್ತವೆ. ವಾಸ್ತವವಾಗಿ ನವಭಾರತ್‌ನಂತಹ ಭೂಗತ ಸಂಘಟನೆಗಳು ಸಂಘಟಿಸಿರುವ ಭಯೋತ್ಪಾದಕ ಚಟುವಟಿಕೆಗಳಿಗೆ ಮುಸ್ಲಿಂ ಭಯೋತ್ಪಾದನೆಯನ್ನು ಕೊನೆಗೊಳಿಸುವ ಉದ್ದೇಶವಿಲ್ಲ. ಬದಲಾಗಿ ಮುಸ್ಲಿಮರನ್ನು ಗಾಬರಿಗೊಳಿಸಿ, ಅವರು ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮೂಲಭೂತವಾದಿ ಸಂಘಟನೆಗಳ ತೆಕ್ಕೆಗೆ ಹೋಗಿ ಸೇರಿಕೊಳ್ಳಲಿ ಎಂಬ ಉದ್ದೇಶವನ್ನೇ ಹೊಂದಿವೆ.

ಮುಸ್ಲಿಮರು ಹೆಚ್ಚು ಮೂಲಭೂತವಾದಿಗಳಾಗಿ ಮಾರ್ಪಟ್ಟರೆ ಅದರ ಲಾಭ ಮುಸ್ಲಿಮರಿಗಲ್ಲ, ಬದಲಾಗಿ ಹಿಂದೂ ಕೋಮುವಾದಿಗಳಿಗೆ. ಎದುರಾಳಿ ಎಂದು ಬಿಂಬಿತವಾಗಿರುವ ಸಮುದಾಯ ಹೆಚ್ಚು ಸಂಘಟಿತಗೊಂಡಂತೆ, ಪ್ರತ್ಯೇಕಿತಗೊಂಡಂತೆ ಕಂಡೊಡನೆ ಅದಕ್ಕೆ ಅನ್ಯವೆಂದು, ಪ್ರತಿಸ್ಪರ್ಧಿಯೆಂದು ಭಾವಿಸುವ ಮನೋಸ್ಥಿತಿಯನ್ನು ಹೊಂದಿರುವ ಸಮುದಾಯಕ್ಕೆ ಸೇರಿರುವ ಜನರು ಹೆಚ್ಚು ಸಂಖ್ಯೆಯಲ್ಲಿ ತಾವು ಸಂಘಟಿತರಾಗಲು ಸಿದ್ಧರಾಗುತ್ತಾರೆ. ಇದು ಧಾರ್ಮಿಕ ಸಮುದಾಯಗಳ ನಡುವೆ ಸುಸ್ಪಷ್ಟವಾದ ಗೆರೆಯನ್ನು ಕೊರೆದು, ಮಾನಸಿಕ ದೂರದ ಕಂದರಕ್ಕೆ ಕಾರಣವಾಗುತ್ತದೆ. ಕೋಮುವಾದಿ ರಾಜಕಾರಣವು ಈ ಕಂದರ ನಿರ್ಮಾಣದ ಉದ್ದೇಶಕ್ಕಾಗಿಯೇ ಇಷ್ಟೊಂದು ಬಗೆಯ ಪ್ರಯತ್ನಗಳಿಗೆ ಮುಂದಾಗಿದೆ. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಕಟ್ಟಡವನ್ನು ಕೆಡವಿದ್ದು ಅದರ ಒಂದು ಬಹಿರಂಗ ಭಯೋತ್ಪಾದಕ ಕೃತ್ಯ. ಅದಕ್ಕೆ ಪ್ರತಿಕ್ರಿಯೆಯಾಗಿ ನಂತರದ ಕೆಲವು ವರ್ಷಗಳಲ್ಲಿ ದೇಶದ ಹಲವು ಭಾಗಗಳಲ್ಲಿ ಕೋಮುದ್ವೇಷದ ಉದ್ವಿಗ್ನತೆ ನೆಲೆಗೊಂಡಿತ್ತು. ನೂರಾರು ಪ್ರಾಣಗಳನ್ನು ಬಲಿತೆಗೆದುಕೊಂಡ ಕೋಮು ಗಲಭೆಗಳು ಸಂಭವಿಸಿದವು.

ಕ್ರಮೇಣ ದೇಶದ ಜನ ಬಾಬರಿ ಮಸೀದಿಯ ಧ್ವಂಸದ ನಂತರದಲ್ಲಿ ಏರ್ಪಟ್ಟಿದ್ದ ಬಿಗುವಿನ ವಾತಾವರಣವನ್ನು ಮರೆಯತೊಡಗಿದ್ದಾರೆಂದು ಕೋಮುವಾದಿಗಳಿಗೆ ಭಾಸವಾಗತೊಡಗಿತು. ಈ ಸಂದರ್ಭದಲ್ಲಿ ಪಾಕಿಸ್ತಾನದಿಂದ ಪ್ರಾಯೋಜಿತವಾದ ಹಲವು ವಿಧ್ವಂಸಕ ಕೃತ್ಯಗಳು ನಡೆದವು. ಇವುಗಳಲ್ಲಿ ನಿಜವಾಗಿ ಪಾಕಿಸ್ತಾನ ಭಯೋತ್ಪಾದಕರಿಂದ ನಡೆದ ಕೃತ್ಯಗಳು ಎಷ್ಟು, ಮುಸ್ಲಿಂ ಸಮುದಾಯದ ಮೇಲೆ ಹಗೆ ಸಾಧಿಸುವಂತೆ ಪ್ರಚೋದಿಸಲಿಕ್ಕಾಗಿ ಪಾಕಿಸ್ತಾನಿ ಭಯೋತ್ಪಾದಕ ಗುಂಪುಗಳ ಸಹಯೋಗದಲ್ಲಿ ಅಥವಾ ಸ್ವತಃ ತಾವೇ ಅದರ ಮುಖವಾಡದಲ್ಲಿ ಹಿಂದೂ ಭೂಗತ ಸಂಘಟನೆಗಳು ನಡೆಸಿದ ದುಷ್ಕೃತ್ಯಗಳು ಎಷ್ಟು

(49ನೇ ಪುಟಕ್ಕೆ)

ಕಾನೂನು-ಸುವ್ಯವಸ್ಥೆಯ ಗೆಲುವು

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ನಿತೀಶ್ ಕುಮಾರ್ ಪಟ್ನಾದಲ್ಲಿ 2005ರಲ್ಲಿ ಅಧಿಕಾರದ ಗದ್ದುಗೆ ಏರಿದರು. ಅಂದು ಬಿಹಾರದಲ್ಲಿನ ಅಪರಾಧವನ್ನು ತಹ ಬಂದಿಗೆ ತರುವುದು ಅವರ ಮೊದಲ ಸವಾಲಾಗಿತ್ತು. ಬಿಹಾರ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಕಂಡು ಬಂದ ಸುಧಾರಣೆ ಐದು ವರ್ಷದ ನಂತರ ಅವರು ಸಾಧಿಸಿದ ಅದ್ಭುತ ಗೆಲುವಿನ ಹಿಂದೆ ಕೆಲಸ ಮಾಡಿದೆ. ನಿಜಕ್ಕೂ ನಿತೀಶ್ ಪ್ರಶಂಸೆಗೆ ಅರ್ಹರೇ! ಆದರೆ ನಿತೀಶ್ ಅವರ ಈಗಿನ ಗೆಲುವಿನ ಒಗಟು ಬಿಡಿಸಿದರೆ ಬೇರೆಯದೇ ಚಿತ್ರಣ ಹೊರಹೊಮ್ಮುತ್ತದೆ.

ಭಾರತದಲ್ಲಿ ನಡೆಯುವ ಅಪರಾಧಗಳ ಬಗ್ಗೆ ಅಧ್ಯಯನ ನಡೆಸುವ ಭಾರತ ಸರ್ಕಾರದ ರಾಷ್ಟ್ರೀಯ ಅಪರಾಧ ವರದಿಗಳ ಬ್ಯೂರೋ (ಎನ್‌ಸಿಆರ್‌ಬಿ)ದ 2008ರ ವರದಿಯ ಪ್ರಕಾರ ಬಿಹಾರದಲ್ಲಿ ಆ ವರ್ಷ 3,139 ಹತ್ಯೆಗಳು ನಡೆದಿವೆ. ಅಂದರೆ ದಿನವೊಂದಕ್ಕೆ 9 ಮಂದಿ ಕೊಲೆಯಾಗಿದ್ದಾರೆ. ಆದರೆ ಇತರ ಸರ್ಕಾರಿ ವರದಿಗಳಂತೆ ಎನ್‌ಸಿಆರ್‌ಬಿ ವರದಿಯ ಬಗ್ಗೆ ಜನತೆಗೆ ಸ್ಪಷ್ಟ ಮಾಹಿತಿ ಲಭ್ಯವಾಗುವುದರೊಳಗೆ ವರುಷಗಳು ಉರುಳಿರುತ್ತವೆ. ಹೀಗಾಗಿ ನಮಗೆ 2009 ಮತ್ತು 2010ರಲ್ಲಿ ಬಿಹಾರದಲ್ಲಿ ನಡೆದಿರುವ ಕೊಲೆಗಳ ಬಗ್ಗೆ ಇನ್ನೂ ಮಾಹಿತಿ ಲಭ್ಯವಿಲ್ಲ.

ಮನುಷ್ಯರು ಮನುಷ್ಯರನ್ನು ಕೊಲೆಗೈಯುವುದು ಅತ್ಯಂತ ಕ್ರೂರವಾದ ಅಪರಾಧಗಳಲ್ಲಿ ಒಂದು. 2004ರಿಂದ 2008ರ ನಡುವೆ ನಿತೀಶ್ ಕುಮಾರ್ ತಮ್ಮ ಅಧಿಕಾರದ ಅರ್ಧ ಅವಧಿಯನ್ನು ಕಳೆದಿದ್ದರು. ನಿತೀಶ್ ಅಧಿಕಾರಕ್ಕೆ ಬರುವುದಕ್ಕೆ ಒಂದು ವರ್ಷಕ್ಕೆ ಮುಂಚೆ ಅಂದರೆ 2004ರಲ್ಲಿ ಬಿಹಾರದಲ್ಲಿ 3,861 ಮಂದಿ ಕೊಲೆಯಾಗಿದ್ದರು. ಎರಡು ವರ್ಷಗಳ ಬಳಿಕ ನಿತೀಶ್ ಅವರ ಅಧಿಕಾಗಾವಧಿಯಲ್ಲಿ ಹೆಚ್ಚು ಕಮ್ಮಿ ಅಷ್ಟೇ ಕೊಲೆಗಳು ನಡೆದಿವೆ. ಈ ವಿಚಾರದಲ್ಲಿ ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ ಬಿಹಾರಕ್ಕೆ ಸ್ವರ್ಣ ಅಥವಾ ಬೆಳ್ಳಿ ಪದಕ ಲಭಿಸದೇ ಹೋದರೂ ಕಂಚಿನ ಪದಕವಂತೂ ಗ್ಯಾರಂಟಿ! ಅಂದರೆ ಕೊಲೆಗಳ ಪ್ರಮಾಣದಲ್ಲಿ ಸ್ವಲ್ಪ ಮಾತ್ರ ಇಳಿಮುಖವಾಗಿದೆ. ಲಾಲೂ ಅವರ ಬೆಂಬಲಿಗರು ಕೇಳುತ್ತಿರುವುದೂ ಇದೇ ಪ್ರಶ್ನೆಯನ್ನು.

ಕಾನೂನು ಸುವ್ಯವಸ್ಥೆಯ ಬಗೆಗಿನ ಈ ಮಾಹಿತಿ ಕಣ್ಣ ಮುಂದೆಯೇ ಇದ್ದರೂ ಬಿಹಾರದ ಜನ ನಿತೀಶ್ ಆಡಳಿತಾವಧಿಯಲ್ಲಿ ಅಪರಾಧಗಳು ಕಡಿಮೆಯಾಗಿವೆ ಎಂದು ಯಾಕೆ ನಂಬಿದರು?

ಇದಕ್ಕೆ ಉತ್ತರ ಇಲ್ಲಿದೆ. ನಿತೀಶ್ ಅಧಿಕಾರ ವಹಿಸಿಕೊಂಡ ನಂತರ ಹಣಕ್ಕಾಗಿ ಅಪಹರಣ ಮಾಡುವ ಅಪರಾಧಗಳ ಕೇಸುಗಳನ್ನು ದಾಖಲು ಮಾಡುವುದನ್ನು ಕಡಿಮೆ ಮಾಡಲಾಯಿತು. ಈ ಸಂಬಂಧ 2004ರಲ್ಲಿ 411ಕೇಸುಗಳು ದಾಖಲಾಗಿದ್ದರೆ, 2005ರಲ್ಲಿ 251ಕೇಸುಗಳು ದಾಖಲಾಗಿದ್ದವು. 2008ರ ವೇಳೆಗೆ ಕೇವಲ ವಾರ್ಷಿಕ 66ಕೇಸುಗಳು ಮಾತ್ರ ದಾಖಲಾದವು. ಅದೇ ರೀತಿ ಹೆದ್ದಾರಿಯ ಕಳ್ಳತನದ ಪ್ರಕರಣಗಳು ಕೂಡ 2004ರಲ್ಲಿ 1,875 ದಾಖಲಾಗಿದ್ದರೆ, 2005ರಲ್ಲಿ 1,310 ಹಾಗೂ 2008ರಲ್ಲಿ 897ಪ್ರಕರಣಗಳು ಮಾತ್ರ ದಾಖಲಾದವು. ಇದರ ಮರ್ಮವನ್ನು ಅರಿತುಕೊಳ್ಳಲು ಈ ಅಪರಾಧಗಳ ಲಕ್ಷಣಗಳನ್ನು ವಿಶ್ಲೇಷಿಸೋಣ. ಪೊಲೀಸ್ ಅಥವಾ ಜೈಲುಗಳಿಲ್ಲದ ಯಾವುದಾದರೂ ಸ್ಥಳ ಈ ಜಗತ್ತಿನಲ್ಲಿದೆಯೇ? ಅನವಶ್ಯಕವಾದರೂ ಅಪರಾಧ, ಆಹಾರ, ನೀರು ಮತ್ತು ಗಾಳಿಯಂತೆ ಎಲ್ಲ ಸಮಾಜಗಳಲ್ಲಿಯೂ ಇದ್ದೇ ಇರುತ್ತದೆ. ಕೊಲೆ ವ್ಯಕ್ತಿ ಕೇಂದ್ರಿತವಾಗಿದ್ದರೆ, ಅಪಹರಣ ಸಮುದಾಯ ಕೇಂದ್ರಿತವಾಗಿರುತ್ತದೆ.

ಅಪರಾಧ, ಅಪರಾಧಿಗಳು ಮತ್ತು ಸಮಾಜದ ನಡುವಿನ ಸಂಬಂಧ ವಿಶಿಷ್ಟವಾದುದು. ಜಗತ್ತಿನಾದ್ಯಂತ ಆಸ್ತಿ ಕಲಹ ಅಥವಾ ಲೈಂಗಿಕ ಸಂಬಂಧಗಳ ಕಾರಣಗಳಿಗಾಗಿ ಬಹುತೇಕ ಕೊಲೆಗಳು ನಡೆಯುತ್ತವೆ. ಆಸ್ತಿಗಾಗಿ ಮಗ ತಂದೆಯನ್ನು ಕೊಲ್ಲುವುದು, ತಮ್ಮ ಅಣ್ಣನನ್ನು ಕೊಲ್ಲುವುದು ಭಾರತಕ್ಕೆ ಹೊಸದೇನಲ್ಲ. ಭಾರತದ ಗ್ರಾಮೀಣ ಪ್ರದೇಶದಲ್ಲಿ ಆಸ್ತಿಗಾಗಿ ಬಹಳಷ್ಟು ಹತ್ಯೆಗಳು ನಡೆಯುತ್ತವೆ. ಓರ್ವ ಕಳ್ಳ ತನ್ನ ಬಲಿಪಶುಗಳನ್ನು ಕೊಲೆ ಮಾಡದೆ ಬಿಡುವ ಸಂದರ್ಭಗಳು ಸಾಕಷ್ಟಿವೆ. ಅದೇರಿತಿ ಓರ್ವ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಯಾವುದೋ ಕಾರಣಕ್ಕೆ ವ್ಯಕ್ತಿಯೊಬ್ಬನನ್ನು ಕೊಲ್ಲುವ ಸಾಧ್ಯತೆ ಕೂಡ ಇದೆ.

ಒಂದೆಡೆ ಆಕಸ್ಮಿಕವಾಗಿ ಅಪರಾಧಗಳನ್ನು ಮಾಡುವ ಹಲವಾರು ಅಪರಾಧಿಗಳು ಇದ್ದರೆ, ಮತ್ತೊಂದೆಡೆ ಅಪರಾಧವನ್ನು ವೃತ್ತಿಯನ್ನಾಗಿರಿಸಿಕೊಂಡಿರುವವರೂ ಇದ್ದಾರೆ. ಹೀಗಾಗಿ, ಆಸ್ತಿಗಾಗಿ ಸಂಬಂಧಿಕರು ಜಗಳ ಮಾಡಿಕೊಂಡು ಕೊಲೆ ನಡೆದರೆ ಅದರಿಂದ ಸಮಾಜದ ಶಾಂತಿಗೆ ತೊಡಕಾಗುವುದಿಲ್ಲ. ಆದರೆ, ಹೆದ್ದಾರಿಯಲ್ಲಿ ಕಳ್ಳತನಗಳು ನಡೆದರೆ ಸಮಾಜ ಆತಂಕ ಪಡಬೇಕಾಗುತ್ತದೆ. ತ[illegible]ಗಳು ಯಾವುದೋ ಹುಡುಗನ ಜೊತೆ ಓಡಿಹೋಗಿದ್ದಾಳೆಂದು ಓರ್ವ ತಂದೆ ಅಪಹರಣದ ಪ್ರಕರಣ ದಾಖಲಿಸಿದರೆ ಸಮಾಜಕ್ಕೆ ಆತಂಕವಾಗುವುದಿಲ್ಲ. ಆದರೆ ಹಣಕ್ಕಾಗಿ ಅಪಹರಣಗಳು ನಡೆದರೆ ಒಟ್ಟಾರೆ ಸಮಾಜ ಭಯ ಪಡಬೇಕಾಗುತ್ತದೆ.

ಒಟ್ಟಾರೆ ಸಮಾಜವನ್ನು ಕಾಡುತ್ತಿರುವ ಇಂತಹ ಅಪರಾಧಗಳನ್ನು ಕಡಿಮೆಗೊಳಿಸುವ ಕ್ರಮಗಳನ್ನು ನಿತೀಶ್ ತಮ್ಮ ಮೊದಲ ಅಧಿಕಾರಾವಧಿಯಲ್ಲಿ ಕೈಗೊಂಡರು. ರಾಜ್ಯದಲ್ಲಿ ರಸ್ತೆ ಕಳ್ಳತನಗಳು ಮತ್ತು ಅಪಹರಣ ಪ್ರಕರಣಗಳು ಹಿಡಿತಕ್ಕೆ ಬರಲು ಆರಂಭವಾದಾಗ ಸಹಜವಾಗಿ ನಿತೀಶ್ ಅವರ ಸಾಮರ್ಥ್ಯವನ್ನು ಜನರು ನಂಬಿದರು. 2005ರ ಚುನಾವಣೆ ವೇಳೆ 'ಜಂಗಲ್ ರಾಜ್' ಕೊನೆಗೊಳಿಸುವುದಾಗಿ ನಿತೀಶ್ ನೀಡಿದ್ದ ಭರವಸೆಯನ್ನು ಈಡೇರಿಸುತ್ತಿದ್ದಾರೆಂದುಕೊಂಡರು.

ಇದರರ್ಥ ಲಾಲೂ ಕುಟುಂಬದ ಆಡಳಿತಾವಧಿಯಲ್ಲಿ ಇಡೀ ಬಿಹಾರ ರಾಜ್ಯದಲ್ಲಿ ಎಲ್ಲೆಂದರಲ್ಲಿ ಕಳ್ಳತನಗಳು ಮತ್ತು ಅಪಹರ[illegible]ಗಳು ನಡೆಯುತ್ತಿದ್ದವು ಎಂದೇನಲ್ಲ. ಆದರೆ ಬಿಹಾರಕ್ಕೆ ಬರುತ್ತಿದ್ದ ಪ್ರತಿಯೊಬ್ಬರಿಗೂ ಅಪಹರಣಗೊಳ್ಳುವ ಆತಂಕವಂತೂ ಇತ್ತು. ಹೀಗಾಗಿ ಓರ್ವ ಸಾಮಾನ್ಯ ಬಿಹಾರಿ ನಾಗರಿಕ ಲಾಲೂ ಅವರನ್ನು ಖಳನಾಯಕನಂತೆ ನೋಡಲು ಪ್ರಾರಂಭಿಸಿದ್ದ. ಅಭಿಪ್ರಾಯ ನಿರ್ಮಾಣ ಯಂತ್ರಗಳು ತಮ್ಮನ್ನು ಅನವಶ್ಯಕವಾಗಿ ಖಳನಾಯಕನಂತೆ ಬಿಂಬಿಸುತ್ತಿವೆ ಎಂದು ಈಗಲೂ ಕೂಡ ಲಾಲೂ ಹೇಳಿಕೊಂಡರೂ, ಸ್ವತಃ ತಾವೇ ಹಿಂಸೆಯನ್ನು ವೈಭವೀಕರಿಸುವುದು ಅವರ ಗಮನಕ್ಕೆ ಬಂದಂತಿಲ್ಲ.

ಪ್ರತಿಸಲ ಚುನಾವಣಾ ಪ್ರಚಾರವನ್ನು ಆರಂಭಿಸುವ ಮುನ್ನ ಲಾಲೂ ಲಾಠಿಗೆ ಎಣ್ಣೆ ಸವರುವ ಸಂಪ್ರದಾಯವನ್ನು ರೂಢಿಸಿಕೊಂಡು [illegible]ದ್ದರೆ. ಉತ್ತರ ಭಾರತದಲ್ಲಿ ಲಾಠಿಗೆ ಎಣ್ಣೆ ಸವರುವ ರೂಪಕ ಹಿಂಸೆಗೆ ಪಂಥಾಹ್ವಾನ ನೀಡುವುದನ್ನು ಸೂಚಿಸುತ್ತದೆ. ಯಾವುದೇ

ನಿತೀಶ್ ಅಧಿಕಾರಕ್ಕೆ ಬರುವುದಕ್ಕೆ ಒಂದು ವರ್ಷಕ್ಕೆ ಮುಂಚೆ ಅಂದರೆ ೨೦೦೪ರಲ್ಲಿ ಬಿಹಾರದಲ್ಲಿ ೩,೮೬೧ ಮಂದಿ ಕೊಲೆಯಾಗಿದ್ದರು. ಎರಡು ವರ್ಷಗಳ ಬಳಿಕ ನಿತೀಶ್ ಅವರ ಅಧಿಕಾರಾವಧಿಯಲ್ಲಿ ಹೆಚ್ಚು ಕಮ್ಮಿ ಅಷ್ಟೇ ಕೊಲೆಗಳು ನಡೆದಿವೆ. ಈ ವಿಚಾರದಲ್ಲಿ ಏನ್‌ಸಿಆರ್‌ಬಿ ದಾಖಲೆಗಳ ಪ್ರಕಾರ ಬಿಹಾರಕ್ಕೆ ಸ್ವರ್ಣ ಅಥವಾ ಬೆಳ್ಳಿ ಪದಕ ಲಭಿಸದೇ ಹೋದರೂ ಕಂಚಿನ ಪದಕವಂತೂ ಗ್ಯಾರಂಟಿ! ಅಂದರೆ ಕೊಲೆಗಳ ಪ್ರಮಾಣದಲ್ಲಿ ಸ್ವಲ್ಪ ಮಾತ್ರ ಇಳಿಮುಖವಾಗಿದೆ. ಲಾಲೂ ಅವರ ಬೆಂಬಲಿಗರು ಕೇಳುತ್ತಿರುವುದೂ ಇದೇ ಪ್ರಶ್ನೆಯನ್ನು.

ಲಾಲೂ ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟ

ಲಾಲೂ ಮೇಲ್ಜಾತಿಗಳ ವಿರುದ್ಧ ಹೋರಾಟ ನಡೆಸುವ ನಾಯಕ ಎಂದೇ ಜನಪ್ರಿಯರಾಗಿದ್ದರು. "ಭುರಾ ಬಾಲ್ ಸಾಫ್ ಕರೋ" ಎಂಬ (ಭೂಮಿಹಾರ್, ರಾಜಪೂತ್, ಬ್ರಾಹ್ಮಣ ಮತ್ತು ವೈಶ್ಯ- ಮೇಲ್ಜಾತಿಗಳನ್ನು ನಾಶ ಮಾಡಿ) ಘೋಷಣೆ ಪಾರಂಪರಿಕವಾಗಿ ಶೋಷಣೆಗೆ ಒಳಗಾದ ಸಮುದಾಯಗಳ ಮೇಲೆ ಮಾಂತ್ರಿಕವಾದ ಪ್ರಭಾವ ಬೀರಿದ್ದು ಸುಳ್ಳಲ್ಲ. ಮುಸ್ಲಿಮರೂ ಸೇರಿದಂತೆ ಶೋಷಿತ ಸಮುದಾಯಗಳು ತಮ್ಮ ಪರವಾಗಿದ್ದ ಸಂದರ್ಭದಲ್ಲಿ ಲಾಲೂ ಅನವಶ್ಯಕವಾಗಿ 'ಮುಸ್ಲಿಂ- ಯಾದವ' ಎಂಬ ಹೊಸ ರಾಜಕೀಯ ಸೂತ್ರವನ್ನು ಹೊರ ತಂದರು. ಯಾವಾಗ ಹೊಸದಾಗಿ ಅಧಿಕಾರದ ಗದ್ದುಗೆ ಏರಿದ ಯಾದವರು ದಲಿತರನ್ನು ತಮಗಿಂತ ಕೀಳೆಂದು ಶೋಷಿಸಲು ಶುರು ಮಾಡಿದರೋ ದಲಿತರು ಸಹಜವಾಗಿ ಲಾಲೂ ಅವರ ಪಕ್ಷದಿಂದ ದೂರ ಸರಿಯಲಾರಂಭಿಸಿದರು.

ಹಿಂಸಾಚಾರದಲ್ಲಿ ಲಾಠಿ ಅತಿಹೆಚ್ಚು ಬಳಕೆಯಾಗುವುದನ್ನು ಗಮನಿಸಬಹುದು. ವಿಚಾರಗಳು, ಅಭಿಪ್ರಾಯಗಳು ಮತ್ತಿತರ ಶಾಂತಿಯುತ ತಂತ್ರಗಳ ಮೂಲಕ ವಿರೋಧಿಗಳನ್ನು ಎದುರಿಸಿ ಗೆಲ್ಲಬೇಕಾದ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಲಾಲೂ ಇಂತಹ ಹಿಂಸಾತ್ಮಕ ರೂಪಕಗಳಿಗೆ ಇನ್ನೂ ಯಾಕೆ ಶರಣಾಗುತ್ತಿದಾರೋ ಗೊತ್ತಿಲ್ಲ.

* * * * * * *

1990ರಲ್ಲಿ ಲಾಲೂ ಪ್ರಸಾದ್ ಯಾದವ್ ಕಾಂಗ್ರೆಸ್ ವಿರೋಧಿ ಅಲೆಯಲ್ಲಿ ನಡೆದ ಚುನಾವಣೆಯಲ್ಲಿ ಬಿಹಾರದ ಅಧಿಕಾರದ ಗದ್ದುಗೆ ಹಿಡಿದರು. ಆಗ ಮೇಲ್ಜಾತಿಯವರು ಕೂಡ ಲಾಲೂ ಅವರನ್ನು ಪ್ರಶಂಸಿಸುತ್ತಿದ್ದರು. ಆದರೆ ಒಂದೇ ವರ್ಷದಲ್ಲಿ ಲಾಲೂ ಮಂಡಲ್ ಮಾದರಿಯ ಸಾಮಾಜಿಕ ನ್ಯಾಯದ ಪೋಸ್ಟರ್ ಹುಡುಗನಾಗಿ ಮಾತ್ರ ಉಳಿದರು. ಒಂದು ಹಂತದಲ್ಲಿ ಎಲ್ ಕೆ ಅಡ್ವಾಣಿ ಅವರನ್ನು ಬಂಧಿಸುವ ಮೂಲಕ ಮುಸ್ಲಿಮರ ಮನಸ್ಸನ್ನು ಗೆದ್ದ ಲಾಲೂ, ಇಡೀ ದೇಶದಲ್ಲಿ ಧರ್ಮನಿರಪೇಕ್ಷತೆಯ ಮೇರು ನಕ್ಷತ್ರವಾಗಿ ಕಂಗೊಳಿಸುತ್ತಿದ್ದರು. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಲಾಲೂ ಅವರಿಗೆ ಮೇಲ್ಜಾತಿಯ ಮತಗಳು ಬೇಕಾಗಲೇ ಇಲ್ಲ. ಇದಕ್ಕೆ ಪೂರಕವಾಗಿ ಲಾಲೂ ಕೂಡ ಭಾರತದಲ್ಲಿ ಪಾರಂಪರಿಕವಾಗಿ ದಬ್ಬಾಳಿಕೆ ನಡೆಸುತ್ತಿರುವ ಮೇಲ್ಜಾತಿಗಳ ವಿರುದ್ಧ ಹೋರಾಡುವ ನಾಯಕರಂತೆ ತಮ್ಮನ್ನು ಬಿಂಬಿಸಿಕೊಂಡರು.

ಲಾಲೂ ಮೇಲ್ಜಾತಿಗಳ ವಿರುದ್ಧ ಹೋರಾಟ ನಡೆಸುವ ನಾಯಕ ಎಂದೇ ಜನಪ್ರಿಯರಾಗಿದ್ದರು. "ಭುರಾ ಬಾಲ್ ಸಾಫ್ ಕರೋ" ಎಂಬ (ಭೂಮಿಹಾರ್, ರಾಜಪೂತ್, ಬ್ರಾಹ್ಮಣ ಮತ್ತು ವೈಶ್ಯ- ಮೇಲ್ಜಾತಿಗಳನ್ನು ನಾಶ ಮಾಡಿ) ಘೋಷಣೆ ಪಾರಂಪರಿಕವಾಗಿ ಶೋಷಣೆಗೆ ಒಳಗಾದ ಸಮುದಾಯಗಳ ಮೇಲೆ ಮಾಂತ್ರಿಕವಾದ ಪ್ರಭಾವ ಬೀರಿದ್ದು ಸುಳ್ಳಲ್ಲ.

ಮುಸ್ಲಿಮರೂ ಸೇರಿದಂತೆ ಶೋಷಿತ ಸಮುದಾಯಗಳು ತಮ್ಮ ಪರವಾಗಿದ್ದ ಸಂದರ್ಭದಲ್ಲಿ ಲಾಲೂ ಅನವಶ್ಯಕವಾಗಿ 'ಮುಸ್ಲಿಂ- ಯಾದವ' ಎಂಬ ಹೊಸ ರಾಜಕೀಯ ಸೂತ್ರವನ್ನು ಹೊರತಂದರು. ಹಿಂದುಳಿದ ವರ್ಗದವರು, ಮುಸ್ಲಿಮರು ಮತ್ತು ದಲಿತರು ಸೇರಿದಂತೆ ಬಿಹಾರದ ಬಹುಸಂಖ್ಯಾತ ಮತದಾರರು ಲಾಲೂ ಪರವಾಗಿದ್ದಾಗ ಮುಸ್ಲಿಂ-ಯಾದವ್ ಸೂತ್ರ ಯಾಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಬಿಜೆಪಿ ವಿರೋಧಿ ಮುಸ್ಲಿಮರು ಹೇಗಿದ್ದರೂ ತಮ್ಮ ಜೊತೆ ಇರುತ್ತಾರೆ. ಹೀಗಾಗಿ ಯಾದವ ಸಮುದಾಯವನ್ನು ಕೂಡ ತಮ್ಮ ತೆಕ್ಕೆಗೆ ತೆಗೆದುಕೊಂಡರೆ ತಮ್ಮನ್ನು ಮಣಿಸಲು ಯಾರಿಗೂ ಸಾಧ್ಯವಾಗುವುದಿಲ್ಲ ಎಂಬ ಲೆಕ್ಕಾಚಾರ. ಇದರ ಜೊತೆಗೆ ಹಿಂದುಳಿದ ಜಾತಿಗಳು ಮತ್ತು ದಲಿತರು 'ಭುರಾ ಬಾಲ್' ಸೂತ್ರಕ್ಕೆ ಕಟ್ಟುಬಿದ್ದು ಲಾಲೂ ಅವರೊಂದಿಗೆ ಗುರುತಿಸಿಕೊಂಡಿದ್ದರು.

ಆದರೆ ಲಾಲೂ ಅವರ ಮುಸ್ಲಿಂ-ಯಾದವ್, 'ಭುರಾ ಬಾಲ್' ಸೂತ್ರಗಳೇ ಅವರ ಪತನಕ್ಕೆ ಅಡಿಪಾಯ ಹಾಕಿತು. ಯಾವಾಗ ಹೊಸದಾಗಿ ಅಧಿಕಾರದ ಗದ್ದುಗೆ ಏರಿದ ಯಾದವರು ದಲಿತರನ್ನು ತಮಗಿಂತ ಕೀಳೆಂದು ಶೋಷಿಸಲು ಶುರು ಮಾಡಿದರೋ ದಲಿತರು ಸಹಜವಾಗಿ ಲಾಲೂ ಅವರ ಪಕ್ಷದಿಂದ ದೂರ ಸರಿಯಲಾರಂಭಿಸಿದರು. ಹಿಂದುಳಿದ ವರ್ಗದಲ್ಲಿ ಕೆಳಮಟ್ಟದಲ್ಲಿರುವ ಕೆಲವು ಜಾತಿಗಳು ಲಾಲೂ ಕೇವಲ ಯಾದವರಿಗೆ ಪ್ರಾಮುಖ್ಯತೆ ನೀಡುತ್ತಿದ್ದಾರೆಂದು ಪಕ್ಷದಿಂದ ಹೊರ ಬಂದರು. ಹೀಗಾಗಿ ಬಿಹಾರದಲ್ಲಿ ಈಗ ಕೇವಲ ಮುಸ್ಲಿಂ-ಯಾದವ್ ಸೂತ್ರದಿಂದ ಚುನಾವಣೆಯಲ್ಲಿ ಬಹುಮತದಿಂದ ಗೆಲುವು ಸಾಧಿಸಲು ಸಾಧ್ಯವಿಲ್ಲ.

ಕಳೆದ ಚುನಾವಣೆ ವೇಳೆ ಅಧಿಕಾರ ಕಳೆದುಕೊಳ್ಳುವ ಬಗ್ಗೆ ಲಾಲೂ ಅವರಿಗೆ ಮುಂಚಿತವಾಗಿ ಗೊತ್ತಿತ್ತು. ತಮಗೆ ಬೆಂಬಲ ನೀಡುತ್ತಿರುವ ಸಾಮಾಜಿಕ ವರ್ಗದಲ್ಲಿ ಉಂಟಾಗುತ್ತಿರುವ ವಿಭಜನೆಯನ್ನು ತಡೆಯುವ ನಿಟ್ಟಿನಲ್ಲಿ ಲಾಲೂ ಜರ್ಮನಿಯ ನಾಜಿ ಮಾದರಿಯ ಆಡಳಿತ ಸೂತ್ರವನ್ನು ಅಳವಡಿಸಿಕೊಂಡಿದ್ದು ಅವರು ಮಾಡಿದ ಮೊದಲ ತಪ್ಪು. ಹಿಟ್ಲರ್ ಅವರ ನಾಜಿ ಪಕ್ಷ ಪ್ರಜಾತಾಂತ್ರಿಕವಾಗಿ ಅಧಿಕಾರಕ್ಕೆ ಬಂದರೂ, ಪ್ರಜಾತಂತ್ರ ವ್ಯವಸ್ಥೆಯನ್ನು ಗಾಳಿಗೆ ತೂರಿ ದೇಶವನ್ನು ಸರ್ವಾಧಿಕಾರಕ್ಕೆ ಒಳಪಡಿಸಿತು. ಜರ್ಮನಿ ದೇಶದಲ್ಲಿ ಆಡಳಿತ ನಡೆಸುವ ಬದಲು ಹಿಟ್ಲರ್ ದೇಶದಲ್ಲಿ ಫ್ಯಾಸಿಸ್ಟ್ ಮಾದರಿಯ ದಬ್ಬಾಳಿಕೆ ನಡೆಸುತ್ತಿದ್ದ.

ಲಾಲೂ ಪ್ರಸಾದ್ ಯಾದವ್ ಕೂಡ ಬಿಹಾರದಲ್ಲಿ ನಾಜಿ ಆಡಳಿತಶಾಹಿಯ ಮಾದರಿಯನ್ನು ಸೃಷ್ಟಿಸಿದರು. ಮೊದಲಿಗೆ ಮುಸ್ಲಿಂ- ಯಾದವ ಸಮುದಾಯಕ್ಕೆ ಸೇರಿದ ಗೂಂಡಾಗಳನ್ನು ಲಾಲೂ ಈ ನಿಟ್ಟಿನಲ್ಲಿ ಬಳಸಿಕೊಳ್ಳಲಾರಂಭಿಸಿದರು. ನಂತರದ ದಿನಗಳಲ್ಲಿ ಎಲ್ಲ ಜಾತಿ-ಸಮುದಾಯಗಳ ಗೂಂಡಾಗಳು, ಅಪರಾಧಿಗಳು ಆಡಳಿತ ಯಂತ್ರಕ್ಕೆ ಪೂರಕವಾಗಿ ಬಳಕೆಯಾದರು. ಲಾಲೂ ಕೂಡ ಹಿಟ್ಲರ್‌ನಂತೆ ಬಿಹಾರದಲ್ಲಿ ಸರ್ವಾಧಿಕಾರಕ್ಕೆ ಮೊರೆ ಹೋದರು.

ಬಿಹಾರದಲ್ಲಿ ಒಂದು ಬೈಸಿಕಲ್ ಕಳ್ಳತನವಾದರೂ ಕೂಡ ಅದು ಲಾಲೂ ಅವರ ಅಧಿಕೃತ ಮನೆಯಲ್ಲಿ ಸಿಗುತ್ತದೆ ಎಂಬ ಗುಸು ಗುಸು ಎಲ್ಲೆಡೆ ಕೇಳಿ ಬರುತ್ತಿತ್ತು. ಅದೇ ರೀತಿ ಬಿಹಾರದ ಯಾವುದೇ ನಾಗರಿಕ ಹಣಕ್ಕಾಗಿ ಅಪಹರಣಗೊಂಡರೆ, ಅಂತಹವರ ಸಂಬಂಧಿಕರು ಲಾಲೂ ಅವರ ಮನೆಗೆ ಹೋಗಿ ಬಿಡುಗಡೆಯ ಸಂಧಾನ ನಡೆಸುತ್ತಿದ್ದರು ಎಂದು ಲಾಲೂ ಅವರ ವಿರೋಧಿಗಳು ಆಪಾದಿಸುತ್ತಾರೆ.

ಈ ಮಧ್ಯೆ ಬಿಹಾರವನ್ನು ಲಾಲೂ ಮರೆತೇಬಿಟ್ಟರು. ಪ್ರಮುಖವಾಗಿ ಅಭಿವೃದ್ಧಿಯ ರೂಪಕಗಳಾದ ರಸ್ತೆಗಳು ಬಿಹಾರದಲ್ಲಿ ಕಡೆಗಣಿಸಲ್ಪಟ್ಟವು. ಲಾಲೂ ಅವರ ಆಡಳಿತಾವಧಿಯಲ್ಲಿ ಗುತ್ತಿಗೆದಾರರು ರಸ್ತೆ ನಿರ್ಮಿಸದೆ ಹಣ ಪಡೆಯುತ್ತಿದ್ದರು, ಇಲ್ಲದ ರಸ್ತೆಗಳ ರಿಪೇರಿಗಾಗಿ ಕೂಡ ಹಣ ಪಡೆಯುತ್ತಿದ್ದರು ಎಂದು ವಿರೋಧಿಗಳು ಆಪಾದಿಸುತ್ತಾರೆ.

ಲಾಲೂ ಮಾದರಿಯ ಸಾಮಾಜಿಕ ನ್ಯಾಯದ ವೇದಿಕೆಯಲ್ಲಿ ಅಪರಾಧಿಗಳಿಗೆ ಹಣಗಳಿಸುವ ಸರಿಯಾದ ಮಾರ್ಗಗಳು ಗೊತ್ತೇ ಇರಲಿಲ್ಲ. ಹಣಕ್ಕಾಗಿ ಅಪಹರಣ, ಕೊಲೆ ಮಾಡುವುದು ಸಾಮಾನ್ಯವಾಯಿತು. ಸರ್ಕಾರಿ ಅಧಿಕಾರಿಗಳು ಇನ್ನೂ ಭ್ರಷ್ಟರಾಗುವುದು ವ್ಯವಹಾರದ ಮಾದರಿಯಾಯಿತು. ಬಿಹಾರವನ್ನು ಪತನಗೊಳಿಸುವಲ್ಲಿ 'ಭುರಾ ಬಾಲ್' ಜಾತಿಯ ಸದಸ್ಯರು ಕೂಡ ಲಾಲೂ ಜೊತೆಗೂಡಿದರು.

ಈ ಮಧ್ಯೆ ವಲಸಿಗರ ನಾಡಾದ ಬಿಹಾರದ ಹೊರಗೆ ಅತ್ಯದ್ಭುತವಾದ ಆರ್ಥಿಕ ಅಭಿವೃದ್ಧಿಯಾಗುತ್ತಿರುವುದನ್ನು ಸಾಮಾನ್ಯ ಬಿಹಾರಿ ನಾಗರಿಕರು ಗಮನಿಸಿದರು. ಬಿಹಾರದ ಹೊರಗಿನ ಕೈಗಾರಿಕಾ ಕೇಂದ್ರಗಳಲ್ಲಿ ಗೌರವಯುತವಾದ ಸುರಕ್ಷಿತ ಜೀವನದ ಪರಿಚಯವಾಯಿತು. ಗೂಂಡಾಗಳು ಮತ್ತು ಅಪರಾಧಿಗಳ ಕಾನೂನುಬಾಹಿರ ಚಟುವಟಿಕೆಗಳಿಂದ ಬಿಹಾರಿಗಳು ರೋಸಿಹೋಗಿದ್ದರು. ಹೀಗಾಗಿ, ಯಾದವರನ್ನು ಹೊರತುಪಡಿಸಿ, ಬಹುತೇಕ ಉಳಿದ ಸಮುದಾಯಗಳು ಲಾಲೂ ಅವರನ್ನು ದ್ವೇಷಿಸಲಾರಂಭಿಸಿದ್ದರು.

'ಭುರಾ ಬಾಲ್' ಸಮುದಾಯದವರಿಗೆ ಲಾಲೂ ಅವರ ಮೇಲೆ ಈಗಲೂ ತೀವ್ರವಾದ ಸಿಟ್ಟಿದೆ. ಯಾದವೇತರ ಓಬಿಸಿ ಸಮುದಾಯದವರು ಕೂಡ ಲಾಲೂ ಅವರ ಪರವಾಗಿಲ್ಲ. ದಲಿತರಿಗೂ ಲಾಲೂ ಅವರ ಮೇಲೆ ನಂಬಿಕೆ ಉಳಿದಿಲ್ಲ. ಕೆಳಜಾತಿಯ ಮುಸ್ಲಿಮರಿಗೆ ಲಾಲೂ ಕೇವಲ ಮೇಲ್ಜಾತಿಯ ಮುಸ್ಲಿಮರಿಗೆ ಮಾನ್ಯತೆ ನೀಡುತ್ತಾರೆ ಎಂಬ ಆತಂಕವಿದೆ. ಇನ್ನೂ ಮೇಲ್ಜಾತಿಯ ಮುಸ್ಲಿಮರಿಗೆ ತಮ್ಮ ಇಮೇಜ್‌ನ ಬಗ್ಗೆ ಆತಂಕವಿದೆ. ಯಾಕೆಂದರೆ ಲಾಲೂ ಕೇವಲ ಗೂಂಡಾಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ ಎಂಬ ಅಭಿಪ್ರಾಯ ಅವರಲ್ಲಿದೆ.

ಇಂತಹ ಸಾರ್ವಜನಿಕ ಇಮೇಜ್‌ನೊಂದಿಗೆ ಲಾಲೂ ಹೇಗೆ ಅಧಿಕಾರಕ್ಕೆ ಮರಳಲು ಸಾಧ್ಯ?

* * * * * * *

ಕಳೆದ ಜನವರಿ 2ರಂದು 40ಕ್ಕೂ ಹೆಚ್ಚು ಮಂದಿ ದಲಿತ ಬಂಡವಾಳಶಾಹಿಗಳು ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಅವರನ್ನು ಭೇಟಿಯಾಗಲು ದೆಹಲಿಗೆ ಬಂದಿದ್ದರು. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಲಹೆಗಳನ್ನು ಕೇಳಲು ಮೊಂಟೆಕ್ ದಲಿತ ಬಂಡವಾಳಶಾಹಿಗಳನ್ನು ಆಹ್ವಾನಿಸಿದ್ದರು. ಭಾರತೀಯ ದಲಿತ ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಸ್ಥೆ (ಡಿಐಸಿಸಿಐ)ಯ ಸಂಸ್ಥಾಪಕ ಅಧ್ಯಕ್ಷ ಮಿಲಿಂದ್ ಕಾಂಬ್ಳೆ ಅವರ ನೇತೃತ್ವದ ತಂಡ ಈ ಅವಕಾಶವನ್ನು ಹೊಸ ವರ್ಷಾಚರಣೆ ಮಾಡಲು ಕೂಡ ಬಳಸಿಕೊಂಡಿತು.

ಹೊಸ ವರ್ಷದ ಆರಂಭದಲ್ಲಿ ದೇಶದ ರಾಜಧಾನಿಯಲ್ಲಿ ತಮ್ಮ ಪ್ರಭಾವವನ್ನು ತೋರ್ಪಡಿಸಬೇಕೆಂದು ನಿರ್ಧಾರ ಕೈಗೊಂಡಂತಿದ್ದರು ದಲಿತ ಬಂಡವಾಳಶಾಹಿಗಳು. ಇದಕ್ಕೆ ಸೂಚ್ಯವಾಗಿ ನಾಲ್ವರು ದಲಿತ ಬಂಡವಾಳಶಾಹಿಗಳು ಹೆಲಿಕಾಪ್ಟರ್‌ಗಳಲ್ಲಿ ಬಂದರೆ, ದೆಹಲಿಯಲ್ಲಿ ಸಂಚರಿಸಲು ಹತ್ತು ಮಂದಿ ಮರ್ಸಿಡೀಸ್ ಬೆನ್ಜ್ ಕಾರುಗಳನ್ನು ಬಳಸಿದರು.

ದೆಹಲಿ ಮೂಲದ ಎನ್. ಕೆ. ಚಂದನ್ ಮತ್ತು ಶಿಶುಪಾಲ್ ಸಿಂಗ್ ಅವರು ಆಯೋಜಿಸಿದ್ದ ಪಾರ್ಟಿಯ ಆಹ್ವಾನ ಪತ್ರಿಕೆಯಲ್ಲಿ ಹೀಗೆ ಬರೆದಿತ್ತು: "ಎಲ್ಲರಿಗೂ ನಮಸ್ಕಾರ, ನನ್ನ ಪರಂಪರೆಯ ಭಾರವನ್ನು ಕೆಳಗಿಳಿಸಿ ನಾನು ಈಗ ವಿನಮ್ರತೆಯನ್ನು ಬಿಡುತ್ತಿದ್ದೇನೆ. ಇಲ್ಲಿಯವರೆಗೂ ದರ್ಪ ದಬ್ಬಾಳಿಕೆಯ ಖುಷಿ ಕೇವಲ ಬಹುಸಂಖ್ಯಾತರಿಗೆ ಮಾತ್ರ ಮೀಸಲಾಗಿತ್ತು."

ಬಿಪಿಎಲ್ ಕಾರ್ಡ್‌ಗಳಿಲ್ಲದೆ ದೇಶದ ರಾಜಧಾನಿಗೆ ದಲಿತ ಬಂಡವಾಳಶಾಹಿಗಳು ಬಂದದ್ದು ಬಹಳಷ್ಟು ಮಂದಿಗೆ ಬಹುಶಃ ಹಿಡಿಸಿರುವುದಿಲ್ಲ. ದೇಶದ ಪ್ರಭಾವಿ ವಲಯದಲ್ಲಿನ ಕೆಲವರ ಮನಸ್ಸಿನಲ್ಲಿ ಮೂಡಿರಬಹುದಾದ ಪ್ರಶ್ನೆಗಳು ಹೀಗಿರಬಹುದು: ದಲಿತರು ರಾಷ್ಟ್ರದ ರಾಜಧಾನಿಗೆ ಬಂದು ಹೊಸ ವರ್ಷಾಚರಣೆ ಮಾಡುವ ಈ ವಿದ್ಯಮಾನ ದೇಶದ ಯೋಜನೆಗೆ ಸಂಬಂಧಿಸಿದ ಕೆಲವು ಪ್ರಮುಖ ಪ್ರಶ್ನೆಗಳನ್ನು ನಮ್ಮ ಮುಂದಿಡುವುದಿಲ್ಲವೇ?! ಬಿಪಿಎಲ್ ವ್ಯವಸ್ಥೆಯ ಹೊರಗಿರುವ ದಲಿತ ವರ್ಗ ಇರಬೇಕೇ?! ಇದು ನಮ್ಮ ರಾಷ್ಟ್ರದ ಧ್ಯೇಯಕ್ಕೆ ವಿರುದ್ಧವಾಗಿರುವುದಿಲ್ಲವೇ?!

ಉದ್ಯಮಿಗಳು ಎಂದು ಕರೆದುಕೊಳ್ಳುವ ದಲಿತರ ತಂಡ ರಾಷ್ಟ್ರದ ರಾಜಧಾನಿಯಲ್ಲಿ ಹೊಸ ವರ್ಷವನ್ನು ಆಚರಿಸಲು ಮುಂದಾಗಿದ್ದರು. ಇವರಲ್ಲಿ ಬಹುತೇಕ ಮಂದಿ 250 ದಶಲಕ್ಷ ರೂ.ಗಿಂತ ಹೆಚ್ಚು ವಹಿವಾಟು ನಡೆಸುತ್ತಿದ್ದಾರೆ. ಇವರಲ್ಲಿ ಸುಮಾರು ಒಂದು ಡಝನ್‌ನಷ್ಟು ಮಂದಿಯ ಉದ್ಯಮ ವಹಿವಾಟು 1000 ದಶಲಕ್ಷ ರೂ. ದಾಟುತ್ತದೆ. ದಲಿತ ಬಂಡವಾಳಶಾಹಿಗಳ ತಂಡ ರಾಜಧಾನಿಯಲ್ಲಿ ಉಳಿದುಕೊಳ್ಳಲು ಫೈವ್‌ಸ್ಟಾರ್ ಹೋಟೆಲ್‌ಗಳನ್ನು ಬುಕ್ ಮಾಡಿದ್ದರು. ಇದೂ ಕೂಡ ದೇಶದ ಯೋಜನಾಕರ್ತರಿಗೆ ಇರಿಸು ಮುರಿಸು ಉಂಟುಮಾಡಿರಲಿಕ್ಕೂ ಸಾಕು. ದೇಶದ ಯೋಜನಾ ಆಯೋಗ ದಲಿತರಿಗೆ ಫೈವ್ ಸ್ಟಾರ್ ಮಾನ್ಯತೆ ಎಂದಾದರೂ ನೀಡಿತ್ತೆ?!

ಉದ್ಯಮಿಗಳು ಎಂದು ಕರೆದುಕೊಳ್ಳುವ ದಲಿತರ ತಂಡ ರಾಷ್ಟ್ರದ ರಾಜಧಾನಿಯಲ್ಲಿ ಹೊಸ ವರ್ಷವನ್ನು ಆಚರಿಸಲು ಮುಂದಾಗಿದ್ದರು. ಇವರಲ್ಲಿ ಬಹುತೇಕ ಮಂದಿ 250 ದಶಲಕ್ಷ ರೂ.ಗಿಂತ ಹೆಚ್ಚು ವಹಿವಾಟು ನಡೆಸುತ್ತಿದ್ದಾರೆ. ಇವರಲ್ಲಿ ಸುಮಾರು ಒಂದು ಡಝನ್‌ನಷ್ಟು ಮಂದಿಯ ಉದ್ಯಮ ವಹಿವಾಟು 1000 ದಶಲಕ್ಷ ರೂ. ದಾಟುತ್ತದೆ. ದಲಿತ ಬಂಡವಾಳಶಾಹಿಗಳ ತಂಡ ರಾಜಧಾನಿಯಲ್ಲಿ ಉಳಿದುಕೊಳ್ಳಲು ಫೈವ್ ಸ್ಟಾರ್ ಹೋಟೆಲ್‌ಗಳನ್ನು ಬುಕ್ ಮಾಡಿದ್ದರು. ಇದೂ ಕೂಡ ದೇಶದ ಯೋಜನಾಕರ್ತರಿಗೆ ಇರಿಸು ಮುರಿಸು ಉಂಟು ಮಾಡಿರಲಿಕ್ಕೂ ಸಾಕು. ದೇಶದ ಯೋಜನಾ ಆಯೋಗ ದಲಿತರಿಗೆ ಫೈವ್ ಸ್ಟಾರ್ ಮಾನ್ಯತೆ ಎಂದಾದರೂ ನೀಡಿತ್ತೆ?! ದಲಿತರೂ ಕೂಡ ಅಧಿಕ ಮೊತ್ತದ ಐಷಾರಾಮಿ ಹೋಟೆಲ್‌ಗಳಲ್ಲಿ ಸೂಟ್‌ಗಳನ್ನು ಬುಕ್ ಮಾಡುವುದು ದೇಶದ ಹಿತದ ದೃಷ್ಟಿಯಿಂದ ಒಳ್ಳೆಯದೇ?! ದಲಿತರ ತಂಡ ತಮ್ಮ ಊಟದ ತಿನಿಸುಗಳ ಪಟ್ಟಿಯಲ್ಲಿ ಹೆಚ್ಚಿನ ಬೆಲೆಯ ಎಡಿಗಳನ್ನು ಸೇರ್ಪಡಿಸಿಕೊಂಡಿದ್ದು ಯಾವ ನ್ಯಾಯ ಸ್ವಾಮಿ?! ದಲಿತರು ಸರ್ಕಾರದ ಹಿಡಿತದಿಂದ ತಪ್ಪಿಹೋಗುತ್ತಿರುವುದು ಮಾನವಹಕ್ಕುಗಳ ಉಲ್ಲಂಘನೆಯಾಗುವುದಿಲ್ಲವೇ?!

ಆದರೆ ಈ ಮೇಲಿನ ಎಲ್ಲ ನಿದರ್ಶನಗಳ ಮೂಲಕ ದಲಿತರ ತಂಡ ತಮ್ಮ ಸಮುದಾಯದ ಇತರ ದಲಿತರಿಗೆ ಸಂದೇಶವನ್ನು ರವಾನಿಸುತ್ತಿರುವುದು ಸ್ಪಷ್ಟ ದಲಿತರು ಉದ್ಯೋಗಾಕಾಂಕ್ಷಿಗಳಾಗಬಾರದು, ಉದ್ಯೋಗ ಸೃಷ್ಟಿಸುವವರಾಗಬೇಕು. ಆದರೆ ದಲಿತರ ಹೊಸ ವರ್ಷಾಚರಣೆ ಹಲವು ನೈತಿಕ ಪ್ರಶ್ನೆಗಳಿಗೆ ಕಾರಣವಾಗುವುದಿಲ್ಲವೇ?! ಬಂಡವಾಳಶಾಹಿತ್ವದ ವಿರುದ್ಧ ಹೋರಾಡುವ ಬದಲು ದಲಿತರ ಈ ತಂಡ ಬಂಡವಾಳಶಾಹಿಗಳ ಜೊತೆ ಯಾಕೆ ಸೇರಬಯಸುತ್ತಿದೆ?! ದಲಿತ ಬಂಡವಾಳಶಾಹಿತ್ವ ಭಾರತದ ಸಾಮಾಜಿಕ ಶಾಂತಿ– ಸುವ್ಯವಸ್ಥೆಗೆ ಭಂಗ ತರುವುದಿಲ್ಲವೇ!? ಹಣದ ಹಿಂದೆ ಬಿದ್ದಿರುವ ಚಿಂತಕರಲ್ಲದವರು ಸಮುದಾಯದ ನಾಯಕತ್ವ ವಹಿಸಿಕೊಳ್ಳಲು ಸಾಧ್ಯವೇ?! ನೈತಿಕವಾಗಿ ಶಕ್ತಿಯುತವಾಗಿರುವ ಭಾರತ ದಲಿತ ಬಂಡವಾಳಶಾಹಿಗಳ ಈ ಹೊಸ ವರಸೆಗೆ ಮಾನ್ಯತೆ ನೀಡುವುದೇ?

ಅದೇನೇ ಇರಲಿ ಈ ಪಾರ್ಟಿ ದಲಿತ ಬಂಡವಾಳಶಾಹಿಗಳ ತಂಡ ಈ ಕೆಳಗಿನ ವಿಚಾರಗಳ ಬಗ್ಗೆ ಚರ್ಚೆ ನಡೆಸುವ ಅವಕಾಶವನ್ನು ನೀಡಿದ್ದಂತೂ ನಿಜ

* ದಲಿತ ಪರಂಪರೆಯೊಂದಿಗೆ ಇವರು ಯಾಕೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡುತ್ತಿಲ್ಲ.
* ರಾಷ್ಟ್ರದ ಸಾಮಾಜಿಕ ನ್ಯಾಯದ ಉದ್ದೇಶ ಗಳನ್ನು ಯಾಕೆ ಉಲ್ಲಂಘಿಸುತ್ತಿದ್ದಾರೆ.
* ತಮ್ಮ ಊಟದ ಪಟ್ಟಿಯಲ್ಲಿ ತುಟ್ಟಿ ಬೆಲೆಯ ಎಡಿಗಳನ್ನು ಯಾಕೆ ಸೇರ್ಪಡಿಸುತ್ತಿದ್ದಾರೆ.

ಈ ನೈತಿಕ ಗೊಂದಲಗಳ?! ನಡುವೆ ಖುಷಿಯಾದ ವಿಚಾರ ಕೂಡ ಇತ್ತು. ಇಲ್ಲಿನ ಊಟ ಸಾಮಾನ್ಯನ ಊಟವಂತೂ ಆಗಿರಲಿಲ್ಲ. ಮದಿರೆಯನ್ನು ಕುಡಿಯದವರಿಗೆ ಕೂಡ ಶುದ್ಧವಾದ ನೀರು ಇದ್ದದ್ದು ವಿಶೇಷವಾಗಿತ್ತು. □

ಬದಲಾವಣೆಯ ಗಾಳಿ
ದಲಿತ ಬಂಡವಾಳಶಾಹಿಗಳ ಹೊಸ ವರ್ಷಾಚರಣೆ

ಭಯೋತ್ಪಾದನೆಯ ಬೇರುಗಳು

(45ನೇ ಪುಟದಿಂದ)

ಎಂಬುದನ್ನು ಸಾರಾಸಗಟಾಗಿ ತನಿಖೆ ಮಾಡಿ ನೋಡಬೇಕಾಗುತ್ತದೆ.

ಅಯೋಧ್ಯೆ ಪ್ರಕರಣದ ನಂತರದಲ್ಲಿ ಉಂಟಾಗಿದ್ದ ಕೋಮು ಪ್ರಕ್ಷೋಭೆಯಿಂದ ಮಾನಸಿಕ ಹಿಂಜರಿತ ಅನುಭವಿಸುತ್ತಿದ್ದ ಮುಸ್ಲಿಂ ಜನ ಸಮುದಾಯವು ಹಿಂದೂ ಕೋಮುವಾದಿ ರಾಜಕಾರಣದ ಶಕ್ತಿಗಳು ಒಡ್ಡಿದ ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವುದನ್ನು ಕಡಿಮೆ ಮಾಡಿಕೊಂಡಿತು. ಈ ಹಿನ್ನೆಲೆಯಲ್ಲಿ ಹಿಂದೂ ಕೋಮುವಾದಿ ಸಂಘಟನೆಗಳಿಗೆ ಮತ್ತಷ್ಟು ಆಕ್ರಮಣಕಾರಿ ಧೋರಣೆ ಪ್ರದರ್ಶಿಸುವುದು ಅನಿವಾರ್ಯವಾಯಿತು.

ಇದರ ಹಿನ್ನೆಲೆಯಲ್ಲೇ ನವಭಾರತ್‌ನಂತಹ ಸಂಘಟನೆಗಳು ಸಾರ್ವಜನಿಕ ಭಯೋತ್ಪಾದನೆಯ ಕಾರ್ಯಕ್ರಮಗಳಿಗೆ ಬದಲಾಗಿ ಬಾಂಬ್ ಸ್ಫೋಟದಂತಹ ಸರಣೀ ಕ್ರಿಯೆಗಳನ್ನು ಸಂಘಟಿಸುತ್ತಾ, ಆ ಕೃತ್ಯದ ಹೊಣೆಗಾರಿಕೆಯನ್ನು ಶಂಕಿತ ಮುಸ್ಲಿಂ ಭೂಗತ ಸಂಘಟನೆಗಳ ಮೇಲೆ ಹೊರಿಸುತ್ತಾ, ಕೋಮು ದ್ವೇಷದ ಜ್ವಾಲೆಯನ್ನು ಜೀವಂತವಾಗಿಡಲು ಯೋಜನೆ ಹಾಕಿಕೊಂಡವು. ಯಾಕೆಂದರೆ, ಕೋಮು ಗಲಭೆಗಳು ಮತ್ತು ಭಯೋತ್ಪಾದಕ ಕೃತ್ಯಗಳು ಕೋಮುವಾದಿ ರಾಜಕಾರಣಕ್ಕೆ ಶಕ್ತಿ ತುಂಬುವ ಸಾಧನಗಳು. ಪರಸ್ಪರ ಸಂಶಯ ಪಡುವ, ದ್ವೇಷಿಸುವ ವಾತಾವರಣದಲ್ಲಿ ಜನರು ವಿಂಗಡಿಸಲ್ಪಟ್ಟಿರುವಾಗ ಮಾತ್ರವೇ ಕೋಮುವಾದಿ ಸಂಘಟನೆಗಳಿಗೆ ಹೆಚ್ಚಿನ ಬೆಂಬಲ ಒದಗುತ್ತದೆ.

ಹಿಂದೂ ಭಯೋತ್ಪಾದಕ ಸಂಘಟನೆಗಳು ಇಂತಹ ಭಯೋತ್ಪಾದಕ ದುಷ್ಕೃತ್ಯಗಳನ್ನು ಸಂಘಟಿಸುತ್ತಿವೆಯೆಂದು ಕೇಂದ್ರ ಸರ್ಕಾರದ ಗೃಹ ಇಲಾಖೆಗೆ ಈ ಮೊದಲೇ ಸುಳಿವು ದೊರೆತಿತ್ತು. ಆದರೂ ಕ್ರಮ ಕೈಗೊಳ್ಳುವುದಕ್ಕೆ ಅದು ಹಿಂಜರಿಯಿತು. ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ತನಿಖೆ ಕೈಗೊಂಡು ಹಿಂದೂ ಕೋಮುವಾದಿಗಳ ಕೈವಾಡವನ್ನು ಬಯಲಿಗೆಳೆದ ಹೇಮಂತ್ ಕರ್ಕರೆಯಂತಹ ಅಧಿಕಾರಿಗಳು ಭಯೋತ್ಪಾದಕರ ಮುಂಬೈ ದಾಳಿ ಸಂದರ್ಭದಲ್ಲಿ ಪ್ರಾಣ ಕಳೆದುಕೊಳ್ಳಬೇಕಾಯಿತು. ಹಿಂದೂ ಕೋಮುವಾದಿಗಳ ಭಯೋತ್ಪಾದಕ ಕೃತ್ಯಗಳನ್ನು ಬಯಲಿಗೆಳೆಯಲು ಪ್ರಯತ್ನಿಸಿದಾಗಿನಿಂದ ಹೇಮಂತ್ ಕರ್ಕರೆ ಬೇಕಾದಷ್ಟು ಕಿರುಕುಳವನ್ನು ಪೊಲೀಸ್ ಇಲಾಖೆ ಒಳಗಡೆಯಿಂದ ಹಾಗೂ ರಾಜಕಾರಣದ ವಲಯದಿಂದ ಅನುಭವಿಸಿದ್ದರು, ಮಾನಸಿಕವಾಗಿ ಜರ್ಜರಿತರಾಗಿದ್ದರು ಎಂಬ ಅಂಶ ಈಗ ಬಯಲಿಗೆ ಬರುತ್ತಿದೆ.

ಹೇಮಂತ್ ಕರ್ಕರೆಯವರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದ್ದು ಮುಸ್ಲಿಂ ಭಯೋತ್ಪಾದಕರೋ ಅಥವಾ ಹಿಂದೂ ಭಯೋತ್ಪಾದಕರ ಕೈಗೊಂಬೆಯಾಗಿದ್ದ ವ್ಯಕ್ತಿಗಳೋ ಎಂಬಂತಹ ಅನುಮಾನಗಳೂ ಕೂಡ ಪ್ರಬಲವಾಗಿ ವ್ಯಕ್ತಗೊಂಡವು. ಹಾಗೆ ಕೈಗೊಂಬೆಯಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ವರ್ತಿಸುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಭಯೋತ್ಪಾದನೆಯಲ್ಲಿ ತೊಡಗುವ ಹಲವಾರು ವ್ಯಕ್ತಿಗಳು ಬಾಡಿಗೆ ಭಂಟರಾಗಿರುತ್ತಾರೆ. ಅವರೆಲ್ಲ ಕೇವಲ ಧಾರ್ಮಿಕ ಅಥವಾ ಸಮುದಾಯ ಹಿತರಕ್ಷಣೆಯ ಉದ್ದೇಶಕ್ಕೆ ಮಾತ್ರವೇ ಕಾರ್ಯನಿರ್ವಹಿಸುತ್ತಾರೆ ಎಂದು ಊಹಿಸುವುದು ಸರಳೀಕೃತ ತೀರ್ಮಾನವಾಗುತ್ತದೆ.

ಮುಂಬೈ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಹೇಮಂತ್ ಕರ್ಕರೆಯನ್ನು ಸಾವಿಗೀಡಾಗುವಂತೆ ಉದ್ದೇಶಪೂರ್ವಕವಾಗಿ ಹುನ್ನಾರ ಮಾಡಲಾಯಿತು ಎಂಬಂತಹ ಮಾತುಗಳು ಅಲ್ಲಲ್ಲಿ ಪ್ರಚಲಿತಗೊಂಡಿವೆ. ಈಗ ಸಿಕ್ಕಿಬಿದ್ದಿರುವ ಭಯೋತ್ಪಾದಕ ಕಸಬ್ ಮುಂಬೈ ದಾಳಿ ನಡೆಯುವುದಕ್ಕೆ ಬಹಳ ಮೊದಲೇ ಭಯೋತ್ಪಾದಕ ನಿಗ್ರಹ ದಳದಿಂದ ಬಂಧನಕ್ಕೊಳಗಾಗಿದ್ದು ಆ ಸಂದರ್ಭದಲ್ಲಿ ಬಾಡಿಗೆ ಭಂಟನಾಗಿ ಬಳಸಲ್ಪಟ್ಟ ಎಂಬ ಆರೋಪಗಳೂ ಕೂಡ ಕೆಲವು ಕಡೆ ಕೇಳಿಬಂದಿವೆ. ತನ್ನದೇ ದೇಶದ ಪೊಲೀಸ್ ಅಧಿಕಾರಿಗಳ ಮೇಲೆ ಹಾಗೂ ಜನರ ಮೇಲೆ ದಾಳಿ ನಡೆಸಲು ಈ ರೀತಿಯಾಗಿ ತಮ್ಮ ಬಂಧನದಲ್ಲಿರುವ ಅಪರಾಧಿ ಪ್ರವೃತ್ತಿಯ ವ್ಯಕ್ತಿಗಳನ್ನು ಬಳಸಿಕೊಂಡವರು ಯಾರಾಗಿರಬಹುದು? ಅಂತಹ ಕಾರ್ಯಾಚರಣೆ ನಡೆಸುವ ಹಿಂದಿನ ಉದ್ದೇಶ ಏನಾಗಿರಬಹುದು? ಎಂಬುದನ್ನು ಮತ್ತಷ್ಟು ಆಳವಾದ ಪರಿಶೀಲನೆಯಿಂದ ನೋಡಿದಾಗ ಮಾತ್ರವೇ ಕೋಮುವಾದಿ ರಕ್ತಪಿಪಾಸು ರಾಜಕಾರಣದ ಹೂರಣ ಹೊರಬೀಳತೊಡಗುತ್ತದೆ.

ಹಿಂದೂ ಭಯೋತ್ಪಾದಕ ಶಕ್ತಿಗಳ ದುಷ್ಕೃತ್ಯಗಳು ಈಗ ಒಂದೊಂದಾಗಿ ಬಯಲಿಗೆ ಬರುತ್ತಿವೆ. ರಾಜಕೀಯ ಹಾಗೂ ಪೊಲೀಸ್ ವಲಯಗಳೊಳಗೆ ಅದರ ಉನ್ನತ ಹಂತಗಳಲ್ಲಿ ಆರ್‌ಎಸ್‌ಎಸ್‌ನ ಅಘೋಷಿತ ಸದಸ್ಯರ ಒಳನುಸುಳುವಿಕೆ ಸಾಕಷ್ಟು ಪ್ರಮಾಣದಲ್ಲಿದೆ. ಪಕ್ಷ ಭೇದವಿಲ್ಲದೆ ಈ ಕೋಮುವಾದಿ ಪೂರ್ವಗ್ರಹಕ್ಕೆ ಒಳಗಾಗಿ ಕಾರ್ಯ ನಿರ್ವಹಿಸುವವರ ಸಂಖ್ಯೆ ಕೂಡ ಸರ್ಕಾರಿ ಯಂತ್ರಾಂಗದಲ್ಲಿ ದೊಡ್ಡ ಪ್ರಮಾಣದಲ್ಲಿದೆ. ಕೋಮು ಗಲಭೆಗಳು ಸಂಭವಿಸಿದಾಗ, ಭಯೋತ್ಪಾದಕ ದುಷ್ಕೃತ್ಯಗಳು ನಡೆದಾಗ ಅದರಲ್ಲಿ ಕೈವಾಡವಿರುವ ಹಿಂದೂ ಕೋಮುವಾದಿ ಶಕ್ತಿಗಳ ಪಾತ್ರವನ್ನು ಮುಚ್ಚಿಡುವಲ್ಲಿ, ಅಪರಾಧವನ್ನು ಅಮಾಯಕ ಮುಸ್ಲಿಂ ಯುವಕರ ಮೇಲೆ ಹೊರಿಸುವಲ್ಲಿ ಇಂತಹ ಕೋಮುವಾದೀಕರಣಗೊಂಡಿರುವ ಮನಸ್ಸಿನ ಸರ್ಕಾರಿ ಯಂತ್ರಾಂಗ ದೊಡ್ಡ ಪಾತ್ರವನ್ನು ನಿರ್ವಹಿಸುತ್ತಿದೆ.

> **ಭಯೋತ್ಪಾದನೆ ಯಾವ ವಲಯದಿಂದ ನಡೆದರೂ ಅದು ಸಮಾಜಕ್ಕೆ ಕಂಟಕಕಾರಿ. ಅಂತಹ ಕೃತ್ಯಗಳನ್ನು ಸಂಘಟಿಸುವವರು ನಮ್ಮ ದೇಶದ ಶಾಂತಿಯನ್ನು ಅಸ್ಥಿರಗೊಳಿಸುತ್ತಾರೆ. ಅಭಿವೃದ್ಧಿ ಪ್ರಕ್ರಿಯೆಯನ್ನು ಅಡೆತಡೆಗೊಳಪಡಿಸಿ ನಾಗರಿಕ ಜೀವನದ ನಿಯಂತ್ರಣವನ್ನು ಪೊಲೀಸ್ ಮತ್ತು ಅರೆ ಸೇನಾ ಪಡೆಗಳ ಕೈಗೆ ಹೆಚ್ಚೆಚ್ಚು ಪ್ರಮಾಣದಲ್ಲಿ ವಹಿಸಿಕೊಡಲು ಕಾರಣರಾಗುತ್ತಾರೆ. ದೇಶದ ಸಂಪನ್ಮೂಲ ಜನ ಸಾಮಾನ್ಯರ ಒಳಿತಿಗಾಗಿ ವೆಚ್ಚವಾಗುವ ಬದಲು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿಗೆ ಬೇಹುಗಾರಿಕೆ ಮತ್ತು ಗುಪ್ತಚರ ಇಲಾಖೆಗಳ ನಿರ್ವಹಣೆಗೆ ವೆಚ್ಚವಾಗುವಂತೆ ಅನಿವಾರ್ಯತೆ ನಿರ್ಮಿಸುತ್ತಾರೆ.**

ಭಯೋತ್ಪಾದನೆ ಯಾವ ವಲಯದಿಂದ ನಡೆದರೂ ಅದು ಸಮಾಜಕ್ಕೆ ಕಂಟಕಕಾರಿ. ಅಂತಹ ಕೃತ್ಯಗಳನ್ನು ಸಂಘಟಿಸುವವರು ನಮ್ಮ ದೇಶದ ಶಾಂತಿಯನ್ನು ಅಸ್ಥಿರಗೊಳಿಸುತ್ತಾರೆ. ಅಭಿವೃದ್ಧಿ ಪ್ರಕ್ರಿಯೆಯನ್ನು ಅಡೆತಡೆಗೊಳಪಡಿಸಿ ನಾಗರಿಕ ಜೀವನದ ನಿಯಂತ್ರಣವನ್ನು ಪೊಲೀಸ್ ಮತ್ತು ಅರೆ ಸೇನಾಪಡೆಗಳ ಕೈಗೆ ಹೆಚ್ಚೆಚ್ಚು ಪ್ರಮಾಣದಲ್ಲಿ ವಹಿಸಿಕೊಡಲು ಕಾರಣರಾಗುತ್ತಾರೆ. ದೇಶದ ಸಂಪನ್ಮೂಲ ಜನ ಸಾಮಾನ್ಯರ ಒಳಿತಿಗಾಗಿ ವೆಚ್ಚವಾಗುವ ಬದಲು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿಗೆ ಬೇಹುಗಾರಿಕೆ ಮತ್ತು ಗುಪ್ತಚರ ಇಲಾಖೆಗಳ ನಿರ್ವಹಣೆಗೆ ವೆಚ್ಚವಾಗುವಂತೆ ಅನಿವಾರ್ಯತೆ ನಿರ್ಮಿಸುತ್ತಾರೆ. ಇಂತಹ ಸನ್ನಿವೇಶದಲ್ಲಿ ಹಿಂದೂ ಕೋಮುವಾದಿ ಭೂಗತ ಸಂಘಟನೆಗಳು ನಡೆಸಿರುವ ಪ್ರತಿಯೊಂದು ದುಷ್ಕೃತ್ಯಕ್ಕೆ ಸಂಬಂಧಪಟ್ಟವರಿಗೆ ಸೂಕ್ತ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಕೇಂದ್ರ ಸರ್ಕಾರದ ಹೊಣೆಯಾಗಿದೆ.

ಇಂತಹ ಪ್ರಕರಣಗಳ ತನಿಖೆ ವಿಳಂಬವಾಗದಂತೆ, ಹಾದಿ ತಪ್ಪದಂತೆ ನೋಡಿಕೊಳ್ಳುವ ಮೂಲಕವೇ ಜನತೆಯ ವಿಶ್ವಾಸವನ್ನು ಹತಾಶಗೊಂಡಿರುವ ಧಾರ್ಮಿಕ ಅಲ್ಪಸಂಖ್ಯಾತರೊಳಗಿನ ಒಂದು ವಿಭಾಗದ ಭರವಸೆಯನ್ನು ಗಳಿಸಿಕೊಳ್ಳಬಹುದಾಗಿದೆ. ನ್ಯಾಯನಿಷ್ಠುರತೆ ಹಾಗೂ ನಿಷ್ಪಕ್ಷಪಾತ ವರ್ತನೆಯೆಂಬುದು ಸಂವಿಧಾನಬದ್ಧ ಕರ್ತವ್ಯ ಮಾತ್ರವಲ್ಲ. ಅದು ಭಯೋತ್ಪಾದಕತೆಯನ್ನು ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿವಾರಿಸಬಲ್ಲ ಸಾಧನವೂ ಕೂಡ. ಆದ್ದರಿಂದ ಮಾಲೆಗಾಂವ್ ಸ್ಫೋಟದ ಆರೋಪಿಗಳಾಗಿ ಸಿಕ್ಕಿಬಿದ್ದಿರುವ ವ್ಯಕ್ತಿಗಳು ಒದಗಿಸುವ ಸುಳುಹುಗಳನ್ನು ಆಧರಿಸಿ, ಸಮಗ್ರ ತನಿಖೆ ನಡೆಸಿ ಇದರ ಒಳಸಂಚಿನಲ್ಲಿ ಪಾಲುದಾರರಾಗಿರುವವರು ಎಷ್ಟೇ ಪ್ರಭಾವಶಾಲಿಗಳಾಗಿದ್ದಾಗಲೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಎದೆಗಾರಿಕೆಯನ್ನು ತೋರಿಸಬೇಕಾಗಿದೆ.

ಮುಸ್ಲಿಂ ಭಯೋತ್ಪಾದನೆ ತನ್ನನ್ನು ತಾನು ಆತ್ಮಹತ್ಯೆಗೆ ಒಡ್ಡಿಕೊಳ್ಳುವ ಪ್ರವೃತ್ತಿಯಾದರೆ, ಹಿಂದೂ ಕೋಮುವಾದದ ಭಯೋತ್ಪಾದನೆಯೆಂಬುದು ಇತರರನ್ನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸುವಂತ ಪ್ರವೃತ್ತಿಯುಳ್ಳದ್ದಾಗಿದೆ. ಈಗ ಸಾಕಷ್ಟು ನಿರ್ಣಾಯಕ ಮಾಹಿತಿ ದೊರೆತಿರುವ ಹಿನ್ನೆಲೆಯಲ್ಲಿ ಕೋಮುವಾದಿ ರಾಜಕಾರಣದ ಕುತಂತ್ರದ ಬೇರುಗಳನ್ನು ಅಗೆದು ಶೋಧಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಕೇಂದ್ರ ಸರ್ಕಾರ ತೋರಿಸಬೇಕಾಗಿದೆ. ಬೇರುಗಳನ್ನು ಬಗೆಯದೆ ರೆಂಬೆ–ಕೊಂಬೆಗಳನ್ನು ಮಾತ್ರ ಕತ್ತರಿಸುತ್ತಾ ಕೂರುವುದರಿಂದ ಸಮಸ್ಯೆ ನಿರ್ಮೂಲಗೊಳ್ಳಲು ಸಾಧ್ಯವಿಲ್ಲ. ಭಯೋತ್ಪಾದನೆಯನ್ನು ಬಿತ್ತಿ ಬೆಳೆಯುವ ಇಂತಹ ಕುತಂತ್ರವಾದಿ ಶಕ್ತಿಗಳನ್ನು ನಿಯಂತ್ರಣದಲ್ಲಿಡದಿದ್ದರೆ ಸಾಮಾಜಿಕ ನೆಮ್ಮದಿ ಎನ್ನುವುದು ಸಂಪೂರ್ಣವಾಗಿ ನಾಶವಾಗುವುದನ್ನು ನಾವು ನೋಡಬೇಕಾಗುತ್ತದೆ. □

ಬುದ್ಧಾಯಣ

೭೫

ದೇವಲೋಕದ ನಾಲ್ವರು ರಾಜರು ಮಂಧಾತು ಸಾಮ್ರೂಟನ ಪರಾಕ್ರಮ ವನ್ನು ಅರಿತು ಆತನಿಗೆ ರಾಜ್ಯವನ್ನು ಅರ್ಪಿಸಲು ಮರು ಓಲೆ ಕಳುಹಿಸಿ ಕೊಟ್ಟರು. ಮರುದಿನವೇ ರಾಜನು ತನ್ನ ಚಕ್ರರತ್ನ ವೆಂಬ ರಥದಲ್ಲಿ ಕುಳಿತು ದೇವಲೋಕವನ್ನು ತಲು ಪಿದ. ಅಲ್ಲಿ ನಾಲ್ವರೂ ಮಹಾರಾಜರು ಮಂಧಾ ತುವನ್ನು ಭವ್ಯವಾಗಿ ಸ್ವಾಗತಿಸಿ ರಾಜ್ಯವನ್ನು ವಹಿಸಿಕೊಟ್ಟರು. ಅಲ್ಲಿ ಅವನು ಮನ ಬಂದಷ್ಟು ದಿನ ರಾಜ್ಯಭಾರಮಾಡಿದ. ಅಲ್ಲಿನ ಅಪ್ಸರೆಯರೊಡನೆ ರತಿಲೋಕದಲ್ಲಿ ಹಲವು ವರ್ಷ ತೇಲಿದ. ಆದರೆ ಅಲ್ಲಿಯೂ ತಾನು ಕನಸು ಕಂಡ ಕಾಮತೃಷೆಯು ಈಡೇರಲಿಲ್ಲ.

ಸಿ. ಹೆಚ್. ರಾಜಶೇಖರ್

ಬಹು ಪ್ರಾಚೀನ ಕಾಲದ ಪ್ರಥಮ ಕಲ್ಪದಲ್ಲಿ ಮಹಾಸಮ್ಮತ ನೆಂಬ ಒಬ್ಬ ರಾಜನಿದ್ದ. ಆತ ಜಂಬೂದ್ವೀಪವನ್ನು ಆಳುತ್ತಿದ್ದ. ಆತನ ಏಳನೆಯ ತಲೆಮಾರಿನ ರಾಜನ ಹೆಸರು ಮಂಧಾತು ಎಂಬುದ್ದಾಗಿತ್ತು. ಈ ಇಬ್ಬರು ರಾಜರುಗಳ ನಡುವಿನ ಐದು ರಾಜ ರುಗಳ ಹೆಸರು ಅನುಕ್ರಮವಾಗಿ; ರೋಜ, ವರರೋಜ, ಕಲ್ಯಾಣ, ವರಕಲ್ಯಾಣ ಮತ್ತು ಉಪೋಸಥ ಎಂಬುದಾಗಿತ್ತು. ಈ ಏಳು ತಲೆ ಮಾರಿನ ಕೊನೆಯ ರಾಜನಾದ ಮಂಧಾತು ರಾಜನು ಮಹಾನ್ ಪರಾಕ್ರಮಿಯಾಗಿದ್ದ. ಅಖಂಡ ಜಂಬೂದ್ವೀಪಕ್ಕೆ ಸಾಮ್ರಾಟನಾಗಿದ್ದ. ಅವನ ಖಜಾನೆಯು ಅತುಲ ಸಂಪತ್ತಿನಿಂದ ತುಂಬಿತ್ತು. ಅಪರಿಮಿತ ವಾದ ಸೇನೆಯನ್ನು ಹೊಂದಿದವನಾಗಿದ್ದ. ಆತನ ಪಟ್ಟದ ರಾಣಿಯು ಅಪೂರ್ವ ಚಲುವೆಯಾಗಿದ್ದಳು. ಮಿಕ್ಕಂತೆ ನೂರಾರು ಜನ ಇತರೆ ರಾಣಿಯರನ್ನು ವರಿಸಿದ್ದ, ಆದರೆ ತನ್ನ ಪೂರ್ವಜರಂತೆ ಧಾರ್ಮಿಕನಲ್ಲದ ಈತ ಸುಖ ಭೋಗಾಸಕ್ತನಾಗಿದ್ದನು. ಈತನಿಗೆ ಕಾಮತೃಪ್ತಿ ಎಂಬುದೇ ಇರಲಿಲ್ಲ.

ಒಂದು ದಿನ ಮಂಧಾತು ರಾಜನು ತನ್ನ ಕಾಮತೃಷೆಯನ್ನು ತಣಿಸಿಕೊಳ್ಳಲಾಗದೆ ಉದ್ವಿಗ್ನಚಿತ್ತನಾಗಿದ್ದನು. ಅದನ್ನು ಕಂಡ ಆತನ ಸೇನಾಧಿಪತಿಯು ರಾಜನನ್ನು ಕುರಿತು;

"ಪ್ರಭು, ಏಕೆ ಉದ್ವಿಗ್ನಚಿತ್ತರಾಗಿರುವಿರಿ?" ಎನ್ನಲು,

"ಎಲೈ ಸೇನಾಧಿಪತಿಯೇ, ಅದೇಕೋ ಏನೋ ಇತ್ತೀಚಿನ ದಿನಗಳಲ್ಲಿ ನಾನು ತಣಿಸಿದಷ್ಟೂ ಕಾಮವು ಭುಗಿಲೇಲುತ್ತಿದೆ. ನನ್ನ ಸುಖಭೋಗಕ್ಕೆ ನನ್ನ ಸಾಮ್ರಾಜ್ಯವು ಅತ್ಯಲ್ಪ ಎಂದೆನ್ನಿಸುತ್ತಿದೆ. ಇದ ಕ್ಕಿಂತಲೂ ಸುಂದರವಾದ ಲೋಕ ಬೇರೆ ಯಾವುದಾದರೂ ಇದಿಯೇ?"

"ಪ್ರಭು, ಖಂಡಿತಾ ಇದೆ"

"ಯಾವುದು ಆ ಲೋಕ?"

"ಪ್ರಭು, ನಾಲ್ವರು ಮಹಾರಾಜರಿಂದ ಆಳಲ್ಪಡುತ್ತಿರುವ ದೇವ ಲೋಕವೇ ಆಗಿದೆ"

"ಸೇನಾಧಿಪತಿ, ಇಲ್ಲಿಗಿಂತ ಆ ಲೋಕವು ರಮಣೀಯವಾ ಗಿದಿಯೇ? ಇಲ್ಲಿಗಿಂತಲೂ ಅಪ್ಸರೆಯರು ಅಲ್ಲಿರುವರೇ?"

"ಹೌದು ಪ್ರಭು!"

"ಹಾಗಾದರೆ ಈಗಿಂದ ಈಗಲೇ ನನ್ನ ದೂತರನ್ನು ಕಳುಹಿಸು. ಅವರಾಗಿಯೇ ರಾಜ್ಯವನ್ನು ನನಗೆ ಒಪ್ಪಿಸುವರೋ ಅಥವಾ ಯುದ್ಧ ಮಾಡಿ ಗೆದಿಯಬೇಕೋ ಕೇಳು" ಎನ್ನಲು ಅವನು ಹಾಗೆಯೆ ಮಾಡಿದ. ದೇವಲೋಕದ ನಾಲ್ವರು ರಾಜರು ಮಂಧಾತು ಸಾಮ್ರಾಟನ ಪರಾಕ್ರಮ ವನ್ನು ಅರಿತು ಆತನಿಗೆ ರಾಜ್ಯವನ್ನು ಅರ್ಪಿಸಲು ಮರು ಓಲೆ ಕಳುಹಿಸಿ ಕೊಟ್ಟರು. ಮರುದಿನವೇ ರಾಜನು ತನ್ನ ಚಕ್ರರತ್ನವೆಂಬ ರಥದಲ್ಲಿ ಕುಳಿತು ದೇವಲೋಕವನ್ನು ತಲುಪಿದ. ಅಲ್ಲಿ ನಾಲ್ವರೂ ಮಹಾರಾಜರು ಮಂಧಾತುವನ್ನು ಭವ್ಯವಾಗಿ ಸ್ವಾಗತಿಸಿ ರಾಜ್ಯವನ್ನು ವಹಿಸಿಕೊಟ್ಟರು. ಅಲ್ಲಿ ಅವನು ಮನ ಬಂದಷ್ಟು ದಿನ ರಾಜ್ಯಭಾರ ಮಾಡಿದ. ಅಲ್ಲಿನ ಅಪ್ಸರೆಯ ರೊಡನೆ ರತಿಲೋಕದಲ್ಲಿ ಹಲವು ವರ್ಷ ತೇಲಿದ. ಆದರೆ ಅಲ್ಲಿಯೂ ತಾನು ಕನಸು ಕಂಡ ಕಾಮತೃಷೆಯು ಈಡೇರಲಿಲ್ಲ.

ಒಂದು ದಿನ ಉದ್ವಿಗ್ನನಾಗಿದ್ದ ರಾಜನನ್ನು ಕಂಡ ಸೇನಾಧಿ ಪತಿಯು;

"ಪ್ರಭು, ತಮ್ಮ ಉದ್ವಿಗ್ನಚಿತ್ತಕ್ಕೆ ಕಾರಣವೇನು?" ಎನ್ನಲು,

"ಸೇನಾಧಿಪತಿಯೇ, ಅದೇಕೋ ಏನೋ ಇಲ್ಲಿನ ಅಪ್ಸರೆಯ ರಿಂದ ಕೂಡ ನನ್ನ ಸುಖಭೋಗವು ತೃಪ್ತಿಯಾಗಲಿಲ್ಲ. ಇದಕ್ಕಿಂತಲೂ ರಮಣೀಯವಾದ ಬೇರೊಂದು ಲೋಕ ಯಾವುದಾದರೂ ಇದೆಯೇ"

"ಖಂಡಿತಾ ಇದೆ ಪ್ರಭು!"

"ಯಾವುದಾ ಲೋಕ?"

"ಪ್ರಭು, ಮೂವತ್ತು ಮೂರು ರಾಜರುಗಳಿಂದಲೂ ಮತ್ತು ಮೂವತ್ತುಮೂರು ರಾಜ್ಯಗ ಳಿಂದಲೂ ಕೂಡಿದ ದೇವಲೋಕ ಅದಾಗಿದೆ"

"ಹಾಗಾದರೆ ಇಂದೇ ನಮ್ಮ ದೂತರನ್ನು ಅಲ್ಲಿಗೆ ಅಟ್ಟಿ. ಅವರಾ ಗಿಯೇ ರಾಜ್ಯಗಳನ್ನು ಒಪ್ಪಿಸು ವರೋ ಅಥವಾ ಯುದ್ಧಮಾಡಿ ಗೆದಿಯಬೇಕೋ ಕೇಳಿ ನೋಡಿ" ಎಂದು ಆಜ್ಞೆ ಮಾಡಿದ. ಸೇನಾಧಿಪ ತಿಯು ಹಾಗೆಯೆ ಮಾಡಿದ. ಮಂಧಾತು ರಾಜನ ಪರಾಕ್ರಮ ವನ್ನು ಅರಿತಿದ್ದ ದೇವಲೋಕದ ರಾಜರು ತಮ್ಮ ರಾಜ ಪದವಿ ಯನ್ನು ತ್ಯಾಗಮಾಡಲು ಮುಂದಾಗಿ ವಿಷಯವನ್ನು ತಿಳಿಸಿದರು. ಒಂದು ಮುಂಜಾನೆ ಚಕ್ರರಥವನ್ನು ಏರಿದ ಮಂಧಾತ ರಾಜನು ಅಲ್ಲಿಗೆ ಬಂದನು. ಮೂವತ್ತ ಮೂರು ದೇವಲೋಕದ ರಾಜರು (ತಮ್ಮ

ಪ್ರಭು ತಮ್ಮ ಅಂತಿಮ ಸಂದೇಶವೇನು ?

ರಾಜಪರಿವಾರ ದೊಂದಿಗೆ ಆತನ ಸ್ವಾಗತಕ್ಕೆ ಸಿದ್ಧರಾಗಿ ನಿಂತಿದ್ದರು. ಸಾಮ್ರಾಟನಾದ ಮಂಧಾತು ರಾಜನು ಬರಲು ಆತನನ್ನು ಭಾರಿ ವೈಭವದೊಂದಿಗೆ ಬರಮಾಡಿಕೊಂಡರು. ಆತನಿಗೆ ತಮ್ಮ ರಾಜ ಪದವಿಯನ್ನು ನೀಡಿ ಪಟ್ಟಾಭಿಷೇಕವನ್ನು ಮಾಡಿದರು. ಅವರುಗಳು ಸಾಧಾರಣ ರಾಜರಂತೆ ಆತನ ಸಾಮಂತರಾದರು.

ಮುಂದಿನ ಹಲವು ವರ್ಷ ಆ ಲೋಕದಲ್ಲಿ ತನ್ನ ಚಕ್ರಾಧಿಪತ್ಯವನ್ನು ನೆಡೆಸಿದ. ಅಸಾಮಾನ್ಯ ಸುಖಭೋಗ ವೈಭವದಲ್ಲಿ ಮೈಮರೆತ. ಒಂದು ದಿನ ಅಲ್ಲಿಯ ಆತನಿಗೆ ಪೂರ್ಣ ಕಾಮತೃಪ್ತಿ ಸಿಗಲಿಲ್ಲ. ಒಂದು ದಿನ ಉದ್ವೇಗ ಚಿತ್ತನಾಗಿದ್ದ ರಾಜನನ್ನು ಕಂಡ ಸೇನಾಧಿಪತಿಯು;

"ಮಹಾರಾಜ ನಿನ್ನ ಚಿಂತೆಗೆ ಕಾರಣವೇನು?" ಎನ್ನಲು

"ಸೇನಾಧಿಪತಿ ಇಲ್ಲಿನ ಅಪ್ಸರೆಯರಿಂದಲೂ ನನಗೆ ಕಾಮತೃಪ್ತಿ ದೊರೆಯಲಿಲ್ಲ. ನನ್ನ ಮನಸ್ಸು ಪರಿಪೂರ್ಣ ಕಾಮತೃಪ್ತಿಗಾಗಿ ಹಾತೊರೆಯುತ್ತಿದೆ. ಇಲ್ಲಿಗಿಂತಲೂ ರಮಣೀಯವಾದ ಬೇರ್‍ಯಾವುದಾದರೂ ಲೋಕವಿದೆಯೇ?"

"ಇದೆ ದೇವ"

"ಅದ್ಯಾವ ಲೋಕ?"

"ಇಂದ್ರ ಲೋಕ!"

"ಹಾಗಾದರೆ ನಾಳೆಯೆ ನಮ್ಮ ಪಯಣ ಅತ್ತ ಸಾಗಲೀ"

"ಅಪ್ಪಣೆ ಪ್ರಭು" ಎಂದ ಅವನು ಹಾಗೆಯೆ ಮಾಡಿದ. ವಿಷಯ ತಿಳಿದ ಇಂದ್ರಲೋಕದ ರಾಜನಾದ ಶಕ್ರನು ತನ್ನ ಸಾಮ್ರಾಜ್ಯವನ್ನು ಎರಡು ಭಾಗಮಾಡಿ ತನಗೊಂದು ಭಾಗ ಇಟ್ಟುಕೊಂಡು ಉಳಿದ ಭಾಗವನ್ನು ಮಂಧಾತು ರಾಜನಿಗೆ ಅರ್ಪಿಸಿದ. ಮುಂದಿನ ಹಲವು ವರ್ಷಗಳು ಇಂದ್ರಲೋಕದಲ್ಲಿ ಅವನು ತನ್ನ ಆಡಳಿತವನ್ನು ಅಡೆತಡೆ ಇಲ್ಲದೆ ಮುಂದುವರಿಸಿದ. ಅದೇಕೋ ಏನೋ ಒಂದು ದಿನ ಶಕ್ರನ ಮೇಲೆ ಕಣ್ಣು ಬಿತ್ತು. ನನಗೆ ಸರಿಸಮನಾಗಿ ಅವನೇಕೆ ರಾಜ್ಯ ಭಾರ ಮಾಡಬೇಕು ಎಂಬ ಅಹಂಕಾರವು ಮೊಳಗಲು. ಶಕ್ರನನ್ನು ಕೊಲ್ಲಲು ನಿರ್ಧರಿಸಿದ. ಒಂದು ದಿನ ಆತನ ಮೇಲೆ ಆಕ್ರಮಣ ಮಾಡಿ ಆತನನ್ನು ಕೊಂದು ಹಾಕಿ ಪೂರಾ ಸಾಮ್ರಾಜ್ಯಕ್ಕೆ ತಾನೆ ಸಾರ್ವಭೌಮನಾದ.

ಮಂಧಾತು ರಾಜನ ಆಕ್ರಮಣ ಪ್ರತಿ ಆಕ್ರಮಣ ಆಸೆ ಮತ್ತು ದುರಾಸೆಯು ಹೀಗೆಯೆ ಸಾಗಿತು. ವರುಷಗಳು ಉರುಳಿದಂತೆ ಆತನಿಗೆ ವಯಸ್ಸಾಗಿತ್ತು. ತಲೆ ಕೂದಲು ನೆರೆಯಿತು. ಕಣ್ಣು ಮಂಜಾಯಿತು. ಕೈ ಕಾಲುಗಳು ನಡುಗಲು ತೊಡಗಿದವು. ನಿಧಾನವಾಗಿ ಮೈಸುಕ್ಕುಗಟ್ಟಿತು. ರೋಗವು ಆವರಿಸಿತು. ದೇಹದಲ್ಲಿ ಶಕ್ತಿಯು ಕ್ಷೀಣಿಸಿತು. ಆದರೂ ಆತನ ಕಾಮತೃಪ್ತಿ ಹಿಂಗಲಿಲ್ಲ. ಹೀಗಿರಲು ಒಂದು ದಿನ ತನ್ನ ಸೇನಾಧಿಪತಿಯನ್ನು ಕರೆದು;

"ನಾವಿನ್ನು ನಮ್ಮ ಮೂಲ ರಾಜ್ಯಕ್ಕೆ ತೆರಳೋಣ !" ಎನ್ನಲು, "ಹಾಗೆಯೇ ಆಗಲೀ ಪ್ರಭು" ಎಂದ. ಕೆಲವು ದಿನಗಳ ದೀರ್ಘ ಪಯಣದ ನಂತರ ಆತ ತನ್ನ ರಾಜ ಪರಿವಾರದೊಂದಿಗೆ ಅರಮನೆಯನ್ನು ತಲುಪಿದ. ರೋಗವು ಉಲ್ಬಣಿಸಿದ್ದರಿಂದ ಹಾಸಿಗೆ ಹಿಡಿದ. ರಾಜನು ಮತ್ತೆ ಚೇತರಿಸಿಕೊಳ್ಳಲಿಲ್ಲ. ಸಾವಿನ ಕೊನೆಯ ಅಂಚಿನಲ್ಲಿದ್ದ ಸಮಯದಲ್ಲಿ ಸೇನಾಧಿಪತಿಯು ರಾಜನನ್ನು ಹೀಗೆ ಪ್ರಶ್ನಿಸಿದ;

"ಮಹಾರಾಜ ನಮಗೆ ತಮ್ಮ ಕೊನೆಯ ಸಂದೇಶವೇನು?" ಎನ್ನಲು, ಕ್ಷೀಣವಾದ ಧ್ವನಿಯಲ್ಲಿ ಹೀಗೆ ನುಡಿದ;

"ಹೌದು ಬುದ್ಧರ ವಾಣಿಯಲ್ಲಿ ಸತ್ಯವಿದೆ. ಕಾಮವು ತಣಿಸಿದಷ್ಟೂ ಭುಗಿಲೇಳುತ್ತದೆ. ಕಾಮವನ್ನು ತಣಿಸಿ ಗೆದ್ದವರಿಲ್ಲ. ಗೆದಿಯಲು ಹೋಗಿ ಸೋತವರೇ ಎಲ್ಲಾ. ನಾನು ಮಾಡಿದ ತಪ್ಪನ್ನು ಮತ್ಯಾರು ಮಾಡಬೇಡಿ. ಇದೇ ನನ್ನ ಅಂತಿಮ ಸಂದೇಶ...!!" ಎಂದ ರಾಜನು ತನ್ನ ಕೊನೆ ಉಸಿರೆಳೆದ. □

ಹರಿದ ಮೂಗು ಮತ್ತೆ ಬೆಳೆಯಲುಂಟೆ...!?

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ಶ್ರೇಷ್ಠಿಯೊಬ್ಬರ ಪುತ್ರರಾಗಿ ಜನಿಸಿದರು. ಅವರು ಬೆಳೆದು ದೊಡ್ಡವರಾದ ಮೇಲೆ ಶ್ರೇಷ್ಠ ಗುರುವಿನ ಬಳಿ ವಿದ್ಯೆ ಪಡೆದು ಸುಶಿಕ್ಷಿತರಾದರು. ಎಂಥಹ ಪ್ರಸಂಗದಲ್ಲಿಯೂ ಅವರು ಸುಳ್ಳನ್ನಾಡುತ್ತಿರಲಿಲ್ಲ. ಅವರಿಗೆ ಇಬ್ಬರು ಬಾಲ್ಯದ ಗೆಳೆಯರಿದ್ದರು. ಈ ಮೂವರು ಯಾವಾಗಲೂ ಜೊತೆಯಲ್ಲಿಯೆ ಇರುತ್ತಿದ್ದರು.

ವಾರಣಾಸಿ ನಗರದಲ್ಲಿ ಪ್ರತಿ ವರ್ಷದಂತೆಯೆ ಈ ವರ್ಷ ಕೂಡ ಜಾತ್ರೆಯ ಘೋಷಣೆ ಆಗಿತ್ತು. ಈ ಸಂದರ್ಭದಲ್ಲಿ ತಾನು ಒಲಿದ ಹೆಣ್ಣಿನೊಂದಿಗೆ ಕುಣಿದು ಕುಪ್ಪಳಿಸಿ ಕ್ರೀಡಿಸಲು ಎಲ್ಲರೂ ಇಷ್ಟ ಪಡುತ್ತಿದ್ದರು. ಅದೇ ರೀತಿ ಈ ಮೂವರು ಮಿತ್ರರು ಜಾತ್ರೆಯ ಉತ್ಸವಕ್ಕೆ ಹೋಗಲು ಸಜ್ಜಾದರು. ಹೂಮಾಲೆಯನ್ನು ಕೊಂಡು ತರಲು ನಗ ರದ ಚೌಕಕ್ಕೆ ಬಂದರು. ಆ ದಿನ ಹೂವಿಗೆ ಬಹುಬೇಡಿಕೆ ಇದ್ದ ಕಾರಣಕ್ಕಾಗಿ ಯಾವ ಹೂಗಾರರ ಬಳಿಯೂ ಹೂಮಾಲೆ ದೊರೆಯಲಿಲ್ಲ. ಆ ಸಮಯದಲ್ಲಿ ಅವರಿಗೆ ಊರ ಹೊರಗಿನ ಕೆರೆಯೊಂದರ ನೆನಪಾಯಿತು. ಅಲ್ಲಿ ಕಮಲದ ಪುಷ್ಪಗಳನ್ನು ಬೆಳೆಯಲಾಗಿತ್ತು. ಆದರೆ ಅದ ಕ್ಕೊಬ್ಬ ಕಾವಲುಗಾರನಿದ್ದ. ಆತನ ಮೂಗು ಆಕಸ್ಮಿಕವಾಗಿ ಹರಿದು ಹೋಗಿತ್ತು. ಆದ್ದುದರಿಂದ ಆತ ವಿಕಾರವಾಗಿ ಕಾಣುತ್ತಿದ್ದ. ಆದರೆ ಆತ ತನ್ನ ಕರ್ತವ್ಯವನ್ನು ನಿಬಾಯಿಸು ವುದರಲ್ಲಿ ಪ್ರಾಮಾಣಿಕನಾಗಿದ್ದ.

ನಮಗೆ ಹೂವಿನ ಅಗತ್ಯವಿದೆ ಹೂವನ್ನು ಕೊಡು ಎಂದು ಕೇಳಿದರೆ ಆತ ಬಡ ಪೆಟ್ಟಿಗೆ ಕೊಡುವ ಅಸಾಮಿ ಅಲ್ಲ ಎಂಬ ಸಂಗತಿ ಆ ಮೂವರಿಗೂ ಗೊತ್ತಿತ್ತು. ಹಾಗಾಗಿ ಮೂವರೂ ಗೆಳೆಯರು ಆ ಮೂಗು ಹರಕನನ್ನು ಹೊಗಳುವ ಮೂಲಕ ಸುಲಭವಾಗಿ ಹೂವನ್ನು ಪಡೆಯಬಹುದು ಎಂಬ ಉಪಾಯವನ್ನು ಕಂಡುಕೊಂಡರು. ಆದರೆ ಆ ಉಪಾಯಕ್ಕೆ ಬೋಧಿಸತ್ವರು ಸರಿಹೊಂದುತ್ತಿರಲಿಲ್ಲ. ಏಕೆಂದರೆ ಅವರು ಹಾಸ್ಯಕ್ಕಾಗಿಯೂ ಎಂದೂ ಸುಳ್ಳನ್ನು ನುಡಿಯುತ್ತಿರಲಿಲ್ಲ. ಹಾಗಾಗಿ ಅವರನ್ನು ಕೆರೆಯ ಸಮೀಪದ ಒಂದು ಕಲ್ಲುಬಂಡೆಯ ಮೇಲೆ ಕೂರಿಸಿ ಮಿಕ್ಕ ಇಬ್ಬರು ಕೆರೆಯ ಕಾವಲುಗಾರನ ಬಳಿ ಬಂದರು. ನೇರವಾಗಿ ಹೂವನ್ನು ಕೇಳುವುದು ವ್ಯವಹಾರಿಕ ಜ್ಞಾನಸ್ಥರ ಲಕ್ಷಣವಲ್ಲವೆಂದು ಸುತ್ತಿ ಬಳಸಿ ಅದು ಇದು ಮಾತನಾಡಿದ ಬಳಿಕ ಹೂವನ್ನು ಕೇಳಿದರು. ಆತ ಯಾವ ಮುಲಾಜಿಲ್ಲದೆ ನಿರಾಕರಿಸಿದ. ಆಗ ಅದರಲ್ಲಿ ಮೊದಲಿಗನು ಆ ಮೂಗು ಹರುಕನನ್ನು ಉದ್ದೇಶಿಸಿ;

"ಎಲ್ಲೈ ಕಾವಲುಗಾರನೇ, ಪ್ರತಿ ಮನುಷ್ಯನ ಕೇಶ ಮತ್ತು ಮೀಸೆಗಳನ್ನು ಪದೇ ಪದೇ ಕತ್ತರಿಸಿದರೂ ಬೆಳೆಯುತ್ತಿರುತ್ತದೆ. ಅದೇ ರೀತಿ ಕತ್ತರಿಸಿದ ನಿನ್ನ ಮೂಗು ಸಹ ಬೆಳೆಯಲಿ ಎಂದು ನಾನು ಹಾರೈಸುತ್ತೇನೆ. ಆದ್ದುದರಿಂದ ನನಗೆ ಕಮಲದ ಹೂವನ್ನು ಕೊಡು" ಎಂದ. ಅವನ ಮೇಲೆ ಕೋಪಗೊಂಡ ಮೂಗು ಹರುಕನು;

"ಎಲ್ಲೈ ಶ್ರೇಷ್ಠಿ ಪುತ್ರನೇ, ಸುಳ್ಳಾಡಿ ಫಲವಿಲ್ಲ. ಎಲ್ಲಾದರೂ ಹರಿದ ಮೂಗು ಬೆಳೆಯುವುದೆ? ನಾನು ನಿನಗೆ ಹೂವನ್ನು ಕೊಡಲಾರೆ" ಎಂದು ನಿರಾಕರಿಸಿದ. ಎರಡನೆಯವನು ಮುಂದೆ ಬಂದು;

"ಎಲ್ಲೈ ಕಾವಲುಗಾರನೇ, ಶರತ್ಕಾಲದಲ್ಲಿ ಹೊಲದಲ್ಲಿ ಬಿತ್ತಿದ ಬೀಜ ಮೊಳೆತು ಬೆಳೆಯುವಂತೆ ನಿನ್ನ ಮೂಗು ಬೆಳೆಯಲಿ. ಯಾಚಿಸುತ್ತಿರುವ ನನಗೆ ಕಮಲದ ಪುಷ್ಪವನ್ನು ಕೊಡು" ಎಂದ. ಈತನ ಬಗ್ಗೆಯು ಹಿಂದಿನಂತೆಯೇ ಕೋಪ ಮಾಡಿಕೊಂಡ ಆತ;

"ಎಲ್ಲೈ ಶ್ರೇಷ್ಠಿ ಪುತ್ರನೇ, ಹೊಲದಲ್ಲಿ ಬಿತ್ತಿದ ಬೀಜ ಬೆಳೆಯಬಹುದು. ಆದರೆ ಹರಿದ ನನ್ನ ಮೂಗು ಹೇಗೆ ಬೆಳೆಯಬಲ್ಲದು? ಸುಳ್ಳಾಡಲು ಮಿತಿ ಬೇಡವೇ? ನಿನ್ನಂತವನಿಗೆ ನಾನು ಪುಷ್ಪವನ್ನು ಕೊಡಲಾರೆ ನೆಡೆ ಮುಂದೆ" ಎಂದ. ಆ ಇಬ್ಬರೂ ಮಿತ್ರರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಸಪ್ಪೆ ಮೋರೆ ಹಾಕಿಕೊಂಡು ಬೋಧಿಸತ್ವರ ಬಳಿ ಬಂದು ನೆಡೆದ ವಿಷಯ ತಿಳಿಸಿದರು . ಆಗ ಅವರು;

"ಮಿತ್ರರೇ, ನೀವು ಇಲ್ಲಿಯೆ ಕುಳಿತಿರಿ ನಾನು ಹೋಗಿ ಕಮಲದ ಪುಷ್ಪಗಳನ್ನು ಪಡೆದು ತರುತ್ತೇನೆ" ಎನ್ನುತ್ತಾ ಕಮಲದ ಪುಷ್ಪಗಳಿಂದ ಅವೃತ್ತವಾದ ಆ ಕೆರೆಯ ಬಳಿ ಬಂದು.

"ಎಲ್ಲೈ ಕಾವಲುಗಾರನೇ, ನನ್ನ ಇಬ್ಬರು ಮಿತ್ರರು ಹೂವನ್ನು ಪಡೆಯುವ ಆಸೆಗಾಗಿ ನಿನ್ನ ಬಳಿ ಸುಳ್ಳಾಡಿರಬಹುದು. ನೀನು ಹೂಗಳನ್ನು ಕೊಟ್ಟರೂ ಕೊಡದೆಯೇ ಇದ್ದರೂ ನಿನ್ನ ಮೂಗು ಬೆಳೆಯುವುದು ಅಸಂಭವ. ಅಯ್ಯಾ ಮಿತ್ರ, ಆದರೂ ನಾನು ಯಾಚಿಸುತ್ತಿದ್ದೇನೆ ನಮಗೆ ಕಮಲದ ಪುಷ್ಪಗಳನ್ನು ಕೊಡು" ಎನ್ನಲು ಕಾವಲುಗಾರ ಬೋಧಿಸತ್ವರಿಗೆ ವಂದಿಸುತ್ತಾ; "ಬೋಧಿಸತ್ವರೇ, ತಮ್ಮ ಸತ್ಯಕ್ಕೆ ನಾನು ತಲೆಬಾಗಿದೆ. ತೆಗೆದುಕೊಳ್ಳಿ ತಮಗೆ ಬೇಕಾದಷ್ಟು ಪುಷ್ಪಗಳನ್ನು...!!" ಎನ್ನುತ್ತಾ ಅವರಿಗೆ ಮನಸ್ಸಾರೆ ಪುಷ್ಪಗಳನ್ನು ಕಿತ್ತು ನೀಡಿದ. □

'SAMVADA' Kannada Monthly, February 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ
ಆರೋಗ್ಯಕರ ಚರ್ಚೆಗೆ ವೇದಿಕೆಯಾಗಿರುವ
ಸಂವಾದ ಕ್ಕೆ ಹಾರ್ಥಿಕ ಶುಭಾಷಯಗಳು.

ಶ್ರೀ. ಎ. ಆರ್. ಕೃಷ್ಣಮೂರ್ತಿ B.A, P.G. Dip. In Journalism
ಮಾಜಿ ಶಾಸಕರು, ಮತ್ತು ಅಧ್ಯಕ್ಷರು
ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001